ಭಾನುವಾರ, ಆಗಸ್ಟ್ 3, 2025 ₹ 7.00
www.prajavani.net
prajavani.net prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆರ್ಥಿಕ ಅವಲಂಬನೆ

ದೇಶದ ಶೇ 70ರಷ್ಟು ಹಿರಿಯ ನಾಗರಿಕರು ಆರ್ಥಿಕವಾಗಿ ಮತ್ತೊಬ್ಬರನ್ನು ಅವಲಂಬಿಸಿದ್ದು, ಇವರಲ್ಲಿ ಹಲವರು ನಿವೃತ್ತಿ ನಂತರವೂ ಉದ್ಯೋಗ ಮಾಡುತ್ತಿದ್ದಾರೆ ಎಂದು ವೃದ್ಧಾಪ್ಯದ ಕುರಿತ ಅಧ್ಯಯನವೊಂದು ತಿಳಿಸಿದೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

ಕೆಂಪೇಗೌಡ ಬಡಾವಣೆ ವಿಸ್ತರಣೆ

17 ಗ್ರಾಮಗಳ ವ್ಯಾಪ್ತಿ; 9 ಸಾವಿರ ಎಕರೆ ಭೂ ಸ್ವಾಧೀನಕ್ಕೆ ಬಿಡಿಎ ನಿರ್ಧಾರ

● ಕೆ.ಎಸ್.ಸುನಿಲ್

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ವಿಸ್ತರಿಸಲು ಮುಂದಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ಅಂದಾಜು 9 ಸಾವಿರ ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದೆ.

ಬಡಾವಣೆಯ ವಿಸ್ತರಣೆಗಾಗಿ ಗುರುತಿಸಿರುವ ಜಮೀನು ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಯ ನಡುವೆ ಹಾಗೂ ನೈಸ್ ರಸ್ತೆಯ ಹೊರಗಿನ 17 ಗ್ರಾಮಗಳ ವ್ಯಾಪ್ತಿಯಲ್ಲಿದೆ. ಈ ಪೈಕಿ ಮುದ್ದಿನಪಾಳ್ಯ ಗ್ರಾಮವು ಮಾಗಡಿ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದೆ.

ಕೆಂಗೇರಿ ಹೋಬಳಿಯ ಮಾರಗೊಂಡನಹಳ್ಳಿ, ಮಾಲಿಗೊಂಡನ ಹಳ್ಳಿ, ರಾಮೋಹಳ್ಳಿ, ತಾವರೆಕೆರೆ ಹೋಬಳಿಯ ಚಿಕ್ಕಲ್ಲೂರು–ರಾಂಪುರ, ಚಿಕ್ಕಲ್ಲೂರ–ವೆಂಕಟಾಪುರ, ಚಿಕ್ಕಲ್ಲೂರ, ಕೊಲ್ಲೂರು– ನಂಜುಂಡಾಪುರ, ಕೊಲ್ಲೂರು– ಗುರುನಾಯಕಪುರ, ಕೊಲ್ಲೂರು, ಕೇತೋಹಳ್ಳಿ, ಕೇತೋಹಳ್ಳಿ–ರಾಮಪುರ, ಕೇತೋಹಳ್ಳಿ–ನರಸೀಪುರ, ಶೇಷಗಿರಿಪುರ, ಕಣಮಿಣಿಕೆ, ಕೊಡಿಗೆಹಳ್ಳಿ, ಶೀಗೆಹಳ್ಳಿ ಮತ್ತು ಮುದ್ದಿನಪಾಳ್ಯ ಗ್ರಾಮಗಳಲ್ಲಿ 5,755 ಎಕರೆ 32 ಗುಂಟೆ ಸ್ವಾಧೀನಪಡಿಸಿಕೊಳ್ಳಲಾಗುತ್ತದೆ. ಹೈಕೋರ್ಟ್ ಆದೇಶದಂತೆ, ಕೆಂಪೇಗೌಡ ಬಡಾವಣೆ ವಿಸ್ತರಣೆ ಸಂಬಂಧ ಅಧಿಸೂಚನೆ ಹೊರಡಿಸಿರುವ ಬಿಡಿಎ, ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಐವರು ಭೂಮಾಪಕರು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳಿಗೆ(ಡಿಇಒ) ಕಾರ್ಯ ವಿಂಗಡಣೆ ಮಾಡಿ ಆದೇಶಿಸಿದೆ. ಇವರು ಸರ್ವೆ ನಡೆಸಿ ನಕ್ಷೆಯೊಂದಿಗೆ ವರದಿ ನೀಡಲಿದ್ದಾರೆ.

ಹಾಲಿ ನಿರ್ವಹಿಸುತ್ತಿರುವ ಕಾರ್ಯದ ಜತೆಗೆ, ಸರ್ವೆ ಕಾರ್ಯ ನಡೆಸಿ, ನಕ್ಷೆಯೊಂದಿಗೆ ವರದಿ ನೀಡಲು ಆದೇಶಿಸಿದೆ. ಅಲ್ಲದೆ, ಪ್ರಭಾರ ವಹಿಸಿಕೊಂಡು ಮುಂದಿನ ಆದೇಶದವರೆಗೂ ಕಾರ್ಯನಿರ್ವಹಿಸಲು ಬಿಡಿಎ ಉಪ ಆಯುಕ್ತರು (ಭೂಸ್ವಾಧೀನ) ಸೂಚಿಸಿದ್ದಾರೆ.

5,755 ಎಕರೆ ಹೊರತುಪಡಿಸಿ ಬಿಡಿಎ, ಸುಮಾರು 3,200 ಎಕರೆ ಜಮೀನು ಸ್ವಾಧೀನ ಪ್ರಸ್ತಾಪಿಸಿದೆ. ಈ ಹಿಂದೆ ಅಧಿಸೂಚನೆ ಹೊರಡಿಸಲಾಗಿತ್ತು. ನಂತರ ಸ್ವಾಧೀನದಿಂದ ಕೈಬಿಡಲಾಗಿತ್ತು. ಪರಿಷ್ಕೃತ ಮಾಸ್ಟರ್ ಪ್ಲಾನ್ ಪ್ರಕಾರ ರಸ್ತೆಗಳನ್ನು ನಿರ್ಮಿಸಲು ಅಗತ್ಯವಿರುವ 38 ಎಕರೆ ಜಮೀನು ಮತ್ತು ಸ್ವಾಧೀನದಿಂದ ಹೊರಗುಳಿದ 1,317 ಎಕರೆ ಜಮೀನು ಸಹ ಇದರಲ್ಲಿ ಸೇರಿದೆ. ಅಲ್ಲದೇ ಬಡಾವಣೆಗೆ ಹೊಂದಿಕೊಂಡಿರುವ ನಾಲ್ಕು ಗ್ರಾಮಗಳಲ್ಲಿ ಸುಮಾರು 1,868 ಎಕರೆ ಜಮೀನು ಗುರುತಿಸಲಾಗಿದೆ.

ಬಿಡಿಎ 2010ರಲ್ಲೇ ನಾಡಪ್ರಭು ಕೆಂಪೇಗೌಡ ಬಡಾವಣೆ ಪ್ರಾರಂಭಿಸಿತ್ತು. ಆದರೆ, ಮೂಲಸೌಕರ್ಯಗಳ ಕೊರತೆಯಿಂದಾಗಿ ಸುಮಾರು 50 ಮನೆಗಳು ನಿರ್ಮಾಣಗೊಂಡಿವೆ. ಕೆಲವು ನಿರ್ಮಾಣ ಹಂತದಲ್ಲಿವೆ. ಬಿಡಿಎ ಆರಂಭದಲ್ಲಿ ಸುಮಾರು 4,040 ಎಕರೆ ಅಧಿಸೂಚನೆ ಹೊರಡಿಸಿದ್ದರೂ, ಈವರೆಗೆ 2,200 ಎಕರೆ ಜಮೀನು ಸ್ವಾಧೀನಪಡಿಸಿಕೊಂಡಿದೆ.

ಕೆಂಪೇಗೌಡ ಬಡಾವಣೆ

ಭೂಮಾಪಕರು	ಡಿ.ಇ.ಒ	ಗ್ರಾಮಗಳು
ಮನೋಹರ್	ಮೋಹನ್	ಕೋಲೂರು-ಗುರುರಾಯನಪುರ, ಕೇತೋಹಳ್ಳಿ, ನರಸೀಪುರ, ರಾಮಪುರ.
ಗಿರೀಶ್	ರಾಜೇಶ್ವರಿ	ಚಿಕ್ಕಲ್ಲೂರು-ವೆಂಕಟಾಪುರ, ರಾಮಪುರ, ಕೋಲೂರು, ನಂಜುಂಡಾಪುರ.
ಮಲ್ಲಯ್ಯ	ಮಮತಾ	ಮಾರಗೊಂಡನಹಳ್ಳಿ, ಮಾಲಿಗೊಂಡನಹಳ್ಳಿ, ರಾಮೋಹಳ್ಳಿ, ಚಿಕ್ಕಲ್ಲೂರು.
ಸೋಮಶೇಖರ್	ಜೀವನ್	ಶೇಷಗಿರಿಪುರ, ಕಣಮಿಣಿಕೆ, ಕೊಡಿಗೆಹಳ್ಳಿ,
ಶಿವಾರೆಡ್ಡಿ	ಹೇಮಂತ್	ಶೀಗೆಹಳ್ಳಿ, ಮುದ್ದಿನಪಾಳ್ಯ (ಮಾಗಡಿ ಅಭಿವೃದ್ಧಿ ಪ್ರಾಧಿಕಾರ)

ಶೇ 90ರಷ್ಟು ಕಾಮಗಾರಿ ಪೂರ್ಣ

ಕೆಂಪೇಗೌಡ ಬಡಾವಣೆಯಲ್ಲಿ ಶೇಕಡ 80ರಷ್ಟು ಮೂಲ ಸೌಕರ್ಯ ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಬಿಡಿಎ ತಿಳಿಸಿದೆ. 1,2,3,4ನೇ ಬ್ಲಾಕ್‌ಗಳಲ್ಲಿ ಡಾಂಬರೀಕರಣ ಆಗಿಲ್ಲ. ವಿದ್ಯುತ್, ಕುಡಿಯುವ ನೀರಿನ ಸಂಪರ್ಕ ಕಲ್ಪಿಸಬೇಕಿದೆ.

ಆರು ಬ್ಲಾಕ್‌ಗಳ ಕಾಮಗಾರಿಯನ್ನು ಒಂದೇ ಏಜೆನ್ಸಿಗೆ ಅಥವಾ ಗುತ್ತಿಗೆದಾರರಿಗೆ ವಹಿಸಿರುವುದಕ್ಕೆ ನಿವಾಸಿಗಳು ಮತ್ತು ನಿವೇಶನದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಈಗಾಗಲೇ ಒಂದೊಂದು ಬ್ಲಾಕ್ ಕಾಮಗಾರಿಗಳನ್ನು ಬೇರೆ ಬೇರೆ ಏಜೆನ್ಸಿಗಳಿಗೆ ನೀಡಿದ್ದರೂ ಅವುಗಳನ್ನು ಕಾಲಮಿತಿಯಲ್ಲಿ ಮುಗಿಸಲು ಸಾಧ್ಯವಾಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಆರು ಬ್ಲಾಕ್‌ಗಳ ಬೃಹತ್ ಕಾಮಗಾರಿಯನ್ನು ಒಂದೇ ಟೆಂಡರ್ ಮೂಲಕ ಒಬ್ಬರೇ ಗುತ್ತಿಗೆದಾರರಿಗೆ ನೀಡಿದರೆ, ಕಾಲಮಿತಿಯಲ್ಲಿ ಪೂರ್ಣಗೊಳ್ಳಲು ಹೇಗೆ ಸಾಧ್ಯ?' ಎಂದು ಅವರು ಪ್ರಶ್ನಿಸಿದ್ದಾರೆ.

ಚಿಟಿಕೆ ಸುದ್ದಿ

'ಯಾರದ್ದೋ ಟೀಕೆಗೆ, ನಮ್ಮವರ ಬೆಂಬಲ'

ಹುಬ್ಬಳ್ಳಿ: 'ಭಾರತ ಜಗತ್ತಿನಲ್ಲೇ ನಾಲ್ಕನೇ ದೊಡ್ಡ ಆರ್ಥಿಕ ವ್ಯವಸ್ಥೆ ಹೊಂದಿದ ದೇಶ. ಆದರೆ, ಯಾರೋ 'ಸತ್ತ' ಆರ್ಥಿಕತೆ ಎಂದು ಟೀಕಿಸುತ್ತಾರೆ. ಅದನ್ನೇ ಇಲ್ಲಿಯ ಕೆಲವರು ಬೆಂಬಲಿಸುತ್ತಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಸಮಾಧಾನ ವ್ಯಕ್ತಪಡಿಸಿದರು.

'ದೇಶದ ಅರ್ಥ ವ್ಯವಸ್ಥೆ ದಿನದಿಂದ ದಿನಕ್ಕೆ ಸುಧಾರಿಸುತ್ತಿದೆ. 2047ರ ವೇಳೆ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ವಿಕಸಿತ ಭಾರತ ಎಂದು ಗುರುತಿಸಿಕೊಳ್ಳಲಿದೆ' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಸೇನಾಬಲದಲ್ಲಿ ನಾವು ಜಗತ್ತಿನಲ್ಲೇ ಪ್ರಮುಖ ಐದು ಸ್ಥಾನದೊಳಗೆ ಇದ್ದೇವೆ. ಆಧುನಿಕ ತಂತ್ರಜ್ಞಾನ, ಶಸ್ತ್ರಾಸ್ತ್ರಗಳಿಂದ ಶತ್ರುಗಳ ನಿಖರ ನೆಲೆಯ ಮೇಲೆ ದಾಳಿ ನಡೆಸುವಷ್ಟು ಪ್ರಬಲರಾಗಿದ್ದೇವೆ. ಭಾರತವನ್ನು ಹಗುರವಾಗಿ ನೋಡಿದರೆ, ತಕ್ಕ ಉತ್ತರ ನೀಡುತ್ತೇವೆ' ಎಂದರು.

'ಸಾರ್ವಜನಿಕ ಶಿಕ್ಷಣ ಬಲಪಡಿಸಿ'

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ತೇರ್ಗಡೆ ಅಂಕಗಳನ್ನು ಶೇಕಡ 33ಕ್ಕೆ ಇಳಿಸುವ ರಾಜ್ಯ ಸರ್ಕಾರದ ನಿರ್ಧಾರ ಖಂಡನೀಯ. ಇದರ ಬದಲಾಗಿ ಸಾರ್ವಜನಿಕ ಶಿಕ್ಷಣವನ್ನು ಬಲಪಡಿಸಬೇಕು ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ತಿಳಿಸಿದೆ.

'9ನೇ ತರಗತಿಯವರೆಗೆ ಕಡ್ಡಾಯ ತೇರ್ಗಡೆ ನೀತಿಯನ್ನು ಜಾರಿಗೆ ತಂದಿರುವುದರಿಂದ, 10ನೇ ತರಗತಿಗೆ ತಲುಪುವವರೆಗೆ ಅನೇಕ ವಿದ್ಯಾರ್ಥಿಗಳು ವಿಜ್ಞಾನ ಮತ್ತು ಗಣಿತದಂತಹ ವಿಷಯಗಳನ್ನು ಎದುರಿಸಲು ಹಿಂದೇಟು ಹಾಕುತ್ತಿದ್ದಾರೆ. ಈ ಕಲಿಕೆಯ ಅಂತರವನ್ನು ಸುಧಾರಣೆ ಮಾಡಬೇಕು' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ಭೂಗತ ಪಾತಕಿ ಕವಿರಾಜ್ ಬಂಧನ

ಕೋಲಾರ: ಕೊಲೆ, ದರೋಡೆ ಸೇರಿದಂತೆ ದೇಶದ ವಿವಿಧೆಡೆ ಸುಮಾರು 14 ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ತಲೆ ಮರೆಸಿಕೊಂಡಿದ್ದ ಭೂಗತ ಪಾತಕಿ ಕವಿರಾಜ್ ಅಲಿಯಾಸ್ ರಾಜ್ ಎಂಬಾತನನ್ನು ಕೋಲಾರ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆ (ಸೆನ್) ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ.

ಈತನ ಮೂಲ ಉತ್ತರಾಖಂಡ-ನೇಪಾಳ ಗಡಿಭಾಗ. ಪೋಷಕರೊಂದಿಗೆ ಬಂದು ಬೆಂಗಳೂರಿನಲ್ಲಿ ನೆಲಸಿದ್ದ. ಭೂಗತ ಪಾತಕಿಗಳಾದ ರವಿ ಪೂಜಾರಿ, ಮುತ್ತಪ್ಪ ರೈ ಅವರ ಸಹವರ್ತಿಯಾಗಿದ್ದ. ಮಾಜಿ ಸಚಿವ ವರ್ತೂರು ಪ್ರಕಾಶ್ ಅಪಹರಣ ಪ್ರಕರಣ ಸೇರಿದಂತೆ 14ಕ್ಕೂ ಹೆಚ್ಚು ವಿವಿಧ ಅಪರಾಧ ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ.

ಸುದ್ದಿ 2 ನಿಮಿಷ

ಜಾಹೀರಾತು ಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಿ- ಬಿಳಿಮಲೆ

ಬೆಂಗಳೂರು: 'ಬೃಹತ್ ಜಾಹೀರಾತು ಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು' ಎಂದು ಬಿಬಿಎಂಪಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ನಿರ್ದೇಶನ ನೀಡಿದ್ದಾರೆ.

ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರಿಗೆ ಪತ್ರ ಬರೆದಿದ್ದಾರೆ. 'ನೂತನ ಜಾಹೀರಾತು ನೀತಿ ಅಡಿ ಬಿಬಿಎಂಪಿ ನಗರದಾದ್ಯಂತ ಆರೂವರೆ ಸಾವಿರ ಜಾಹೀರಾತು ಫಲಕಗಳನ್ನು ಅಳವಡಿಸಲು, ಜಾಹೀರಾತು ಹಕ್ಕುಗಳ ಹರಾಜಿಗೆ ಮುಂದಾಗಿದೆ. ಮುಂಬರುವ ದಿನಗಳಲ್ಲಿ ಅಳವಡಿಕೆಯಾಗುವ ಜಾಹೀರಾತು ಫಲಕಗಳಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಲು ಕ್ರಮವಹಿಸಬೇಕು' ಎಂದು ಸೂಚಿಸಿದ್ದಾರೆ.

'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ 2022ರ ಉಪನಿಯಮ 17ರ ಅವಕಾಶಗಳಂತೆ, ಜಾಹೀರಾತು ಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು. ಇದನ್ನು ಅನುಷ್ಠಾನ ಮಾಡುವುದು ಪಾಲಿಕೆಯ ಜವಾಬ್ದಾರಿಯಾಗಿದೆ' ಎಂದು ಹೇಳಿದ್ದಾರೆ.



'ಉದ್ದೇಶಿತ ಜಾಹೀರಾತು ನೀತಿಯನ್ನು ನಿರೂಪಿಸುವ ಸಂದರ್ಭದಲ್ಲಿ, ಈ ಎಲ್ಲ ಅಂಶಗಳನ್ನು ಪಾಲಿಕೆ ಗಮನದಲ್ಲಿಟ್ಟುಕೊಳ್ಳಬೇಕು. ಒಂದು ವೇಳೆ ಪಾಲಿಕೆಯು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಯ ಅವಕಾಶಗಳನ್ನು ಗಮನಿಸದೆ ಇದ್ದಲ್ಲಿ, ಮುಂದಿನ ದಿನಗಳಲ್ಲಿ ಅದು ಕಾನೂನು ಉಲ್ಲಂಘನೆಯಾಗಲಿದೆ. ಪಾಲಿಕೆಯು ಇದಕ್ಕೆ ಉತ್ತರ ದಾಯಿತ್ವವನ್ನು ಹೊರಬೇಕಾಗುತ್ತದೆ' ಎಂದು ಎಚ್ಚರಿಸಿದ್ದಾರೆ.

ಮರು ಪ್ಯಾಕಿಂಗ್: ನವೋದ್ಯಮಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: 'ಕೆಲ ನವೋದ್ಯಮಗಳು ಔಷಧಗಳನ್ನು ಮರು ಪ್ಯಾಕಿಂಗ್ ಮಾಡಿ, ಮಾರಾಟ ಮಾಡುತ್ತಿವೆ. ರೋಗಿಗಳ ಸುರಕ್ಷತೆ ದೃಷ್ಟಿಯಿಂದ ಅಂತಹ ನವೋದ್ಯಮಗಳ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಬೆಂಗಳೂರು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘವು (ಬಿಡಿಸಿಡಿಎ) ಭಾರತೀಯ ಔಷಧ ಮಹಾನಿಯಂತ್ರಕರನ್ನು (ಡಿಸಿಜಿಐ) ಆಗ್ರಹಿಸಿದೆ.

ಈ ಬಗ್ಗೆ ಸಂಘವು ಪತ್ರ ಬರೆದಿದೆ. 'ಆನ್‌ಲೈನ್ ಔಷಧ ಮಾರಾಟ ವೇದಿಕೆಗಳು ಹಾಗೂ ಕೆಲ ನವೋದ್ಯಮಗಳು ಔಷಧ ಮತ್ತು ಕಾಂತಿವರ್ಧಕ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಔಷಧ ಮಾರಾಟ ಮಾಡುತ್ತಿವೆ. ಸ್ಟ್ರಿಪ್‌ಗಳಲ್ಲಿರುವ ಮಾತ್ರೆಗಳನ್ನು ಮರು ಪ್ಯಾಕಿಂಗ್ ಮಾಡಿ, ಮಾರಾಟ ಮಾಡುವುದರಿಂದ ಔಷಧದ ವಿವರ ಲಭ್ಯವಾಗುವುದಿಲ್ಲ. ಸಾರ್ವಜನಿಕರ ಆರೋಗ್ಯವನ್ನು ಅಪಾಯಕ್ಕೆ ದೂಡುವ ನಡೆಯಾಗಿದೆ. ಇದು ಕಾನೂನು ಬಾಹಿರವಾಗಿದ್ದು, ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಬಿಡಿಸಿಡಿಎ ಅಧ್ಯಕ್ಷ ಬಿ. ತಿರುನಾವುಕ್ಕರಸು ತಿಳಿಸಿದ್ದಾರೆ.

'ಈ ರೀತಿ ಕ್ರಮದಿಂದ ಬ್ಯಾಚ್ ಸಂಖ್ಯೆ, ಔಷಧದ ಅವಧಿ ಮುಕ್ತಾಯದ ಮಾಹಿತಿ, ಗರಿಷ್ಠ ಮಾರಾಟ ದರ ಸೇರಿ ವಿವಿಧ ವಿವರಗಳು ರೋಗಿಗೆ ಲಭ್ಯವಾಗುವುದಿಲ್ಲ. ಇದರಿಂದ ಔಷಧ ವ್ಯವಸ್ಥೆಯ ಮೇಲೆ ಕೆಟ್ಟ ಅಭಿಪ್ರಾಯ ಮೂಡಿ, ಜನರು ವಿಶ್ವಾಸಾರ್ಹತೆ ಕಳೆದುಕೊಳ್ಳುವ ಸಾಧ್ಯತೆ ಇದೆ. ವೈದ್ಯರ ಚೀಟಿ ಇಲ್ಲದೆಯೂ ಆಲ್‌ನೈನ್ ವೇದಿಕೆಗಳಲ್ಲಿ ಔಷಧಗಳನ್ನು ಮಾರಾಟ ಮಾಡಲಾಗುತ್ತಿದೆ. ಶೇ 50 ರಷ್ಟು ರಿಯಾಯಿತಿ ಎಂಬ ಜಾಹೀರಾತುಗಳನ್ನು ನೀಡಿ, ಜನರ ದಿಕ್ಕು ತಪ್ಪಿಸಲಾಗುತ್ತಿದೆ' ಎಂದು ಹೇಳಿದ್ದಾರೆ.

ಸಾಧಕರಿಗೆ 'ಒಕ್ಕಲಿಗ ರತ್ನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಆರ್. ಅಶೋಕ

'ಪುಣ್ಯಕೋಟಿಯಾಗದೆ ಧ್ವನಿಯೆತ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಕ್ಕಲಿಗರು ಪುಣ್ಯಕೋಟಿಯಾಗದೆ ನ್ಯಾಯಯುತ ಹಕ್ಕಿಗಾಗಿ ಧ್ವನಿಯೆತ್ತಬೇಕು. ಜಾತಿ ಸಮೀಕ್ಷೆಯಂತಹ ಸಂದರ್ಭದಲ್ಲಿ ಅನ್ಯಾಯವಾದಾಗ ಒಗ್ಗಟ್ಟಿನಿಂದ ಪ್ರತಿಭಟಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ರಾಜ್ಯ ಒಕ್ಕಲಿಗ ಜಾಗೃತಿ ಸಂಘವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ ಸಮಾರಂಭದಲ್ಲಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ, ನಟರೂ ಆದ ರಾಜ್ಯಸಭಾ ಸದಸ್ಯ ಜಗ್ಗೇಶ್ ಮತ್ತು ಆದಾಯ ತೆರಿಗೆ ಇಲಾಖೆ ಮುಖ್ಯ ಆಯುಕ್ತ ಜಯರಾಮ್ ರಾಯಪುರ ಅವರಿಗೆ 'ಒಕ್ಕಲಿಗ ರತ್ನ ಪ್ರಶಸ್ತಿ' ಹಾಗೂ ಐಎಎಸ್ ಅಧಿಕಾರಿ ಕೆ. ಜ್ಯೋತಿ ಅವರಿಗೆ 'ತ್ಯಾಗಿ ಲಕ್ಷ್ಮೀದೇವಿ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ಸಮುದಾಯದ ಯುವಕರಿಗೆ ಉದ್ಯೋಗ, ತಾಯಂದಿರಿಗೆ ಸಮಾಜದಲ್ಲಿ ಗೌರವ ಸಿಗಲು ನಮ್ಮ ಹಕ್ಕನ್ನು ಪ್ರತಿಪಾದಿಸಬೇಕು. ನಮ್ಮ ಮೂಲ ಕಸುಬು ಒಕ್ಕಲುತನವಾದ್ದರಿಂದ ನಾವು ಪುಣ್ಯಕೋಟಿಯಂತೆ ಆಗಿದ್ದೇವೆ. ನ್ಯಾಯಯುತ ಹಕ್ಕುಗಳಿಗೆ ಸಮುದಾಯ ಹೋರಾಟ ಮಾಡುವುದರಲ್ಲಿ ತಪ್ಪಿಲ್ಲ. ಎಲ್ಲ ಸಮುದಾಯಗಳೂ ತಮ್ಮ ಹಕ್ಕಿಗಾಗಿ ಹೋರಾಟ ಮಾಡಿ, ಸೌಲಭ್ಯಗಳನ್ನು ಪಡೆಯುತ್ತಿವೆ. ನಾವು ಸುಮ್ಮನಿದ್ದ ಪರಿಣಾಮ, ಕೆಂಪೇಗೌಡರ ಪ್ರತಿಮೆ ವಿಧಾನಸೌಧದ ಮುಂದೆ ಸ್ಥಾಪನೆಯಾಗಲು ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆಯಬೇಕಾಯಿತು' ಎಂದರು.

ರಾಜ್ಯಸಭಾ ಸದಸ್ಯ ಜಗ್ಗೇಶ್, 'ಒಕ್ಕಲಿಗ ಎಂದೊಡನೆ ರೈತ ವರ್ಗ ಕಣ್ಣ ಮುಂದೆ ಬರುತ್ತದೆ. ಈಗ ಸಮುದಾಯದವರು ವಿವಿಧ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಆದರೆ, ನಮ್ಮ ಸಮುದಾಯದಲ್ಲಿ ಒಗ್ಗಟ್ಟಿನ ಕೊರತೆಯಿದೆ. ನಮ್ಮವರಿಗೆ ಅನ್ಯಾಯವಾದಾಗ ಪಕ್ಷಬೇಧ ಮರೆತು ನಾವು ಒಂದಾಗಬೇಕು' ಎಂದು ಹೇಳಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಸ್ಪಟಿಕಪುರಿ ಮಹಾ ಸಂಸ್ಥಾನದ ಪೀಠಾಧಿಪತಿ ನಂಜಾವಧೂತ ಸ್ವಾಮೀಜಿ, 'ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳುತ್ತಿರುವ ಪದವೀಧರರು, ತಂದೆ–ತಾಯಿಯನ್ನು ಕಡೆಗಣಿಸುತ್ತಿರುವುದು ಈ ಕಾಲದ ವಿಪರ್ಯಾಸ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕಾದ ಶಿಕ್ಷಣ ಸಂಸ್ಥೆಗಳು, ಯಂತ್ರ ಮಾನವರನ್ನು ತಯಾರಿಸುತ್ತಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಸಮುದಾಯದ ಸಾಧಕರಿಗೆ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಕೆಂಗೇರಿಯ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಬೆಂಗಳೂರು ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಜಯರಾಮ್ ರಾಯಪುರ, ಬಿ. ವೀರಪ್ಪ ಹಾಗೂ ಜಗ್ಗೇಶ್ ಅವರಿಗೆ 'ಒಕ್ಕಲಿಗ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಆರ್. ಅಶೋಕ, ಸೌಮ್ಯನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ ಮತ್ತು ಸಂಘದ ರಾಜ್ಯಾಧ್ಯಕ್ಷ ಎನ್. ಮುನಿರಾಜುಗೌಡ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

> ಮಕ್ಕಳಿಗೆ ವಿದ್ಯೆಯ ಜತೆಗೆ ಉತ್ತಮ ಸಂಸ್ಕಾರವನ್ನೂ ಒದಗಿಸಬೇಕು. ಅಧಿಕಾರ ಮತ್ತು ಸಂಪತ್ತಿಗಾಗಿ ಅಡ್ಡದಾರಿ ಹಿಡಿಯದೆ, ನಿರಂತರ ಪರಿಶ್ರಮದಿಂದ ಸಾಧಿಸಬೇಕು
>
> **ಬಿ. ವೀರಪ್ಪ,** ಉಪಲೋಕಾಯುಕ್ತ ನ್ಯಾಯಮೂರ್ತಿ

> ಸಮುದಾಯದ ಪದವೀಧರರು ಉದ್ಯಮಿಯಾಗಿ ಹೊರಹೊಮ್ಮಬೇಕು. ಕೆಂಪೇಗೌಡರು ನಿರ್ಮಿಸಿದ ಬೆಂಗಳೂರಿನಲ್ಲಿ ಸಾಕಷ್ಟು ಅವಕಾಶಗಳಿವೆ
>
> **ಜಯರಾಮ್ ರಾಯಪುರ,** ಆದಾಯ ತೆರಿಗೆ ಇಲಾಖೆ ಮುಖ್ಯ ಆಯುಕ್ತ

ಬಿಬಿಎಂಪಿ ಚುನಾವಣೆ ಬಿಜೆಪಿ ನಾಯಕರ ಸಭೆ

ಬೆಂಗಳೂರು: ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಮತ್ತು ಕಾನೂನು ಹೋರಾಟ ನಡೆಸುವ ಸಂಬಂಧ ಬೆಂಗಳೂರು ನಗರ ವ್ಯಾಪ್ತಿಯ ಬಿಜೆಪಿ ನಾಯಕರು ಸಭೆ ನಡೆಸಿದ್ದಾರೆ.

ಪಕ್ಷದ ಬೆಂಗಳೂರು ನಗರ ಕಚೇರಿಯಲ್ಲಿ ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ.ರಾಮಮೂರ್ತಿ, ಬಿಬಿಎಂಪಿಯ ಮಾಜಿ ಸದಸ್ಯರು ಶನಿವಾರ ಚರ್ಚೆ ನಡೆಸಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದರೆ ಚುನಾವಣಾ ಸಮೀಕರಣ ಬದಲಾಗುತ್ತದೆ. ಚುನಾಯಿತ ಜನ ಪ್ರತಿನಿಧಿಗಳ ಅಧಿಕಾರ ಕಡಿಮೆಯಾಗುತ್ತದೆ ಎಂಬ ಬಗ್ಗೆಯೂ ಚರ್ಚೆ ಯಾಗಿದೆ. ಚುನಾವಣೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಬಗ್ಗೆಯೂ ಚರ್ಚಿಸಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

500 ಕ್ಷಯ ರೋಗಿಗಳ ದತ್ತು ಸ್ವೀಕಾರ

ಲಹರ್‌ಸಿಂಗ್ ಸಿರೋಯಾ– ಜೆ.ಸಿ. ಶರ್ಮಾ ಸಹಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದ ಲಹರ್‌ಸಿಂಗ್ ಸಿರೋಯಾ ಅವರು ಕೈಗಾರಿಕೋದ್ಯಮಿ ಜೆ.ಸಿ. ಶರ್ಮಾ ಅವರ ಸಹಯೋಗದೊಂದಿಗೆ 'ಪ್ರಧಾನ ಮಂತ್ರಿ ಟಿಬಿ–ಮುಕ್ತ ಭಾರತ' ಅಭಿಯಾನದ ಅಡಿ 500 ಕ್ಷಯ ರೋಗಿಗಳನ್ನು ದತ್ತು ಪಡೆದರು.

ಕಾಮಾಕ್ಷಿಪಾಳ್ಯದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಲಹರ್ ಸಿಂಗ್ ಅವರೊಂದಿಗೆ ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದ ಶಾಸಕ ಕೆ.ಗೋಪಾಲಯ್ಯ ಅವರೂ 150 ಕ್ಷಯರೋಗಿಗಳನ್ನು ದತ್ತು ಪಡೆದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಲಹರ್ ಸಿಂಗ್, '2025ರ ವೇಳೆಗೆ ಕ್ಷಯ ಮುಕ್ತ ಭಾರತವಾಗಬೇಕೆಂಬ ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪಕ್ಕೆ ಅನುಗುಣವಾಗಿ ಸಮುದಾಯ ಮತ್ತು ಮಿತ್ರರ ಬೆಂಬಲದೊಂದಿಗೆ ಎರಡು ವರ್ಷಗಳಿಂದ ಬೆಂಗಳೂರಿನಲ್ಲಿ 1,900 ಕ್ಷಯ ರೋಗಿಗಳನ್ನು ದತ್ತು ಪಡೆದಿದ್ದೇನೆ. ರಾಜಾಜಿನಗರ ಮತ್ತು ಗೋಪಾಲಯ್ಯನವರ ಕ್ಷೇತ್ರದ ಎಲ್ಲಾ ಕ್ಷಯ ರೋಗಿಗಳನ್ನು ದತ್ತು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಸಾರ್ವಜನಿಕ ಭಾಗವಹಿಸುವಿಕೆ ಮುಖ್ಯವಾಗಿದೆ' ಎಂದರು.

'ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ಬೆಂಬಲ ನೀಡಿದರೆ, ಇನ್ನೂ ಹೆಚ್ಚಿನದ್ದನ್ನು ಸಾಧಿಸಬಹುದು. ಎಲ್ಲ ರೀತಿಯಲ್ಲೂ ಬೆಂಬಲಿಸಲು ನಾವು ಸಿದ್ಧರಿದ್ದೇವೆ. ಇಂದು ದತ್ತು ಪಡೆದ ರೋಗಿಗಳಿಗೆ ಏಳು ತಿಂಗಳವರೆಗೆ ಪೌಷ್ಟಿಕಾಂಶಯುಕ್ತ ಆಹಾರ ಕಿಟ್ ನೀಡಲಿದ್ದೇವೆ. ಆದ್ದರಿಂದ ಅವರು ಪೂರ್ಣವಾಗಿ ಚೇತರಿಸಿಕೊಳ್ಳಲು ಸಾಧ್ಯವಾಗಲಿದೆ' ಎಂದು ಆಶಿಸಿದರು.

'ನಾನು ಶಿವಾಜಿನಗರ, ಮಲ್ಲೇಶ್ವರ, ಬಿಟಿಎಂ ಲೇಔಟ್ ಕ್ಷೇತ್ರಗಳಿಂದಲೂ ಕ್ಷಯರೋಗಿಗಳನ್ನು ದತ್ತು ಪಡೆದಿದ್ದೇನೆ. ಇದು ಸಾಮಾಜಿಕ ಸೇವೆ, ರಾಜಕೀಯವಲ್ಲ' ಎಂದು ಸ್ಪಷ್ಟಪಡಿಸಿದರು.

ಶಾಸಕ ಕೆ.ಗೋಪಾಲಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ದತ್ತು ಪಡೆದ ಕೆಲವು ಕ್ಷಯ ರೋಗಿಗಳಿಗೆ ಆಹಾರ ಮತ್ತು ಪೌಷ್ಟಿಕಾಂಶ ಕಿಟ್‌ಗಳನ್ನು ಸಾಂಕೇತಿಕವಾಗಿ ವಿತರಿಸಿದರು. ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ(ಟಿ.ಬಿ) ಡಾ.ಅನಿಲ್, ಮಾಜಿ ಮೇಯರ್ ರಂಗಣ್ಣ, ಮಾಜಿ ಕಾರ್ಪೊರೇಟರ್ ಪ್ರತಿಮಾ, ವೈದ್ಯಕೀಯ ಅಧಿಕಾರಿ ಡಾ. ಶಾಂತಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಲಹರ್ ಸಿಂಗ್ ಅವರು ಪೌಷ್ಟಿಕಾಂಶಯುಕ್ತ ಆಹಾರದ ಕಿಟ್ ವಿತರಿಸಿದರು

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ಅವರು 'ನಮ್ಮ ಮೆಟ್ರೊ' ಹಳದಿ ಮಾರ್ಗದಲ್ಲಿ ಬೊಮ್ಮಸಂದ್ರದಿಂದ ಆರ್.ವಿ ರಸ್ತೆ ನಡುವಿನ ನಿಲ್ದಾಣಗಳನ್ನು ಹಾಗೂ ಹೆಬ್ಬಗೋಡಿ ಡಿಪೊವನ್ನು ಶನಿವಾರ ಪರಿಶೀಲನೆ ನಡೆಸಿದರು

ಕ್ಷಯ ರೋಗಿಗಳಿಗೆ 'ಪುಷ್ಟಿ ಪೌಡರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷಯ ರೋಗಿಗಳಿಗೆ ಚಿಕಿತ್ಸೆ ಆರಂಭದ ಎರಡು ತಿಂಗಳು ಪೌಷ್ಟಿಕ ಆಹಾರವಾಗಿ 'ಪುಷ್ಟಿ ಪೌಡರ್' ಒದಗಿಸುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಇಲಾಖೆಯ ಜಂಟಿ ನಿರ್ದೇಶಕರು (ಕ್ಷಯ) ಸೂಚಿಸಿದ್ದಾರೆ.

ರೋಗಿಯ ದೇಹದ 'ಬಾಡಿ ಮಾಸ್ ಇಂಡೆಕ್ಸ್ (ದೇಹದ ಸೂಚ್ಯಂಕ–ಬಿಎಂಐ) 18ಕ್ಕಿಂತ ಕಡಿಮೆ ಇದ್ದರೆ, ಚಿಕಿತ್ಸೆಯ ಆರಂಭದ ಎರಡು ತಿಂಗಳು ಹೆಚ್ಚುವರಿ ಪೌಷ್ಟಿಕ ಆಹಾರವಾಗಿ 'ಪುಷ್ಟಿ ಪೌಡರ್' ನೀಡಲು ಸರ್ಕಾರದ ಅನುಮೋದನೆ ದೊರೆತಿದೆ. ಫಲಾನುಭವಿಗೆ ಪ್ರತಿ ತಿಂಗಳು 6 ಕೆ.ಜಿ. 'ಪುಷ್ಟಿ ಪೌಡರ್' ನೀಡಲು ಅವಕಾಶವಿದೆ ಎಂದು ತಿಳಿಸಲಾಗಿದೆ.

ಗಣಿಬಾಧಿತ ಜಿಲ್ಲೆಗಳಾದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಹೊರತುಪಡಿಸಿ, ರಾಜ್ಯದ ಉಳಿದ ಎಲ್ಲ ಜಿಲ್ಲೆಗಳ ಅರ್ಹ ಫಲಾನುಭವಿಗಳಿಗೆ ಆಯಾ ಅಂಗನವಾಡಿ ಕೇಂದ್ರದ ಮೂಲಕ 'ಪುಷ್ಟಿ ಪೌಡರ್' ವಿತರಣೆ ಮಾಡಬೇಕು ಎಂದು ಸೂಚಿಸಲಾಗಿದೆ.

ಸರಬರಾಜು ಮಾಡಲಾದ 'ಪುಷ್ಟಿ ಪೌಡರ್'ನ ಗುಣಮಟ್ಟ ಕೆಡದಂತೆ ದಾಸ್ತಾನು ಮಾಡಬೇಕು. 2025ರ ಆ.1 ರಿಂದ ಹೊಸ ಕ್ಷಯ ರೋಗಿಗಳ ದೇಹದ ತೂಕವನ್ನು ಪರೀಕ್ಷೆ ಮಾಡಿಸಿ, ಅಗತ್ಯ ಅನುಸಾರ 'ಪುಷ್ಟಿ ಪೌಡರ್' ಒದಗಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಪ್ರಸ್ತಾವ ಕೈಬಿಡದಿದ್ದರೆ ಹೋರಾಟ'

ಬಫರ್ ವಲಯ ಕಡಿತ ನಿರ್ಧಾರ ಮಾರಕ: ರಾಮಸ್ವಾಮಿ

ಪ್ರಜಾವಾಣಿ ವಾರ್ತೆ

ಎ.ಟಿ. ರಾಮಸ್ವಾಮಿ

ಬೆಂಗಳೂರು: 'ಕೆರೆಗಳು ಹಾಗೂ ರಾಜಕಾಲುವೆಗಳ ಬಫರ್ ವಲಯವನ್ನು ಕಡಿಮೆ ಮಾಡುವ ಪ್ರಸ್ತಾವವನ್ನು ಸರ್ಕಾರ ಕೈಬಿಡದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುತ್ತದೆ' ಎಂದು 'ಪರಿಸರಕ್ಕಾಗಿ ನಾವು' ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಎಚ್ಚರಿಸಿದ್ದಾರೆ.

'ಕೆರೆಗಳು ಹಾಗೂ ರಾಜಕಾಲುವೆಗಳ ಸಂರಕ್ಷಿತ ಪ್ರದೇಶವನ್ನು ಕಡಿಮೆ ಮಾಡಲು ಹೊರಟಿರುವ ಸರ್ಕಾರದ ನಿರ್ಧಾರ ಪರಿಸರಕ್ಕೆ ಅತ್ಯಂತ ಮಾರಕ. ರಿಯಲ್ ಎಸ್ಟೇಟ್ ಮಾಫಿಯಾಗೆ ಮಣೆ ಹಾಕಲು ನಮ್ಮ ಪ್ರಾಕೃತಿಕ ಸಂಪತ್ತನ್ನೇ ನಾಶ ಮಾಡುವ ಹುನ್ನಾರವಾಗಿದೆ' ಎಂದು ಅವರು ದೂರಿದ್ದಾರೆ.

'ಅಭಿವೃದ್ಧಿ ಚಟುವಟಿಕೆಗಳ ಜತೆಗೆ ನೈಸರ್ಗಿಕ ಸಂಪತ್ತು ಉಳಿಸಬೇಕೆಂಬ ಕಾಳಜಿಯುಳ್ಳ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ನೇತೃತ್ವದಲ್ಲಿ ನಡೆದಿರುವ ಸಭೆಯೇ ಇಂತಹ ನಿರ್ಧಾರ ಕೈಗೊಂಡಿದೆ ಎಂದರೆ, ಸಭೆಯ ತೀರ್ಮಾನದ ಹಿಂದಿನ ರಾಜಕೀಯ ಪ್ರಭಾವ ಎಷ್ಟರ ಮಟ್ಟಿಗಿದೆ ಎಂಬುದನ್ನು ಯಾರು ಬೇಕಾದರೂ ಊಹಿಸಿಕೊಳ್ಳಬಹುದು' ಎಂದಿದ್ದಾರೆ.

'ಬೆಂಗಳೂರಿನಲ್ಲಿರುವ ಒಂದು ಕೆರೆಯ ನೀರನ್ನೂ ಕುಡಿಯುವ ಪರಿಸ್ಥಿತಿಯಿಲ್ಲ. ಕೆರೆ ನೀರಿಗಿರುವ ಯೋಗ್ಯತೆಯನ್ನು ಭೂ ಮಾಫಿಯಾದವರು, ರಿಯಲ್ ಎಸ್ಟೇಟ್ ಕುಳಗಳು ಕಳೆದಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಂರಕ್ಷಿತ ಪ್ರದೇಶವನ್ನೂ ಕಡಿತಗೊಳಿಸಿದರೆ, ತ್ಯಾಜ್ಯ ನೇರವಾಗಿ ಕೆರೆಗೇ ಹರಿಯುತ್ತದೆ. ಪರಿಸರಕ್ಕೆ ಮಾರಕವಾಗುವ ಬಫರ್ ವಲಯ ಕಡಿಮೆ ಮಾಡುವುದನ್ನು ಸರ್ಕಾರಕ್ಕೆ ಸಲಹೆ ನೀಡಿರುವವರಿಗೆ, ಹಲವು ದಶಕಗಳಿಂದ ರಾಜಕಾರಣಿಯಾಗಿ ಪ್ರಪಂಚವನ್ನು ಕಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಣೆ ಹಾಕಬಾರದು' ಎಂದು ಆಗ್ರಹಿಸಿದ್ದಾರೆ.

ಕೆರೆಗೆ ಧಕ್ಕೆ ಇಲ್ಲ: ಕೆಟಿಸಿಡಿಎ

ಬೆಂಗಳೂರು: ಕೆರೆಯ ಬಫರ್ ವಲಯ ಮಾರ್ಪಾಟು ಮಾಡುವುದರಿಂದ ಸಾಮರ್ಥ್ಯ ಕಡಿಮೆಯಾಗುವುದಿಲ್ಲ. ಬದಲಿಗೆ, ಸಾರ್ವಜನಿಕರಿಗೆ ಉಪಯುಕ್ತವಾಗುವ ಯೋಜನೆಗಳಿಗೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ) ತಿಳಿಸಿದೆ.

'ಹಲವು ಪ್ರಕರಣಗಳಲ್ಲಿ ಕೆರೆಯ ಬಫರ್ ವಲಯ ಖಾಸಗಿ ಸ್ವತ್ತಾಗಿದ್ದು, ಅದನ್ನು 'ನಿರ್ಮಾಣರಹಿತ ವಲಯವನ್ನಾಗಿ' ಘೋಷಿಸಲಾಗುತ್ತದೆ. ಬಫರ್ ವಲಯ ಮಾರ್ಪಾಟು ಮಾಡುವುದರಿಂದ ಪ್ರವಾಹದ ಸಂಕಷ್ಟ ಎದುರಾಗುವುದಿಲ್ಲ' ಎಂದು ತಿಳಿಸಿದೆ.

'ಬಫರ್ ವಲಯ ಮಾರ್ಪಾಟಿನಿಂದ ರಿಯಲ್ ಎಸ್ಟೇಟ್ ಅಭಿವೃದ್ಧಿಗಾಗಿ ಅಲ್ಲ. ವಿಭಿನ್ನ ಅಳತೆಗಳಲ್ಲಿರುವ ಕೆರೆಗಳಲ್ಲಿ ಬಫರ್ ವಲಯದ ಏಕರೂಪತೆ ತರಲು ಸಾಧ್ಯವಾಗುತ್ತದೆ. ಕೆರೆಗಳ ಸಮೀಪ ಎಸ್‌ಟಿಪಿಗಳನ್ನು ಅಳವಡಿಸುವುದರಿಂದ ಕೆರೆಗಳಿಗೆ ಮಾಲಿನ್ಯ ಹರಿಯುವುದಕ್ಕೆ ತಡೆಯಾಗುತ್ತದೆ' ಎಂದು ಕೆಟಿಸಿಡಿಎ ಹೇಳಿದೆ. 'ಪ್ರಸ್ತಾವಿತ ಮಾರ್ಪಾಟಿನಿಂದ, ಪರಿಸರ ಸಂರಕ್ಷಣೆಯಲ್ಲಿ ಸಮತೋಲನ ಬರಲಿದೆ. ನಾಗರಿಕ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಜಲಮೂಲವನ್ನು ಸಂರಕ್ಷಿಸಿದಂತಾಗುತ್ತದೆ' ಎಂದು ತಿಳಿಸಿದೆ.

ನಗರದಲ್ಲಿ ಇಂದು

ಭಕ್ತಿ ಭಾವನಂದ ಅಖಂಡ ಭಜನೆ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ 9

ಆರ್ಗ್ಯಾನಿಕ್ ಸಂತೆ: ಅತಿಥಿ: ಬಿ.ಎಂ. ಉಮೇಶ್ ಕುಮಾರ್, ನೃತ್ಯ ಪ್ರದರ್ಶನ: ರೋಹಿಣಿ ಶ್ರೀಧರ್, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 9

ರಾಜ್ಯಮಟ್ಟದ ವೈಜ್ಞಾನಿಕ, ವೈಚಾರಿಕ ಸಾಹಿತ್ಯ ಸಮಾವೇಶ–2025: ಸರ್ವಾಧ್ಯಕ್ಷ: ಆರ್.ಎಸ್. ರವೀಂದ್ರ, ಉದ್ಘಾಟನೆ: ಗೀತಾ ರಾಮಾನುಜಂ, ಬೈರಮಂಗಲ ರಾಮೇಗೌಡ, ಅತಿಥಿಗಳು: ಶಶಿಕಾಂತ್ ರಾವ್, ಆಶಾ ಶಿವುಗೌಡ, ಎಸ್. ರಾಮಲಿಂಗೇಶ್ವರ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 9.30

ಜಿಲ್ಲಾ ಘಟಕದ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಅತಿಥಿಗಳು: ಪುಟ್ಟಣ್ಣ, ರಾಮೋಜಿಗೌಡ, ಸೌಮ್ಯಾರೆಡ್ಡಿ, ರಾಜು ಎನ್., ಮನೋಜ್‌ಕುಮಾರ್ ಕೊಳ್ಳ, ಅಧ್ಯಕ್ಷತೆ: ಚಿಕ್ಕಸ್ವಾಮಿ ಎಸ್.ಕೆ., ಆಯೋಜನೆ: ಕರ್ನಾಟಕ ರಾಜ್ಯ ಅನುದಾನಿತ ಪದವಿಪೂರ್ವ ಕಾಲೇಜುಗಳ ನೌಕರರ ಸಂಘ, ಸ್ಥಳ: ಪ್ರೊ.ಬಿ.ವಿ. ನಾರಾಯಣರಾವ್ ಸಭಾಂಗಣ, ವಿಜಯ ಪದವಿಪೂರ್ವ ಕಾಲೇಜು, ಜಯನಗರ, ನಾಲ್ಕನೇ ಬ್ಲಾಕ್, ಬೆಳಿಗ್ಗೆ 10


ಚಂದ್ರಶೇಖರ ಕಂಬಾರ

'ಕನ್ನಡ ಸಾಹಿತ್ಯ ಪರಿಷತ್ತು ಉಳಿಸಿ' ಜಾಗೃತಿ ಸಮಾವೇಶ: ಉದ್ಘಾಟನೆ: ಸುನಂದಾ ಜಯರಾಮ್, ಡಾ. ವಸುಂಧರಾ ಭೂಪತಿ, ಅಧ್ಯಕ್ಷತೆ: ಮೀರಾ ಶಿವಲಿಂಗಯ್ಯ, ಅತಿಥಿ: ಕೆ.ಎಸ್. ವಿಮಲಾ, ಆಯೋಜನೆ: ಕನ್ನಡ ನಾಡು ನುಡಿ ಜಾಗೃತಿ ಸಮಿತಿ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

'ಅಣ್ಣನ ನೆನಪು' ನಾಟಕ ಪ್ರದರ್ಶನ: ರಚನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7.30

ಹೆಮ್ಮಂಡಹಳ್ಳಿ ಜಿ. ಮುನಿಸ್ವಾಮಿ ಅವರ 'ಹೆಮ್ಮಂಡಹಳ್ಳಿಯಿಂದ' ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಪುಸ್ತಕದ ಕುರಿತು: ಚ.ಹ. ರಘುನಾಥ, ಅತಿಥಿ: ಎಚ್. ದಂಡಪ್ಪ, ಆಯೋಜನೆ: ತೊಳಸಿ ಪ್ರಕಾಶನ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಸಮತ್ವ ವಾರ್ಷಿಕೋತ್ಸವ: ಸಂಗೀತ ಕಛೇರಿ: ಹರಿಹರನ್ ಎಂ.ಬಿ., ಅಶೋಕ ಎಸ್., ವೈಭವ್ ರಮಣಿ, ವಿನೋದ್ ಶ್ಯಾಮ್ ಆನೂರ್, ಅನಿರುದ್ಧ ಅತ್ರೇಯ, ಆಯೋಜನೆ: ಸಮತ್ವ ಫೌಂಡೇಷನ್, ಸ್ಥಳ: ಸಂಸ್ಕೃತ ಭಾರತಿ, ಅಕ್ಷರಂ ಸಭಾಂಗಣ, ಗಿರಿನಗರ, ಬೆಳಿಗ್ಗೆ 9.30

ಸ್ವಾತಂತ್ರ್ಯೋತ್ಸವ ಕವಿಗೋಷ್ಠಿ, ಗೀತಗಾಯನ: ಅತಿಥಿಗಳು: ನರಸಿಂಹ ಸ್ವಾಮಿ, ಸಂಜೀವ ಕುಲಕರ್ಣಿ, ಆಯೋಜನೆ: ರವಿಕಿರಣ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

'ಚಿತ್ರಲೇಖಾ' ಸಂವಾದ, ಗೌರವಾರ್ಪಣೆ: ಶೈಲಜಾ ಸುರೇಶ್, ಮೇಘನಾ ಕಾನೇಟ್ಕರ್, ಅರುಣಾ ರಾವ್, ಮಧುರಾ ಕರ್ಣಂ, ಸುಶೀಲಾ, ಸೋಮಶೇಖರ್, ಸವಿತಾ ನಾಗೇಶ್, ಲಲಿತಾ ಶೇಷಾದ್ರಿ, ಬಿ.ಜಿ. ಗಾಯತ್ರಿ, ಆಯೋಜನೆ ಮತ್ತು ಸ್ಥಳ: ಲೇಖಿಕಾ ಸಾಹಿತ್ಯ ವೇದಿಕೆ, ಜೆ.ಪಿ. ನಗರ, ಬೆಳಿಗ್ಗೆ 11

ಎಸ್. ಶಿವಲಿಂಗಂ ಅವರ 'ಭಾರತದ ಕಾಂಡ ಕೊರಕ ಜಾತಿ ಮನಸಾಕ್ಷಿ ಮಾತನಾಡಲಿ' ಪುಸ್ತಕ ಬಿಡುಗಡೆ, ಸಂವಾದ: ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಭಾಗವಹಿಸುವವರು: ಜಾಣಗೆರೆ ವೆಂಕಟರಾಮಯ್ಯ, ಪಾರ್ವತೀಶ ಬಿಳಿದಾಳೆ, ಮೋಹನ್ ಕುಮಾರ್, ರೇವಂತ್, ಆಯೋಜನೆ: ಸ್ವಾಭಿಮಾನಿ ದಲಿತ ಶಕ್ತಿ–ಕರ್ನಾಟಕ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಮಾಸದ ಮಂಥನ: ಭಾಗವಹಿಸುವವರು: ಉಮಾಶ್ರೀ, ಸ್ಥಳ: ನಂ. 17, ಸಾನ್ನಿಧ್ಯ, ಒಂದನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

'ಭಾರತೀಯ ಕಲಾ ವಾಸ್ತುಶಿಲ್ಪ ಮತ್ತು ಶಿಲಾಶಾಸನದ ಅನ್ವೇಷಣೆ' ಅಭಿನಂದನಾ ಗ್ರಂಥ ಬಿಡುಗಡೆ: ಟಿ.ಎಸ್. ರವಿಶಂಕರ್, ಅತಿಥಿ: ಶ್ರೀನಂದ ಬಾಪಟ್, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

'ಸ್ವರ ಸಿರಿ' ಸಂಗೀತ ಕಛೇರಿ: ಗಾಯನ: ರೇಷ್ಮಾ ಭಟ್, ತಬಲಾ: ಉದಯರಾಜ್ ಕರಪೂರ್, ಹಾರ್ಮೋನಿಯಂ: ತೇಜಸ್ ಕಟೋಟಿ, ಉಪಸ್ಥಿತಿ: ಎಸ್. ಮುರಗನ್, ಗಣಪತಿ ಎಸ್. ಹೆಗಡೆ, ಆಯೋಜನೆ ಮತ್ತು ಸ್ಥಳ: ಕೋಬಾಲ್ಟ್, ರಾಜರಾಜೇಶ್ವರಿನಗರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಹನಾ ರಾವ್ ಡಿ.ಜಿ., ಅತಿಥಿಗಳು: ಸತ್ಯನಾರಾಯಣ ರಾಜು, ಆರ್.ವಿ. ರಾಘವೇಂದ್ರ, ಜನಾರ್ದನ ವೆಂಕಟೇಶ್, ಆಯೋಜನೆ: ನರ್ತನಯೋಗ, ಕಲಾಸ್ನೇಹಿ ಟ್ರಸ್ಟ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ, 4ನೇ 'ಟಿ' ಬ್ಲಾಕ್, ಸಂಜೆ 5

'2025ನೇ ಸಾಲಿನ ಮಲೆನಾಡು ಮಿತ್ರ ಪ್ರಶಸ್ತಿ', 'ಮಲೆನಾಡು ಸಾಧಕರು ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಮಧು ಬಂಗಾರಪ್ಪ, ಅಧ್ಯಕ್ಷತೆ: ಪ್ರದೀಪ್ ಹೆಗ್ಗೋಡು, ಅತಿಥಿಗಳು: ಆರಗ ಜ್ಞಾನೇಂದ್ರ, ಟಿ.ಡಿ. ರಾಜೇಗೌಡ, ಕೆ. ಗೋಪಾಲಯ್ಯ, ಪ್ರಶಸ್ತಿ ಪುರಸ್ಕೃತರು: ಬಿ.ಕೆ. ಸುಮಿತ್ರಾ, ಅಚ್ಯುತ್ ಗೌಡ, ರಿತುಪರ್ಣ, ಮಹಮ್ಮದ್ ಅಮಾನುಲ್ಲಾ, ಆಯೋಜನೆ: ಮಲೆನಾಡು ಮಿತ್ರ ವೃಂದ, ಸ್ಥಳ: ಡಾ. ರಾಜ್‌ಕುಮಾರ್ ಕಲಾ ಭವನ, ಮಹಾಲಕ್ಷ್ಮಿಪುರ, ಸಂಜೆ 4ರಿಂದ ಸಭಾ ಕಾರ್ಯಕ್ರಮ ಸಂಜೆ 5.30ಕ್ಕೆ

ರಾಘವೇಂದ್ರ ಗುರುಸಾರ್ವಭೌಮರ ಆರಾಧನಾ ಮಹೋತ್ಸವ: ಹರಿದಾಸ ವೈಭವ: ಚಂದ್ರಿಕಾ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಭಾನುವಾರ, ಆಗಸ್ಟ್ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 214 | ಪುಟ 22

www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನಿಷೇಧ

ಮುಂಬೈ– ಕೋಲ್ಕತ್ತ ವಿಮಾನದಲ್ಲಿ ಶುಕ್ರವಾರ ಸಹಪ್ರಯಾಣಿಕನ ಕಪಾಳಕ್ಕೆ ಹೊಡೆದ ಪ್ರಯಾಣಿಕನಿಗೆ, ಇನ್ನು ಮುಂದೆ ತನ್ನ ವಿಮಾನಗಳಲ್ಲಿ ಸಂಚರಿಸದಂತೆ ಇಂಡಿಗೊ ನಿಷೇಧ ಹೇರಿದೆ

ಒಡಂಬಡಿಕೆ

ಮಾದಕ ವಸ್ತುಗಳ ನಿಗ್ರಹ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಹಮದಾಬಾದ್‌ನ ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯವು ಕೇಂದ್ರ ಆದಾಯ ನಿಯಂತ್ರಣ ಪ್ರಯೋಗಾಲಯದ ಜೊತೆ ಒಡಂಬಡಿಕೆ ಮಾಡಿಕೊಂಡಿದೆ

ಗ್ಯಾರಂಟಿ: ಅಧಿಕಾರಿಗಳಿಗೆ ಸಂಕಷ್ಟ 4 | 'ಕರಡು ಪಟ್ಟಿಯಲ್ಲಿ ನನ್ನ ಹೆಸರಿಲ್ಲ' 7

ಪ್ರಜ್ವಲ್‌ಗೆ ಆಜೀವ ಜೈಲು ಶಿಕ್ಷೆ

ಮನೆಗೆಲಸದ ಮಹಿಳೆ ಮೇಲಿನ ಅತ್ಯಾಚಾರ ಸಾಬೀತು

● ಸಂತ್ರಸ್ತೆಗೆ ₹11.25 ಲಕ್ಷ ಪರಿಹಾರಕ್ಕೆ ಆದೇಶ

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ಮನೆಗೆಲಸದ ಮಧ್ಯವಯಸ್ಕ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ ದುಷ್ಕೃತ್ಯದಲ್ಲಿ ಅಪರಾಧಿ ಎಂದು ನಿರ್ಣಯಿಸಲಾಗಿದ್ದ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ (34) ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜೀವಾವಧಿಯ (ಜೀವಮಾನ ಪರ್ಯಂತ) ಕಠಿಣ ಜೈಲು ಶಿಕ್ಷೆ ವಿಧಿಸಿ ಮಹತ್ವದ ತೀರ್ಪು ಪ್ರಕಟಿಸಿದೆ.

ಈ ಕುರಿತಾದ ತೀರ್ಪನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಶನಿವಾರ ಸಂಜೆ 4.10ಕ್ಕೆ ತೆರೆದ ನ್ಯಾಯಾಲಯದಲ್ಲಿ ಘೋಷಿಸಿದರು.

'ಅಪರಾಧಿಯು ಜೈಲು ಶಿಕ್ಷೆ ಅನುಭವಿಸುವುದರ ಜೊತೆಗೆ ₹11.25 ಲಕ್ಷ ಪರಿಹಾರವನ್ನು ಸಂತ್ರಸ್ತೆಗೆ ಮತ್ತು ₹35 ಸಾವಿರ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಬೇಕು' ಎಂದು ನ್ಯಾಯಾಧೀಶರು ಆದೇಶಿಸಿದ್ದಾರೆ. ಪ್ರಜ್ವಲ್‌ಗೆ ವಿವಿಧ ಅಪರಾಧಿಕ ಕಲಂಗಳ ಅಡಿಯಲ್ಲಿ ನ್ಯಾಯಾಧೀಶರು ಕಠಿಣವಾದ ಗರಿಷ್ಠ ಜೈಲು ಶಿಕ್ಷೆ ವಿಧಿಸಿರುವ ಕಾರಣ, ಈ ಶಿಕ್ಷಾ ಅವಧಿಯನ್ನು ಮೊಟಕುಗೊಳಿಸುವ ಅಧಿಕಾರವೂ ಸರ್ಕಾರಕ್ಕೆ ಇಲ್ಲದಂತಾಗಿದೆ. ಒಟ್ಟು 480 ಪುಟಗಳ ತೀರ್ಪಿನ ಪ್ರತಿ ಇನ್ನಷ್ಟೇ ಲಭ್ಯವಾಗಬೇಕಿದೆ.

ಮನವಿ: ಬೆಳಿಗ್ಗೆ ಕಲಾಪ ಆರಂಭವಾದಾಗ ಶಿಕ್ಷೆಯ ಪ್ರಮಾಣವನ್ನು ಕಡಿಮೆಗೊಳಿಸುವಂತೆ ನ್ಯಾಯಾಧೀಶರಿಗೆ ಖುದ್ದು ಮನವಿ ಮಾಡಿದ ಪ್ರಜ್ವಲ್, 'ನಾನು ಒಮ್ಮೆ ಸಂಸದನಾಗಿ ಕೆಲಸ ಮಾಡಿದ್ದೇನೆ. ನಾನು ಅತ್ಯಾಚಾರ ಮಾಡಿದ್ದೇನೆ ಎಂದು ಯಾರೂ ಎಂದೂ ಚಕಾರ ಎತ್ತಿರಲಿಲ್ಲ. ನನ್ನ ರಾಜಕೀಯ ಜೀವನ ಮತ್ತು ಭವಿಷ್ಯವನ್ನು ಹಾಳುಮಾಡಲು ಸಂಚು ರೂಪಿಸಿ ಈ ಪ್ರಕರಣವನ್ನು ದಾಖಲಿಸಲಾಗಿದೆ. 2024ರ ಲೋಕಸಭಾ ಚುನಾವಣೆಯ ಮತದಾನಕ್ಕೆ 6 ದಿನ ಬಾಕಿ ಇದೆ ಎನ್ನುವಾಗ ನನ್ನ ವಿರುದ್ಧ ಈ ದೂರು ದಾಖಲು ಮಾಡಲಾಯಿತು. ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಈ ರೀತಿ ಮಾಡಲಾಯಿತು. ನಾನು ಹಾಸನ ಜಿಲ್ಲೆ ಆಳಿದ್ದೆ. ರಾಜಕೀಯದಲ್ಲಿ ನಾನು ಬೇಗ ಬೆಳೆದಿದ್ದೇ ನನಗೆ ಮುಳುವಾಯಿತು. ನಾನು ನನ್ನ ತಂದೆ– ತಾಯಿಯ ಮುಖ ನೋಡಿ 6 ತಿಂಗಳಾಗಿದೆ' ಎಂದು ಕಣ್ಣೀರಿಟ್ಟರು.

ಇದೇ ವೇಳೆ, ಪ್ರಜ್ವಲ್ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲೆ ನಳಿನಾ ಮಾಯೇಗೌಡ, 'ಪ್ರಜ್ವಲ್ ರೇವಣ್ಣ ಅವರ ತಾತ ಮಾಜಿ ಪ್ರಧಾನಿ. ಚುನಾವಣೆ ಸಂದರ್ಭದಲ್ಲಿ ಆರೋಪಿಯ ವಿಡಿಯೊ ವೈರಲ್ ಮಾಡಲಾಗಿದೆ. ಇದರ ಹಿಂದೆ ರಾಜಕೀಯ ದುರುದ್ದೇಶ ಅಡಗಿದೆ. ಸಂತ್ರಸ್ತ ಮಹಿಳೆಯ ಸಾಮಾನ್ಯ ಜೀವನಕ್ಕೆ ಯಾವುದೇ ತೊಂದರೆ ಆಗಿಲ್ಲ. ಇಂತಹ ಯುವ ರಾಜಕಾರಣಿಯನ್ನು ಜೀವನ ಪರ್ಯಂತ ಜೈಲಿನಲ್ಲಿ ಇಡುವುದು ಸರಿಯಲ್ಲ. ಹೀಗಾಗಿ, ಕನಿಷ್ಠ ಪ್ರಮಾಣದ ಶಿಕ್ಷೆ ವಿಧಿಸಬೇಕು' ಎಂದು ಮನವಿ ಮಾಡಿದ್ದರು. ಮನವಿ ಆಲಿಸಿದ್ದ ನ್ಯಾಯಾಧೀಶರು ಮಧ್ಯಾಹ್ನ ತೀರ್ಪು ಪ್ರಕಟಿಸುವುದಾಗಿ ಕಲಾಪ ಮುಂದೂಡಿದ್ದರು.

ಜೈಲಿನ ಸಮವಸ್ತ್ರ, ಕೂಲಿ ನಿಗದಿ

ಅಪರಾಧಿ ಪ್ರಜ್ವಲ್ ರೇವಣ್ಣನನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಶನಿವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ಶಿಕ್ಷೆ ನಿಗದಿಯಾದ ಬಳಿಕ ಮತ್ತೆ ಅದೇ ಕಾರಾಗೃಹಕ್ಕೆ ಪ್ರಜ್ವಲ್‌ನನ್ನು ಕರೆದೊಯ್ಯಲಾಯಿತು. ಇದುವರೆಗೂ ವಿಚಾರಣಾಧೀನ ಕೈದಿಯಾಗಿದ್ದ ಪ್ರಜ್ವಲ್ ಇನ್ನು ಮುಂದೆ ಸಜಾ ಬಂದಿಯಾಗಿ ಜೈಲಿನಲ್ಲಿ ಇರಲಿದ್ದಾನೆ.

ಪ್ರಜ್ವಲ್‌ಗೆ ಕೈದಿ ಸಂಖ್ಯೆ ನೀಡಲಾಗುತ್ತದೆ. ಜತೆಗೆ ಜೈಲಿನ ಸಮವಸ್ತ್ರ ನೀಡಲಾಗುತ್ತದೆ. ಇತರೆ ಸಜಾ ಬಂದಿಗಳಂತೆಯೇ ಪ್ರಜ್ವಲ್‌ಗೂ ಕೂಲಿ ನಿಗದಿಪಡಿಸಿ ಕೆಲಸ ನೀಡಲಾಗುವುದು ಎಂದು ಜೈಲು ಅಧಿಕಾರಿಯೊಬ್ಬರು ತಿಳಿಸಿದರು.



ಮುಖ್ಯಾಂಶಗಳು

- 480 ಪುಟಗಳ ಸುದೀರ್ಘ ತೀರ್ಪು
- ಬಲಿಷ್ಠ ಸಾಕ್ಷಿಯಾದ ಸಂತ್ರಸ್ತೆಯ ಹೇಳಿಕೆ

ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಕರಾರುವಾಕ್ಕಾದ ಫಲಿತಾಂಶ ಪಡೆಯಲಾಗಿದೆ. ಈ ಮೂಲಕ ಬಲಿಷ್ಠ ವ್ಯಕ್ತಿಯ ಕುಕೃತ್ಯವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲಾಗಿದೆ

ಸಂತೋಷ ಗಜಾನನ ಭಟ್
ನ್ಯಾಯಾಧೀಶ

ಯಾವುದಕ್ಕೆ ಎಷ್ಟು ಶಿಕ್ಷೆ?

ಐಪಿಸಿ ಕಲಂಗಳು

- **376(2)(ಎನ್):** (ಪದೇ ಪದೇ ಅತ್ಯಾಚಾರ) ಈ ಕಲಂನಡಿಯ ಅಪರಾಧಕ್ಕೆ ಜೀವನ ಪರ್ಯಂತ ಕಠಿಣ ಜೈಲು ಶಿಕ್ಷೆ ಮತ್ತು ₹5 ಲಕ್ಷ ದಂಡ
- **376(2)(ಕೆ):** (ಪ್ರಬಲ ಸ್ಥಾನದಲ್ಲಿರುವ ವ್ಯಕ್ತಿಯಿಂದ ಅತ್ಯಾಚಾರ) ಈ ಕಲಂನಡಿಯ ಅಪರಾಧಕ್ಕೆ ಜೀವಾವಧಿ (ಜೀವಮಾನ ಪರ್ಯಂತ) ಜೈಲು ಶಿಕ್ಷೆ, ₹5 ಲಕ್ಷ ದಂಡ.
- **354(ಬಿ):** (ವಿವಸ್ತ್ರಗೊಳಿಸುವಾಗ ಆಕೆಯ ಮೇಲೆ ಹಲ್ಲೆ) ಈ ಕಲಂನ ಅಡಿಯ ಅಪರಾಧಕ್ಕೆ 7 ವರ್ಷ ಜೈಲು ಶಿಕ್ಷೆ ₹50 ಸಾವಿರ ದಂಡ.
- **354-ಎ:** (ಮಹಿಳೆಯ ಘನತೆಗೆ ಚ್ಯುತಿ) ಅಡಿ ಅಪರಾಧಕ್ಕೆ 3 ವರ್ಷ ಜೈಲು, ₹25 ಸಾವಿರ ದಂಡ.
- **354(ಸಿ):** (ವಿವಸ್ತ್ರಗೊಳಿಸಿರುವ ಮಹಿಳೆಯನ್ನು ನೋಡಿ ಆನಂದಿಸುವುದು) ಅಡಿ ಅಪರಾಧಕ್ಕೆ 3 ವರ್ಷ ಜೈಲು, ₹25 ಸಾವಿರ ದಂಡ.
- **201:** (ಅಪರಾಧ ಕೃತ್ಯದ ಸಾಕ್ಷ್ಯ ನಾಶ) ಈ ಕಲಂ ಅಡಿಯ ಅಪರಾಧಕ್ಕೆ 3 ವರ್ಷ ಶಿಕ್ಷೆ, ₹20 ಸಾವಿರ ದಂಡ.
- **506:** (ಕ್ರಿಮಿನಲ್ ಬೆದರಿಕೆ) ಈ ಕಲಂನ ಅಡಿಯಲ್ಲಿ 2 ವರ್ಷ ಶಿಕ್ಷೆ, ₹10 ಸಾವಿರ ದಂಡ.

ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 66ಇ (ಖಾಸಗಿತನ ಉಲ್ಲಂಘಿಸಿ ವಿಡಿಯೊ ಮಾಡಿ, ಪ್ರಸಾರ ಮಾಡಿರುವುದು) ಈ ಕಲಂನ ಅಡಿಯ ಅಪರಾಧಕ್ಕೆ 3 ವರ್ಷ ಜೈಲು ಶಿಕ್ಷೆ, ₹25 ಸಾವಿರ ದಂಡ.

'ದುಷ್ಕೃತ್ಯಕ್ಕೆ ವಿಡಿಯೊವೇ ಅಸ್ತ್ರ'

ಬೆಂಗಳೂರು: 'ಅತ್ಯಾಚಾರದ ಅಪರಾಧಿ ಪ್ರಜ್ವಲ್ ರೇವಣ್ಣ ಸಂತ್ರಸ್ತೆಯ ಜತೆ ತಾನು ನಡೆಸಿದ ಲೈಂಗಿಕ ಕ್ರಿಯೆಯ ವಿಡಿಯೊ ರೆಕಾರ್ಡ್ ಮಾಡಿದ್ದಾನೆ. ಅದನ್ನಿಟ್ಟು ಬ್ಲ್ಯಾಕ್ ಮೇಲ್ ಮಾಡಿದ್ದಲ್ಲದೇ, ಅಸ್ತ್ರವಾಗಿ ಬಳಸಿ ದುಷ್ಕೃತ್ಯ ಮೆರೆದಿದ್ದಾನೆ. ಹೀಗಾಗಿ, ಗರಿಷ್ಠ ಮತ್ತು ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಪ್ರಾಸಿಕ್ಯೂಷನ್ ಪರ ವಕೀಲರು ಜನಪ್ರತಿನಿಧಿಗಳ ವಿಶೇಷ (ಸೆಷನ್ಸ್) ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರು.

ಬಿ.ಎನ್.ಜಗದೀಶ್



ಅಶೋಕ್ ಎನ್. ನಾಯಕ್

ಶಿಕ್ಷೆ ನಿಗದಿಗೊಳಿಸುವುದಕ್ಕೂ ಮುನ್ನ ಪ್ರಾಸಿಕ್ಯೂಷನ್ ಪರ ವಕೀಲರ ಕೋರಿಕೆಯನ್ನೂ ಆಲಿಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ಶನಿವಾರ ಸಂಜೆ 4 ಗಂಟೆಯ ನಂತರ ಶಿಕ್ಷೆಯ ಪ್ರಮಾಣವನ್ನು ನಿಗದಿಗೊಳಿಸಿ, ತೀರ್ಪು ಪ್ರಕಟಿಸಿದರು.

ಶಿಕ್ಷೆ ಕಡಿಮೆ ಮಾಡುವಂತೆ ಅಪರಾಧಿಯ ಕೋರಿಕೆಗೆ ಪ್ರತಿಯಾಗಿ ರಾಜ್ಯ ಪ್ರಾಸಿಕ್ಯೂಷನ್‌ನ ಹೆಚ್ಚುವರಿ ಪ್ರಾಸಿಕ್ಯೂಟರ್ ಆಗಿದ್ದ ಬಿ.ಎನ್.ಜಗದೀಶ್, ಪ್ರಭಾವಿಯಾಗಿರುವ ಆರೋಪಿಗೆ ಗರಿಷ್ಠ ಶಿಕ್ಷೆ ವಿಧಿಸುವ ಸಂಬಂಧ ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳನ್ನು ಉಲ್ಲೇಖಿಸಿದರು.

'ಈತ ತನ್ನ ವಿರುದ್ಧ ಕೇಸು ದಾಖಲಾದ ವೇಳೆ ವಿದೇಶಕ್ಕೆ ಪರಾರಿಯಾಗಿದ್ದ. ಇಂತಹ ಅಪರಾಧಿಗೆ ಗರಿಷ್ಠ ಶಿಕ್ಷೆ ನೀಡಬೇಕು. ಈತ ಹಲವು ಮಹಿಳೆಯರ ಮೇಲೆ ಈ ರೀತಿಯ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಇಂತಹ ಸಂದರ್ಭದಲ್ಲಿ ದೂರುದಾರ ಮಹಿಳೆ ಎಲ್ಲರ ಪ್ರತಿನಿಧಿಯಾಗಿದ್ದಾರೆ. ಈ ವ್ಯಕ್ತಿಗೆ ಎಳ್ಳಷ್ಟೂ ಕನಿಕರ ತೋರಿಸಬಾರದು. ಜೀವಾವಧಿ ಶಿಕ್ಷೆಗಿಂತ ಕಡಿಮೆ ಶಿಕ್ಷೆ ನೀಡಬಾರದು' ಎಂದು ಕೋರಿದರು.

▶ 4

ಶತಕದ ಜೊತೆಯಾಟ...

ಪಿಟಿಐ ಚಿತ್ರ

ಇಂಗ್ಲೆಂಡ್ ವಿರುದ್ಧ ಲಂಡನ್‌ನಲ್ಲಿ ನಡೆಯುತ್ತಿರುವ ಐದನೇ ಟೆಸ್ಟ್ ಪಂದ್ಯದಲ್ಲಿ ಶನಿವಾರ ಭಾರತದ ಬ್ಯಾಟರ್‌ಗಳಾದ ಯಶಸ್ವಿ ಜೈಸ್ವಾಲ್ ಮತ್ತು ಆಕಾಶ್ ದೀಪ್ (ಎಡಗಡೆ) ಶತಕದ ಜೊತೆಯಾಟದಲ್ಲಿ ಪಾಲ್ಗೊಂಡರು. ಪಂದ್ಯದಲ್ಲಿ ಯಶಸ್ವಿ ಶತಕ (118) ಬಾರಿಸಿದರೆ, ನೈಟ್ ವಾಚ್‌ಮನ್ ಆಕಾಶ್ ದೀಪ್ (66) ಅರ್ಧ ಶತಕ ಬಾರಿಸಿದರು

ಮುಷ್ಕರವೋ ಸಂಧಾನವೋ?

ಸಾರಿಗೆ ನೌಕರರ ಬೇಡಿಕೆ: ಆ.4ರಂದು ಮುಖ್ಯಮಂತ್ರಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆ ಮಾಡಬೇಕು, ಹಿಂಬಾಕಿ ನೀಡಬೇಕು ಎಂದು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾಸಮಿತಿ ಪಟ್ಟು ಹಿಡಿದಿದ್ದು, ಆ.5ರಿಂದ ಮುಷ್ಕರ ನಡೆಸಲು ನಿರ್ಧರಿಸಿದೆ. ಹಿಂಬಾಕಿಯೂ ಇಲ್ಲ, 2027ರವರೆಗೆ ವೇತನ ಪರಿಷ್ಕರಣೆಯೂ ಇಲ್ಲ ಎಂದು ಸರ್ಕಾರವೂ ಸಡ್ಡು ಹೊಡೆದಿದೆ.

ಈ ನಡುವೆ ಸಂಘಟನೆಗಳ ಮುಖಂಡರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಆ.4ರಂದು ಮಾತುಕತೆಗೆ ಕರೆದಿದ್ದಾರೆ. ಜೊತೆಗೆ, ಪರ್ಯಾಯ ಸಾರಿಗೆ ವ್ಯವಸ್ಥೆ ಮಾಡುವುದಕ್ಕೂ ಸರ್ಕಾರ ಮುಂದಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಕಾರ್ಮಿಕ ಸಂಘಗಳ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆಗಳು ನಿಗಮಕ್ಕೆ ಅನ್ವಯವಾಗುತ್ತಿದ್ದು, 1996 ರಲ್ಲಿ ನಡೆದ ಒಪ್ಪಂದದಂತೆ ನಾಲ್ಕು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ನಡೆಯಬೇಕು. 2020ರಿಂದ ಅನ್ವಯವಾಗುವಂತೆ 2023ರಲ್ಲಿ ಪರಿಷ್ಕರಣೆ ಮಾಡಲಾಗಿತ್ತು. ಆದರೆ, ಆ 38 ತಿಂಗಳ ಹಿಂಬಾಕಿಯನ್ನು ಸರ್ಕಾರ ನೀಡಿರಲಿಲ್ಲ. 2024ಕ್ಕೆ ಮತ್ತೆ ವೇತನ ಪರಿಷ್ಕರಣೆಯಾಗಬೇಕಿತ್ತು. ಅದನ್ನೂ ಮಾಡಿಲ್ಲ. ಈ ಬಗ್ಗೆ ಹಲವು ಬಾರಿ ಸರ್ಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ಕಳೆದ ಡಿಸೆಂಬರ್‌ನಲ್ಲಿ ಮುಷ್ಕರ ನಡೆಸಲು ನಿರ್ಧರಿಸಲಾಗಿತ್ತು. ಮಾತುಕತೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದರಿಂದ ಮುಷ್ಕರ ಕೈಬಿಡಲಾಗಿತ್ತು. ಈಗ ವರಸೆ ಬದಲಾಯಿಸಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತಸುಬ್ಬರಾವ್ ದೂರಿದ್ದಾರೆ.

▶ 6

11 ಸಾವಿರ ಖಾಸಗಿ ಬಸ್ ಬಳಕೆ

ಮುಖ್ಯಮಂತ್ರಿಯವರು ನಡೆಸುವ ಮಾತುಕತೆ ವಿಫಲವಾಗಿ ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳು ಮುಷ್ಕರ ಆರಂಭಿಸಿದರೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು 11 ಸಾವಿರ ಖಾಸಗಿ ಬಸ್‌ಗಳು ರಸ್ತೆಗಿಳಿಯಲಿವೆ.

ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಸ್. ಯೋಗೀಶ್ ಅಧ್ಯಕ್ಷತೆಯಲ್ಲಿ ವಿವಿಧ ಖಾಸಗಿ ಬಸ್ ಮಾಲೀಕರ ಸಂಘಗಳೊಂದಿಗೆ ಶನಿವಾರ ಸಭೆ ನಡೆದಿದೆ.

ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟ ವಿವಿಧ ಸಂಘಟನೆಗಳು ಸಭೆಯಲ್ಲಿ ಪಾಲ್ಗೊಂಡಿದ್ದು, 'ಪರ್ಮಿಟ್ ಸಮಸ್ಯೆ, ತೆರಿಗೆ ರಿಯಾಯಿತಿ ಸೇರಿದಂತೆ ನಮ್ಮ ಪ್ರಮುಖ ನಾಲ್ಕು ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಒತ್ತಾಯಿಸಿದ್ದಾರೆ. ಮುಷ್ಕರ ದಿನ ಖಾಸಗಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ಸೇರಿದಂತೆ ವಿವಿಧ ನಿಗಮಗಳ ಬಸ್‌ಗಳ ಸಂಚಾರ ಮಾರ್ಗದಲ್ಲಿ ಓಡಿಸಲು ಒಪ್ಪಿಗೆ ಸೂಚಿಸಿದ್ದಾರೆ.

▶ 6

'ನಮ್ಮ ಮೆಟ್ರೊ'ದಲ್ಲಿ ಅಂಗಾಂಗ ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯೊಬ್ಬರಿಗೆ ಯಕೃತ್ತಿನ ಕಸಿ ಮಾಡಲು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಸಾಗಿಸಲು ಇದೇ ಮೊದಲ ಬಾರಿಗೆ 'ನಮ್ಮ ಮೆಟ್ರೊ' ಬಳಸಲಾಗಿದೆ.

ದಾನಿಯೊಬ್ಬರು ನೀಡಿದ ಯಕೃತ್ ಅನ್ನು ವೈಟ್‌ಫೀಲ್ಡ್‌ನ ವೈದೇಹಿ ಆಸ್ಪತ್ರೆಯಿಂದ ಯುವಕನೊಬ್ಬನ ಅಂಗಾಂಗ ಕಸಿಗಾಗಿ ದಾಖಲಾಗಿದ್ದ ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆಗೆ ತಲುಪಿಸಬೇಕಿತ್ತು.

ವಾರಾಂತ್ಯದ ಸಂಚಾರ ದಟ್ಟಣೆ ಮತ್ತು ಅಂಗಾಂಗವು ಕೆಡದಂತೆ ಕೆಲವೇ ಗಂಟೆಗಳಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಯಕೃತ್ ಕಸಿ ನೆರವೇರಿಸಬೇಕಾಗಿದ್ದ ಹಿನ್ನೆಲೆಯಲ್ಲಿ ಯಕೃತ್ ಸಾಗಾಟಕ್ಕೆ 'ನಮ್ಮ ಮೆಟ್ರೊ' ನೆರವು ಕೋರಲಾಗಿತ್ತು.

▶ 6

'ಮೋದಿ ಹೆಸರು ಹೇಳುವಂತೆ ಹಿಂಸೆ'

ಮುಂಬೈ (ಪಿಟಿಐ) 'ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ನರೇಂದ್ರ ಮೋದಿ ಹೆಸರನ್ನು ಹೇಳುವಂತೆ ತನಿಖಾಧಿಕಾರಿಗಳು ನನಗೆ ಚಿತ್ರಹಿಂಸೆ ನೀಡಿದ್ದರು' ಎಂದು ಪ್ರಜ್ಞಾ ಸಿಂಗ್ ಠಾಕೂರ್ ಹೇಳಿದ್ದಾರೆ.

▶ 6

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಿಬ್ಬಂದಿ ಕೊರತೆಯಿಂದ ನರಳುತ್ತಿದೆ ಆಹಾರ, ನಾಗರಿಕ ಸರಬರಾಜು ನಿಗಮ

386 ಹುದ್ದೆಗೆ 'ಆರ್ಥಿಕ' ಅಡ್ಡಗಾಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವಿವಿಧ ವೃಂದಗಳ 386 ಹುದ್ದೆಗಳನ್ನು ಭರ್ತಿ ಮಾಡಲು 1:3 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ಬಳಿಕ, ಇಡೀ ನೇಮಕಾತಿ ಪ್ರಕ್ರಿಯೆಗೆ ಆರ್ಥಿಕ ಇಲಾಖೆ ಅಡ್ಡಗಾಲು ಹಾಕಿದೆ.

ರಾಜ್ಯದ ವಿವಿಧೆಡೆ ಆಹಾರ ಧಾನ್ಯದ ಸಗಟು ಮಳಿಗೆ, ಪಡಿತರ ಅಂಗಡಿ, ಸಕ್ಕರೆ–ಲೆವಿ ಅಕ್ಕಿ ಸಂಗ್ರಹ ಹಾಗೂ ಆಹಾರ ಧಾನ್ಯಗಳ ಸಾಗಣೆ ಮಾಡುವ ನಿಗಮವು ತೀವ್ರ ಸಿಬ್ಬಂದಿ ಕೊರತೆ ಎದುರಿಸುತ್ತಿದೆ. ನಿಗಮದಲ್ಲಿ ಮಂಜೂರಾದ ಒಟ್ಟು 1,497 ಹುದ್ದೆಗಳ ಪೈಕಿ 1,260 ಹುದ್ದೆಗಳು ಖಾಲಿ ಇವೆ.

ಒಟ್ಟು ಖಾಲಿ ಹುದ್ದೆಗಳ ಪೈಕಿ ಮೂರಲ್ಲಿ ಒಂದರಷ್ಟು ಸಿಬ್ಬಂದಿಯ ನೇಮಕಕ್ಕೆ ಮುಂದಾದ ಆಹಾರ ನಿಗಮ, ಕಿರಿಯ ಸಹಾಯಕರು 263, ಹಿರಿಯ ಸಹಾಯಕರು 57, ಹಿರಿಯ ಸಹಾಯಕರು (ಲೆಕ್ಕ) 33, ಗುಣಮಟ್ಟ ನಿರೀಕ್ಷಕರು 23, ಸಹಾಯಕ ವ್ಯವಸ್ಥಾಪಕರು 10 ಸೇರಿ ಒಟ್ಟು 386 ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಲು ಸರ್ಕಾರದ ಅನುಮೋದನೆ ಪಡೆದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) 2022ರ ಜುಲೈ 7ರಂದು ಪ್ರಸ್ತಾವ ಕಳುಹಿಸಿತ್ತು.

ನೇಮಕಾತಿಗೆ 2023ರ ಜೂನ್ 23ರಂದು ಅಧಿಸೂಚನೆ ಹೊರಡಿಸಿದ್ದ ಕೆಇಎ, ಅದೇ ವರ್ಷ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು. 2,91,954 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 2024ರ ಮಾರ್ಚ್ 11ರಂದು ಫಲಿತಾಂಶ ಪ್ರಕಟಿಸಿ, ಜೂನ್ 20ರಂದು ಅಂತಿಮ ಅಂಕಪಟ್ಟಿಯನ್ನು ಪ್ರಕಟಿಸಿ, 22ರಂದು ನಿಗಮಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕೆಇಎ ಸಲ್ಲಿಸಿತ್ತು. ಈ ಪಟ್ಟಿಗೆ ಸಂಬಂಧಿಸಿದಂತೆ ಕೆಇಎದಿಂದ ಕೆಲವು ಸ್ಪಷ್ಟೀಕರಣ ಪಡೆದುಕೊಂಡ ನಿಗಮವು ನ. 5ರಂದು 1:3 ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು.

▶ 7

ಅಂಕಿ ಅಂಶಗಳು

ಸಿಬ್ಬಂದಿ ಸ್ಥಿತಿಗತಿ
(2024ರ ಡಿ. 31ರ ಅಂತ್ಯಕ್ಕೆ)

1,497 ಮಂಜೂರಾತಿ ಹುದ್ದೆ

237 ಪ್ರಸ್ತುತ ಕಾರ್ಯನಿರ್ವಹಿಸುವ ಸಿಬ್ಬಂದಿ

1,260 ಸಿಬ್ಬಂದಿ ಕೊರತೆ

2027ರ ಡಿ. 31ಕ್ಕೆ ಉಳಿಕೆ 123!

'2025ನೇ ಸಾಲಿನಲ್ಲಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ 237 ಸಿಬ್ಬಂದಿಯ ಪೈಕಿ 51 ಸಿಬ್ಬಂದಿ ನಿವೃತ್ತಿ ಆಗಲಿದ್ದಾರೆ. ಈ ಪೈಕಿ, 35 ಸಿಬ್ಬಂದಿ ಪ್ರಮುಖ ಜವಾಬ್ದಾರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದೇ ರೀತಿ ಪ್ರಮುಖ ಜವಾಬ್ದಾರಿ ನಿರ್ವಹಿಸುತ್ತಿರುವ 22 ಸಿಬ್ಬಂದಿ 2026ರಲ್ಲಿ, 11 ಮಂದಿ 2027ರಲ್ಲಿ ನಿವೃತ್ತರಾಗಲಿದ್ದಾರೆ. 2027ರ ಡಿ. 31ಕ್ಕೆ ಕೇವಲ 123 ಸಿಬ್ಬಂದಿ ಮಾತ್ರ ನಿಗಮದಲ್ಲಿ ಉಳಿಯಲಿದ್ದಾರೆ. ಈ ಸಿಬ್ಬಂದಿ 2017 ಮತ್ತು 2020ನೇ ಸಾಲಿನಲ್ಲಿ ನೇಮಕಗೊಂಡವರು' ಎಂದೂ ಆಹಾರ ಇಲಾಖೆಯ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ವಿವರಿಸಿದ್ದಾರೆ.

'ಸತ್ತ ಚುನಾವಣಾ ವ್ಯವಸ್ಥೆ: 2024ರ ಲೋಕಸಭಾ ಮತದಾನದ ವೇಳೆ ಸಂಘಟಿತ ಅಕ್ರಮ'

70-100 ಸ್ಥಾನಗಳಲ್ಲಿ ಮತ ಕಳವು: ರಾಹುಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ಚುನಾವಣಾ ಆಯೋಗದ ಮೇಲೆ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, '2024ರ ಲೋಕಸಭಾ ಚುನಾವಣೆಯಲ್ಲಿ 70ರಿಂದ 100 ಸ್ಥಾನಗಳಲ್ಲಿ ಸಂಘಟಿತ ಅಕ್ರಮಗಳು ನಡೆದಿರುವ ಶಂಕೆ ಇದೆ. ನಮ್ಮ ಚುನಾವಣಾ ವ್ಯವಸ್ಥೆಯು ಈಗಾಗಲೇ ಸತ್ತಿದೆ' ಎಂದು ಕಿಡಿಕಾರಿದರು.

ಎಐಸಿಸಿ ಕಾನೂನು ಘಟಕದ ವತಿಯಿಂದ ವಿಜ್ಞಾನ ಭವನದಲ್ಲಿ ಶನಿವಾರ ನಡೆದ 'ಸಾಂವಿಧಾನಿಕ ಸವಾಲುಗಳು: ದೃಷ್ಟಿಕೋನಗಳು ಮತ್ತು ಮಾರ್ಗಗಳು' ಕುರಿತ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. '2014ರ ಗುಜರಾತ್ ವಿಧಾನಸಭಾ ಚುನಾವಣೆಯ ಪ್ರಕ್ರಿಯೆಯಲ್ಲಿ ಏನೋ ತಪ್ಪಾಗಿದೆ ಎಂಬ ಅನುಮಾನ ಇತ್ತು. ಆದರೆ, ಇಲ್ಲಿಯವರೆಗೆ ಯಾವುದೇ ಪುರಾವೆಗಳು ಸಿಕ್ಕಿಲ್ಲ' ಎಂದು ಹೇಳಿದರು.



'ಚುನಾವಣಾ ಅಕ್ರಮಗಳ ಬಗ್ಗೆ ಕಾಂಗ್ರೆಸ್ ಈಗ ಶೇ 100ರಷ್ಟು ಪುರಾವೆ ಹೊಂದಿದೆ. ಅದು ಬಹಿರಂಗಗೊಂಡರೆ ಅಣು ಬಾಂಬ್ ಬೀಳಿಸಿದಂತೆ. ಚುನಾವಣಾ ಆಯೋಗ ಅಸ್ತಿತ್ವದಲ್ಲಿಲ್ಲ ಮತ್ತು ಕಣ್ಮರೆಯಾಗಿದೆ ಎಂದು ತೋರಿಸುವಂತಹ ಸಾಕ್ಷಿ ನಮ್ಮ ಪಕ್ಷದ ಬಳಿ ಇದೆ' ಎಂದು ಅವರು ಹೇಳಿದರು.

'ದೇಶದಲ್ಲಿ ಚುನಾವಣಾ ವ್ಯವಸ್ಥೆ ಈಗಾಗಲೇ ಸತ್ತುಹೋಗಿದೆ. 10-15 ಸ್ಥಾನಗಳಲ್ಲಿ ಅಕ್ರಮ ನಡೆದಿದ್ದರೂ ಭಾರತದ ಪ್ರಧಾನಿ ಅತ್ಯಂತ ಕಡಿಮೆ ಬಹುಮತ ಹೊಂದಿರುವ ಪ್ರಧಾನಿ. ವಾಸ್ತವವಾಗಿ ಆ ಸಂಖ್ಯೆ 70-80-100ಕ್ಕೆ ಹತ್ತಿರವಾಗಿದೆ ಎನ್ನುವುದು ನಮ್ಮ ಅನುಮಾನ. ಈ ಅಕ್ರಮಗಳು ನಡೆಯದಿದ್ದರೆ ಅವರು ಪ್ರಧಾನಿಯೇ ಆಗುತ್ತಿರಲಿಲ್ಲ' ಎಂದು ರಾಹುಲ್ ಅಭಿಪ್ರಾಯಪಟ್ಟರು.

'ಲೋಕಸಭಾ ಚುನಾವಣೆಯಲ್ಲಿ ಹೇಗೆ ಅಕ್ರಮ ನಡೆಸಬಹುದು ಹಾಗೂ ಹೇಗೆ ನಡೆದಿದೆ ಎಂಬುದನ್ನು ನಾವು ಕೆಲವೇ ಕೆಲವು ದಿನಗಳಲ್ಲಿ ಸಾಬೀತುಪಡಿಸಲಿದ್ದೇವೆ. ಸಂವಿಧಾನ ರಕ್ಷಿಸುವ ಸಂಸ್ಥೆಯನ್ನು ಅಳಿಸಿಹಾಕಲಾಗಿದೆ ಮತ್ತು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ' ಎಂದು ಅವರು ಹೇಳಿದರು.

ಈ ಬಗ್ಗೆ ಪುರಾವೆಗಳನ್ನು ಹುಡುಕಲು ಆರು ತಿಂಗಳ ನಿರಂತರ ಕೆಲಸ ಮಾಡಲಾಗಿದೆ. 6.5 ಲಕ್ಷ ಮತದಾರರಲ್ಲಿ 1.5 ಲಕ್ಷ ಮತದಾರರು ಭಾವಚಿತ್ರಗಳು ಮತ್ತು ಹೆಸರುಗಳನ್ನು ಹೋಲಿಸಿದ ನಂತರ ನಕಲಿ ಎಂಬುದು ಗೊತ್ತಾಗಿದೆ ಎಂದು ಅವರು ಹೇಳಿದರು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕದ ವಿಧಾನಸಭಾ ಕ್ಷೇತ್ರದ ಮತ ಕಳವು ಪ್ರಕರಣ ಉಲ್ಲೇಖಿಸಿ ಅವರು ಈ ಮಾತು ಹೇಳಿದರು.

'2014ರಿಂದಲೂ ಏನೋ ತಪ್ಪಾಗಿದೆ ಎಂಬ ಅನುಮಾನ ನನಗಿತ್ತು' ಎಂದರು.

▶ 6

'ಬೆದರಿಕೆ ಹಾಕಲು ಜೇಟ್ಲಿ ಕಳುಹಿಸಿದ್ದ ಬಿಜೆಪಿ'

'ಕೃಷಿ ಕಾಯ್ದೆಗಳನ್ನು ವಿರೋಧಿಸಿದ ಕಾರಣಕ್ಕೆ ನನಗೆ ಬೆದರಿಕೆ ಹಾಕಲು ಬಿಜೆಪಿ ನಾಯಕ ಅರುಣ್ ಜೇಟ್ಲಿ ಅವರನ್ನು ಕಳುಹಿಸಲಾಗಿತ್ತು. ಅದಕ್ಕೆ ನಾನು ಬೆದರಲಿಲ್ಲ' ಎಂದು ರಾಹುಲ್ ಹೇಳಿದರು. ಈ ಆರೋಪವನ್ನು ಬಿಜೆಪಿ ತಳ್ಳಿಹಾಕಿದೆ.

ಕೃಷಿ ಕಾನೂನುಗಳನ್ನು ವಿರೋಧಿಸುವುದನ್ನು ಮುಂದುವರಿಸಿದರೆ, ಸರ್ಕಾರವು ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಜೇಟ್ಲಿ ಎಚ್ಚರಿಸಿದ್ದರು ಎಂದು ಅವರು ಹೇಳಿದರು. ಈ ಸಂಭಾಷಣೆ ಯಾವಾಗ ನಡೆಯಿತು ಎಂಬುದನ್ನು ರಾಹುಲ್ ನಿರ್ದಿಷ್ಟಪಡಿಸಿಲ್ಲ.

'2020ರ ಕೃಷಿ ಕಾಯ್ದೆಯನ್ನು ವಿರೋಧಿಸದಂತೆ ಜೇಟ್ಲಿ ತಮ್ಮನ್ನು ಸಂಪರ್ಕಿಸಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿಕೊಂಡಿದ್ದಾರೆ. ದಾಖಲೆಯನ್ನು ಸರಿಪಡಿಸೋಣ; ಅರುಣ್ ಜೇಟ್ಲಿ ಅವರು 2019ರ ಆಗಸ್ಟ್ 24ರಂದು ನಿಧನರಾದರು. ಕೇಂದ್ರ ಸಚಿವ ಸಂಪುಟದ ಮುಂದೆ ಕರಡು ಮಸೂದೆ ಮಂಡನೆಯಾಗಿದ್ದು 2020ರ ಜೂನ್ 3ರಂದು' ಎಂದು ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದರು.

ಸಮಾವೇಶದ ಆರಂಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, 'ಈ ದೇಶದ ದೊರೆ ರಾಹುಲ್ ಗಾಂಧಿಯಂತಿರಬೇಕು' ಎಂದು ಘೋಷಣೆಗಳನ್ನು ಕೂಗಿದರು. ಅದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ನಾಯಕ, 'ನಾನು ರಾಜನಲ್ಲ. ನಾನು ಆ ಪರಿಕಲ್ಪನೆಯ ವಿರೋಧಿ' ಎಂದು ಸ್ಪಷ್ಟಪಡಿಸಿದರು.

naturals
Coloured by nature, Handcrafted by RmKV.

ಪ್ರಕೃತಿಯ ಬಣ್ಣಗಳು, ಆರ್‌ಎಂಕೆವಿಯ ಕೈಕಸೂತಿ

101 years of Handcrafted Silk Heritage
RmKV Wedding Silks

ನೈಸರ್ಗಿಕ ಬಣ್ಣ ಮತ್ತು ಸಾಂಪ್ರದಾಯಿಕ ಕೈ ನೇಯ್ಗೆಯ ಸುಂದರ ಮಿಶ್ರಣವಾದ ಟ್ರೀ ಆಫ್ ಲೈಫ್ ಸೀರೆಯೊಂದಿಗೆ RmKV ಡಿಸೈನ್ ಸ್ಟುಡಿಯೋದ ಉತ್ತಮ ಕಲಾತ್ಮಕತೆಯನ್ನು ಆನಂದಿಸಿ. ಹಿಪ್ಪುನೇರಳೆ ಎಲೆಗಳು, ಇಂಡಿಯನ್ ಮ್ಯಾಡರ್ ಮತ್ತು ಅರಕ್ಕು ಮುಂತಾದ ಸಾಂಪ್ರದಾಯಿಕ ಪದಾರ್ಥಗಳಿಂದ ವರ್ಣ ಚಿತ್ತಾರಗೊಳಿಸಿರುವ ಇದು, ಚಿನ್ನದ ಜರಿ ಮತ್ತು ಮೀನಾಕಾರಿಯಲ್ಲಿ ಸೊಗಸಾಗಿ ರೂಪರೇಖೆ ಮಾಡಲಾದ ಟ್ರೀ ಆಫ್ ಲೈಫ್ (ಕರ್ಪಗವೃಕ್ಷ) ಪ್ರದರ್ಶಿಸುವ ಅದ್ಭುತವಾದ ಪಲ್ಲುವನ್ನು ಒಳಗೊಂಡಿದೆ.

Scan Here For An AR Experience

ಬೆಂಗಳೂರು : ಒರಾಯನ್ ಮಾಲ್, ಡಾ|| ರಾಜ್‌ಕುಮಾರ್ ರೋಡ್, ರಾಜಾಜಿ ನಗರ, ಫೋನ್ : 95388 66623
WhatsApp : 93429 54326 | Shop Online : www.rmkv.com | rmkvsilks rmkv_silks

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ

ರಕ್ಷಕ್ 'ಬುಲೆಟ್' ವಿರುದ್ಧ ಎಫ್ಐಆರ್

ರಕ್ಷಕ್

ಬೆಂಗಳೂರು: ಮಾನ್ಯತಾ ಟೆಕ್ ಪಾರ್ಕ್ ಬಳಿ ಸಂಭವಿಸಿದ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಗ್‌ಬಾಸ್ ಮಾಜಿ ಸ್ಪರ್ಧಿ ರಕ್ಷಕ್ 'ಬುಲೆಟ್' ವಿರುದ್ಧ ಹೆಣ್ಣೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಗಾಯಾಳು ವೇಣುಗೋಪಾಲ್ ಅವರ ಸ್ನೇಹಿತೆ ಅನುಷಾ ನೀಡಿದ ದೂರು ಆಧರಿಸಿ ರಕ್ಷಕ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ರಕ್ಷಕ್ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಜೀಪ್, ಬೈಕ್‌ಗೆ ಡಿಕ್ಕಿ ಆಗಿದ್ದರಿಂದ ದ್ವಿಚಕ್ರ ವಾಹನ ಸವಾರ ವೇಣುಗೋಪಾಲ್ ಗಾಯಗೊಂಡಿದ್ದರು.

ಶಿಡ್ಲಘಟ್ಟದ ವೇಣುಗೋಪಾಲ್ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಸ್ನೇಹಿತೆ ಜೊತೆಗೆ ಥಣಿಸಂದ್ರದಿಂದ ದಾಸರಹಳ್ಳಿ ಕಡೆಗೆ ಮಾನ್ಯತಾ ಟೆಕ್ ಪಾರ್ಕ್ ಮೂಲಕ ಬೈಕ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ಎದುರಿನಿಂದ ಬಂದ ರಕ್ಷಕ್ ಅವರ ಜೀಪ್ ಮತ್ತು ಬೈಕ್ ನಡುವೆ ಅಪಘಾತ ಸಂಭವಿಸಿತ್ತು. ಅಪಘಾತದ ತೀವ್ರತೆಗೆ ವೇಣುಗೋಪಾಲ್ ಅವರ ಎಡಗಾಲಿನ ಮೂಳೆ ಮುರಿತವಾಗಿದೆ' ಎಂದು ಪೊಲೀಸರು ಹೇಳಿದರು.

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ.1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. Ph: 080–25526266/25526288

website: www.csbank.in

ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ನಮ್ಮ ಬ್ಯಾಂಕಿನ 2024–25ನೇ ಸಾಲಿನ **25ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ ರಜತ ಮಹೋತ್ಸವ (Silver Jubilee)**ವನ್ನು **ದಿನಾಂಕ: 17/08/2025ನೇ ಭಾನುವಾರ ಬೆಳಿಗ್ಗೆ 10:30 ಘಂಟೆಗೆ ಸೈಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ, ಬಿಡಿಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ, ಬೆಂಗಳೂರು–560034** ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ಈ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಸಭೆಯ ಸೂಚನಾ ಪತ್ರವನ್ನು ಸದಸ್ಯರಿಗೆ ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ತಲುಪದೇ ಇದ್ದಲ್ಲಿ, ಈ ಪ್ರಕಟಣೆಯನ್ನೇ ಸೂಚನಾ ಪತ್ರವೆಂದು ತಿಳಿದು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ವಾರ್ಷಿಕ ವರದಿಯು ಬ್ಯಾಂಕಿನ **ವೆಬ್‌ಸೈಟ್ (www.csbank.in)** ಲಿಂಕ್‌ನಲ್ಲಿ ಲಭ್ಯವಿರುತ್ತದೆ.

ದಿನಾಂಕ: 02/08/2025
ಸ್ಥಳ: ಬೆಂಗಳೂರು

ಆಡಳಿತ ಮಂಡಳಿಯ ಪರವಾಗಿ,
ಸಹಿ/– (ಶಿವಣ್ಣ ಕೆ.ಬಿ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

INTEREST RATES ON LOAN

Type of Loan	Interest Rate
Housing Loan	7.75% - 8.25%
Vehicle Loan	8.25% - 8.75%
Education Loan (Under Mortgage)	8.50% - 9.00%
Mortgage Loan	10.00%
Overdraft	10.25%

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಉತ್ತರ ವಿಭಾಗ
ಬಿಡಿಎ ಶಾಪಿಂಗ್ ಕಾಂಪ್ಲೆಕ್ಸ್, ಆರ್.ಟಿ. ನಗರ, ಬೆಂಗಳೂರು–560 032

ಸಂ.: ಬೆಂಅಪ್ರಾ/ಕಾ.ಇಂ./ಉತ್ತರ/ಟೆಂಡರ್/15/2025-26 ದಿನಾಂಕ: 02.08.2025

ತಿದ್ದುಪಡಿ ಪ್ರಕಟಣೆ
(ಅಲ್ಪಾವಧಿ ಟೆಂಡರ್–ದ್ವಿಪ್ರತಿ ಪದ್ಧತಿಯಲ್ಲಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇ/ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಣಿಯಾಗಿರುವ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಗೆ ನಮೂದಿಸಿದ ಕಾಮಗಾರಿಗೆ ಕೆಳ ಸಹಿ ಮಾಡಿರುವರು ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಡಾಕ್ಯುಮೆಂಟ್ ಅನ್ನು GOK ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ (kppp.karnataka.gov.in)ನಿಂದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಮೂಲಕ ಇ–ಪಾವತಿಯ ರೂಪದಲ್ಲಿ ಕೆಲಸದ ಪ್ರತಿ ಐಟಂಗೆ (ಮರುಪಾವತಿಸಲಾಗದ) ನಿಗದಿತ ಶುಲ್ಕವನ್ನು ಪಾವತಿಸಿದ ಮೇಲೆ ಡೌನ್‌ಲೋಡ್ ಮಾಡಬಹುದು. ಟೆಂಡರ್‌ದಾರರು ಮಾನ್ಯವಾದ ನೋಂದಣಿ ಪ್ರಮಾಣಪತ್ರದ ನಕಲನ್ನು ಜೊತೆಯಲ್ಲಿರಬೇಕು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬೇಕು. (ಸ್ಟಾಂಡರ್ಡ್ ಟೆಂಡರ್ ಬಿಡ್ ಡಾಕ್ಯುಮೆಂಟ್).

Sl. No.	Name of the work	Approximate value of the Works (Rs in Lakhs) without GST	EMD (Rs in Lakhs)	Period of completion
1	Proposed Sports Complex at Kacharakanahalli Village, Bangalore North Sarvagnanagar Constituency.	2064.22	Rs.20,64,220/- (Rs.1.00 lakhs through e-procurement & balance amount Rs. 19,64,220 lakhs through Bank Guarantee	24 Months (Including Monsoon)

ಸೂಚನೆ : ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:

	ವಿವರ	ಮೊದಲು	ನಂತರ
1.	ಟೆಂಡರ್ ದಾಖಲಾತಿಗಳು ಇ–ಪೋರ್ಟಲ್‌ನಲ್ಲಿ ಲಭ್ಯವಾಗುವ	24/06/2025ರ ನಂತರ	**04/08/2025ರ ನಂತರ**
2.	ಟೆಂಡರ್ ಪ್ರಶ್ನಾವಳಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	30/06/2025 ರ 13.00 ಗಂಟೆವರೆಗೆ	**07/08/2025ರ 13.00 ಗಂಟೆವರೆಗೆ**
3.	ಟೆಂಡರ್ ಪ್ರಿ–ಬಿಡ್ ಸಭೆಯ ದಿನಾಂಕ ಮತ್ತು ಸಮಯ	03/07/2025ರ 17.00 ಗಂಟೆವರೆಗೆ	**12/08/2025ರ 17.00 ಗಂಟೆವರೆಗೆ**
4.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	14/07/2025ರ 16:00 ಗಂಟೆವರೆಗೆ	**20/08/2025ರ 16:00 ಗಂಟೆವರೆಗೆ**
5.	ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:	15/07/2025ರ 16.15 ಗಂಟೆವರೆಗೆ	**21/08/2025ರ 16.15 ಗಂಟೆವರೆಗೆ**

ಸಹಿ/– ಕಾರ್ಯಪಾಲಕ ಅಭಿಯಂತರರು, ಉತ್ತರ ವಿಭಾಗ, ಬೆಂ.ಅ.ಪ್ರಾ, ಬೆಂಗಳೂರು

ನಗರಸಭೆ ಕಾರ್ಯಾಲಯ ದೊಡ್ಡಬಳ್ಳಾಪುರ
ದೊಡ್ಡ ಬಳ್ಳಾಪುರ–561203
ದೂರವಾಣಿ : 080–27722735, ಸಹಾಯವಾಣಿ : 080–27722135
Email : itstaff_ulb_doddaballapur@yahoo.com, Web: www.doddallapurcit.gov.in

ಸಂಖ್ಯೆ: ನಸದೊ/ಕಂ.ಶಾ/ವಾ.ಮ/01/2025–26 ದಿನಾಂಕ : 29.07.2025

–: ವಾಣಿಜ್ಯ ಮಳಿಗೆಗಳ ಇ–ಹರಾಜು ಪ್ರಕಟಣೆ :–

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ ದೊಡ್ಡಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ 10ನೇ ಹಣಕಾಸು ಯೋಜನೆಯ ವಾಣಿಜ್ಯ ಮಳಿಗೆಗಳು–6 ಸಂಖ್ಯೆ (ಬುಕ್ ಪ್ಯಾಲೇಸ್ ರಸ್ತೆ), ನಗರಸಭಾ ನಿಧಿ ಯೋಜನೆ ವಾಣಿಜ್ಯ ಮಳಿಗೆಗಳು–06 ಸಂಖ್ಯೆ (ಮಾರ್ಕೆಟ್ ರಸ್ತೆ), ಹಳೇ ಬಸ್ ನಿಲ್ದಾಣದ ಮುಂಭಾಗದಲ್ಲಿನ ನಗರಸಭಾ ನಿಧಿ ಯೋಜನೆ ವಾಣಿಜ್ಯ ಮಳಿಗೆಗಳು–07 ಸಂಖ್ಯೆ, ರಾಜ್ ಕಮಲ್ ಚಿತ್ರಮಂದಿರ ರಸ್ತೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿನ ವಾಣಿಜ್ಯ ಮಳಿಗೆಗಳು–18 ಸಂಖ್ಯೆ, ಡಾ॥ ರಾಜ್ ಕುಮಾರ್ ಕಲಾಮಂದಿರ (ಪುರಭವನ) ಮುಂಭಾಗದ ಐ.ಡಿ.ಎಸ್.ಎಂ.ಟಿ ಅಂಗಡಿ ಮಳಿಗೆಗಳು–32 ಸಂಖ್ಯೆ, ವೀರಭದ್ರಪಾಳ್ಯದಲ್ಲಿನ ಐ.ಡಿ.ಎಸ್.ಎಂ.ಟಿ ಯೋಜನೆಯ ವಾಣಿಜ್ಯ ಮಳಿಗೆಗಳು–05 ಸಂಖ್ಯೆ, ಶ್ರೀ ಡಿ. ಕೊಂಗಾಡಿಯಪ್ಪ ಬಸ್ ನಿಲ್ದಾಣ ಬಳಿ ಇರುವ ವಾಣಿಜ್ಯ ಮಳಿಗೆಗಳು–2 ಸಂಖ್ಯೆಗಳನ್ನು ಇ–ಹರಾಜು ಮಾಡಲು ವಿವರಗಳನ್ನು KPPP Karnataka.gov.in ಪೋರ್ಟ್‌ಲ್‌ನಲ್ಲಿ ಈಗಾಗಲೇ ಪ್ರಚುರ ಪಡಿಸಲಾಗಿದ್ದು, ಮಾಸಿಕ ಬಾಡಿಗೆ ಆಧಾರಿತ ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ.

1) ಹರಾಜಿನಲ್ಲಿ ಭಾಗವಹಿಸುವವರು KPPP ಪೋರ್ಟಲ್ ನಲ್ಲಿ ನೊಂದಾವಣಿ ಮಾಡಿಕೊಂಡು ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸತಕ್ಕದ್ದು.
2) ಪ್ರಾರಂಭಿಕ ಇ.ಎಂ.ಡಿ ಮೊತ್ತವನ್ನು ಆಸಕ್ತಿವುಳ್ಳವರು ಪ್ರತಿ ಮಳಿಗೆಗೆ ಪ್ರತ್ಯೇಕವಾಗಿ ಆನ್‌ಲೈನ್ ಮೂಲಕ ಇ–ಪೋರ್ಟ್‌ಲ್‌ನಲ್ಲಿ ಸಲ್ಲಿಸತಕ್ಕದ್ದು ಹಾಗೂ ಬಿಡ್ ದಾರರು ಜಿ.ಎಸ್.ಟಿ ಸಂಖ್ಯೆಯನ್ನು ಹೊಂದಿರತಕ್ಕದ್ದು.
3) ಮೀಸಲಾತಿಯ ಪ.ಜಾ/ಪ.ಪಂ/ವಿ.ಚೇ/ ಬಿಡ್‌ದಾರರು ಕಡ್ಡಾಯವಾಗಿ [illegible]
4) [illegible] **12.08.2025 ರಂದು ಸಂಜೆ 5.30 ರೊಳಗೆ** [illegible]
5) [illegible] **20.08.2025 ಸಮಯ ಬೆಳಿಗ್ಗೆ 10.30 ರಿಂದ ಸಂಜೆ 5.00ರ ವರೆಗೆ.**

[illegible] **10.30 ರಿಂದ ಸಂಜೆ 5.00 ಗಂಟೆಯೊಳಗೆ** [illegible]

ವಾ.ಸಾ.ಸಂ.ಇ/ವಾ.ಪ್ರ/2168/ಎನ್.ಎಸ್.ಸಿ/2025–26

ಕೊಲೆ ಮಾಡಿ ಮೃತದೇಹ ಸುಟ್ಟಿದ್ದವರ ಸೆರೆ

ಇಬ್ಬರ ಬಂಧನ: ಕಾಡುಗೋಡಿ ಠಾಣೆಯ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮುನಿರತ್ನ

ಬಾಬು

ಬೆಂಗಳೂರು: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿಯನ್ನು ಕೊಲೆ ಮಾಡಿ ಸಂಬಂಧಿಕನ ನೆರವು ಪಡೆದು ಮೃತದೇಹವನ್ನು ಕೋಲಾರದ ಸ್ಮಶಾನದಲ್ಲಿ ಸುಟ್ಟುಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಕಾಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕೃತ್ಯ ಎಸಗಿದ್ದ ಆರೋಪದ ಅಡಿ ದಿಣ್ಣೂರಿನ ಮುನಿರತ್ನಾ (40), ಈಕೆಯ ಭಾವಿ ಅಳಿಯ ರಾಮಮೂರ್ತಿ(28) ಎಂಬುವನನ್ನು ಪೊಲೀಸರು ಬಂಧಿಸಿದ್ದಾರೆ. ಕೃತ್ಯದಲ್ಲಿ 17 ವರ್ಷದ ಬಾಲಕಿಯೂ ಶಾಮೀಲಾಗಿದ್ದು ಆಕೆಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೂವರು ಆರೋಪಿಗಳು ಸೇರಿಕೊಂಡು ಜುಲೈ 26ರಂದು ದಿಣ್ಣೂರಿನ ಮನೆಯಲ್ಲಿ ಬಾಬು (46) ಅವರನ್ನು ಕೊಲೆ ಮಾಡಿದ್ದರು. ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಮರುದಿನ ಆಂಬುಲೆನ್ಸ್‌ನಲ್ಲಿ ಮೃತದೇಹವನ್ನು ಕೋಲಾರಕ್ಕೆ ಸಾಗಿಸಿ ಸ್ಮಶಾನದಲ್ಲಿ ಸುಟ್ಟು ಹಾಕಿದ್ದರು. ಕೇಳಿದವರಿಗೆ ಪತಿ ಅನಾರೋಗ್ಯದಿಂದ ಬಳಲುತ್ತಿದ್ದರು. ಕಾಯಿಲೆ ಗುಣವಾಗದೇ ಮೃತಪಟ್ಟರು ಎಂಬುದಾಗಿ ಮುನಿರತ್ನಾ ಹೇಳಿದ್ದಳು ಎಂದು ಪೊಲೀಸರು ತಿಳಿಸಿದರು.

'ಕೃತ್ಯದಲ್ಲಿ ಆಂಬುಲೆನ್ಸ್ ಚಾಲಕ ಸೇರಿ ಇನ್ನೂ ಹಲವರು ಶಾಮೀಲಾಗಿರುವ ಶಂಕೆಯಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ರಾಮಮೂರ್ತಿ

ದೇವನಹಳ್ಳಿಯ ಬಾಬು ಹಾಗೂ ಮಾಲೂರಿನ ಮುನಿರತ್ನಾ ದಂಪತಿಗೆ 17 ವರ್ಷ ಹಾಗೂ 15 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕುಟುಂಬ ದಿಣ್ಣೂರಿನ ಬಾಡಿಗೆ ಮನೆಯಲ್ಲಿ ನೆಲಸಿತ್ತು. ಬಾಬು ಅವರಿಗೆ ಮದ್ಯ ಸೇವನೆ ಅಭ್ಯಾಸವಿತ್ತು. ಈ ವಿಚಾರಕ್ಕೆ ಮನೆಯಲ್ಲಿ ನಿತ್ಯವೂ ಗಲಾಟೆ ನಡೆಯುತ್ತಿತ್ತು. ಪತಿಯ ಕೊಲೆಗೆ ಮುನಿರತ್ನಾ ಸಂಚು ರೂಪಿಸಿದ್ದಳು ಎಂದು ಪೊಲೀಸರು ಹೇಳಿದರು.

ಮುನಿರತ್ನಾ ಸಂಬಂಧಿ ರಾಮಮೂರ್ತಿ ಕೂಡ ಇವರ ಕುಟುಂಬದ ಜತೆಗೇ ವಾಸಿಸುತ್ತಿದ್ದ. ಹಿರಿಯ ಪುತ್ರಿಯನ್ನು ಕೊಟ್ಟು ಮದುವೆ ಮಾಡಿಕೊಡುವುದಾಗಿ ಮುನಿರತ್ನಾ ಭರವಸೆ ನೀಡಿದ್ದಳು. ಇಬ್ಬರು ಸೇರಿಕೊಂಡು ಬಾಬು ಅವರನ್ನು ಕೊಲೆ ಮಾಡಿದ್ದರು. ಕೃತ್ಯಕ್ಕೆ 17 ವರ್ಷದ ಪುತ್ರಿ ಸಹ ನೆರವು ನೀಡಿದ್ದಳು ಎಂದು ಮೂಲಗಳು ತಿಳಿಸಿವೆ.

'ತನಗೆ ಪರಿಚಯವಿದ್ದ ಆಂಬುಲೆನ್ಸ್ ಚಾಲಕನಿಗೆ ಕರೆ ಮಾಡಿ, ನನ್ನ ಪತಿ ಅನಾರೋಗ್ಯದಿಂದ ಬಳಲುತ್ತಿದ್ದರು. ಮನೆಯಲ್ಲಿ ಪ್ರಜ್ಞೆತಪ್ಪಿ ಕುಸಿದು ಬಿದ್ದಿದ್ದಾರೆ. ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಂತೆ ತಿಳಿಸಿದ್ದಳು. ಆ ಮನೆಯ ಬಳಿಗೆ ಬಂದಾಗ ಆಂಬುಲೆನ್ಸ್‌ನಲ್ಲಿ ಮೃತದೇಹ ಹಾಕಿಕೊಂಡಿದ್ದಳು. ದಾರಿ ಮಧ್ಯೆ ಬಾಬು ಮೃತಪಟ್ಟರು ಎಂದು ನಾಟಕವಾಡಿದ್ದಳು. ನಮ್ಮ ಊರು ಕೋಲಾರ. ಅಲ್ಲೇ ಅಂತ್ಯಸಂಸ್ಕಾರ ಮಾಡುವುದಾಗಿ ಚಾಲಕನಿಗೆ ತಿಳಿಸಿದ್ದಳು. ಚಾಲಕನನ್ನು ಒಪ್ಪಿಸಿ ಕೋಲಾರದ ರುದ್ರಭೂಮಿಗೆ ಮೃತದೇಹ ಕೊಂಡೊಯ್ದು ಸುಟ್ಟು ಹಾಕಿದ್ದರು' ಎಂದು ಮೂಲಗಳು ತಿಳಿಸಿವೆ.

ಕೊಲೆ ವಿಚಾರ ತಿಳಿಸಿದ್ದ ಎರಡನೇ ಪುತ್ರಿ

ತಂದೆಯನ್ನು ಕೊಲೆ ಮಾಡಿರುವ ವಿಚಾರವನ್ನು ಬಾಬು ಅವರ ಎರಡನೇ ಪುತ್ರಿ ತನ್ನ ಚಿಕ್ಕಪ್ಪನಿಗೆ ತಿಳಿಸಿದ್ದಳು.

ಜುಲೈ26ರಂದು ರಾತ್ರಿ ನಾನು ನಿದ್ರೆ ಮಾಡುತ್ತಿದ್ದೆ. ಆಗ ತಂದೆ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿರುವ ಸಾಧ್ಯತೆಯಿದೆ. ತಂದೆ ಕಾಣಿಸುತ್ತಿಲ್ಲ ಎಂದು ತನ್ನ ಚಿಕ್ಕಪ್ಪ ರಾಘವೇಂದ್ರ ಅವರಿಗೆ ಮಾಹಿತಿ ನೀಡಿದ್ದಳು.

ರಾಘವೇಂದ್ರ ಅವರು ಜುಲೈ 31ರಂದು ರಾತ್ರಿ ಕಾಡುಗೋಡಿ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಿದಾಗ ಕೊಲೆಯ ರಹಸ್ಯ ಬಯಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಕ್ಯೂಎ/ಕ್ಯೂಸಿ–ಪೂರ್ವ)
ಕೊಠಡಿ ಸಂ.101, ಅನೆಕ್ಸ್–3 ಕಟ್ಟಡ, ಬೃಬೆಂಮಪಾಲಿಕೆ,
ನರಸಿಂಹರಾಜ ಚೌಕ, ಬೆಂಗಳೂರು– 560 002.

ಸಂಖ್ಯೆ:ಕಾಪಾಅ(ಕ್ಯೂಎ/ಕ್ಯೂಸಿ)/ಪೂರ್ವ/ಟೆಂಡರ್/10/2025–26 ದಿನಾಂಕ:02.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ದತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ ವಿಭಾಗ, ಪೂರ್ವ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ), ಇವರು ಈ ಕೆಳಕಂಡ ಕಾಮಗಾರಿಗಳಿಗೆ ತದ್ರೂಪಿ ಕೆಲಸಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿ/ಸಂಸ್ಥೆಗಳಿಂದ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನೆ ನಿರ್ವಹಣೆಗೆ ಸಲಹೆ ಸೇವೆಗಳನ್ನು (ಪಿಎಂಸಿ) ಒದಗಿಸಲು ಪ್ರಸ್ತಾವನೆ ಕೋರಿಕೆಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1.	ಸರ್ವಜ್ಞ ನಗರ ಕ್ಷೇತ್ರ ದೋಭಿ ಘಾಟ್, ಲಾಜರ್ ರಸ್ತೆ, ಎಮ್ ಎಸ್ ನಗರದಲ್ಲಿ ಯಂತ್ರೋಪಕರಣಗಳನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿಗಳಿಗೆ ಉಸ್ತುವಾರಿ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಪಿಎಮ್‌ಸಿ ಸೇವೆಗಳನ್ನು ಒದಗಿಸುವುದು. **ಮುಖ್ಯ ಕಾಮಗಾರಿಯ ಅಂದಾಜು ಮೊತ್ತ: ₹.200.00 ಲಕ್ಷಗಳು, ಇಎಂಡಿ ಮೊತ್ತ: ₹.4,200/–**
2	ವಾರ್ಡ್ ಸಂಖ್ಯೆ–76/24 ಹೆಣ್ಣೂರಿನ ಪ್ರಕೃತಿ ಬಡಾವಣೆ 5ನೇ ಬ್ಲಾಕ್, 38 ನೇ [illegible] **₹.200.00 ಲಕ್ಷಗಳು, ಇಎಂಡಿ ಮೊತ್ತ: ₹.4,100/–**
3	ವಾರ್ಡ್ ಸಂಖ್ಯೆ–76/24 [illegible] **₹.200.00 ಲಕ್ಷಗಳು, ಇಎಂಡಿ ಮೊತ್ತ: ₹.4,100/–**
4	ವಾರ್ಡ್ ಸಂಖ್ಯೆ–76/24 [illegible] **₹.200.00 ಲಕ್ಷಗಳು, ಇಎಂಡಿ ಮೊತ್ತ: ₹.4,100/–**
5	ವಾರ್ಡ್ ಸಂಖ್ಯೆ–76/24 [illegible] **₹.200.00 ಲಕ್ಷಗಳು, ಇಎಂಡಿ ಮೊತ್ತ: ₹.4,100/–**
6	ವಾರ್ಡ್ ಸಂಖ್ಯೆ–76/24 [illegible] **₹.200.00 ಲಕ್ಷಗಳು, ಇಎಂಡಿ ಮೊತ್ತ: ₹.4,100/–**
7	ವಾರ್ಡ್ ಸಂಖ್ಯೆ–73 [illegible] **₹.500.00 ಲಕ್ಷಗಳು, ಇಎಂಡಿ ಮೊತ್ತ: ₹.12,500/–**
8	ವಾರ್ಡ್ ಸಂಖ್ಯೆ–69 [illegible] **₹.400.00 ಲಕ್ಷಗಳು, ಇಎಂಡಿ ಮೊತ್ತ: ₹.10,000/–**

ಟೆಂಡರ್ ವೇಳಾಪಟ್ಟಿ: [illegible]

ಸಹಿ/– ಕಾರ್ಯಪಾಲಕ ಅಭಿಯಂತರರು (ಕ್ಯೂಎ/ಕ್ಯೂಸಿ–ಪೂರ್ವ)

ಪೋಕ್ಸೊ: 30 ವರ್ಷ ಕಠಿಣ ಶಿಕ್ಷೆ

ಬೆಳಗಾವಿ: ಬಾಲಕಿ ಮೇಲೆ ಅತ್ಯಾಚಾರವೆಸಗಿದ ಅಪರಾಧಿಗೆ ಇಲ್ಲಿನ ನ್ಯಾಯಾಲಯವು 30 ವರ್ಷ ಕಠಿಣ ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿ, ಶನಿವಾರ ಆದೇಶಿಸಿದೆ.

ಕಣಬರ್ಗಿಯ ನಿವಾಸಿ ದತ್ತಾತ್ರೇಯ ಖಾನಾಪುರೆ ಶಿಕ್ಷೆಗೆ ಒಳಗಾದವ.

2019ರ ಮೇ 13ರಂದು ಬಾಲಕಿಯನ್ನು ಕರೆದೊಯ್ದು ಅತ್ಯಾಚಾರ ಎಸಗಿದ್ದ. ಬಾಲಕಿಯ ಪೋಷಕರು ಮಾಳಮಾರುತಿ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ಕಾ.ಅ/ವಯೋವಿ–1/ಟೆಂ./ಟಿ–172/2025–26 ದಿನಾಂಕ: 02.08.2025

ಅಲ್ಪಾವಧಿ ಆಹ್ವಾನ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಆಹ್ವಾನಿಸಿರುವ ವಸತಿ ಯೋಜನೆ ಸಂಬಂಧಿತ ಕಾಮಗಾರಿಗೆ (ಇಂಡೆಂಟ್ ಸಂಖ್ಯೆ: BDA/2025-26/SE0062) ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ ಕೆಳಕಂಡಂತೆ ಇರುತ್ತದೆ:

ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ:

1) ಟೆಂಡರ್ ದಾಖಲಾತಿಗಳು ಇ–ಪೋರ್ಟಲ್‌ನಲ್ಲಿ ಲಭ್ಯವಾಗುವ ದಿನಾಂಕ: **03.08.2025** 2) ಟೆಂಡರ್ ಪ್ರಿ–ಬಿಡ್ ಪ್ರಶ್ನಾವಳಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **05.08.2025, 11.00 ಗಂಟೆ** 3) ಟೆಂಡರ್ ಪ್ರಿ–ಬಿಡ್ ಸಭೆಯ ದಿನಾಂಕ ಮತ್ತು ಸಮಯ: **06.08.2025, 3.00 ಗಂಟೆ** 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **18.08.2025, 4:00 ಗಂಟೆ** 5) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19.08.2025 ಸಂಜೆ 4.30**ರ ನಂತರ.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ವಿವರ ವೀಕ್ಷಿಸಬಹುದಾಗಿದೆ ಮತ್ತು ಹೆಚ್ಚಿನ ವಿವರಗಳಿಗೆ ಕಚೇರಿ ವೇಳೆಯಲ್ಲಿ ವಸತಿ ಯೋಜನೆ ವಿಭಾಗ, ಬೆಂ.ಅ.ಪ್ರಾ, ಸಂಪರ್ಕಿಸಲು ಕೋರಿದೆ.

ಸೂಚನೆ: ಯಾವುದೇ ಕಾರಣಾಂತರಗಳಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ದಾಖಲಾತಿಗಳನ್ನು Upload ಮಾಡಲು ವಿಳಂಬವಾದಲ್ಲಿ ಪರಿಷ್ಕೃತ/ಮಾರ್ಪಡಿತ ಟೆಂಡರ್ ವೇಳಾಪಟ್ಟಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ವಸತಿ ಯೋಜನೆ ವಿಭಾಗ, ಬೆಂ.ಅ.ಪ್ರಾ, ಬೆಂಗಳೂರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಬೆಂಗಳೂರು ದಕ್ಷಿಣ ವಿಭಾಗ, ಸಂಚಾರ ಶಾಖೆ
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ/ಬೆಂದವಿ/ಸಂ/ವಾ/988/989/990/25–26 ದಿನಾಂಕ: 31.07.2025

"ಇ–ಟೆಂಡರ್ ಪ್ರಕಟಣೆ ಸಂಖ್ಯೆ: 01 & 02/2025–26 & ಸಂಧಾನ ಪ್ರಕಟಣೆ ಸಂಖ್ಯೆ: 03 & 04/2025–26"

[illegible] **ಗಂಟೆಯವರೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ಬೆಂಗಳೂರು ದಕ್ಷಿಣ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ಬೆಂಗಳೂರು ದಕ್ಷಿಣ ಜಿಲ್ಲೆ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದಾದ ಮೊಬೈಲ್ ಸಂಖ್ಯೆ: 7760990852.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಬೆಂಗಳೂರು ದಕ್ಷಿಣ ವಿಭಾಗ.

ವಾಸಾಸಂಇ/ವಾ.ಪ್ರ/2172/ಎಂಎಎ/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
Reg. Office: 30/1, 1st and 2nd Floor, BBMP Building, Thimmaiah Road, Millers Tank Bund Area, Vasanth Nagar, Bengaluru-560051, Email-Id: bluruswml2021@gmail.com

No: DGM-1/BSWML/PR/158/2025-26 Date: 02.08.2025

ಪತ್ರಿಕಾ ಪ್ರಕಟಣೆ

ವಿಷಯ: ಸಮಗ್ರ ಘನತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲು ಬೆಂಗಳೂರಿನ ಸುತ್ತ–ಮುತ್ತಲಿನ ಪ್ರದೇಶದಲ್ಲಿ 100 ಎಕರೆ ಜಮೀನನ್ನು ಗುರುತಿಸುವ/ಖರೀಧಿಸುವ ಬಗ್ಗೆ.

****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಹಾಗೂ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಸಮರ್ಪಕ ನಿರ್ವಹಣೆಗಾಗಿ ಅದರಲ್ಲೂ ವೈಜ್ಞಾನಿಕ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ವಿವಿಧ ಘಟಕಗಳನ್ನು ನಿರ್ಮಿಸಲು ಉದೇಶಿಸಲಾಗಿದ್ದು, ಬೆಂಗಳೂರಿನ ಸುತ್ತ–ಮುತ್ತಲಿನ ಪ್ರದೇಶದಲ್ಲಿ ಸುಮಾರು 100 ಎಕರೆ ಜಾಗವನ್ನು ಗುರುತಿಸಲು ಉದ್ದೇಶಿಸಲಾಗಿದ್ದು, ಸಮಗ್ರ ಘನತ್ಯಾಜ್ಯ ನಿರ್ವಹಣಾ ಘಟಕಗಳ ಸ್ಥಾಪನೆಗಾಗಿ ಬೆಂಗಳೂರಿನ ಕೇಂದ್ರದಿಂದ ಸುಮಾರು 50–60ಕಿ.ಮೀ ವ್ಯಾಪ್ತಿಯೊಳಗಡೆ ಸುಮಾರು 100 ಎಕರೆ ಪ್ರದೇಶವನ್ನು ಗುರುತಿಸಬೇಕಾಗಿದ್ದು, ಈ ಕುರಿತಂತೆ ಆಸಕ್ತಿಯುಳ್ಳ ಜಮೀನಿನ ಮಾಲಿಕರು/ಆಸಕ್ತಿ ಉಳ್ಳವರು ಈ ಕೆಳಕಂಡ ಕಛೇರಿಯನ್ನು ದೂರವಾಣಿ/ಇ–ಮೇಲ್/ಖುದ್ದಾಗಿ ಈ ಪ್ರಕಟಣೆಯ ಒಂದು ತಿಂಗಳೊಳಗಾಗಿ ಸಂಪರ್ಕಿಸಬಹುದಾಗಿರುತ್ತದೆ.

ದೂರವಾಣಿ ಸಂ:	080-43790743
ಇ–ಮೇಲ್ :	dgm1bswml@gmail.com
ವಿಳಾಸ:	Office of the Chief Engineer & Chief General Manager (Tech), BSWML, 1st Floor, BBMP Building, Thimmaiah Road, Vasanth Nagar, Bengaluru – 560 052

ಸಹಿ/–
ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಬೆಂ.ಘ.ತ್ಯಾ.ನಿ.ನಿ.

ವಾಸಾಸಂಇ/ವಾ.ಪ್ರ/2619/ಎಸ್‌ಎಸ್‌ಸಿ/2025–26

ನಟಿ ರಮ್ಯಾಗೆ ಬೆದರಿಕೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಓಬಣ್ಣ

ಗಂಗಾಧರ

ಬೆಂಗಳೂರು: ನಟಿ ರಮ್ಯಾ ಅವರಿಗೆ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬೆದರಿಕೆ ಸಂದೇಶ ಕಳುಹಿಸಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ.

ಟಿ.ಓಬಣ್ಣ (25) ಹಾಗೂ ಗಂಗಾಧರ ಬಂಧಿತರು.

ರಮ್ಯಾ

ಬಂಧಿತರಾದ ಓಬಣ್ಣ 'ರಾಬರ್ಟ್ ರಾಘವ 5'ಡಿ' ಬಾಸ್ ಟಿಜೆ' ಹಾಗೂ ಗಂಗಾಧರ, 'ದರ್ಶನ್ ತೂಗುದೀಪ್' ಎಂಬ ಹೆಸರಿನ ಇನ್‌ಸ್ಟಾಗ್ರಾಂ ಖಾತೆಗಳಿಂದ ರಮ್ಯಾ ಅವರಿಗೆ ಬೆದರಿಕೆ ಸಂದೇಶ ಕಳುಹಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದ 13 ಜನರನ್ನು ಗುರುತಿಸಲಾಗಿದೆ. ಆ ಪೈಕಿ ಇಬ್ಬರನ್ನು ಬಂಧಿಸಲಾಗಿದ್ದು, ಇನ್ನೂ 11 ಮಂದಿಯನ್ನು ಬಂಧಿಸಬೇಕಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಕೋಲಾರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿರುವ ಸುಮಾರು 50 ಖಾತೆಗಳ ಬಳಕೆದಾರರನ್ನು ಪತ್ತೆ ಹಚ್ಚಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ನಗರದ ಹೊರವಲಯದಲ್ಲಿನ ಕೆಲವು ವ್ಯಕ್ತಿಗಳ ಖಾತೆಗಳಿಂದಲೂ ಬೆದರಿಕೆ ಸಂದೇಶ ಬಂದಿರುವುದು ಗೊತ್ತಾಗಿದೆ. ತನಿಖೆ ಮುಂದುವರೆದಿದೆ ಎಂದು ಪೊಲೀಸರು ಹೇಳಿದರು.

ನಟ ದರ್ಶನ್ ಅವರ ಅಭಿಮಾನಿಗಳು ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ನಟಿ ರಮ್ಯಾ ಅವರು ಜುಲೈ 28ರಂದು ಸೀಮಂತ್ ಕುಮಾರ್ ಸಿಂಗ್ ಅವರಿಗೆ ದೂರು ನೀಡಿದ್ದರು. ಆ ದೂರು ಆಧರಿಸಿ ಸೈಬರ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿತ್ತು. ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು.

ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಕಾಯ್ದೆಯ ಸೆಕ್ಷನ್‌ಗಳಾದ 351(2) (ಕ್ರಿಮಿನಲ್ ಬೆದರಿಕೆಯ ಉದ್ದೇಶದ ಅಪರಾಧ), 351(3) (ಸಾವು, ತೀವ್ರ ನೋವುಂಟು ಮಾಡುವ ಉದ್ದೇಶದ ಕ್ರಿಮಿನಲ್ ಬೆದರಿಕೆ), 352 (ಉದ್ದೇಶ ಪೂರ್ವಕ ಅವಮಾನದ ಮೂಲಕ ಶಾಂತಿಭಂಗದ ಯತ್ನ), 75(1) (ಲೈಂಗಿಕ ಕಿರುಕುಳ), 75(1)(IV) (ಲೈಂಗಿಕ ಟೀಕೆ) ಹಾಗೂ 79 (ಮಹಿಳೆಯ ಗೌರವಕ್ಕೆ ಧಕ್ಕೆ) ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೃತಳ ಚಿನ್ನಾಭರಣ ಕದ್ದವನ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತದಲ್ಲಿ ಮೃತಪಟ್ಟ 13 ವರ್ಷದ ದಿವ್ಯಾಂಶಿಯ ಮರಣೋತ್ತರ ಪರೀಕ್ಷೆ ವೇಳೆ ಚಿನ್ನಾಭರಣ ಕಳವು ಮಾಡಿದ್ದ ಆರೋಪಿಯನ್ನು ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಸ್ಟಾಲಿನ್ (32) ಬಂಧಿತ. ವಿವೇಕನಗರ ಮಯಾ–ಬಜಾರ್‌ನಲ್ಲಿ ನೆಲಸಿದ್ದ ಆರೋಪಿ, ಬೌರಿಂಗ್ ಆಸ್ಪತ್ರೆಯ ಶವಾಗಾರದಲ್ಲಿ ಅರೆಕಾಲಿಕ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಬಾಲಕಿಯ ತಾಯಿ ಅಶ್ವಿನಿ ಅವರು ಜುಲೈ 24ರಂದು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಳವು ಮಾಡಿದ್ದ ಚಿನ್ನಾಭರಣ ಪತ್ತೆ ಆಗಿಲ್ಲ ಎಂದು ಪೊಲೀಸರು ತಿಳಿಸಿದರು.

ಆರೋಪಿಗೆ ಮದ್ಯದ ಅಭ್ಯಾಸವಿತ್ತು. ಇದೇ ಕಾರಣಕ್ಕೆ ಆತನನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದಿದ್ದ ಕಾಲ್ತುಳಿತದಲ್ಲಿ 11 ಮಂದಿ ಮೃತಪಟ್ಟಿದ್ದರು. ಬೌರಿಂಗ್ ಆಸ್ಪತ್ರೆಗೆ 6 ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ತರಲಾಗಿತ್ತು. ಹೆಚ್ಚಿನ ಸಿಬ್ಬಂದಿ ಅಗತ್ಯವಿದ್ದ ಕಾರಣಕ್ಕೆ ಸ್ಟಾಲಿನ್‌ನನ್ನು ಕರೆಸಿಕೊಳ್ಳಲಾಗಿತ್ತು. ಆಗ ಚಿನ್ನಾಭರಣ ಕಳವು ಮಾಡಿದ್ದ ಎನ್ನಲಾಗಿದೆ.

ದಿವ್ಯಾಂಶಿಯ ಮರಣೋತ್ತರ ಪರೀಕ್ಷೆಯ ವೇಳೆ ಬಾಲಕಿ ಧರಿಸಿದ್ದ ಸುಮಾರು ₹1 ಲಕ್ಷದ ಮೌಲ್ಯದ 6 ಗ್ರಾಂ ಚಿನ್ನದ ಕಿವಿಯೋಲೆ ಹಾಗೂ 5ರಿಂದ 6 ಗ್ರಾಂ ಚಿನ್ನದ ಸರವನ್ನು ಕದ್ದಿದ್ದ. ಅಂದು ಕೆಲಸ ಮುಗಿದ ಬಳಿಕ ಕದ್ದ ಚಿನ್ನ ಸಮೇತ ಮನೆಗೆ ತೆರಳಿದ್ದ. ಕುಡಿದ ನಶೆಯಲ್ಲಿ ಮಾರ್ಗಮಧ್ಯೆ ಚಿನ್ನಾಭರಣ ಕಳೆದು ಹೋಗಿರುವುದಾಗಿ ಹೇಳಿಕೆ ನೀಡಿದ್ದಾನೆ ಎಂದು ಪೊಲೀಸರು ಹೇಳಿದರು.

'ಮರಣೋತ್ತರ ಪರೀಕ್ಷೆ ವೇಳೆ ಶವಾಗಾರದಲ್ಲಿ ನನ್ನ ಪುತ್ರಿಯ ಕಿವಿಯೋಲೆ ಹಾಗೂ ಚಿನ್ನದ ಸರ ಕಾಣೆಯಾಗಿದೆ. ಪುತ್ರಿಯ ಜನ್ಮದಿನದಂದು ಆಕೆಯ ಮಾವ ಉಡುಗೊರೆ ನೀಡಿದ್ದರು. ಕಿವಿಯೋಲೆಯೊಂದಿಗೆ ದಿವ್ಯಾಂಶಿ ಬಾಂಧವ್ಯ ಹೊಂದಿದ್ದಳು. ಹೀಗಾಗಿ, ನನಗೆ ಆಭರಣ ಬೇಕೆಂದು ಬೌರಿಂಗ್ ಆಸ್ಪತ್ರೆಗೆ ತೆರಳಿ ಕೇಳಿದಾಗ, ಈ ಬಗ್ಗೆ ಯಾರೂ ಸರಿಯಾಗಿ ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ಬಾಲಕಿಯ ತಾಯಿ ಅಶ್ವಿನಿ ಅವರು ಪೊಲೀಸರಿಗೆ ದೂರು ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಹೆಚ್ಚುವರಿ ಹೊಣೆ

ಬೆಂಗಳೂರು: ವಾಣಿಜ್ಯ ತೆರಿಗೆ ಹೆಚ್ಚುವರಿ ಆಯುಕ್ತೆ (ಸೇವಾ ವಿಶ್ಲೇಷಣಾ ವಿಭಾಗ) ಅಪರ್ಣಾ ರಮೇಶ್ ಅವರಿಗೆ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ನಿರ್ದೇಶಕಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ.

ಈ ಹುದ್ದೆಯ ಹೆಚ್ಚುವರಿ ಹೊಣೆಯಿಂದ ಟಿ.ಭೂಬಾಲನ್ ಅವರನ್ನು ಬಿಡುಗಡೆ ಮಾಡಿದೆ.

ನಿಧನ ವಾರ್ತೆ

ಜಯಲಕ್ಷ್ಮಮ್ಮ



ಬೆಂಗಳೂರು: ದೊಡ್ಡ-ಬೊಮ್ಮಸಂದ್ರದ ನಿವಾಸಿ ಜಯಲಕ್ಷ್ಮಮ್ಮ (85) ಶನಿವಾರ ನಿಧನರಾದರು.

ಅವರಿಗೆ ಮೂವರು ಪುತ್ರರು ಹಾಗೂ ಪುತ್ರಿ ಇದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಾದಚಾರಿ ಮಾರ್ಗ ಒತ್ತುವರಿ ತೆರವು

ಏಕಬಳಕೆ ಪ್ಲಾಸ್ಟಿಕ್ ವಶ: 26 ಪ್ರಕರಣಗಳಿಂದ ₹31,600 ದಂಡ ವಸೂಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಟು ವಲಯಗಳಲ್ಲಿ ನಾಗರಿಕರಿಗೆ ಅಡತಡೆಯಿಲ್ಲದ, ಅನುಕೂಲಕರ ಪಾದಚಾರಿ ಮಾರ್ಗ ವ್ಯವಸ್ಥೆ ಕಲ್ಪಿಸಲು ಪಾದಚಾರಿ ಮಾರ್ಗದ ಒತ್ತುವರಿ, ಅನಧಿಕೃತ ಜಾಹೀರಾತುಗಳನ್ನು ತೆರವು ಮಾಡಲಾಯಿತು.

ಪೂರ್ವ ವಲಯದಲ್ಲಿ ಪುಲಕೇಶಿನಗರ ವಿಭಾಗದ ವಾರ್ಡ್ 31ರ ಕುಶಾಲ್ ನಗರದ ರಸ್ತೆಯಲ್ಲಿ ಅಳವಡಿಸಿದ್ದ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲಾಯಿತು. ಸಿ.ವಿ ರಾಮನ್ ನಗರ ವಿಭಾಗದ ಇಂದಿರಾನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯ ಹಾಗೂ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಪಶ್ಚಿಮ ವಲಯದ ಗೋವಿಂದರಾಜನಗರ ಉಪವಿಭಾಗ ವ್ಯಾಪ್ತಿಯ ವಾರ್ಡ್ 104ರ ಗೋವಿಂದರಾಜನಗರ ಮತ್ತು ವಾರ್ಡ್ 125ರ ಮಾರೇನಹಳ್ಳಿ ವಾರ್ಡ್ ವ್ಯಾಪ್ತಿಯ ಸಿ.ಎಚ್.ಬಿ.ಎಸ್ ಬಡಾವಣೆ, 8ನೇ ಮುಖ್ಯರಸ್ತೆ ಎಂ.ಸಿ ಬಡಾವಣೆ, ವೆಸ್ಟ್ ಆಫ್ ಕಾರ್ಡ್ ರಸ್ತೆ ಸರ್ವಿಸ್ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಿ, ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಲಾಯಿತು.

ದಕ್ಷಿಣ ವಲಯದ ಕಲಾಸಿಪಾಳ್ಯದ ಕುಂಬಾರಗುಂಡಿಯಲ್ಲಿ, ಬಿಟಿಎಂ ಲೇಔಟ್‌ನ 7ನೇ ಮುಖ್ಯರಸ್ತೆ, ಹೊಸಕೆರೆಹಳ್ಳಿ ಮುಖ್ಯರಸ್ತೆ, ಜಯನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು. ಶ್ರೀನಗರದಲ್ಲಿ, ನ್ಯೂ ಟಿಂಬರ್ ಯಾರ್ಡ್ ಲೇ ಔಟ್ ನ 2ನೇ ಅಡ್ಡರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಪದ್ಮನಾಭನಗರ ವಿಭಾಗದ ವಾರ್ಡ್ 166, ಕರಿಸಂದ್ರದಲ್ಲಿ ಸಂಗೀತ ಪ್ಯಾಕೇಜ್ ಎಂಬ ಅಂಗಡಿಯಲ್ಲಿ ಏಕ-ಬಳಕೆಯ ಪ್ಲಾಸ್ಟಿಕ್ ಚೀಲಗಳನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ಅಂಗಡಿ ಮಾಲೀಕರಿಗೆ ₹10 ಸಾವಿರ ದಂಡ ವಿಧಿಸಿ, ಏಕಬಳಕೆ ಪ್ಲಾಸ್ಟಿಕ್ ಬಳಸದಂತೆ ಎಚ್ಚರಿಕೆ ನೀಡಲಾಯಿತು.

ದಾಸರಹಳ್ಳಿ ವಲಯದ ಹೆಗ್ಗನಹಳ್ಳಿ ಉಪವಿಭಾಗದಲ್ಲಿ ಹೆಗ್ಗನಹಳ್ಳಿ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು.

ಮಹಾದೇವಪುರ ವಲಯದ ದೊಡ್ಡನೆಕ್ಕುಂದಿ, ಬಿ.ನಾರಾಯಣಪುರ ವಾರ್ಡ್, ಬ್ರೂಕ್ ಫೀಲ್ಡ್ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಹಾಗೂ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಪಟ್ಟಂದೂರು, ಎಇಸಿಎಸ್ ಬಡಾವಣೆ, ಕಲ್ಕೆರೆ ಪ್ರದೇಶಗಳಲ್ಲಿ ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ನಡೆಸಲಾಯಿತು.

ಯಲಹಂಕ ವಲಯದ ಬೆಟ್ಟಹಳ್ಳಿ ಲೇಔಟ್‌ನ ಜಿಕೆವಿಕೆ ಹಾರ್ಟಿಕಲ್ಚರ್ ಜಂಕ್ಷನ್, ಕೆಂಪೇಗೌಡ ವಾರ್ಡ್ 1, ಎಂ.ಎಸ್ ಪಾಳ್ಯದ ವಾರ್ಡ್ 3, ಕಾಫಿ ಬೋರ್ಡ್ ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಹಾಗೂ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಅಮೃತಹಳ್ಳಿಯ ಮುಖ್ಯರಸ್ತೆಯಲ್ಲಿ ಅನಧಿಕೃತ ಒ.ಎಫ್.ಸಿ ಕೇಬಲ್ ತೆರವುಗೊಳಿಸಲಾಯಿತು.

ರಾಜರಾಜೇಶ್ವರಿ ವಲಯ ವ್ಯಾಪ್ತಿಯ ಕೆಂಗೇರಿ ವಿಭಾಗದ ಶಂಕರನಾಗ್ ವೃತ್ತದಿಂದ (ಬಿಬಿಎಂಪಿ ಕಚೇರಿ ಹತ್ತಿರ) ಸ್ಯಾಟಲೈಟ್ ಕ್ಲಬ್ ಸರ್ಕಲ್ ಕೊಮ್ಮಘಟ್ಟ ಮುಖ್ಯರಸ್ತೆವರೆಗೆ ಹಾಗೂ ರಾಜರಾಜೇಶ್ವರಿನಗರ ವಿಭಾಗದ ಬಿಡಿಎ ಕಾಂಪ್ಲೆಕ್ಸ್ ಅನ್ನಪೂರ್ಣೇಶ್ವರಿ ನಗರದ ದೇವಸ್ಥಾನದ ರಸ್ತೆಯಿಂದ ಮುದ್ದಿನಪಾಳ್ಯ ಮುಖ್ಯರಸ್ತೆವರೆಗೆ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ, ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ಹಾಗೂ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು.

ಅಂಗಡಿಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ಬಳಕೆ ಕಂಡುಬಂದಿದ್ದು, ಏಕಬಳಕೆ ಪ್ಲಾಸ್ಟಿಕ್ ವಶಕ್ಕೆ ಪಡೆದು, 26 ಪ್ರಕರಣಗಳಿಂದ ₹31,600 ದಂಡ ವಸೂಲಿ ಮಾಡಲಾಯಿತು.

ಕೆಂಗೇರಿಯಲ್ಲಿ ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

₹62,500 ದಂಡ ವಸೂಲು

ರಸ್ತೆ ಪಕ್ಕದಲ್ಲಿ ಮತ್ತು ಪಾದಚಾರಿ ಮಾರ್ಗದಲ್ಲಿ ಕಸ ಎಸೆಯುತ್ತಿರುವ 25 ಪ್ರಕರಣಗಳಿಂದ ಒಟ್ಟು ₹62,500 ದಂಡ ವಸೂಲು ಮಾಡಲಾಯಿತು.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಯಲಚೇನಹಳ್ಳಿ, ವಸಂತಪುರ ವ್ಯಾಪ್ತಿ, ರಾಜ್ಯೋತ್ಸವನಗರ ಹಾಗೂ ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ನಡೆಸಲಾಯಿತು.

‘ಪ್ರತಿ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾನೂನು ಘಟಕ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾಹುಲ್ ಗಾಂಧಿ ಅವರ ಸಂದೇಶದಂತೆ ಪ್ರತಿ ಕ್ಷೇತ್ರದಲ್ಲಿ ಪಕ್ಷದ ಕಾನೂನು ಘಟಕ ರಚನೆಯಾಗಬೇಕು. ಪ್ರತಿ ಬೂತ್‌ನಲ್ಲಿ ಮತದಾರರ ಪಟ್ಟಿ ಪರಿಶೀಲನೆ ಆಗಬೇಕು. ಕಾರ್ಯಕರ್ತರು, ಎಲ್ಲಾ ಸಮುದಾಯಗಳನ್ನು ರಕ್ಷಣೆ ಮಾಡಬೇಕು. ಆಗ ಮಾತ್ರ ಕಾಂಗ್ರೆಸ್ ಹಾಗೂ ಇಂಡಿಯಾ ಒಕ್ಕೂಟ ಅಧಿಕಾರಕ್ಕೆ ಬರಲು ಸಾಧ್ಯ’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ಎಐಸಿಸಿ ಕಾನೂನು, ಮಾನವೀಯ ಹಕ್ಕುಗಳು ಮತ್ತು ಮಾಹಿತಿ ಹಕ್ಕುಗಳ ವಿಭಾಗವು ಇಲ್ಲಿ ಶನಿವಾರ ಆಯೋಜಿಸಿದ್ದ ‘ಸಾಂವಿಧಾನಿಕ ಸವಾಲುಗಳು’ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘2029ಕ್ಕೆ ರಾಹುಲ್ ಪ್ರಧಾನಿಯಾಗಿಸೋಣ’

‘ಸಂವಿಧಾನ ರಕ್ಷಣೆಗಾಗಿ ನಾವು ಮತ್ತೆ ಅಧಿಕಾರಕ್ಕೆ ಬರಬೇಕಿದೆ. ಸರಿಯಾದ ಅಜೆಂಡಾ ಇಟ್ಟುಕೊಂಡು ಬದ್ಧತೆಯಿಂದ ಶ್ರಮಿಸಿ, 2029ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದು ರಾಹುಲ್ ಗಾಂಧಿ ಅವರನ್ನು ಪ್ರಧಾನಮಂತ್ರಿಯನ್ನಾಗಿ ಮಾಡಬೇಕು’ ಎಂದು ಶಿವಕುಮಾರ್ ಕರೆ ನೀಡಿದರು.

‘ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆಯವರ ಮಾರ್ಗದರ್ಶನದಂತೆ ಸಂವಿಧಾನ ರಕ್ಷಣೆಗಾಗಿ ಪ್ರತಿ ಕ್ಷೇತ್ರದಲ್ಲಿಯೂ ಕಾಂಗ್ರೆಸ್ ಪಕ್ಷದ ವಕೀಲರ ಸಮಿತಿ(ಅಡ್ವೊಕೇಟ್ ಬ್ಯಾಂಕ್) ರಚಿಸಬೇಕು. ಆ ಮೂಲಕ ಪ್ರತಿ ಕ್ಷೇತ್ರದ ಮತದಾರರ ಹಕ್ಕು ಹಾಗೂ ಕಾರ್ಯಕರ್ತರ ರಕ್ಷಣೆ ಮಾಡಬೇಕು’ ಎಂದು ತಿಳಿಸಿದರು.

‘ರಾಹುಲ್ ಗಾಂಧಿ ಅವರು ಭಾರತ್ ಜೋಡೊ ಯಾತ್ರೆ ವೇಳೆ ಕರ್ನಾಟಕದಲ್ಲಿ 24 ದಿನಗಳು ಪಾದಯಾತ್ರೆ ಮಾಡಿದರು. ಅವರು ಹೆಜ್ಜೆ ಇಟ್ಟ ಕ್ಷೇತ್ರಗಳಲ್ಲೆಲ್ಲಾ ಕಾಂಗ್ರೆಸ್ ಪಕ್ಷ ಗೆದ್ದು, ಕರ್ನಾಟಕದಲ್ಲಿ ಸರ್ಕಾರ ರಚಿಸಿದೆ. ರಾಹುಲ್ ಗಾಂಧಿ ಅವರು ನೀಡಿರುವ ಸಂದೇಶದಂತೆ ಪಕ್ಷದ ಕಾನೂನು ಘಟಕ ಪ್ರತಿ ಕ್ಷೇತ್ರ ಮಟ್ಟದ ವರೆಗೆ ರಚನೆಯಾಗಬೇಕು’ ಎಂದರು.

Karnataka Golf Association
No.1 Golf Avenue, Kodihalli, Bengaluru -560008. Tel: 08040090044/41
Website : www.kga.in Email: mem@kga.in

NOTICE

Pending applications for Life Membership and Permanent Associate at KGA are hereby informed to pay the difference in Entrance Fee on or before **30th August 2025** failing which the application will be treated as withdrawn. For more information, please contact KGA Office immediately on **Mobile No. 9035215972**.

Date: 03.08.2025
Place: Bengaluru

Sd/-
Madhur Sood
Hon. Secretary

ಕಬ್ಬನ್: ಕಾರ್ಯಕ್ರಮಕ್ಕೆ ವಿರೋಧ

ವಾಣಿಜ್ಯ ಸ್ಥಳವಾದ ಉದ್ಯಾನ: ವಾಯು ವಿಹಾರಿಗಳ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿಲಿಕಾನ್ ಸಿಟಿ’ಯ ವಾಯುವಿಹಾರಿಗಳು ಮತ್ತು ಪ್ರೇಮಿಗಳ ಸ್ವರ್ಗ ಕಬ್ಬನ್ ಉದ್ಯಾನ ಈಗ ಬುಕ್ ಮೈ ಶೋನ ‘ಟರ್ಬೊ ಟಾಕ್ಸ್’ ಮತ್ತು ‘ಬ್ಲೈಂಡ್ ಡೇಟ್ಸ್’ ಎಂಬ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ವಾಣಿಜ್ಯ ಸ್ಥಳವಾಗಿ ಮಾರ್ಪಡುತ್ತಿದೆ. ಇದಕ್ಕೆ ಸಾರ್ವಜನಿಕರು ಹಾಗೂ ವಾಯು ವಿಹಾರಿಗಳು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಕಬ್ಬನ್ ಉದ್ಯಾನದಲ್ಲಿ ವಾಯು ವಿಹಾರ ಮಾಡಲು ನಿತ್ಯ ಸಾವಿರಾರು ಜನ ಬರುತ್ತಾರೆ. ಅದರ ಜೊತೆಗೆ ಇಲ್ಲಿರುವ ಸಸ್ಯ ಪ್ರಭೇದಗಳು, ಜೀವವೈವಿಧ್ಯ ಹಾಗೂ ಐತಿಹಾಸಿಕ ಸ್ಥಳಗಳ ಕುರಿತು ಮಾಹಿತಿ ಪಡೆದುಕೊಳ್ಳಲು ವಿದ್ಯಾರ್ಥಿಗಳು, ಸಂಶೋಧಕರು, ಪರಿಸರ ಕಾರ್ಯಕರ್ತರು, ವಿದೇಶಿಗರು ಭೇಟಿ ನೀಡುತ್ತಾರೆ. ಇಂತಹ ಪ್ರದೇಶದಲ್ಲಿ ಈಗ ಖಾಸಗಿ ವಿಚಾರವಾಗಿರುವ ಬ್ಲೈಂಡ್ ಡೇಟಿಂಗ್, ಟರ್ಬೊ ಟಾಕ್ಸ್ ಎಂಬ ವಾಣಿಜ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಬುಕ್ ಮೈ ಶೋ ಮೂಲಕ ನೋಂದಣಿಗೆ ಅವಕಾಶ ನೀಡಲಾಗಿದೆ.

‘ಕಬ್ಬನ್ ಉದ್ಯಾನದಲ್ಲಿ ಟರ್ಬೊ ಟಾಕ್ಸ್ ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಆ. 3ರಿಂದ 24ರವರೆಗೆ ನೋಂದಣಿಗೆ ಅವಕಾಶವಿದ್ದು, ₹999 ದರ ನಿಗದಿಪಡಿಸಲಾಗಿದೆ. ಆಗಸ್ಟ್ ತಿಂಗಳ ಪ್ರತಿ ಭಾನುವಾರ ಸಂಜೆ 5 ಗಂಟೆಗೆ ಕಾರ್ಯಕ್ರಮ ಆಯೋಜಿಸಲಾಗಿದ್ದು, 1 ಗಂಟೆ 30 ನಿಮಿಷಗಳವರೆಗೆ ಅಪರಿಚಿತ ಗೆಳೆಯ-ಗೆಳತಿಯರೊಡನೆ ಸ್ನೇಹ ಸಂಭಾಷಣೆಗೆ ಅವಕಾಶವಿದೆ. ಇದರಲ್ಲಿ 18 ವರ್ಷ ಮೇಲ್ಪಟ್ಟ ಹುಡುಗರು ಮಾತ್ರ ಭಾಗವಹಿಸಬಹುದು’ ಎಂದು ಬುಕ್ ಮೈಶೋ ಅಧಿಕೃತ ವೆಬ್‌ಸೈಟ್‌ನಲ್ಲಿ ಮಾಹಿತಿ ಹಂಚಿಕೊಂಡಿದೆ’ ಎಂದು ಕಬ್ಬನ್ ಉದ್ಯಾನ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್ ತಿಳಿಸಿದ್ದಾರೆ.

‘ಕಬ್ಬನ್ ಉದ್ಯಾನದಲ್ಲಿ ಟರ್ಬೊ ಟಾಕ್ಸ್ ಸ್ಪೀಡ್ ಡೇಟಿಂಗ್ ಎಂಬ ವಾಣಿಜ್ಯ ಕಾರ್ಯಕ್ರಮ ಆಯೋಜಿಸುತ್ತಿರುವುದು ಖಂಡನೀಯ. ಬುಕ್ ಮೈ ಶೋನಲ್ಲಿ ₹999 ದರ ನಿಗದಿಪಡಿಸಲಾಗಿದೆ. ತೋಟಗಾರಿಕೆ ಇಲಾಖೆ ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿ ಕಾನೂನು ಕ್ರಮಕ್ಕೆ ಮುಂದಾಗಬೇಕು’ ಎಂದರು.

‘ಬ್ಲೈಂಡ್ ಡೇಟಿಂಗ್ ವಿರುದ್ಧ ದೂರು’

‘ಕಬ್ಬನ್ ಉದ್ಯಾನ ಒಂದು ಸಂರಕ್ಷಿತ ಪ್ರದೇಶ. ಇಲ್ಲಿ ಡೇಟಿಂಗ್, ಟಾಕಿಂಗ್ ಸೇರಿದಂತೆ ಯಾವುದೇ ರೀತಿಯ ವಾಣಿಜ್ಯ ಕಾರ್ಯಕ್ರಮಗಳನ್ನು ಆಯೋಜಿಸುವುದು ನಿಷೇಧಿಸಲಾಗಿದೆ. ಕಬ್ಬನ್ ಉದ್ಯಾನದಲ್ಲಿ ಬುಕ್ ಮೈಶೋ ಆಯೋಜಿಸಿದ್ದ ಬ್ಲೈಂಡ್ ಡೇಟಿಂಗ್ ಎಂಬ ವಾಣಿಜ್ಯ ಕಾರ್ಯಕ್ರಮದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ’ ಎಂದು ಕಬ್ಬನ್ ಉದ್ಯಾನ (ತೋಟಗಾರಿಕೆ ಇಲಾಖೆ) ಉಪ ನಿರ್ದೇಶಕಿ ಜಿ. ಕುಸುಮಾ ‘ಪ್ರಜಾವಾಣಿ’ಗೆ ತಿಳಿಸಿದರು.

ಗಣೇಶೋತ್ಸವ: ಏಕಗವಾಕ್ಷಿ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗೌರಿ ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪಾಲಿಕೆಯ 75 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಪದ್ಧತಿಯಲ್ಲಿ ಅನುಮತಿ ಪತ್ರವನ್ನು ಪಡೆಯಲು ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಬಿಬಿಎಂಪಿ ಮತ್ತು ಬೆಂಗಳೂರು ನಗರ ಪೊಲೀಸ್ ಇಲಾಖೆ ಸಹಯೋಗದಲ್ಲಿ ನಡೆದ ‘ಶಾಂತಿ ಸೌಹಾರ್ದ ಸಭೆ’ಯಲ್ಲಿ ಅವರು ಮಾತನಾಡಿದರು.

ಗಣೇಶ ವಿಸರ್ಜನೆಗೆ ಪ್ರಮುಖ ಕೆರೆಗಳ ಕಲ್ಯಾಣಿಗಳಲ್ಲಿ ವ್ಯವಸ್ಥೆ ಮಾಡಿಕೊಡಲಾಗುವುದು. ಪ್ರಮುಖ ಸ್ಥಳ/ಜಂಕ್ಷನ್‌ಗಳಲ್ಲಿ ಹಾಗೂ ವಾರ್ಡ್‌ವಾರು ತಾತ್ಕಾಲಿಕವಾಗಿ ಸಂಚಾರಿ ವಿಸರ್ಜನಾ ಘಟಕಗಳನ್ನು ವ್ಯವಸ್ಥೆ ಮಾಡಲಾಗುವುದು ಎಂದರು.

ಗೌರಿ ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸಬೇಕು. ವಾಯುಮಾಲಿನ್ಯ, ನೀರು ಕಲುಷಿತ ಆಗುವ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಬಾರದು. ಗೌರಿ ಗಣೇಶ ಹಾಗೂ ಈದ್ ಮಿಲಾದ್ ವೇಳೆ ಶಾಂತಿ ಕಾಪಾಡಬೇಕು ಎಂದು ತಿಳಿಸಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಮಾತನಾಡಿ, ಪ್ರತಿ ವರ್ಷದಂತೆ ಶಾಂತಿ ಸೌಹಾರ್ದದಿಂದ ಗಣೇಶ ಹಬ್ಬವನ್ನು ಆಚರಿಸಬೇಕು. ಈಗಾಗಲೇ ಎಲ್ಲಾ ಕಡೆ ಶಾಂತಿ ಸಭೆಗಳನ್ನು ನಡೆಸಲಾಗಿದೆ. ಈ ಬಾರಿ ಯಾವುದೇ ರೀತಿಯ ಅನಾನುಕೂಲವಾಗದಂತೆ ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಹೇಳಿದರು.

ಡಿಜೆ ನಿಷೇಧಕ್ಕೆ ಮನವಿ

ಗಣೇಶ ಪ್ರತಿಷ್ಠಾಪನೆ ವೇಳೆ ಡಿಜೆ ನಿಷೇಧಿಸಬೇಕು. ವಿಸರ್ಜನಾ ಮೆರವಣಿಗೆಯ ವೇಳೆ ಬೆಸ್ಕಾಂ ಅಗತ್ಯ ಕ್ರಮ ಕೈಗೊಂಡು ಯಾವುದೇ ಅವಘಡ ನಡೆಯದಂತೆ ನೋಡಿಕೊಳ್ಳಬೇಕು. ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಭದ್ರತೆ ನೀಡಬೇಕು ಎಂದು ಶಾಂತಿ ಸಭೆಯಲ್ಲಿ ನಾಗರಿಕರು ಮನವಿ ಮಾಡಿಕೊಂಡರು.

ನಗರದಲ್ಲಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಸಮಾನ ಮನಸ್ಕರ ವೇದಿಕೆಯ ಸದಸ್ಯರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನಿಗೂಢ ಸಾವುಗಳಿಗೆ ನ್ಯಾಯ ಒದಗಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮಸ್ಥಳದ ನಿಗೂಢ ಸಾವುಗಳಿಗೆ ನ್ಯಾಯ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಮಾನ ಮನಸ್ಕರ ವೇದಿಕೆಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿಕೃಷ್ಣಾರೆಡ್ಡಿ ಮಾತನಾಡಿ, ‘ಧರ್ಮಸ್ಥಳ ವ್ಯಾಪ್ತಿಯಲ್ಲಿ ನಾಪತ್ತೆ ಆಗಿರುವ ಮಹಿಳೆಯರು, ವಿದ್ಯಾರ್ಥಿನಿಯರು, ಅಸ್ವಾಭಾವಿಕ ಸಾವು, ಕೊಲೆ ಹಾಗೂ ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಸರಿಯಾಗಿ ತನಿಖೆ ನಡೆಸಬೇಕಿತ್ತು. 70 ವರ್ಷಗಳಲ್ಲಿ 150ಕ್ಕೂ ಹೆಚ್ಚು ಮಂದಿ ಅಪರಿಚಿತರು ನಾಪತ್ತೆಯಾಗಿದ್ದಾರೆ ಎಂಬ ಮಾಹಿತಿ ಇದೆ. ಪೊಲೀಸರು ಪ್ರಕರಣಗಳನ್ನು ದಾಖಲಿಸಿಕೊಂಡು, ತನಿಖೆ ನಡೆಸಿದ್ದರೆ ಆರೋಪಿಗಳನ್ನು ಪತ್ತೆ ಹಚ್ಚಬಹುದಿತ್ತು ಎಂದು ಹೇಳಿದರು.

‘ತಮ್ಮನ್ನು ಯಾರಾದರೂ ಪ್ರಶ್ನೆ ಮಾಡಿದರೆ ನೋಟಿಸ್ ನೀಡುವ ಕಾಯಿಲೆ ಧರ್ಮಸ್ಥಳದಲ್ಲಿ 1944ರಿಂದಲೂ ಇದೆ. ಕುವೆಂಪು ಅವರಿಗೆ ನೋಟಿಸ್ ನೀಡಲಾಗಿತ್ತು. ನೋಟಿಸ್ ನೀಡುವ ಪದ್ಧತಿ ಇದುವರೆಗೂ ಮುಂದುವರಿದಿದೆ’ ಎಂದು ದೂರಿದರು.

ಹೈಕೋರ್ಟ್ ವಕೀಲ ಎಸ್. ಬಾಲನ್, ಹೋರಾಟಗಾರರಾದ ಚೇತನ್ ಅಹಿಂಸಾ, ನರಸಿಂಹಮೂರ್ತಿ, ರಂಗನಾಥ್, ಎಚ್.ಎಂ. ವೆಂಕಟೇಶ್ ಹಾಗೂ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು, ವಿವಿಧ ಸಂಘಟನೆಗಳ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಚಿಟಿಕೆ ಸುದ್ದಿ

ಕಲಬೆರಕೆ: ಹಾಲಿನ 870 ಮಾದರಿ ಸಂಗ್ರಹ

ಬೆಂಗಳೂರು: ಹಾಲಿನಲ್ಲಿ ಕಲಬೆರಕೆ ಪತ್ತೆ ಸಂಬಂಧ ಆಹಾರ ಸುರಕ್ಷತೆ ಇಲಾಖೆಯ ಅಧಿಕಾರಿಗಳು ರಾಜ್ಯದಾದ್ಯಂತ 870 ಹಾಲಿನ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಪ್ರಯೋಗಾಲಯಗಳಿಗೆ ಕಳುಹಿಸಿದ್ದಾರೆ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ (ಕೆಎಂಎಫ್) ಸಹಯೋಗದಲ್ಲಿ ಇಲಾಖೆಯು ಆ.1 ಮತ್ತು 2ರಂದು ಹಾಲಿನ ಮಾದರಿಗಳ ಸಂಗ್ರಹಣೆಗೆ ವಿಶೇಷ ಆಂದೋಲನ ನಡೆಸಿದೆ. ಈ ವೇಳೆ ಕೆಎಂಎಫ್ ಹಾಗೂ ಖಾಸಗಿ ಹಾಲಿನ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಈ ಮಾದರಿಗಳ ಗುಣಮಟ್ಟ ಪರೀಕ್ಷೆಗೆ ಇಲಾಖೆ ಹಾಗೂ ಕೆಎಂಎಫ್ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ.

ಸಗಟು ಹಾಲು ಸಂಗ್ರಹ ಕೇಂದ್ರ (ಬಿಎಂಸಿ), ಹಾಲಿನ ಡೇರಿ ಹಾಗೂ ವಿತರಕರಿಂದ ಮಾದರಿಗಳನ್ನು ಸಂಗ್ರಹಿಸಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಿಂದ ಹಾಲಿನ ಮಾದರಿಗಳನ್ನು ಪಡೆಯಲಾಗಿದ್ದು, ಮೈಸೂರಿನಲ್ಲಿ ಗರಿಷ್ಠ ಮಾದರಿ (72) ಸಂಗ್ರಹಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

‘ಅತ್ಯಾಚಾರ ಪ್ರಕರಣ: ತೀರ್ಪು ಒಪ್ಪಲೇಬೇಕು’

ಪ್ರಲ್ಹಾದ ಜೋಶಿ

ಧಾರವಾಡ: ‘ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಅತ್ಯಾಚಾರ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ (ಸೆಷನ್ಸ್) ನ್ಯಾಯಾಲಯವು ನೀಡಿದ ಜೀವಾವಧಿ ಕಾರಾಗೃಹ ವಾಸದ ತೀರ್ಪು ಒಪ್ಪಲೇಬೇಕು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

‘ತಪ್ಪು ಮಾಡಿದವರು ಯಾರೇ ಆದರೂ, ಶಿಕ್ಷೆ ಅನುಭವಿಸಲೇಬೇಕು. ತನಿಖೆಯಲ್ಲಿ ಆರೋಪ ಸಾಬೀತಾದಲ್ಲಿ ಶಿಕ್ಷೆ ಆಗುತ್ತದೆ. ಅದರ ತೀರ್ಪು ಒಪ್ಪಬೇಕು. ಮುಂದಿನ ಆಯ್ಕೆ ಅವರಿಗೆ ಬಿಟ್ಟದ್ದು. ತೀರ್ಪಿನ ಬಗ್ಗೆ ನಾನು ಏನೂ ಹೇಳುವುದಿಲ್ಲ. ನ್ಯಾಯಾಲಯ ಕೂಲಂಕಷವಾಗಿ ವಿಚಾರಣೆ ಮಾಡಿ ತೀರ್ಪು ನೀಡಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಗ್ಯಾರಂಟಿ’: ಅಧಿಕಾರಿಗಳಿಗೆ ಸಂಕಷ್ಟ

‘ಸಂವಿಧಾನದಡಿ ಉತ್ತಮ ಆಡಳಿತ’ ಉಪನ್ಯಾಸದಲ್ಲಿ ನ್ಯಾ. ಬಿ.ವಿ. ನಾಗರತ್ನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಚುನಾವಣೆಗೆ ಮುನ್ನ ಹಲವು ಪ್ರಮುಖ ಘೋಷಣೆ
- ಫಲಿತಾಂಶ ಬಂದ ನಂತರವೇ ಜಾರಿ ಬಗ್ಗೆ ನಿರ್ಧಾರ
- ಅಧಿಕಾರಿಗಳಿಗೆ ಸಂಕಷ್ಟ; ನ್ಯಾ. ಬಿ.ವಿ.ನಾಗರತ್ನ

ಬೆಂಗಳೂರು: ‘ಚುನಾವಣೆಯಲ್ಲಿ ಮತ ಪಡೆಯಲು ನೀಡುವ ಭರವಸೆಗಳನ್ನು ನಂತರ ಪೂರ್ಣಗೊಳಿಸಲು ನಾಗರಿಕ ಸೇವೆಯಲ್ಲಿರುವ ಅಧಿಕಾರಿ ಸಾಕಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ’ ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಕರ್ನಾಟಕ ಶಾಖೆ ಆಯೋಜಿಸಿದ್ದ, ‘ಕೆ.ಎಸ್. ಅಯ್ಯರ್ ಸ್ಮಾರಕ ದತ್ತಿ ಉಪನ್ಯಾಸ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಚುನಾವಣೆಗೆ ಮುನ್ನ ಹಲವು ಪ್ರಮುಖ ಘೋಷಣೆಗಳನ್ನು ಮಾಡಲಾಗುತ್ತದೆ. ಆದರೆ, ಆ ಭರವಸೆಗಳನ್ನು ಹೇಗೆ ಜಾರಿ ಮಾಡಬಹುದು ಎಂಬುದನ್ನು ಫಲಿತಾಂಶ ಬಂದ ನಂತರವಷ್ಟೇ ಯೋಚಿಸಲಾಗುತ್ತದೆ. ಹೀಗೆ ಎಲ್ಲ ಸರ್ಕಾರಗಳೂ ಮಾಡುತ್ತವೆ ಎಂದೇನೂ ಅಲ್ಲ. ಬಹುತೇಕ ಸಂದರ್ಭದಲ್ಲಿ ಅಧಿಕಾರ ಪಡೆದುಕೊಳ್ಳುವ ಉತ್ಸಾಹದಲ್ಲಿ, ವಾಸ್ತವದಲ್ಲಿ ನೀಡಲು ಸಾಧ್ಯವಿಲ್ಲದ ‘ಗ್ಯಾರಂಟಿ’ಗಳನ್ನು ಪ್ರಸ್ತಾಪಿಸಲಾಗುತ್ತದೆ. ಅದರಿಂದ ಅಧಿಕಾರಿಗಳು ಸಂಕಷ್ಟಕ್ಕೆ ಒಳಗಾಗುತ್ತಾರೆ. ಆದ್ದರಿಂದ ನಾಗರಿಕ ಸೇವೆಯಲ್ಲಿರುವ ಅಧಿಕಾರಿಗೆ ಕಠಿಣವೆನಿಸಿದರೂ ಉತ್ತಮ ಆಡಳಿತಕ್ಕೆ ಅನುಕೂಲಕರವಾದ ಸಲಹೆಗಳನ್ನು ನೀಡಬೇಕು’ ಎಂದರು.

‘ಸಂವಿಧಾನದಡಿ ಉತ್ತಮ ಆಡಳಿತ’ದ ಬಗ್ಗೆ ಮಾತನಾಡಿದ ಅವರು, ರಾಜ್ಯ ಸರ್ಕಾರಗಳು ಪ್ರಕಟಿಸುವ ಯೋಜನೆಗಳು ವಾಸ್ತವದಲ್ಲಿ ಅನುಷ್ಠಾನ ಮಾಡುವಂತಹವಾಗಿರಬೇಕು. ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಎಲ್ಲರಿಗೂ ಸಮನಾದ ಸೌಲಭ್ಯವನ್ನು ಕಲ್ಪಿಸುವುದು ಉತ್ತಮ ಆಡಳಿತದ ಮೂಲ ಆಶಯ’ ಎಂದರು.

‘ಸಚಿವರಿಗೆ ಬೇಕಿರುವಂತೆ ಸಲಹೆ ನೀಡದೆ, ಆಡಳಿತಕ್ಕೆ ಅನುವಾಗುವ ಸಲಹೆಯನ್ನು ನೀಡುವ ಕಾರ್ಯದರ್ಶಿ ವರ್ಗಾವಣೆ ಶಿಕ್ಷೆಯನ್ನು ಅನುಭವಿಸಬೇಕಾದ ಸ್ಥಿತಿ ಇಂದಿದೆ. ಹಲವು ಸಚಿವರ ಬರಬಹುದು, ಹೋಗಬಹುದು. ಆದರೆ, ನಾಗರಿಕ ಸೇವೆಯಲ್ಲಿರುವವರು ಸ್ಥಿರವಾಗಿರುತ್ತಾರೆ’ ಎಂದು ಹೇಳಿದರು.

‘ಸರ್ಕಾರದಲ್ಲಿರುವ ಅಧಿಕಾರಿಗಳು ದಿನಕ್ಕೆ ಹಲವು ‘ಫೈಲ್’ಗಳನ್ನು ನೋಡುತ್ತಾರೆ. ನಿತ್ಯದ ಕಾರ್ಯದಲ್ಲಿ ಅದು ಒಂದು ‘ಫೈಲ್’ ಎಂದಷ್ಟೇ ಭಾವಿಸುತ್ತಾರೆ. ಆದರೆ, ಒಂದು ‘ಫೈಲ್’ ನಾಗರಿಕರೊಬ್ಬರ ‘ಲೈಫ್’ ಆಗಿರುತ್ತದೆ. ಆದ್ದರಿಂದ ಪ್ರತಿಯೊಂದು ಕಡತವನ್ನೂ ಜನರ ಭವಿಷ್ಯ– ಜೀವನ ಎಂದೇ ಭಾವಿಸಿ ಕೆಲಸ ಮಾಡಬೇಕು’ ಎಂದು ಹೇಳಿದರು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಕರ್ನಾಟಕ ಶಾಖೆಯ ಅಧ್ಯಕ್ಷ ಟಿ.ಎಂ. ವಿಜಯಭಾಸ್ಕರ್, ಗೌರವ ಕಾರ್ಯದರ್ಶಿ ಎಸ್. ರಾಮನಾಥನ್, ಅಭಿವೃದ್ಧಿ ಆಯುಕ್ತೆ ಉಮಾ ಮಹದೇವನ್ ಉಪಸ್ಥಿತರಿದ್ದರು.

ಉಪನ್ಯಾಸ ಕಾರ್ಯಕ್ರಮದಲ್ಲಿ ಶಾಲಿನಿ ರಜನೀಶ್, ಬಿ.ವಿ. ನಾಗರತ್ನ, ಎಸ್. ರಾಮನಾಥನ್ ಮತ್ತು ಉಮಾ ಮಹಾದೇವನ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಪಂಚಾಯತ್ ಪತಿ’ ಬದಲಾಗಬೇಕು’

‘ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಪರವಾಗಿ ಅವರ ಪತಿ ಅಧಿಕಾರವನ್ನು ನಡೆಸುತ್ತಿದ್ದು, ‘ಪಂಚಾಯತ್ ಪತಿ’ಗಳಾಗಿದ್ದಾರೆ. ಇಂತಹ ಸ್ಥಿತಿ ದೂರಾಗಬೇಕಿದೆ. ಕಾನೂನಿನಲ್ಲಾಗಿರುವ ಬದಲಾವಣೆ ಸ್ಥಳೀಯ ಮಟ್ಟದಲ್ಲೂ ವಾಸ್ತವಕ್ಕೆ ಬರಬೇಕು. ಮಹಿಳೆಯರು ಅಧಿಕಾರ ನಡೆಸಬೇಕು’ ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹೇಳಿದರು.

‘ಸಂವಿಧಾನಕ್ಕೆ ತಿದ್ದುಪಡಿ ತಂದು ಜಾರಿಯಾಗಿರುವ ಪಂಚಾಯತ್ ರಾಜ್‌ನಿಂದಾಗಿ, ಅಧಿಕಾರ ವಿಕೇಂದ್ರೀಕರಣಗೊಂಡು ನಾಗರಿಕರಿಗೆ ಆಡಳಿತ ಹತ್ತಿರವಾಗುತ್ತಿದೆ. ಇದು ಉತ್ತಮ ಆಡಳಿತಕ್ಕೆ ಒಂದು ಮೈಲುಗಲ್ಲು. ಇದು ಸ್ಥಳೀಯ ಜನರ ಭಾಗವಹಿಸುವಿಕೆಗೆ ದಾರಿ ಮಾಡಿಕೊಟ್ಟಿದ್ದು, ಕ್ಷಿಪ್ರ ಕಾಮಗಾರಿಗಳನ್ನು ನಡೆಸಲು ಅವಕಾಶ ಕಲ್ಪಿಸಿದೆ. ಆದರೆ ಇವೆಲ್ಲ ಅವಕಾಶಗಳು ಕಾಗದದಲ್ಲಿ ಲಭ್ಯವಿದ್ದರೂ, ಸ್ಥಳೀಯ ಸಂಸ್ಥೆಗಳ ವಾಸ್ತವ ಚಿತ್ರಣವೇ ಬೇರೆಯದ್ದಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ಶೇ 50ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಆದರೆ, ಮಹಿಳೆಯ ಪತಿ ಅಧಿಕಾರವನ್ನು ನಡೆಸುತ್ತಿದ್ದಾರೆ. ಬಿಹಾರದಲ್ಲಿ ಪತ್ನಿ ಬದಲಾಗಿ ಪತಿಯೇ ಅಧಿಕಾರ ನಡೆಸಿದರು’ ಎಂದರು.

ಕಲ್ಲು ಬಂಡೆಯಂತೆ ನಿಂತ ಸಂತ್ರಸ್ತೆ: ಎಸ್‌ಐಟಿ

ಪೆನ್‌ಡ್ರೈವ್ ಹಂಚಿಕೆ: ಶೀಘ್ರದಲ್ಲೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಾಚಾರಕ್ಕೆ ಸಂಬಂಧಿಸಿದ ಒಂದು ಪ್ರಕರಣದಲ್ಲಿ ಅಪರಾಧಿ ಪ್ರಜ್ವಲ್ ರೇವಣ್ಣನಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ. ತನಿಖಾ ಹಂತದಲ್ಲಿ ಸಂತ್ರಸ್ತೆ ಕಲ್ಲು ಬಂಡೆಯಂತೆ ನಿಂತು ಸಹಕಾರ ನೀಡಿದ್ದರು’ ಎಂದು ವಿಶೇಷ ತನಿಖಾ ದಳದ ಮುಖ್ಯಸ್ಥ, ಎಡಿಜಿಪಿ ಬಿ.ಕೆ.ಸಿಂಗ್ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅತ್ಯಾಚಾರ ಹಾಗೂ ಪೆನ್‌ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಐದು ಪ್ರಕರಣಗಳ ತನಿಖೆ ನಡೆಸುವಂತೆ ರಾಜ್ಯ ಸರ್ಕಾರವು ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ಆದೇಶಿಸಿತ್ತು. ಒಂದು ಪ್ರಕರಣದಲ್ಲಿ ಸಂತ್ರಸ್ತೆ ಎಲ್ಲಿಯೂ ತನ್ನ ಹೇಳಿಕೆಯನ್ನು ಬದಲಿಸಲಿಲ್ಲ. ಸಂತ್ರಸ್ತೆಯನ್ನು ಮೂರು ದಿನ ವಿಚಾರಣೆ ನಡೆಸಲಾಯಿತು. ಅಪರಾಧಿ ಪ್ರಜ್ವಲ್ ರೇವಣ್ಣ ಪರ ವಕೀಲರು ಎರಡು ದಿನ ಎಂಟು ತಾಸು ಪ್ರಶ್ನೆ ಕೇಳಿದರು. ಸಂತ್ರಸ್ತೆ ಆತಂಕಕ್ಕೆ ಒಳಗಾಗದೇ ಧೈರ್ಯದಿಂದ ನಡೆದ ಘಟನೆಯನ್ನು ನ್ಯಾಯಾಧೀಶರ ಎದುರು ವಿವರಿಸಿದ್ದರು’ ಎಂದು ಹೇಳಿದರು.

‘ಸಂತ್ರಸ್ತೆಯು ಆರ್ಥಿಕ ಹಾಗೂ ಸಾಮಾಜಿಕವಾಗಿ ಬಲಾಢ್ಯರಲ್ಲ. ಅಪರಾಧಿ ಆರ್ಥಿಕವಾಗಿ ಬಲಾಢ್ಯನಿದ್ದ. ರಾಜಕೀಯ ಪ್ರಭಾವ ಇತ್ತು. ಈ ವ್ಯತ್ಯಾಸ ವಿದ್ದರೂ ನ್ಯಾಯ ಬೇಕೇಬೇಕೆಂದು ಒಂದು ವರ್ಷದಿಂದ ಪ್ರಾಸಿಕ್ಯೂಷನ್ ಜತೆಗೆ ಆಕೆ ಧೈರ್ಯದಿಂದ ನಿಂತಿದ್ದರು. ತೀರ್ಪು ವಿಳಂಬವಾಗಿ ಬರುವಂತೆ ಮಾಡಲು ಕೆಲವರು ಷಡ್ಯಂತ್ರ ಮಾಡಿದ್ದರು’ ಎಂದು ಹೇಳಿದರು.

‘ಸಂತ್ರಸ್ತೆಗೆ ನ್ಯಾಯ ಕೊಡಿಸಿದ ತೃಪ್ತಿ ತನಿಖಾ ತಂಡಕ್ಕಿದೆ. ಪ್ರಕರಣದಲ್ಲಿ ಮಹಿಳಾ ಅಧಿಕಾರಿಗಳಾದ ಸೀಮಾ ಲಾಟ್ಕರ್, ಸುಮನ್ ಡಿ. ಪನ್ನೇಕರ್ ಹಾಗೂ ಬೆಂಗಳೂರು ಪೂರ್ವ ವಿಭಾಗದ ಮಹಿಳಾ ಠಾಣೆಯ ಇನ್‌ಸ್ಪೆಕ್ಟರ್ ಎನ್. ಶೋಭಾ ಅವರು ಸಾಕಷ್ಟು ಪರಿಶ್ರಮದೊಂದಿಗೆ ತನಿಖೆ ನಡೆಸಿದ್ದರು’ ಎಂದರು.

‘ಸಿಐಡಿ ಸೈಬರ್ ಅಪರಾಧ ಠಾಣೆಯಲ್ಲಿ ಮೂರು, ಹಾಸನ ಜಿಲ್ಲೆಯ ಹೊಳೆನರಸೀಪುರ ಹಾಗೂ ಮೈಸೂರಿನ ಕೆ.ಆರ್.ನಗರ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದ್ದವು. ಒಂದು ಪ್ರಕರಣದಲ್ಲಿ ತೀರ್ಪು ಬಂದಿದೆ. ಉಳಿದ ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ’ ಎಂದು ಹೇಳಿದರು.

‘ಜನಪ್ರತಿನಿಧಿಗಳ ವಿರುದ್ಧ ದಾಖಲಾಗುವ ಪ್ರಕರಣಗಳನ್ನು ತ್ವರಿತವಾಗಿ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ತ್ವರಿತವಾಗಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಯಿತು’ ಎಂದರು.

ತನಿಖಾ ತಂಡದಲ್ಲಿದ್ದ ಐಪಿಎಸ್ ಅಧಿಕಾರಿ ಸುಮನ್ ಡಿ. ಪನ್ನೇಕರ್ ಮಾತನಾಡಿ, ‘ಒತ್ತಡ ಬಂದಿದ್ದರೆ ಕೆಳಹಂತದವರೆಗೂ ಬರಬೇಕಿತ್ತು. ಅಂತಹ ಸಂದರ್ಭ ಬಂದಿರಲಿಲ್ಲ. ಸಾಕ್ಷ್ಯಾಧಾರ ಹಾಗೂ ಹೇಳಿಕೆಗಳನ್ನು ಆಧರಿಸಿ ತನಿಖೆ ನಡೆಸಿದ್ದೆವು’ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅಶೋಕ್ ಎನ್. ನಾಯಕ್ ಹಾಗೂ ತನಿಖಾ ತಂಡದ ಅಧಿಕಾರಿಗಳು ಹಾಜರಿದ್ದರು.

> ಸಂತ್ರಸ್ತೆಯ ಹೇಳಿಕೆ ದೃಢೀಕರಿಸಲು ಜೈವಿಕ, ತಾಂತ್ರಿಕ, ಡಿಜಿಟಲ್, ಮೊಬೈಲ್ ಹಾಗೂ ವೈಜ್ಞಾನಿಕ ಪುರಾವೆಗಳನ್ನು ಸಂಗ್ರಹಿಸುವ ಮೂಲಕ ತನಿಖೆ ನಡೆಸಲಾಗಿತ್ತು
>
> **ಬಿ.ಕೆ.ಸಿಂಗ್,** ಮುಖ್ಯಸ್ಥ, ಎಸ್‌ಐಟಿ

> ವೈಜ್ಞಾನಿಕ ವಿಧಾನ ಅನುಸರಿಸಿ ಪ್ರಕರಣದ ತನಿಖೆ ನಡೆಸಿದ್ದರಿಂದಲೇ ಸಂತ್ರಸ್ತೆಗೆ ನ್ಯಾಯ ಕೊಡಿಸಲು ಕೊಡಲು ಸಾಧ್ಯವಾಯಿತು
>
> **ಸುಮನ್ ಡಿ. ಪನ್ನೇಕರ್**
> ಎಸ್‌ಐಟಿ ಅಧಿಕಾರಿ

ಬೆಂಗಳೂರಿನಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಶೋಭಾ, ಬಿ.ಕೆ. ಸಿಂಗ್, ಸುಮನ್ ಡಿ. ಪನ್ನೇಕರ್, ಅಶೋಕ ನಾಯಕ್ ಉಪಸ್ಥಿತರಿದ್ದರು.

ಇನ್ನೂ ದೂರು ಕೊಡಲು ಅವಕಾಶ

‘ಪ್ರಜ್ವಲ್ ರೇವಣ್ಣನಿಂದ ಇನ್ನೂ ಹಲವರು ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎನ್ನುವ ಮಾಹಿತಿ ತನಿಖಾ ತಂಡಕ್ಕೆ ಸಿಕ್ಕಿದೆ. ಅಂತಹವರು ದೂರು ನೀಡಿದರೆ ತನಿಖೆ ನಡೆಸುತ್ತೇವೆ’ ಎಂದು ಎಸ್‌ಐಟಿ ಅಧಿಕಾರಿಗಳು ಕೋರಿದ್ದಾರೆ.

100ಕ್ಕೂ ಹೆಚ್ಚು ಪೆನ್‌ಡ್ರೈವ್ ಖರೀದಿ

‘ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ತನಿಖೆ ಬಹುತೇಕ ಮುಕ್ತಾಯವಾಗಿದೆ. 15 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು’ ಎಂದು ಬಿ.ಕೆ. ಸಿಂಗ್ ಹೇಳಿದರು.

‘ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ತನಿಖೆಯನ್ನೂ ಎಸ್‌ಐಟಿಯೇ ನಡೆಸುತ್ತಿದೆ. ಆ ಪ್ರಕರಣದಲ್ಲೂ ಶೀಘ್ರದಲ್ಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು. ಸಂತ್ರಸ್ತೆಯರ ವಿಡಿಯೊ ಹಂಚಿಕೆ ಮಾಡಲು 100ಕ್ಕೂ ಹೆಚ್ಚು ಪೆನ್‌ಡ್ರೈವ್ ಖರೀದಿ ಮಾಡಲಾಗಿದೆ. ಹೊಸ ಲ್ಯಾಪ್‌ಟಾಪ್ ಸಹ ಖರೀದಿಸಲಾಗಿದೆ. ಎಲ್ಲದಕ್ಕೂ ಸಾಕ್ಷ್ಯಾಧಾರಗಳು ಸಿಕ್ಕಿವೆ’ ಎಂದು ಬಿ.ಕೆ.ಸಿಂಗ್ ಹೇಳಿದರು.

ಸುದ್ದಿ 2 ನಿಮಿಷ

‘ಕೊಲ್ಹಾಪುರಿ ಚಪ್ಪಲಿ: ಹೋರಾಟದ ಹಕ್ಕು ನಮ್ಮದು ಮಾತ್ರ’

ಬೆಂಗಳೂರು: ‘ಇಟಲಿಯ ‘ಪ್ರಾಡಾ’ ಅಥವಾ ಇನ್ಯಾವುದೇ ಕಂಪನಿ ಜತೆಗೆ ಕೊಲ್ಹಾಪುರಿ ಚಪ್ಪಲಿಗಳ ವಿನ್ಯಾಸದ ವಿಚಾರದಲ್ಲಿ ವ್ಯವಹಾರ, ಸಂವಹನ ನಡೆಸುವ ಹಕ್ಕು ಕರ್ನಾಟಕದ ಲಿಡ್ಕರ್ ಮತ್ತು ಮಹಾರಾಷ್ಟ್ರದ ಲಿಡ್ಕಾಂ ಸಂಸ್ಥೆಗೆ ಮಾತ್ರ ಇದೆ’ ಎಂದು ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ತಿಳಿಸಿದೆ.

ಕೊಲ್ಹಾಪುರಿ ಚಪ್ಪಲಿಗಳ ವಿನ್ಯಾಸಕ್ಕೆ ಕರ್ನಾಟಕದ ಲಿಡ್ಕರ್ ಮತ್ತು ಮಹಾರಾಷ್ಟ್ರದ ಲಿಡ್ಕಾಂ ಸಂಸ್ಥೆಗಳು ಜಂಟಿಯಾಗಿ ಭೌಗೋಳಿಕ ಗುರುತ್ವ (ಜಿಯಾಗ್ರಾಫಿಕಲ್ ಇಂಡಿಕೇಷನ್–ಜಿಐ) ನೋಂದಣಿ ಹೊಂದಿವೆ. ಕೊಲ್ಹಾಪುರಿ ಚಪ್ಪಲಿಗಳನ್ನೇ ಹೋಲುವಂತಹ ‘ಸಮ್ಮರ್ ಸ್ಯಾಂಡಲ್’ಗಳನ್ನು ಪ್ರಾಡಾ ಈಚೆಗೆ ಪ್ರದರ್ಶಿಸಿತ್ತು.

ಈ ಬಗ್ಗೆ ಜಂಟಿ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಲಿಡ್ಕರ್ ಮತ್ತು ಲಿಡ್ಕಾಂ, ‘ಕೊಲ್ಹಾಪುರಿ ಚಪ್ಪಲಿಗಳ ವಿಚಾರದಲ್ಲಿ ಕಾನೂನು ಹೋರಾಟ ನಡೆಸುವ ಮತ್ತು ಪ್ರಾಡಾ ಜತೆಗೆ ಮಾತುಕತೆ ನಡೆಸುವ ಹಕ್ಕು ನಮಗೆ ಮಾತ್ರ ಇವೆ. ಇದರಲ್ಲಿ ಅನ್ಯ ಸಂಸ್ಥೆಗಳು ಅಥವಾ ವ್ಯಕ್ತಿಗಳು ಭಾಗಿಯಾಗುವ ಅವಶ್ಯ ಇಲ್ಲ’ ಎಂದು ಹೇಳಿವೆ.



5ರಂದು ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ: ಬಿವೈವಿ

ಬೆಂಗಳೂರು: ‘ಮತ ಕಳ್ಳತನದ ಆರೋಪ ಮಾಡಿ ಚುನಾವಣಾ ಆಯೋಗಕ್ಕೆ ಮಸಿ ಬಳಿಯಲು ಯತ್ನಿಸುತ್ತಿರುವ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶದ ಜನರ ವಿಶ್ವಾಸವನ್ನು ಗಳಿಸುವಲ್ಲಿ ರಾಹುಲ್ ವಿಫಲರಾಗಿದ್ದಾರೆ. ಸೋಲಿನ ಅವಮಾನದಿಂದ ಬಳಲಿ, ಸಾಂವಿಧಾನಿಕ ಸಂಸ್ಥೆಗಳ ಮೇಲೆ ಆಧಾರರಹಿತ ಆರೋಪ ಮಾಡುತ್ತಿದ್ದಾರೆ. ಇದನ್ನು ಖಂಡಿಸಿ ವಿಧಾನಸೌಧ ಆವರಣದಲ್ಲಿರುವ ಗಾಂಧೀಜಿ ಪ್ರತಿಮೆ ಬಳಿ ಆಗಸ್ಟ್ 5ರಂದು ಪ್ರತಿಭಟನೆ ನಡೆಸುತ್ತೇವೆ’ ಎಂದರು.

‘ಇಂದಿರಾ ಗಾಂಧಿ ಅವರು ತುರ್ತು ಪರಿಸ್ಥಿತಿ ಹೇರುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದರು. ರಾಹುಲ್ ಅವರು ಚುನಾವಣಾ ಆಯೋಗದ ಮೇಲೆ ಆರೋಪ ಹೊರಿಸುವ ಮೂಲಕ ದೇಶದ ಜನರಿಗೆ, ಆಯೋಗಕ್ಕೆ ಅವಮಾನ ಮಾಡುತ್ತಿದ್ದಾರೆ. ಈ ಆರೋಪದ ಹಿಂದೆ ಇರುವ ಕಾಂಗ್ರೆಸ್ ಸಂಚನ್ನು ಜನರಿಗೆ ತಿಳಿಸುತ್ತೇವೆ’ ಎಂದು ಹೇಳಿದರು.

‘ಮತಗಳ್ಳತನ ಆಗಿದೆ ಎಂಬುದಕ್ಕೆ ತಮ್ಮ ಬಳಿ ಪುರಾವೆ ಇದೆ ಎಂದು ರಾಹುಲ್ ಗಾಂಧಿ ಆದಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳುತ್ತಿದ್ದಾರೆ. ಅವರ ಬಳಿ ಪುರಾವೆ ಇದ್ದದ್ದೇ ಆದರೆ, ನ್ಯಾಯಾಲಯಕ್ಕೆ ಹೋಗಲಿ. ಅದರ ಬದಲಿಗೆ ಜನರಲ್ಲಿ ಗೊಂದಲ ಮೂಡಿಸುವ ಕೆಲಸ ಏಕೆ ಮಾಡಬೇಕು?’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿ ಆಗಿರುವುದು, ದೇಶ ಅಭಿವೃದ್ಧಿ ಹಾದಿಯಲ್ಲಿರುವುದನ್ನು ಸಹಿಸಿಕೊಳ್ಳಲು ರಾಹುಲ್ ಗಾಂಧಿ ಅವರಿಗೆ ಸಾಧ್ಯವಾಗುತ್ತಿಲ್ಲ, ಹೀಗಾಗಿ, ಬಿಜೆಪಿ, ಆಯೋಗದ ವಿರುದ್ಧ ಆರೋಪ ಮಾಡುತ್ತಿದ್ದಾರೆ’ ಎಂದರು.

‘ಮಹದೇವಪುರ, ರಾಜಾಜಿನಗರ ವ್ಯಾಪ್ತಿಯಲ್ಲಿ ಅಕ್ರಮ ನಡೆದಿದೆ ಎನ್ನುತ್ತಿದ್ದಾರೆ. ಚುನಾವಣೆಯಲ್ಲಿ ನಿಮ್ಮದೇ ಅಧಿಕಾರಿಗಳು ಇದ್ದರಲ್ಲವೇ? ಅವರು ನಿಮ್ಮ ಮಾತು ಕೇಳಲಿಲ್ಲವೇ? ಎಂದು ಹೇಳಿದರು.

ಬಿಜೆಪಿ ನಾಯಕರ ಮೌನವೇಕೆ?: ಡಿಕೆಶಿ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ನವದೆಹಲಿ: ಪ್ರಜ್ವಲ್ ರೇವಣ್ಣ ಪ್ರಕರಣದ ಬಗ್ಗೆ ಬಿಜೆಪಿ ನಾಯಕರು ಮೌನ ವಹಿಸಿರುವುದು ಏಕೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಈ ಪ್ರಕರಣದ ಬಗ್ಗೆ ಬಿ.ವೈ. ವಿಜಯೇಂದ್ರ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಏಕೆ ಮಾತನಾಡುತ್ತಿಲ್ಲ. ಹೆಣ್ಣು ಮಕ್ಕಳ ರಕ್ಷಕ ಸಿ.ಟಿ. ರವಿ ಸುಮ್ಮನಿರುವುದು ಏಕೆ’ ಎಂದು ಕೇಳಿದರು.

‘ನನ್ನ ಪ್ರತಿಕ್ರಿಯೆ ಕೇಳುವುದಕ್ಕಿಂತ ಮೈತ್ರಿ ನಾಯಕರನ್ನೇ ಕೇಳಿ. ಅವರಿಗೆ ಸೂಕ್ತ ಉತ್ತರ ಕೊಡುವ ಶಕ್ತಿ ಹಾಗೂ ಸಾಮರ್ಥ್ಯ ಇದೆ’ ಎಂದು ಅವರು ವ್ಯಂಗ್ಯವಾಗಿ ಹೇಳಿದರು.

‘20 ದಿನದೊಳಗೆ ಒಳ ಮೀಸಲಾತಿ ಜಾರಿ’

ಪ್ರಜಾವಾಣಿ ವಾರ್ತೆ

ಆಂಜನೇಯ

ಚಿತ್ರದುರ್ಗ: ‘ಒಳ ಮೀಸಲಾತಿ ಜಾರಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರು ಆಗಸ್ಟ್ 4ರಂದು (ಸೋಮವಾರ) ಅಂತಿಮ ವರದಿ ಸಲ್ಲಿಸಲಿದ್ದಾರೆ. ವರದಿ ಸ್ವೀಕರಿಸಿದ 20 ದಿನದೊಳಗಾಗಿ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗುವ ಭರವಸೆ ಇದೆ. ಈ ಕುರಿತು ಮುಖ್ಯಮಂತ್ರಿ, ಸಮಾಜ ಕಲ್ಯಾಣ ಇಲಾಖೆ ಸಚಿವರು ಸ್ಪಷ್ಟಪಡಿಸಿದ್ದಾರೆ’ ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಶನಿವಾರ ಹೇಳಿದರು.

‘ಒಳಮೀಸಲಾತಿ ಜಾರಿಯಲ್ಲಿ ಸರ್ಕಾರದ ಕಡೆಯಿಂದ ವಿಳಂಬವಾಗಿಲ್ಲ. ಪರಿಶಿಷ್ಟ ಜಾತಿಯಲ್ಲಿ ಹಿಂದಿನಿಂದಲೂ ಇದ್ದ ಆದಿಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸೇರಿದಂತೆ ಕೆಲವು ಗೊಂದಲಗಳು ಶಾಶ್ವತವಾಗಿ ಬಗೆಹರಿದಿವೆ. ದೇಶದಲ್ಲೇ ಮೊದಲ ಬಾರಿ ಆ್ಯಪ್ ಮೂಲಕ ಸಮೀಕ್ಷೆ ನಡೆಸಲಾಗಿದೆ. ಹಿಂದುಳಿದಿರುವಿಕೆ ಬಗ್ಗೆ ಆಯೋಗ ವೈಜ್ಞಾನಿಕ ವಿಶ್ಲೇಷಣೆ ನಡೆಸಿ ವರದಿ ನೀಡುತ್ತಿದೆ. ಒಳ ಮೀಸಲಾತಿ ಜಾರಿಗಾಗಿ ದಿನಗಣನೆ ಆರಂಭವಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮೊದಲು ಒಳ ಮೀಸಲಾತಿ ಜಾರಿ ಅಧಿಕಾರ ರಾಜ್ಯಗಳಿಗೆ ಇರಲಿಲ್ಲ. ಈಗ ಸುಪ್ರೀಂ ಕೋರ್ಟ್ ಜಾರಿ ಅಧಿಕಾರವನ್ನು ರಾಜ್ಯಗಳಿಗೆ ನೀಡಿದೆ. ಸಂಪೂರ್ಣ ದತ್ತಾಂಶದ ಆಧಾರದ ಮೇಲೆ ಯಾವುದೇ ಗೊಂದಲಗಳಿಗೆ ಆಸ್ಪದವಿಲ್ಲದಂತೆ ನಮ್ಮ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಲಿದೆ’ ಎಂದರು.

‘ಮಾದಿಗರು ಒಳಮೀಸಲಾತಿಗಾಗಿ ಮೂರೂವರೆ ದಶಕ ಹೋರಾಟ ನಡೆಸಿದ್ದಾರೆ. ಕಾಂಗ್ರೆಸ್ ಸರ್ಕಾರ ಆಯೋಗ ರಚಿಸಿ, ನೇಮಕಾತಿ ಸ್ಥಗಿತಗೊಳಿಸಿದ ನಂತರ ಹೋರಾಟಕ್ಕೆ ತೆರೆ ಬಿದ್ದಿದೆ. ಇಷ್ಟಾದರೂ ಬಿಜೆಪಿ ಮುಖಂಡರು ವಿನಾಕಾರಣ ಪ್ರತಿಭಟನೆ ನಡೆಸಿ ಮುಗ್ಧ ಮಾದಿಗರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ’ ಎಂದರು.

‘ಮೊದಲ ಸಚಿವ ಸಂಪುಟದಲ್ಲೇ ಒಳಮೀಸಲಾತಿ ಜಾರಿಗೊಳಿಸುವುದಾಗಿ ಕಾಂಗ್ರೆಸ್ ಸರ್ಕಾರ ಹೇಳಿತ್ತು ಎಂಬುದೇ ತಪ್ಪು. ಈ ವಿಚಾರದಲ್ಲಿ ಮಾಜಿ ಸಚಿವ ಎ.ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದರು.

ಅಳ್ವೆಕೋಡಿ: ಮತ್ತೊಬ್ಬ ಮೀನುಗಾರನ ಶವ ಪತ್ತೆ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಅಳ್ವೆಕೋಡಿಯಲ್ಲಿ ಜುಲೈ 30ರಂದು ಮೀನುಗಾರಿಕೆಗೆ ತೆರಳಿದ್ದ ದೋಣಿ ಮುಗುಚಿ ಕಣ್ಮರೆಯಾದ ನಾಲ್ವರ ಮೀನುಗಾರರ ಪೈಕಿ ಗಣೇಶ ಮಂಜುನಾಥ ಮೊಗೇರ ಎಂಬುವರ ಶವ ಶನಿವಾರ ಕುಂದಾಪುರದ ಮರವಂತೆ ಸಮುದ್ರದಲ್ಲಿ ಪತ್ತೆಯಾಗಿದೆ.

ರಾಮಕೃಷ್ಣ ಮೊಗೇರ ಎಂಬುವರ ಶವ, ಘಟನೆ ನಡೆದ ಮರುದಿನವೇ ಪತ್ತೆಯಾಗಿತ್ತು. ಈವರೆಗೆ ಇಬ್ಬರ ಶವ ಪತ್ತೆಯಾಗಿದ್ದು, ಇನ್ನಿಬ್ಬರಿಗಾಗಿ ಹುಡುಕಾಟ ನಡೆದಿದೆ.

‘ಪ್ರಜ್ವಲ್ ದುಷ್ಕೃತ್ಯಕ್ಕೆ ವಿಡಿಯೊವೇ ಅಸ್ತ್ರ’

ಒಂದನೇ ಪುಟದಿಂದ...

ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್, ‘ಸಂತ್ರಸ್ತೆಗೆ ಆರೋಪಿಯ ವಯಸ್ಸಿನ ಮಗ ಇದ್ದಾನೆ. ದುಷ್ಕೃತ್ಯ ಕೇವಲ ದೈಹಿಕ ಹಿಂಸೆ ಮಾತ್ರವಲ್ಲ ಮಾನಸಿಕ ಹಿಂಸೆ ಕೂಡಾ ಆಗಿದೆ. ವಿಡಿಯೊ ಬಹಿರಂಗವಾಗಿದ್ದಾಗ ಮಹಿಳೆ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆ ಮಾಡಿದ್ದರು’ ಎಂಬ ಅಂಶವನ್ನು ಪುನರುಚ್ಚರಿಸಿದರು.

‘ಆರೋಪಿ ಸಾಮಾನ್ಯ ವ್ಯಕ್ತಿ ಅಲ್ಲ. ಸಂಸದ ಆಗಿದ್ದವನು, ಕಾನೂನು ರಚನೆಯ ಭಾಗವಾಗಿದ್ದವನು. ಇಂತಹ ವ್ಯಕ್ತಿ ಕಾನೂನನ್ನು ಕೈಗೆ ತೆಗೆದುಕೊಂಡಿದ್ದಾನೆ. ಇದೇ ಆರೋಪಿಯ ವಿರುದ್ಧ ಇದೇ ರೀತಿಯ ಇನ್ನೂ ಹಲವು ಅತ್ಯಾಚಾರ ಪ್ರಕರಣಗಳು ಬಾಕಿ ಇವೆ. ಬೇರೆ ಬೇರೆ ಮಹಿಳೆಯರ ಜೊತೆಗಿನ ವಿಡಿಯೊ ಕೂಡಾ ರೆಕಾರ್ಡ್ ಮಾಡಿಕೊಂಡಿದ್ದಾನೆ. ಈ ವಿಡಿಯೊಗಳನ್ನು ಜನರು ವೀಕ್ಷಿಸಿದ್ದಾರೆ. ಇಂತಹ ವ್ಯಕ್ತಿಗೆ ಯಾವುದೇ ದಯೆ ತೋರಿಸಬಾರದು. ತನ್ನ ಮೇಲೆ ಆದ ಅನ್ಯಾಯವನ್ನು ಹೇಳಿಕೊಳ್ಳಲಾಗದ ಅಸಹಾಯಕ ಮಹಿಳೆಯೊಬ್ಬರ ಮೇಲೆ ಈತ ಘೋರ ಅತ್ಯಾಚಾರ ಎಸಗಿದ್ದಾನೆ’ ಎಂದರು.

‘ಪ್ರಕರಣ ಹೊರಗೆ ಬಂದ ನಂತರ ಆರೋಪಿ ಕುಟುಂಬವು ಮಹಿಳೆಯನ್ನು ಅಪಹರಿಸಿತ್ತು. ಸಾಕ್ಷಿಯನ್ನು ಹೆದರಿಸುವ ಮತ್ತು ಸಾಕ್ಷ್ಯಗಳನ್ನು ತಿರುಚುವ ಯತ್ನ ಮಾಡಿತ್ತು. ಮಾಧ್ಯಮಗಳಿಗೆ ಸುಳ್ಳು ಹೇಳಿಕೆ ಕೊಡಿಸುವ ಕೆಲಸವೂ ನಡೆದಿತ್ತು. ಇಂತಹ ಹೀನಾಯ ಕೃತ್ಯ ಎಸಗಿದ್ದರೂ ಆರೋಪಿಗೆ ಯಾವುದೇ ಪಶ್ಚಾತ್ತಾಪ ಇಲ್ಲ. ಸಿಕ್ಕ ಸಿಕ್ಕವರ ಮೇಲೆಲ್ಲಾ ಆರೋಪ ಹೊರಿಸುವ ಕೆಲಸ ಮಾಡಿದ್ದಾನೆ. ಕೋರ್ಟ್ ವಿಚಾರಣೆಯನ್ನು ವಿಳಂಬ ಮಾಡುವ ಪ್ರಯತ್ನವನ್ನೂ ನಡೆಸಿದ್ದಾನೆ. ಆದ್ದರಿಂದ, ಇಂತಹ ವ್ಯಕ್ತಿಗೆ ಕನಿಕರ ತೋರಿಸಬಾರದು’ ಎಂದು ಪ್ರತಿಪಾದಿಸಿದರು.

ಪ್ರಕರಣ: ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಜ್ವಲ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಎಸ್‌ಐಟಿ ಅಧಿಕಾರಿಗಳು 123 ಸಾಕ್ಷ್ಯಗಳನ್ನು ಸಂಗ್ರಹಿಸಿ, ಸುಮಾರು 2 ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು 2024ರ ವರ್ಷಾಂತ್ಯದಲ್ಲಿ ಜನಪ್ರತಿನಿಧಿಗಳ ವಿಶೇಷ (ಸೆಷನ್ಸ್) ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಪ್ರಜ್ವಲ್ ವಿರುದ್ಧ 2025ರ ಏಪ್ರಿಲ್ 3ರಂದು ದೋಷಾರೋಪ ನಿಗದಿ ಮಾಡಿದ್ದ ನ್ಯಾಯಾಲಯ ಮೇ 5ರಂದು ವಿಚಾರಣೆ ಆರಂಭಿಸಿತ್ತು. ಅಂದಿನಿಂದ ಜೂನ್ 28ರವರೆಗೆ ಒಟ್ಟು 22 ದಿನಗಳ ವಿಚಾರಣೆ ನಡೆಸಿದ್ದ ನ್ಯಾಯಾಲಯ ತೀರ್ಪು ಕಾಯ್ದಿರಿಸಿತ್ತು. ಪ್ರಜ್ವಲ್ ಪರ ವಕೀಲರಾದ ಜಿ.ಅರುಣ್ ಹಾಗೂ ವಿಪುಲ್ ಜೈನ್ ವಾದ ಮಂಡಿಸಿದ್ದರು.

ಅದು ಪ್ರಜ್ವಲ್‌ನದ್ದೇ ಗುಪ್ತಾಂಗ...!

ಸಂಗ್ರಹಿಸಲಾಗಿದ್ದ ಸಾಕ್ಷ್ಯಗಳನ್ನು ವಿವಿಧ ಕ್ಷೇತ್ರಗಳ ತಜ್ಞರು ಮತ್ತು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ನಿಖರ ವೈದ್ಯಕೀಯ ನೆರವಿನಿಂದ ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿರುವ ಎಸ್‌ಐಟಿಗೆ ಪ್ರಬಲ ಸಾಕ್ಷ್ಯ ದೊರೆತದ್ದೇ ವಿಡಿಯೊದಿಂದ. ಪ್ರಜ್ವಲ್ ಮಾಡಿಕೊಂಡಿದ್ದ ವಿಡಿಯೊದಲ್ಲಿ ಕಂಡಿದ್ದ ಶಿಶ್ನದ ಗಾತ್ರ, ಬಣ್ಣ, ಆಕಾರ, ನಿಮಿರುವಿಕೆಯ ಸಾಮರ್ಥ್ಯ ಇತ್ಯಾದಿ... ಅಗತ್ಯ ಸಕಲಾಂಶಗಳನ್ನು ವಿಡಿಯೊದಲ್ಲಿ ಸೆರೆ ಹಿಡಿದಿದ್ದ ಚಿತ್ರದೊಂದಿಗೆ ಹೋಲಿಕೆ ಮಾಡಿದಾಗ ಅದು ಪ್ರಜ್ವಲ್‌ದೇ ಶಿಶ್ನ ಮತ್ತು ದುಷ್ಕೃತ್ಯ ಎಂಬ ನೈಜತೆ ಹೊರಹೊಮ್ಮಿರುವುದು ತನಿಖೆಯ ವಿಶೇಷ. ಈ ಅಂಶವನ್ನು ತೀರ್ಪಿನ 345ನೇ ಪುಟದಿಂದ ವಿಸ್ತೃತವಾಗಿ ವಿವರಿಸಲಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ ನಿವಾಸದಲ್ಲಿ ದಲಿತ ಸಚಿವರು, ಶಾಸಕರ ಸಭೆ

ಒಳ ಮೀಸಲಾತಿ: ‘ಒಕ್ಕೊರಲ’ ದನಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ



ಜಿ.ಪರಮೇಶ್ವರ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಶಿಫಾರಸು ಮಾಡಲು ಸರ್ಕಾರ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕ ಸದಸ್ಯ ಆಯೋಗವು ಸಲ್ಲಿಸಲಿರುವ ವರದಿಯ ವಿಚಾರದಲ್ಲಿ ಸಾಮರಸ್ಯ ಕಾಪಾಡಲು ಎಡಗೈ, ಬಲಗೈ ಸಮುದಾಯದ ಸಚಿವರು, ಶಾಸಕರು ಒಮ್ಮತದ ನಿರ್ಧಾರ ಕೈಗೊಂಡಿದ್ದಾರೆ.

ಗೃಹ ಸಚಿವ ಜಿ.ಪರಮೇಶ್ವರ ನಿವಾಸದಲ್ಲಿ ಔತಣಕೂಟದ ನೆಪದಲ್ಲಿ ಶನಿವಾರ ರಾತ್ರಿ ಸಭೆ ಸೇರಿದ ಎರಡೂ ಸಮುದಾಯಗಳ ಸಚಿವರು, ಶಾಸಕರು, ವರದಿ ಸಲ್ಲಿಕೆಯಾದ ಬಳಿಕ ಮತ್ತೊಮ್ಮೆ ಸಭೆ ಸೇರಲು ನಿರ್ಧರಿಸಿದ್ದಾರೆ.

ಸಭೆಯ ಬಳಿಕ ಮಾತನಾಡಿದ ಪರಮೇಶ್ವರ, ‘ಒಳ ಮೀಸಲಾತಿ ಕುರಿತು ಚರ್ಚಿಸಲು ಪರಿಶಿಷ್ಟ ಜಾತಿಗೆ ಸೇರಿದ ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸಭೆ ನಡೆಸಿದ್ದೇವೆ. ನಾಗಮೋಹನ್‌ದಾಸ್ ಆಯೋಗ ಸದ್ಯದಲ್ಲೇ ಸರ್ಕಾರಕ್ಕೆ ವರದಿ ನೀಡಲಿದೆ. ಆ ವರದಿ ಸಲ್ಲಿಸುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯಲ್ಲಿರುವ ವಿವಿಧ ಸಮುದಾಯಗಳು, ಒಳಪಂಗಡಗಳ ನಡುವೆ ಸಂಘರ್ಷ ಉಂಟಾಗದಂತೆ, ಒಟ್ಟಾಗಿ ಹೋಗಬೇಕೆಂದು ಚರ್ಚೆ ಮಾಡಿದ್ದೇವೆ’ ಎಂದರು.

‘ಒಳ ಮೀಸಲಾತಿ ವಿಚಾರದಲ್ಲಿ ಏನೇ ವ್ಯತ್ಯಾಸಗಳಾದರೂ ಸರಿದೂಗಿಸಿಕೊಂಡು ಹೋಗಬೇಕೆಂಬ ತೀರ್ಮಾನಕ್ಕೆ ಎಲ್ಲರೂ ಬಂದಿದ್ದೇವೆ. ಇಲ್ಲದೆ ಹೋದರೆ ಒಳ ಮೀಸಲಾತಿ ಜಾರಿ ಮತ್ತೆ ವಿಳಂಬ ಆಗಬಹುದು. ಈ ಸಮಸ್ಯೆ ಇನ್ನಷ್ಟು ವರ್ಷ ಮುಂದಕ್ಕೆ ಹೋಗಬಹುದು. ಆ ರೀತಿ ಆಗಬಾರದು ಎಂದು ನಾವೆಲ್ಲರೂ ತೀರ್ಮಾನಕ್ಕೆ ಬಂದಿದ್ದೇವೆ. ವರದಿಯಲ್ಲಿ ಏನೇ ಇದ್ದರೂ ಚರ್ಚೆ ಮಾಡಿಕೊಂಡು ಸಹಮತದಿಂದ ಹೋಗಲು ನಿರ್ಧರಿಸಿದ್ದೇವೆ’ ಎಂದರು.

‘ವರದಿ ಬಂದ ನಂತರ ಸ್ವಾಭಾವಿಕವಾಗಿ ಸಂಪುಟ ಸಭೆಯ ತೀರ್ಮಾನಕ್ಕೆ ಹೋಗುತ್ತದೆ. ನಂತರ ಸರ್ಕಾರ ತೀರ್ಮಾನ ತೆಗೆದುಕೊಳ್ಳಲಿದೆ. ಅದು ಬೇರೆ ವಿಚಾರ’ ಎಂದರು.

‘ಪರಿಶಿಷ್ಟ ಜಾತಿಯಲ್ಲಿರುವ ಎಲ್ಲ 101 ಜಾತಿಗಳಿಗೂ ನ್ಯಾಯ ಸಿಗಬೇಕು. ಸಣ್ಣ ಸಮುದಾಯದವರಿಗೂ ಸಾಮಾಜಿಕ ನ್ಯಾಯ ಸಿಗಬೇಕು. ಈ ಬಗ್ಗೆ ಸಚಿವರು, ಶಾಸಕರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಒಳ ಮೀಸಲಾತಿಯ ವರದಿ ಸಲ್ಲಿಕೆಯಾದ ನಂತರ ಮುಖ್ಯಮಂತ್ರಿ ಭೇಟಿ ಮಾಡಿ, ಎಲ್ಲರಿಗೂ ನ್ಯಾಯ ಸಿಗುವ ರೀತಿಯಲ್ಲಿ ತೀರ್ಮಾನಕ್ಕೆ ಬರಬೇಕೆಂದು ಸಲಹೆ ನೀಡುತ್ತೇವೆ’ ಎಂದು ಹೇಳಿದರು.

‘ಸಚಿವರು, ಶಾಸಕರು ಇಲ್ಲದ ಸಣ್ಣ ಸಮುದಾಯಗಳಿಗೂ ನ್ಯಾಯ ಸಿಗಬೇಕಲ್ಲವೇ? ನ್ಯಾಯ ಒದಗಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂಬುದನ್ನೂ ಚರ್ಚೆ ಮಾಡಿದ್ದೇವೆ. ಈ ವಿಚಾರದಲ್ಲಿ ಗೊಂದಲ ಮಾಡಿಕೊಳ್ಳಬಾರದು. ಎಲ್ಲವನ್ನು ಅನುಸರಿಸಿಕೊಂಡು ಹೋಗಬೇಕು ಎಂಬ ಬಗ್ಗೆಯೂ ಸಹಮತದಿಂದ ನಿರ್ಧರಿಸಿದ್ದೇವೆ’ ಎಂದೂ ತಿಳಿಸಿದರು.

> ಒಳ ಮೀಸಲಾತಿಗೆ ಸಂಬಂಧಿಸಿದ ವರದಿ ವಿಚಾರದಲ್ಲಿ ಯಾವುದೇ ಗೊಂದಲ ಆಗಬಾರದೆಂದು ಚರ್ಚೆ ಮಾಡಿದ್ದೇವೆ. ವರದಿ ಬಂದ ನಂತರ ಮತ್ತೆ ಚರ್ಚೆ ಮಾಡುತ್ತೇವೆ
>
> **ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ

> ಆಯೋಗವು ಆಗಸ್ಟ್ 4ರಂದು ವರದಿ ನೀಡಲಿದೆ. ಈ ಕಾರಣಕ್ಕೆ ಗೃಹ ಸಚಿವರು ಸಭೆ ಕರೆದಿದ್ದರು. ವರದಿಯ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ, ಜಾರಿಗೆ ತರುತ್ತೇವೆ
>
> **ಎಚ್.ಸಿ. ಮಹದೇವಪ್ಪ,**
> ಸಮಾಜ ಕಲ್ಯಾಣ ಸಚಿವ

ಸಭೆಯಲ್ಲಿ ಯಾರೆಲ್ಲ ಇದ್ದರು

ಸಚಿವರು: ಜಿ. ಪರಮೇಶ್ವರ, ಎಚ್.ಸಿ. ಮಹದೇವಪ್ಪ, ಕೆ.ಎಚ್ ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಶಿವರಾಜ್ ತಂಗಡಗಿ. ವಿಧಾನಸಭಾ ಉಪಾಧ್ಯಕ್ಷ: ರುದ್ರಪ್ಪ ಲಮಾಣಿ (ಹಾವೇರಿ), ಶಾಸಕರು: ದೇವೇಂದ್ರಪ್ಪ (ಜಗಳೂರು), ಮಹೇಂದ್ರ ತಮ್ಮಣ್ಣನವರ್ (ಕುಡಚಿ), ಪಿ.ಎಂ. ನರೇಂದ್ರ ಸ್ವಾಮಿ (ಮಳವಳ್ಳಿ), ನಯನಾ ಮೋಟಮ್ಮ (ಮೂಡಿಗೆರೆ), ಎ.ಸಿ. ಶ್ರೀನಿವಾಸ್ (ಪುಲಕೇಶಿನಗರ), ಕೆ.ಎಸ್.ಬಸವಂತಪ್ಪ (ಮಾಯಕೊಂಡ), ಎಚ್.ವಿ. ವೆಂಕಟೇಶ್ (ಪಾವಗಡ), ದರ್ಶನ್ ಧ್ರುವ ನಾರಾಯಣ್ (ನಂಜನಗೂಡು), ಎಂ. ಶಿವಣ್ಣ (ಆನೇಕಲ್), ಎನ್. ಶ್ರೀನಿವಾಸ್ (ನೆಲಮಂಗಲ), ಎಸ್.ಎನ್. ನಾರಾಯಣಸ್ವಾಮಿ (ಬಂಗಾರಪೇಟೆ), ರೂಪಕಲಾ ಶಶಿಧರ್ (ಕೆಜಿಎಫ್), ಎ.ಆರ್. ಕೃಷ್ಣಮೂರ್ತಿ (ಕೊಳ್ಳೇಗಾಲ). ವಿಧಾನ ಪರಿಷತ್ ಸದಸ್ಯರು; ವಸಂತ್ ಕುಮಾರ್, ಡಾ. ತಿಮ್ಮಯ್ಯ, ಸುಧಾಮ್ ದಾಸ್

ಗೈರಾದವರು: ಸಚಿವ ಪ್ರಿಯಾಂಕ್ ಖರ್ಗೆ, ಶಾಸಕ ಅಬ್ಬಯ್ಯ ಪ್ರಸಾದ್

ಮಾದಕ ದ್ರವ್ಯ: ಸೆ. 30ರವರೆಗೆ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ದ್ರವ್ಯ ನಿಯಂತ್ರಣ ಉದ್ದೇಶದಿಂದ ‘ದೀನದಯಾಳ್ ಅಂತ್ಯೋದಯ’ ಯೋಜನೆಯಡಿ ವಿವಿಧ ಸರ್ಕಾರಿ ಇಲಾಖೆಗಳ ಸಹಯೋಗದಲ್ಲಿ ಸೆ. 30ರವರೆಗೆ ರಾಜ್ಯದಾದ್ಯಂತ ‘ಮಾದಕ ದ್ರವ್ಯ ಮುಕ್ತ ಕರ್ನಾಟಕ ಅಭಿಯಾನ’ ಹಮ್ಮಿಕೊಳ್ಳಲಾಗಿದೆ.

ಹೆಚ್ಚುತ್ತಿರುವ ಮಾದಕ ದ್ರವ್ಯ ದುರುಪಯೋಗ ಮತ್ತು ಅದರ ದುಷ್ಪರಿಣಾಮಗಳನ್ನು ತಡೆಯಲು ಈ ಅಭಿಯಾನ ಕೈಗೊಳ್ಳಲಾಗಿದೆ ಎಂದು ಕೌಶಲಾಭಿವೃದ್ಧಿ ಇಲಾಖೆಯ ಅಡಿಯಲ್ಲಿರುವ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕಿ ಶ್ರೀವಿದ್ಯಾ ತಿಳಿಸಿದ್ದಾರೆ.

ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳು ಮತ್ತು ಇತರೆ ಸಮುದಾಯಗಳು ಈ ಅಭಿಯಾನ ನಡೆಸಲಿವೆ. ಈ ಸಂದರ್ಭದಲ್ಲಿ ಮಾದಕ ದ್ರವ್ಯ ಬಳಕೆ ಮತ್ತು ವ್ಯಸನದಿಂದ ಉಂಟಾಗುವ ಹಿಂಸೆ, ದೌರ್ಜನ್ಯ, ಸಾಮಾಜಿಕ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸಲಾಗುವುದುಎಂದು ಹೇಳಿದ್ದಾರೆ..

ಮಾದಕ ವಸ್ತುಗಳ ಬಳಕೆಯನ್ನು ತಡೆಯಲು ಮತ್ತು ಅವುಗಳ ದುಷ್ಪರಿಣಾಮಗಳ ಬಗ್ಗೆ ಸಮುದಾಯಗಳಿಗೆ ತಿಳಿಸಲು, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

‘ಅಭಿಯಾನವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಮತ್ತು ವಾರ್ಡ್ ಮಟ್ಟದಲ್ಲಿ ಸ್ವಸಹಾಯ ಗುಂಪುಗಳ ಮೂಲಕ ವಿವಿಧ ಚಟುವಟಿಕೆಗಳನ್ನು ಆಯೋಜಿಸಲಾಗುವುದು. ಬೀದಿ ನಾಟಕಗಳು, ಜಾಗೃತಿ ರ‍್ಯಾಲಿಗಳು, ಉಪನ್ಯಾಸಗಳು, ಕಾರ್ಯಾಗಾರಗಳು, ಕರಪತ್ರಗಳು ಮತ್ತು ಪೋಸ್ಟರ್‌ಗಳು, ಸಾಮಾಜಿಕ ಮಾಧ್ಯಮ ಮತ್ತು ಡಿಜಿಟಲ್ ಅಭಿಯಾನಗಳು, ಆರೋಗ್ಯ ಸಲಹಾ ಶಿಬಿರಗಳು, ಕಿರುಚಿತ್ರಗಳ ಪ್ರದರ್ಶನಗಳು ನಡೆಯಲಿದೆ’ ಎಂದೂ ಅವರು ಹೇಳಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಿಟಿಕೆ ಸುದ್ದಿ

ಮಾಗನೂರು ಬಸಪ್ಪ ಪ್ರಶಸ್ತಿಗೆ ಶಿವರಾಜ ಪಾಟೀಲ ಆಯ್ಕೆ

ದಾವಣಗೆರೆ: ಕನ್ನಡ ಸಾಹಿತ್ಯ ಪರಿಷತ್‌ನ ದಾವಣಗೆರೆ ಜಿಲ್ಲಾ ಘಟಕ ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದಿಂದ ನೀಡಲಾಗುವ 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ'ಗೆ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರನ್ನು ಆಯ್ಕೆ ಮಾಡಲಾಗಿದೆ.


ಶಿವರಾಜ ಪಾಟೀಲ

ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಬಿ.ವಾಮದೇವಪ್ಪ ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ಅಧ್ಯಕ್ಷ ಮಾಗನೂರು ಸಂಗಮೇಶ್ವರ ಗೌಡ ನೇತೃತ್ವದಲ್ಲಿ ಇಲ್ಲಿ ಶನಿವಾರ ನಡೆದ ಸಭೆಯಲ್ಲಿ 2025ನೇ ಸಾಲಿನ ಪ್ರಶಸ್ತಿಗೆ ನ್ಯಾಯಮೂರ್ತಿ ಶಿವರಾಜ ಪಾಟೀಲ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 50,000 ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ನ್ಯಾಯಾಂಗ, ಸಾಮಾಜಿಕ ಸೇವೆಯಲ್ಲಿ ತೋರಿದ ಸಾಧನೆ ಪರಿಗಣಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕೊಲೆ: ಎಸ್‌ಐಟಿಗೆ ಮತ್ತೊಬ್ಬರಿಂದ ಮಾಹಿತಿ

ಧರ್ಮಸ್ಥಳ: ರಾಜ್ಯ ಹೆದ್ದಾರಿ ಪಕ್ಕದ ಕಾಡಿನಲ್ಲಿ ಶೋಧ, 2 ಕಡೆಯೂ ಸಿಗದ ಅವಶೇಷ

ಪ್ರಜಾವಾಣಿ ವಾರ್ತೆ

ಧರ್ಮಸ್ಥಳದಲ್ಲಿ ಶನಿವಾರ ಅಗೆಯುವ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದ ಎಸ್‌ಐಟಿ ತಂಡ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ದೂರಲಾಗಿರುವ ಪ್ರಕರಣ ಸಂಬಂಧ ವಿಶೇಷ ತನಿಖಾ ತಂಡವು (ಎಸ್‌ಐಟಿ) ತನಿಖೆ ಮುಂದುವರಿಸಿದೆ. ಏತನ್ಮಧ್ಯೆ, ಉಪ್ಪಿನಂಗಡಿ ಬಳಿಯ ಇಚ್ಲಂಪಾಡಿ ಗ್ರಾಮದ ಜಯಂತ್ ಟಿ. ಎಂಬುವರು ಎಸ್‌ಐಟಿಯ ಬೆಳ್ತಂಗಡಿ ಕಚೇರಿಗೆ ಹೋಗಿ, ಇನ್ನೊಂದು ಕೊಲೆಯ ಬಗ್ಗೆ ಮಾಹಿತಿ ನೀಡಿದ್ದಾರೆ.

ದೂರುದಾರ ಜಯಂತ್ ಟಿ.

ಬೆಳ್ತಂಗಡಿಯಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ದೂರುದಾರ ಜಯಂತ್, 'ಧರ್ಮಸ್ಥಳ ಗ್ರಾಮದಲ್ಲಿ ಸುಮಾರು 15 ವರ್ಷಗಳ ಹಿಂದೆ ಅಂದಾಜು 13 ರಿಂದ 15 ವರ್ಷದ ಬಾಲಕಿ ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದಳು. ಭಾಗಶಃ ಕೊಳೆತ ಸ್ಥಿತಿಯಲ್ಲಿದ್ದ ಮೃತ ದೇಹವನ್ನು ನಾನು ನೋಡಿದ್ದೆ. ಅದರ ಮರಣೋತ್ತರ ಪರೀಕ್ಷೆ ನಡೆದಿರಲಿಲ್ಲ. ದೂರು ನೀಡಿದ ಒಂದು ವಾರದ ನಂತರ ಆ ಶವವನ್ನು ಹೂತು ಹಾಕಿದ್ದರು. ಮೃತದೇಹವನ್ನು ಕಾನೂನು ಬದ್ಧವಾಗಿ ವಿಲೇ ಮಾಡಿರಲಿಲ್ಲ. ಎಫ್‌ಐಆರ್ ದಾಖಲಿಸದೆ ಕೊಲೆಯನ್ನು ಮುಚ್ಚಿ ಹಾಕಲಾಗಿತ್ತು' ಎಂದು ಆರೋಪಿಸಿದರು.

'ಆ ಕೊಲೆ ಮಾಡಿದ್ದು ಯಾರು ಎಂದು ನನಗೆ ತಿಳಿದಿಲ್ಲ. ಮೃತದೇಹವನ್ನು ಹೂತು ಹಾಕಿದ್ದ ಜಾಗವನ್ನು ನಾನು ಎಸ್‌ಐಟಿಗೆ ತೋರಿಸುತ್ತೇನೆ. ಈ ಬಗ್ಗೆ ಎಸ್‌ಐಟಿ ಸಮರ್ಪಕವಾದ ತನಿಖೆ ನಡೆಸುತ್ತದೆ ಎಂಬ ವಿಶ್ವಾಸವಿದೆ' ಎಂದು ಜಯಂತ್ ತಿಳಿಸಿದರು.

'ಇಲ್ಲಿ ತುಂಬಾ ಕೊಲೆಗಳಾಗಿವೆ, ಇದು ಅನೇಕರಿಗೆ ಗೊತ್ತಿರುವ ವಿಷಯ. ಆದರೆ, ಭಯದ ವಾತಾವರಣ ಇದ್ದುದರಿಂದ ದೂರು ನೀಡಲು ಯಾರೂ ಧೈರ್ಯ ಮಾಡುತ್ತಿರಲಿಲ್ಲ. ರಾಜ್ಯ ಸರ್ಕಾರ ರಚಿಸಿರುವ ಎಸ್‌ಐಟಿ, ನಮ್ಮ ಭಯವನ್ನು ದೂರ ಮಾಡಿದೆ. ಎಸ್‌ಐಟಿ ತಂಡದ ಮೇಲೆ ನಂಬಿಕೆ ಬಂದಿದೆ. ಹಾಗಾಗಿ ನಾನು ಎಸ್‌ಐಟಿಗೆ ದೂರು ನೀಡಿದ್ದೇನೆ. ಭಾನುವಾರ ರಜಾ ದಿನ. ಹಾಗಾಗಿ ಸೋಮವಾರ ಮತ್ತೆ ಬರುವಂತೆ ಎಸ್‌ಐಟಿ ಅಧಿಕಾರಿಗಳು ತಿಳಿಸಿದ್ದಾರೆ. ಸೋಮವಾರ ಮತ್ತೆ ಎಸ್‌ಐಟಿ ಮುಂದೆ ಹಾಜರಾಗಿ ಎಲ್ಲ ವಿಷಯ ತಿಳಿಸುತ್ತೇನೆ' ಎಂದರು.

'ಜಯಂತ ಟಿ. ಅವರು ಲಿಖಿತವಾಗಿ ನಮಗೆ ಏನನ್ನೂ ಸಲ್ಲಿಸಿಲ್ಲ. ದೂರು ಪಡೆಯಲು ನಮ್ಮದು ಪೊಲೀಸ್ ಠಾಣೆ ಅಲ್ಲ ಎಂದು ಅವರಿಗೆ ತಿಳಿಸಿದ್ದೇವೆ' ಎಂದು ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಎರಡರಲ್ಲೂ ಸಿಗಲಿಲ್ಲ ಅವಶೇಷ: ಎಸ್‌ಐಟಿ ಶನಿವಾರ ಧರ್ಮಸ್ಥಳದಲ್ಲಿ ಎರಡು ಕಡೆ ಶೋಧ ಕಾರ್ಯ ನಡೆಸಿತು. ಎರಡೂ ಕಡೆ ಮೃತದೇಹ ಹೂತ ಯಾವುದೇ ಕುರುಹು ಪತ್ತೆಯಾಗಿಲ್ಲ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಪ್ರಕರಣದ ಸಾಕ್ಷಿ ದೂರುದಾರ ತೋರಿಸಿದ್ದ ಒಂಬತ್ತನೇ ಹಾಗೂ 10ನೇ ಜಾಗದಲ್ಲಿ ಯಂತ್ರವನ್ನು ಬಳಸಿ ಶನಿವಾರ ನೆಲವನ್ನು ಅಗೆಯಲಾಯಿತು. ಧರ್ಮಸ್ಥಳ ಸ್ನಾನಘಟ್ಟದ ಸಮೀಪದಲ್ಲೇ ಇರುವ ಈ ಎರಡೂ ಜಾಗಗಳು ಉಜಿರೆಯಿಂದ ಧರ್ಮಸ್ಥಳವನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿಯಿಂದ ಕೇವಲ 10 ಮೀಟರ್ ದೂರದಲ್ಲಿದ್ದವು. ಶೋಧ ಕಾರ್ಯದ ದೃಶ್ಯಗಳು ಹೊರಗಡೆ ಕಾಣಬಾರದೆಂದು ರಸ್ತೆ ಪಕ್ಕದಲ್ಲಿ ಉದ್ದಕ್ಕೂ ಹಸಿರು ಬಣ್ಣದ ಪರದೆ ಕಟ್ಟಲಾಗಿತ್ತು.

ಭಾರಿ ಮಳೆಯಿಂದ ಹಾಗೂ ಭಾರಿ ಗಾತ್ರದ ಮರಗಳ ಬೇರುಗಳು ಅಲ್ಲಿ ಇದ್ದುದರಿಂದ ಅಗೆಯುವ ಕಾರ್ಯ ನಿಧಾನಗತಿಯಲ್ಲಿ ಸಾಗಿತು. ಶೋಧ ಕಾರ್ಯದ ಸ್ಥಳದಲ್ಲಿ ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹಾಗೂ ಎಸ್‌ಐಟಿಯಲ್ಲಿರುವ ಎಸ್‌ಪಿ ಜಿತೇಂದ್ರ ಕುಮಾರ್ ದಯಾಮ, ಸಾಕ್ಷಿ ದೂರುದಾರ ಹಾಗೂ ಆತನ ಜೊತೆಗೆ ಬಂದಿರುವ ವಕೀಲರು ಹಾಜರಿದ್ದರು.

ಈ ಪ್ರಕರಣದ ಸಾಕ್ಷಿ ದೂರುದಾರ ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ತೋರಿಸಿರುವ 13 ಜಾಗಗಳ ಪೈಕಿ 10 ಜಾಗಗಳಲ್ಲಿ ಶೋಧ ಕಾರ್ಯ ಪೂರ್ಣಗೊಂಡಿದೆ. ಆತ ತೋರಿಸಿದ್ದ 6ನೇ ಜಾಗದಲ್ಲಿ ಗಂಡಸಿನ ಮೃತದೇಹದ ಅವಶೇಷ ಗುರುವಾರ ಪತ್ತೆಯಾಗಿತ್ತು. ಇನ್ನುಳಿದ 9 ಕಡೆಗಳಲ್ಲಿ ಮೃತದೇಹದ ಕುರುಹುಗಳು ಸಿಕ್ಕಿಲ್ಲ. ಸೋಮವಾರ ಶೋಧ ಕಾರ್ಯ ಮತ್ತೆ ಶುರುವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಸಾಕ್ಷಿ ದೂರುದಾರನಿಗೆ ಬೆದರಿಕೆ: ಆರೋಪ

ಮಂಗಳೂರು: ದೂರನ್ನು ಹಿಂಪಡೆಯುವಂತೆ ಸಾಕ್ಷಿ ದೂರುದಾರನಿಗೆ ಎಸ್‌ಐಟಿ ತಂಡದಲ್ಲಿರುವ ಅಧಿಕಾರಿಯೊಬ್ಬರು ಬೆದರಿಕೆ ಒಡ್ಡಿದ್ದಾರೆ ಎಂದು ಆತನ ಪರ ವಕೀಲರು ಆರೋಪಿಸಿದ್ದಾರೆ.

ಎಸ್‌ಐಟಿಗೆ ಕಳುಹಿಸಿದ ಇ–ಮೇಲ್‌ನಲ್ಲಿ ವಕೀಲರಾದ ಅನನ್ಯಾ ಗೌಡ, 'ನಮ್ಮ ಕಕ್ಷಿದಾರನಿಗೆ ಬೆಳ್ತಂಗಡಿಯ ಎಸ್‌ಐಟಿ ಕಚೇರಿಯಲ್ಲಿ ಧಿಕಾರಿಯೊಬ್ಬರು ಆಗಸ್ಟ್ 1ರಂದು ಬೆದರಿಕೆ ಒಡ್ಡಿದ್ದಾರೆ. ನೀನು ಇದರ ಭೀಕರ ಪರಿಣಾಮವನ್ನು ಎದುರಿಸುತ್ತೀಯ. ನಿನ್ನನ್ನೇ ವಶಕ್ಕೆ ಪಡೆಯುತ್ತೇವೆ. ದೀರ್ಘ ಕಾಲದವರೆಗೆ ನೀನು ಬಂಧನಕ್ಕೂ ಒಳಗಾಗಬಹುದು ಎಂದು ಬೆದರಿಸಿದ್ದಾರೆ' ಎಂದಿದ್ದಾರೆ.

'ಆ ಅಧಿಕಾರಿಯನ್ನು ತಕ್ಷಣ ತನಿಖೆಯಿಂದ ಹೊರಗಿಡಬೇಕು. ನಮ್ಮ ಕಕ್ಷಿದಾರ ಮುಕ್ತವಾಗಿ ಹಾಗೂ ನಿರ್ಭಯವಾಗಿ ತನಿಖೆಗೆ ಸಹಕರಿಸಲು ಈ ಕ್ರಮದ ಅಗತ್ಯ ಇದೆ' ಎಂದು ಅವರು ತಿಳಿಸಿದ್ದಾರೆ. ದೂರಿನ ಬಗ್ಗೆ ಪರಿಶೀಲಿಸಲಾಗುವುದು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ರೈನ್‌ಬೊ ಕಲಾಂಜಲಿ' ರೇಷ್ಮೆ ಸೀರೆಗೆ ರಾಜ್ಯ ಪ್ರಶಸ್ತಿ

ತುಮಕೂರು: ಪಾವಗಡ ತಾಲ್ಲೂಕು ವೈ.ಎನ್.ಹೊಸಕೋಟೆ ಗ್ರಾಮದ ಎಂ.ವಿ. ಪ್ರಕಾಶ್ ನೇಯ್ದ 'ರೈನ್‌ಬೊ ಕಲಾಂಜಲಿ' ರೇಷ್ಮೆ ಸೀರೆಗೆ ರಾಜ್ಯ ಸರ್ಕಾರ ರಾಜ್ಯ ಮಟ್ಟದ ಪ್ರಥಮ ಬಹುಮಾನ ಘೋಷಿಸಿದೆ.

ಪ್ರಶಸ್ತಿ ₹25 ಸಾವಿರ ನಗದು, ಸ್ಮರಣಿಕೆ ಮತ್ತು ಪ್ರಮಾಣಪತ್ರ ಒಳಗೊಂಡಿದೆ. ರೇಷ್ಮೆ ಕ್ಷೇತ್ರದಲ್ಲಿ ನೇಕಾರರು ಹೊಂದಿರುವ ನೈಪುಣ್ಯತೆ, ಶ್ರೇಷ್ಠತೆ, ತಾಂತ್ರಿಕತೆ ಹಾಗೂ ಉತ್ಕೃಷ್ಟತೆ ಪರಿಗಣಿಸಿ ಪ್ರಶಸ್ತಿ ನೀಡಲಾಗುತ್ತಿದೆ.

ಪ್ರಕಾಶ್ ನೇಯ್ದ ರೇಷ್ಮೆ ಸೀರೆ 6.30 ಮೀಟರ್ ಉದ್ದ, 49 ಇಂಚು ಅಗಲವಿದ್ದು, ಸುಮಾರು 850 ಗ್ರಾಂ ತೂಕವಿದೆ. ಈ ಸೀರೆಯ ಮೌಲ್ಯ ₹85 ಸಾವಿರ.

ಆ. 7ರಂದು ಬೆಂಗಳೂರಿನ ಕಬ್ಬನ್ ಉದ್ಯಾನ ಬಳಿಯ ಸರ್ಕಾರಿ ನೌಕರರ ಭವನದಲ್ಲಿ ನಡೆಯುವ 11ನೇ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕೈಮಗ್ಗ,ಜವಳಿ ಇಲಾಖೆ ತಿಳಿಸಿದೆ.

ಟೆಂಡರ್ ಹಾಗೂ ಬಹಿರಂಗ ಹರಾಜು

ವಲಯ ಕೃಷಿ ಸಂಶೋಧನಾ ಕೇಂದ್ರ, ಕೃ.ವಿ.ವಿ., ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65 ಇಲ್ಲಿ ದಿನಾಂಕ: **05–08–2025 ರಂದು ಮಂಗಳವಾರ ಬೆಳಗ್ಗೆ 10.30 ಗಂಟೆಗೆ 2025–26ನೇ** ಸಾಲಿನ ಸೀಬೆ ಮತ್ತು ತೆಂಗಿನ ಫಸಲನ್ನು ನಿರ್ದಿಷ್ಟ ಅವಧಿಗೆ ಟೆಂಡರ್ ಮತ್ತು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರ ಕಚೇರಿ, ವ.ಕೃ.ಸಂ.ಕೇ., ಜಿ.ಕೆ.ವಿ.ಕೆ ಅಥವಾ ದೂರವಾಣಿ ಸಂಖ್ಯೆ: 080–23330153/ ವಿಸ್ತರಣೆ: 315 ಇಲ್ಲಿ ಸಂಪರ್ಕಿಸಿ.

'ಭೀಮ'ನ ಮಾವುತ ಗುಂಡು, ಕಾವಾಡಿಗ ನಂಜುಂಡಸ್ವಾಮಿಗೆ ಅರ್ಜುನ ಆನೆ ಪ್ರಶಸ್ತಿ; ಗಜಪಯಣದಂದು ಪ್ರದಾನ

ಮತ್ತಿಗೋಡು ಆನೆ ಶಿಬಿರದಲ್ಲಿ ಹೆಚ್ಚಿದ ಸಂಭ್ರಮ

ಎಚ್.ಎಸ್.ಸಚ್ಚಿತ್

ಹುಣಸೂರು: ನಾಗರಹೊಳೆ ಹುಲಿ ಯೋಜನೆ ವಿಭಾಗಕ್ಕೆ ಸೇರಿದ ಮತ್ತಿಗೋಡು ಆನೆ ಶಿಬಿರದ ಆನೆ 'ಭೀಮ'ನ (25) ಮಾವುತ ಗುಂಡು ಹಾಗೂ ಕಾವಾಡಿಗ ನಂಜುಂಡಸ್ವಾಮಿ 'ಅರ್ಜುನ ಆನೆ' ಹೆಸರಿನ ಮೊದಲ ಪ್ರಶಸ್ತಿಗೆ ಆಯ್ಕೆಯಾಗಿರುವುದು ಶಿಬಿರದ ಸಿಬ್ಬಂದಿಯಲ್ಲಿ ಸಂತಸ ತಂದಿದೆ. ದಸರಾ ಉತ್ಸವ ಆರಂಭವಾಗುವ ಹೊತ್ತಿನಲ್ಲೇ ಪ್ರಶಸ್ತಿ ಘೋಷಣೆಯಾಗಿರುವುದು ಸಂಭ್ರಮ ಹೆಚ್ಚಿಸಿದೆ.

ಭೀಮ ಆನೆಯ ಮಾವುತ ಗುಂಡು ಎರಡನೇ ಬಾರಿಗೆ ಸರ್ಕಾರಿ ಗೌರವಕ್ಕೆ ಪಾತ್ರರಾಗಿದ್ದು ಅವರ ಸಂತೋಷ ಇಮ್ಮಡಿಸಿದೆ. 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಇತ್ತೀಚೆಗೆ ಉತ್ತಮ ಮಾವುತ ಎಂಬ ಕಾರಣಕ್ಕೆ ಅರಣ್ಯ ಇಲಾಖೆ ಮುಖ್ಯಮಂತ್ರಿ ಪ್ರಶಸ್ತಿಗೆ ಶಿಫಾರಸು ಮಾಡಿತ್ತು. ಅದರ ಬೆನ್ನಲ್ಲೆ ಅರ್ಜುನ ಆನೆ ಪ್ರಶಸ್ತಿ ಲಭಿಸಿದ್ದು, ನಮ್ಮ ವೃತ್ತಿಯನ್ನು ಸರ್ಕಾರ ಗೌರವಿಸಿದ್ದಕ್ಕೆ ಸಂತೋಷವಾಗಿದೆ' ಎಂದರು.

'ಅರಣ್ಯ ಇಲಾಖೆಗೆ ಬೀಟ್ ವಾಚರ್ ಹುದ್ದೆಗೆ ಸೇರಿ ಹಲವು ವರ್ಷಗಳ ಬಳಿಕ ಆನೆ ಪಾಲನೆಗೆ ಅವಕಾಶ ಸಿಕ್ಕಿತು. ನನ್ನ ತಾತ ಕುಳ್ಳಯ್ಯ ಮೇರಿ ಆನೆ ಮಾವುತರಾಗಿದ್ದರು. ಅವರಿಂದ ಆನೆ ಪಾಲನೆ ಕುರಿತ ಪಾಠಗಳನ್ನು ಕಲಿತೆ. ಇಲಾಖೆ ನನ್ನ ಅನುಭವ ಪರಿಗಣಿಸಿ ಹೆಣ್ಣಾನೆ ವರಲಕ್ಷ್ಮಿ ಮಾವುತನಾಗಿ ನಿಯೋಜಿಸಿತು. 2 ವರ್ಷದ ಬಳಿಕ ಗಂಡಾನೆ ದ್ರೋಣನನ್ನು 2 ವರ್ಷ ಪಾಲನೆ ಮಾಡಿ ಮೈಸೂರು ದಸರಾದಲ್ಲಿ ಭಾಗವಹಿಸಿದ್ದೆ. ದ್ರೋಣ ಹೃದಯಾಘಾತದಿಂದ ಸಾವನ್ನಪ್ಪಿದ್ದು, ನಂತರ ಕೃಷ್ಣ, 5 ವರ್ಷದಿಂದ ಭೀಮ ಆನೆಯೊಂದಿಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ' ಎಂದರು.

ಕಾವಾಡಿಗ ನಂಜುಂಡಸ್ವಾಮಿ ಮಾತನಾಡಿ, 'ಮೂರು ವರ್ಷದಿಂದ ಭೀಮ ಆನೆಯೊಂದಿಗೆ ಕೆಲಸ ನಿರ್ವಹಿಸುತ್ತಿದ್ದು, ಈ ಹಿಂದೆ ಗಂಗೆ, ಮಹೇಂದ್ರ ಆನೆಯ ಕಾವಾಡಿಗ ಹುದ್ದೆ ನಿರ್ವಹಿಸಿದ್ದೆ. ಭೀಮ ಆನೆ ಜೊತೆಗೆ ಹಲವು ಕಾರ್ಯಾಚರಣೆಯಲ್ಲಿ ತೊಡಗಿದ್ದೇನೆ. ಭೀಮ ಆನೆಯ ದೈನಂದಿನ ಆಹಾರ ಮತ್ತು ಉಪಚಾರವನ್ನು ಎಚ್ಚರಿಕೆಯಿಂದ ನಿರ್ವಹಿಸುವಲ್ಲಿ ಖುಷಿ ಸಿಕ್ಕಿದೆ. ಭೀಮ ಆನೆಯ ಕಾವಾಡಿಗ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಇದರೊಂದಿಗೆ ಪ್ರಶಸ್ತಿಯೂ ಸಿಕ್ಕಿರುವುದು ಮತ್ತಷ್ಟು ಸಂತಸ ತಂದಿದೆ' ಎಂದು ಹೇಳಿದರು.

'ಅರ್ಜುನ ಆನೆ' ಪ್ರಶಸ್ತಿ ನಾಳೆ

ಬೀದರ್: ಭೀಮ ಆನೆಯ ಮಾವುತ ಗುಂಡು ಹಾಗೂ ಕಾವಾಡಿ ನಂಜುಂಡಸ್ವಾಮಿ ಅವರಿಗೆ 2025ನೇ ಸಾಲಿನ 'ಅರ್ಜುನ ಆನೆ' ಪ್ರಶಸ್ತಿ ನೀಡಲು 2025ರ ದಸರಾ ಆನೆಗಳ ಆಯ್ಕೆ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು. ಮೈಸೂರಿನ ವೀರನಹೊಸಹಳ್ಳಿಯಲ್ಲಿ ಸೋಮವಾರ (ಆ.4) ನಡೆಯಲಿರುವ ಗಜ ಪಯಣ ಸಂದರ್ಭದಲ್ಲಿ ಹಾಸನ, ಸಕಲೇಶಪುರ, ಕೊಡಗು ಮೊದಲಾದ ಕಡೆಗಳಲ್ಲಿ ಆನೆ ಮತ್ತು ಮಾನವ ಸಂಘರ್ಷ ತಡೆ ಕಾರ್ಯಾಚರಣೆಗಳಲ್ಲಿ ಯಶಸ್ವಿಯಾಗಿ ಭಾಗಿಯಾಗಿರುವ ಮಾವುತರನ್ನು ಸನ್ಮಾನಿಸಲಾಗುವುದು ಎಂದು ಸಚಿವರ ಕಚೇರಿ ಶುಕ್ರವಾರ ಮಾಹಿತಿ ನೀಡಿದೆ.

ಹುಲಿ ಭಯವಿಲ್ಲದ 'ಭೀಮ'

'80 ಆನೆ ಕಾರ್ಯಾಚರಣೆ ಮತ್ತು 15 ಹುಲಿ ಕಾರ್ಯಾಚರಣೆಯಲ್ಲಿ ಭೀಮ ಭಾಗವಹಿಸಿದ್ದು, ಈ ಎಲ್ಲಾ ಕಾರ್ಯಾಚರಣೆಗಳು ಯಶಸ್ವಿಯಾಗಿ ನಡೆಸಿ ಪೂರ್ಣಗೊಳಿಸಿದ್ದೇವೆ. ಇದಲ್ಲದೆ ಹುಲಿ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸುತ್ತಿದ್ದು, ಭೀಮ ಆನೆಗೆ ಹುಲಿ ಭಯವಿಲ್ಲ' ಎಂದು ಅದರ ಮಾವುತ ಗುಂಡು ಹೇಳಿದರು.

'ನಾಗರಹೊಳೆ ಹುಲಿ ಯೋಜನೆ ವಿಭಾಗದ ಮತ್ತಿಗೋಡು ಆನೆ ಶಿಬಿರದ ಭೀಮ ವಿಶಿಷ್ಟವಾಗಿದ್ದು, ಭವಿಷ್ಯದ ಅಂಬಾರಿ ಆನೆಯಾಗುವ ಲಕ್ಷಣವಿದೆ. ರಾಜ್ಯ ಹಾಗೂ ಹೊರ ರಾಜ್ಯದಲ್ಲಿ ಪುಂಡಾನೆ ಹಿಡಿಯುವ ಕಾರ್ಯಾಚರಣೆಯಲ್ಲಿ ತೊಡಗಿ ಯಶಸ್ವಿಯಾಗಿದ್ದು, ಅರ್ಜುನ ಆನೆ ಪ್ರಶಸ್ತಿ ಶಿಬಿರದ ಇತರೆ ಸಿಬ್ಬಂದಿಗೆ ಪ್ರೇರಣೆಯಾಗಿದೆ' ಎಂದು ನಾಗರಹೊಳೆ ಹುಲಿ ಯೋಜನಾ ನಿರ್ದೇಶಕಿ ಸೀಮಾ ಹೇಳಿದರು.

ಭೀಮ ಆನೆಯೊಂದಿಗೆ ಮಾವುತ ಗುಂಡು ಮತ್ತು ಕಾವಾಡಿಗ ನಂಜುಂಡಸ್ವಾಮಿ

ವಿಮಾನ ಸ್ವೀಕಾರ

ಲಂಡನ್ (ಪಿಟಿಐ): ಸ್ಪೇನ್ ಜೊತೆಗಿನ ಒಪ್ಪಂದಂತೆ ಕೊನೆಯ 16 ಮಿಲಿಟರಿ ಸರಕು ಸಾಗಣೆ ವಿಮಾನಗಳನ್ನು ಭಾರತವು ಶನಿವಾರ ಸ್ವೀಕರಿಸಿದೆ ಎಂದು ರಾಯಭಾರ ಕಚೇರಿ ತಿಳಿಸಿದೆ.

THE RAICHUR DISTRICT CENTRAL CO OPERATIVE BANK LTD., RAICHUR

Ref: RKDCC/HO/Solar Plant/ Date 02-08-2025

e-Procurement Tender Notice

The Raichur and Koppal District Central Co-Operative Bank Ltd., Raichur invites e-Tender reference no: RDCCB/2025-26/IND0004 "TENDER FOR SUPPLY & INSTALLATION OF ROOF TOP SOLAR PANEL OF 45 KW CONNECTED SYSTEMS 3 PHASE SOLAR PV SYSTEM TO THE HEAD OFFICE OF THE RAICHUR DISTRICT CENTRAL COOPERATIVE BANK LTD., SITUATED AT RAJENDRA GUNJ, RAICHUR - 584102."Tender Schedule and details can be obtained from KPPPortal https://kppp.karnataka.gov.in

Sd/- (M B Pujar)
Chief Executive Officer
R K D C C BANK Ltd., Raichur.

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ
ಜಿಲ್ಲಾ ಆಡಳಿತ ಭವನ, 1ನೇ ಮಹಡಿ, ಹೊಸಪೇಟೆ ರಸ್ತೆ, ಕೊಪ್ಪಳ.
ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08539–220138 Email ID:- dswo_koppal@yahoo.in

ಸಂ: ಉನಿಸಕಇಕೊ:ಸಿಬ್ಬಂದಿ:ಹೊಸಂ:ಕ್ರೈಸ್:ಟೆಂಡರ:ಸಿಆರ್–02:2025–26/24 ದಿನಾಂಕ: 01.08.2025

ಇ–ಟೆಂಡರ ಪ್ರಕಟಣೆ

ಕೊಪ್ಪಳ ಜಿಲ್ಲೆಯ ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಸಂಪನ್ಮೂಲ ಸಂಸ್ಥೆ ಮುಖಾಂತರ ಸೇವೆ ಪಡೆಯುವ ಕುರಿತು. ಇ–ಟೆಂಡರ್ ಆಹ್ವಾನಿಸುವ ಬಗ್ಗೆ. KPPP ಮೂಲಕ
SWD/2025-26/SEO202
1.ಟೆಂಡರ್ ಪ್ರಕಟಣೆ ದಿನಾಂಕ: **01.08.2025** 2.ಟೆಂಡರ್‌ಗೆ ಇಟ್ಟ ಮೊತ್ತ: ಅಂದಾಜು ರೂ. **387.19/– ಲಕ್ಷಗಳು** 3.ಟೆಂಡರ್ ಫಾರಂ ಸಲ್ಲಿಸಲು ಇ–Portal ಲಭ್ಯವಾಗುವ ದಿನಾಂಕ: **01.08.2025** 4.ಪ್ರೀಬಿಡ್ ಮೀಟಿಂಗ್ ದಿನಾಂಕ (ಬದಲಾವಣೆಗೆ ಒಳಪಟ್ಟಿರುತ್ತದೆ): **14.08.2025** 11.00AM 6.ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **01.09.2025** 05.30PM 7.ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ (ಬದಲಾವಣೆಗೆ ಒಳಪಟ್ಟಿರುತ್ತದೆ): **03.09.2025** 11.00 AM 8.ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ (ಬದಲಾವಣೆಗೆ ಒಳಪಟ್ಟಿರುತ್ತದೆ): **09.09.2025** 12.00 PM 9.ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: Rs: **5,81,000/–** 10.ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ವಿಳಾಸ: **ಉಪನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, 01 ನೇ ಮಹಡಿ ಜಿಲ್ಲಾಡಳಿತ ಭವನ ಕೊಪ್ಪಳ** ಮೊ.ನಂ. 9480843039

ಸಹಿ/–ಉಪ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ
ಡಿಐಪಿಆರ್/ಕೊಪ್ಪಳ/262/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ದಿಮೆ)
4ನೇ ಮಹಡಿ, ಟಿಟಿಎಂಸಿ ಕಟ್ಟಡ, "ಎ" ಬ್ಲಾಕ್, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027. ಫೋನ್: 080–22483636 / 38 / 39

ಸಂಖ್ಯೆ: KSBCL/E-8368/ADMIN/MPS tender/25-26 ದಿನಾಂಕ:02.08.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (2ನೇ ಕರೆ)

ಮ್ಯಾನೇಜ್ಡ್ ಪ್ರಿಂಟರ್ ಸರ್ವಿಸ್(ಎಂಪಿಎಸ್) ಸೇವೆಯನ್ನು ಪ್ರತಿಷ್ಠಿತ ಅಧಿಕೃತ ಸರಬರಾಜುದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಹಾಗೂ ಅರ್ಥಿಕ) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಸರಬರಾಜುದಾರರು ವೆಬ್‌ಸೈಟ್ **https://kppp.karnataka.gov.in** ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಮೊತ್ತ **ರೂ.2,70,000/– (ಎರಡು ಲಕ್ಷದ ಎಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)** ಇ–ಪೋರ್ಟಲ್‌ನಲ್ಲಿನ ಪ್ರಕ್ರಿಯೆ ಅನುಸಾರ ಇ–ಪೇಮೆಂಟ್ ಮೂಲಕ ಸಲ್ಲಿಸಬೇಕು. ಪ್ರೀ–ಬಿಡ್ ಮೀಟಿಂಗ್ **05.08.2025ರ ಬೆಳಿಗ್ಗೆ 11:30 ಗಂಟೆಗೆ**. ಭರ್ತಿ ಮಾಡಿದ ಬಿಡ್ಡುಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕಡೆಯ **ದಿನಾಂಕ 08.08.2025ರ ಸಾಯಂಕಾಲ 5.30 ಗಂಟೆಯವರೆಗೆ**. ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 11.08.2025ರ ಬೆಳಿಗ್ಗೆ 11:30 ಗಂಟೆಯ ನಂತರ**. ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 13.08.2025ರ ಬೆಳಿಗ್ಗೆ 11:30 ಗಂಟೆಯ ನಂತರ**. ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು ಅಥವಾ ನಿಗಮದ **www.ksbcl.com** ವೆಬ್‌ಸೈಟ್ ನಿಂದ ಪಡೆಯಬಹುದು.

ಸಹಿ/–
ವ್ಯವಸ್ಥಾಪಕರು (ಆ&ಮೂಸೌ)
ವಾಸಾಸಂಇ/ವಾಪ್ರ/ಜಿಎ/2165/2025–26

Karnatak University, Dharwad
KARNATAK ARTS COLLEGE, DHARWAD
DEPARTMENT OF TOURISM STUDIES (UG/PG)

P.G. ADMISSION NOTIFICATION 2024-2025

The Karnatak University, Dharwad invites applications for admission to the following Courses

COURSES OFFERED

1. MTTM - Master of Tourism and Travel Management
(2 year PG) Eligibility : Any Degree pass (45%, SC/ST/Cat-I-40%)
2. Diploma in Hotel / Hospitality Services
One Year Job Course (Add on).
Eligibility : Any PUC pass

100% JOBS
Limited Seats

Last date for Submission of Application : 23-08-2025
(Submit your application to the Department on offline mode.)
Date of Entrance Test : 30-08-2025 at 02.30 to 03.45 PM

Placement Assured — Minimum Fees — Hostel & Scholarship

Phone No: 0836-2215344/2441655/ 9844667429/ 99724 90526;
Email-kcdmta@yahoo.co.in/ Website-www.kcdtourism.ac.in

Sd/- Principal, Karnatak Arts College, Dharwad
Sd/- Registrar, Karnatak University, Dharwad

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂ:ಕಾಪಾಇಂ/ಪಂರಾಇಂ/ವಿ/ದಾ/ಕಿ.ಇಂ/ಟೆಂಡರ್/2025–26/810
ದಿನಾಂಕ:–02/08/2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
("ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ 2024–25 ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಏಕ ಮತ್ತು ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ–1, 2 ಮತ್ತು 4 ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:04 ಟೆಂಡರ್‌ಗಿಟ್ಟ ಮೊತ್ತ ರೂ.12.54 ಲಕ್ಷಗಳಿಂದ 164.19 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ರಸ್ತೆ ಮತ್ತು ಕಟ್ಟಡ ನಿರ್ಮಾಣ. ಟೆಂಡರ್ ಫಾರಂಗಳನ್ನು ದಿನಾಂಕ: 02/08/2025 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 13/08/2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/233/ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬಿ.ಬಿ.ಎಂ.ಪಿ ಕಾಂಪ್ಲೆಕ್ಸ್, ಧನ್ವಂತರಿ ರಸ್ತೆ, ಬೆಂಗಳೂರು–560 009.

ಸಂಖ್ಯೆ:ಕಾಪಾಅ/ಗಾನ/ಟೆಂಡರ್/ಕೆಪಿಪಿ/03/2025-26 ದಿನಾಂಕ: 02-08-2025

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಎಂಇಎಸ್/ ರೈಲ್ವೆ ಅಥವಾ ಇತರೆ ಯಾವುದೇ / ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಅನುಮೊದನೆಯಾದ ಕಾಮಗಾರಿಯ ಹೆಸರುಗಳು
1.	ವಾರ್ಡ್ ಸಂಖ್ಯೆ 124 ರ ಸುಭಾಷನಗರದ 5, 6, 1, 11, 9, 2, 8, 2, 10, 19, 18, 16, 20. 2, 31. 1, 29. 2, 33. 1, 34. 1, 34. 2, 69, 35. 1, 35. 2, 4, 3, 42, 46, 41. 1, 49, 45, 47, 39. 2 ರಲ್ಲಿ ಒಳಚರಂಡಿಗಳು, ಸಿಸಿ ರಸ್ತೆ ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ವೆಚ್ಚ (ಲಕ್ಷ ರೂ.ಗಳಲ್ಲಿ).: 200.00. ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ).: 3.00.
2.	ವಾರ್ಡ್ ಸಂಖ್ಯೆ 123 ರ ಗಾಂಧಿನಗರ ಉಪ ವಿಭಾಗದ 17, 56, 55, 41. 1, 27, 22. 1, 20, 24, 27, 25. 2, 25. 1, 26, 28 ರಲ್ಲಿ ಒಳಚರಂಡಿಗಳು, ಸಿಸಿ ರಸ್ತೆ ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ವೆಚ್ಚ (ಲಕ್ಷ ರೂ.ಗಳಲ್ಲಿ).: 300.00. ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ).: 4.50.
3.	ವಾರ್ಡ್ ಸಂಖ್ಯೆ 127 ರ ಕಾಟನ್‌ಪೇಟೆ ಉಪ ವಿಭಾಗದ 42, 41, 40. 1, 59, 54. 2, 3. 1, 4, 5 ರಲ್ಲಿ ಒಳಚರಂಡಿಗಳು, ಸಿಸಿ ರಸ್ತೆ ಮತ್ತು ಇತರ ಸಂಬಂಧಿತ ಸುಧಾರಣಾ ಕಾಮಗಾರಿಗಳು. ಟೆಂಡರ್‌ನ ವೆಚ್ಚ (ಲಕ್ಷ ರೂ.ಗಳಲ್ಲಿ).: 200.00. ಇಎಂಡಿ ಮೊತ್ತ (ಲಕ್ಷ ರೂ.ಗಳಲ್ಲಿ).: 3.00.

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **12–08–2025ರ ಸಂಜೆ 4:00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14–08–2025ರ ಮಧ್ಯಾಹ್ನ 12:30 ಗಂಟೆಯವರೆಗೆ.** 3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯಃ (ಕೆಪಿಪಿಪಿ ಮೂಲಕ ತಿಳಿಸಲಾಗುವುದು).

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬಿಬಿಎಂಪಿ.

KSSIDC **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010. ದೂರವಾಣಿ ಸಂಖ್ಯೆ: 080–23407011–25
ಇ–ಮೇಲ್: chiefengineerkssidc@gmail.com

ಸಂಖ್ಯೆ: ಪಿ–101/ಇಎನ್‌ಜಿಜಿ/ಅ.ಅ/New Establishment works/2025–26
ದಿನಾಂಕ: 31–07–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ–ಟೆಂಡರ್ ದಾಖಲೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸೂಚಿಸಿದ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವ ಸಂಪನ್ಮೂಲವುಳ್ಳ ಮತ್ತು ಕಾಮಗಾರಿಯಲ್ಲಿ ಅನುಭವವಿರುವ ಟೆಂಡರರುದಾರರು ಇವರಿಂದ ಟೆಂಡರನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಟೆಂಡರ್ ದಾಖಲೆ ಪದ್ಧತಿ (TWO TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ಟೆಂಡರ್ ಪ್ರಕಟಣೆಯನ್ನು ಸಂಖ್ಯೆ: ಇಪಿ–101/ಇಎನ್‌ಜಿಜಿ/ಅ.ಅ/New Establishment works/2025–26 ದಿ: 01–08–2025 ರಂತೆ ಹೊರಡಿಸಲಾಗಿರುತ್ತದೆ.

Sl. No.	Name of the Work	E.M.D in Lakhs.
1	Establishment of New Industrial Estate at Metikurke village, Aimangala hobli, Hiriyur Tq, Chitradurga District. (Phase- I) 60.5 acres.	32.91

ಟೆಂಡರ್ ದಸ್ತಾವೇಜುಗಳ (Tender Document) ಹಾಗೂ ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://kppp.Karnataka.gov.in (Karnataka State Small Industries Development Corporation Limited) ಮುಖಾಂತರ ದಿನಾಂಕ: 01–08–2025 ಸಂಜೆ 17.00 ಗಂಟೆಯಿಂದ ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಬಹುದು.

ಟೆಂಡರ್ ನ ಕಾಲಮಿತಿ ವಿವರಗಳು:– (1) ಟೆಂಡರ್ ದಾಖಲೆಗಳು ಲಭ್ಯವಾಗುವ ದಿನಾಂಕ: **01–08–2025 at 17.00 ಗಂಟೆಯ ನಂತರ.** (2) ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಬಾವಿ ಸಭೆ ದಿನಾಂಕ: **06–08–2025, 12.00 ಗಂಟೆಗೆ.** (3) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **20–08–2025, 17.00 ಗಂಟೆಯ ವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **22–08–2025, 17.00 ಗಂಟೆಯ ನಂತರ.** (5) ತಾಂತ್ರಿಕ ಟೆಂಡರ್ ತೆರೆಯುವ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಬಿಡ್‌ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು. (6) ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/–
ಅಧೀಕ್ಷಕ ಅಭಿಯಂತರರು
DIPR/CP/SPAN/2170/2025-26

ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ** (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು –560 010. ಫೋನ್: 080–23407011–25
ಇ–ಮೇಲ್:kssidcho@karnataka.gov.in ವೆಬ್‌ಸೈಟ್ : www.kssidc.co.in

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:ಅವಧಿ ವಿಸ್ತರಣೆ:2025 ದಿನಾಂಕ 31.07.2025

ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಮಳಿಗೆ/ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಕಾಲಾವಧಿ ವಿಸ್ತರಣೆ ಪ್ರಕಟಣೆ

ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಕೈಗಾರಿಕಾ ಮಳಿಗೆ/ನಿವೇಶನಗಳನ್ನು ಯಥಾಸ್ಥಿತಿಯಲ್ಲಿ ಹಂಚಿಕೆ ಮಾಡಲು ಆಸಕ್ತ ಭಾವಿ ಉದ್ದಿಮೆದಾರರಿಂದ ಅರ್ಜಿಗಳನ್ನು ಆಹ್ವಾನಿಸಿ, ಈ ಹಿಂದೆ ಕೆಳಕಂಡ ವಿವರಗಳಂತೆ ವಿವಿಧ ದಿನಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಿ, ಅರ್ಜಿ ಸಲ್ಲಿಸಲು ದಿನಾಂಕ 31.07.2025 ರವರೆಗೆ ನಿಗಧಿಪಡಿಸಲಾಗಿತ್ತು.

1) ಸಂಖ್ಯೆ:ಸಮನ್ವಯ:ಬೆಂ.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/01 ದಿನಾಂಕ 23.06.2025
2) ಸಂಖ್ಯೆ:ಸಮನ್ವಯ:ತು.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/02 ದಿನಾಂಕ 23.06.2025
3) ಸಂಖ್ಯೆ:ಸಮನ್ವಯ:ಶಿ.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/03 ದಿನಾಂಕ 23.06.2025
4) ಸಂಖ್ಯೆ:ಸಮನ್ವಯ:ಹು.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/04 ದಿನಾಂಕ 23.06.2025
5) ಸಂಖ್ಯೆ:ಸಮನ್ವಯ:ಬೆ.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/05 ದಿನಾಂಕ 23.06.2025
6) ಸಂಖ್ಯೆ:ಸಮನ್ವಯ:ಕ.ವಿ:ಮಳಿಗೆ:ನಿವೇಶನ:ಹಂಚಿಕೆ:ಪ್ರಕಟಣೆ:2025/06 ದಿನಾಂಕ 23.06.2025
7) ಸಂಖ್ಯೆ:ಸಮನ್ವಯ:ಎಸ್‌ಸಿಪಿ–ಟಿಎಸ್‌ಪಿ:ಮಳಿಗೆ:ಹಂಚಿಕೆ:ಪ್ರಕಟಣೆ:2025/07 ದಿನಾಂಕ 23.06.2025
8) ತಿದ್ದುಪಡಿ ಪ್ರಕಟಣೆ ಸಂಖ್ಯೆ ಸಮನ್ವಯ:ಎಸ್‌ಸಿಪಿ–ಟಿಎಸ್‌ಪಿ:ಮಳಿಗೆ:ಹಂಚಿಕೆ:ಪ್ರಕಟಣೆ:2025 ದಿನಾಂಕ 30.06.2025

ಸಣ್ಣ ಕೈಗಾರಿಕೋದ್ಯಮಿಗಳು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ, ಈಗ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ದಿನಾಂಕ **18–08–2025 ರ ಸಂಜೆ 5.00 ಗಂಟೆಯವರೆಗೆ** ವಿಸ್ತರಿಸಲಾಗಿದೆ.

ಮುಂದುವರೆದು, **ಕ್ರಮ ಸಂಖ್ಯೆ (7)ರಲ್ಲಿ ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದ ಹಂಚಿಕೆ ಪ್ರಕಟಣೆಯಲ್ಲಿ ನಮೂದಿಸಿದ್ದ ಬಳ್ಳಾರಿ ಜಿಲ್ಲೆ, ಹರಗಿನದೋಣಿ ಕೈಗಾರಿಕಾ ವಸಾಹತುವಿನಲ್ಲಿರುವ ಮಳಿಗೆ ಸಂಖ್ಯೆ ಸಿ–09ನ್ನು ಪ್ರಕಟಣೆಯಿಂದ ಕೈಬಿಡಲಾಗಿದೆ.**

ಉಳಿದಂತೆ, ಈ ಮೇಲಿನ ಹಂಚಿಕೆ ಪ್ರಕಟಣೆಗಳಲ್ಲಿ, ನಮೂದಿಸಿರುವ ಹಂಚಿಕೆ ನಿಯಮ, ನಿಬಂಧನೆ, ಮಳಿಗೆ/ನಿವೇಶನಗಳ ದರ, ಇಎಂಡಿ ಮೊತ್ತ, ಸಹಾಯಧನ ಇತ್ಯಾದಿಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ಹತ್ತಿರದ ಶಾಖಾ/ವಿಭಾಗೀಯ ಕಛೇರಿ ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಬಹುದು. ಹಾಗೂ ನಿಗಮದ ವೆಬ್‌ಸೈಟ್ **www.kssidc.co.in** ನಲ್ಲಿಯೂ ವೀಕ್ಷಿಸಬಹುದಾಗಿರುತ್ತದೆ.

ವಾಸಾಸಂಇ/ವಾಪ್ರ/ಜಿಎ/2166/2025–26
ಸಹಿ/–ವ್ಯವಸ್ಥಾಪಕ ನಿರ್ದೇಶಕರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: ನಂ.148, ಎಂಬೆಸಿ ಸ್ಕ್ವೇರ್, ಇನ್‌ಫೆಂಟ್ರಿ ರೋಡ್, ಬೆಂಗಳೂರು–560001
ದೂರವಾಣಿ ಸಂಖ್ಯೆ: 080-22289966/22256688 ಫ್ಯಾಕ್ಸ್: 080-22264477
Email: mail@vjnl.in, Website: www.vjnl.in CIN No: U41000KA2016SGC097260

ಕಾರ್ಯಪಾಲಕ ಇಂಜಿನೀಯರ್‌ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ರವರ ಕಛೇರಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ–572132 ಫೋನ್ ನಂ.: 08137– 282112
ಇ–ಮೇಲ್:eeyetmadhugiri4@gmail.com

ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಟೆ.ಅ–02/2025–26/ ದಿನಾಂಕ: 30.07.2025

ಸಂಕ್ಷೀಪ್ತ ಟೆಂಡರ್ ಪ್ರಕಟಣೆ: (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ Construction of 220KV Switching Station for arranging power supply to an extent of 35MVA on EHT Basis (on 220KV Voltage class) in favour of Executive Engineer, Yettinahole Project, Divsion No. 4, Madhugiri for pumping water to Ramanagara, Magadi & T G Halli Water reservoirs at Mudalakerepalya village in Kolala Hobli, Koratagere Taluk in Tumkur district under Self Execution scheme by M/s VJNL. ಕಾಮಗಾರಿಗೆ ಎರಡು ಟೆಂಡರ್ ದಾಖಲೆಗಳ ಪದ್ಧತಿಯ ಮೂಲಕ **ರೂ. 3,089.65** ಲಕ್ಷಗಳಿಗೆ ಅರ್ಹ ಗುತ್ತಿಗೆದಾರ ರಿಂದ ಶೇಕಡಾವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕೆ.ಪಿ.ಪಿ–ಪೋರ್ಟಲ್ ನ **http://www.kppp.karnataka.gov.in** ವೆಬ್‌ಸೈಟ್ ಮೂಲಕ **ದಿನಾಂಕ: 01.08.2025 ರಿಂದ ದಿನಾಂಕ: 30.08.2025** ರ ಸಂಜೆ 5.00 ಗಂಟೆಯ ವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಗುತ್ತಿಗೆದಾರರ ದರ್ಜೆ, ಟೆಂಡರ್ ನಿಯಮ, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು **http://www.kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿ ಸಮಯದಲ್ಲಿ **ದಿನಾಂಕ: 18.08.2025 ರ ಸಂಜೆ 3:00 ಗಂಟೆಯ** ವರೆಗೆ ಸಂಪರ್ಕಿಸಬಹುದು, ಈ ಕಾಮಗಾರಿಯ ಪ್ರೀ– ಬಿಡ್ ಸಭೆಯನ್ನು **ದಿನಾಂಕ: 18.08.2025 ರಂದು ಬೆಳಗ್ಗೆ 11.00 ಗಂಟೆಗೆ** ವ್ಯವಸ್ಥಾಪಕ ನಿರ್ದೇಶಕರು, ವಿಜನಿನಿ, ಬೆಂಗಳೂರು ಇವರ ಕಛೇರಿಯಲ್ಲಿ ಆಯೋಜಿಸಲಾಗಿರುತ್ತದೆ. ಸ್ವೀಕೃತ ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ **ದಿನಾಂಕ: 02.09.2025 ರಂದು ಬೆಳಿಗ್ಗೆ 11.00 ಗಂಟೆಗೆ** ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ. 04 ಮಧುಗಿರಿ ರವರ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕೆಳ ಸಹಿದಾರರು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ–04
ವಿ.ಜ.ನಿ.ನಿ, ಮಧುಗಿರಿ,
DIPR/TUM/RO-89/25-26/Oysters

‘ಮೋದಿ ಹೆಸರು ಹೇಳುವಂತೆ ಚಿತ್ರಹಿಂಸೆ’

ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣ; ಪ್ರಜ್ಞಾ ಸಿಂಗ್ ಠಾಕೂರ್ ಹೇಳಿಕೆ

ಮುಂಬೈ (ಪಿಟಿಐ) ‘ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ನರೇಂದ್ರ ಮೋದಿ ಸೇರಿದಂತೆ ಹಲವರ ಹೆಸರನ್ನು ಹೇಳುವಂತೆ ತನಿಖಾಧಿಕಾರಿಗಳು ನನಗೆ ಚಿತ್ರಹಿಂಸೆ ನೀಡಿದ್ದರು’ ಎಂದು ಪ್ರಕರಣದಲ್ಲಿ ಖುಲಾಸೆಗೊಂಡಿರುವ ಬಿಜೆಪಿ ಮಾಜಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ಹೇಳಿದ್ದಾರೆ.

ಪ್ರಜ್ಞಾ ಸಿಂಗ್ ಠಾಕೂರ್

ಎನ್‌ಐಎ ನ್ಯಾಯಾಲಯವು ಆದೇಶ ಪ್ರಕಟಿಸಿದ ಮರುದಿನ ಮಾಧ್ಯಮಗಳ ಮುಂದೆ ಈ ಆರೋಪ ಮಾಡಿದ್ದಾರೆ.

‘ತನಿಖೆಯ ವೇಳೆ ನನಗೆ ತೀವ್ರ ಚಿತ್ರಹಿಂಸೆ ನೀಡಲಾಗಿತ್ತು. ನಾನು ಸೂರತ್ (ಗುಜರಾತ್)ನಲ್ಲಿ ಉಳಿದಿದ್ದ ವೇಳೆ ನರೇಂದ್ರ ಮೋದಿ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸೇರಿದಂತೆ ಹಲವರ ಹೆಸರು ಹೇಳುವಂತೆ ತನಿಖಾಧಿಕಾರಿಗಳು ಒತ್ತಾಯಿಸಿದ್ದರು. ಆದರೆ, ನಾನು ಯಾರ ಹೆಸರನ್ನೂ ಉಲ್ಲೇಖಿಸಿರಲಿಲ್ಲ. ಯಾವುದೇ ಕಾರಣಕ್ಕೂ ಸುಳ್ಳು ಹೇಳುತ್ತಿಲ್ಲ’ ಎಂದು ತಿಳಿಸಿದ್ದಾರೆ.

‘ನಾನು ಈ ಎಲ್ಲಾ ವಿಚಾರವನ್ನು ಲಿಖಿತವಾಗಿ ದಾಖಲಿಸಿದ್ದೇನೆ. ನನಗೆ ಚಿತ್ರಹಿಂಸೆ ನೀಡುವುದೇ ಅವರ ಮೂಲ ಉದ್ದೇಶವಾಗಿತ್ತು. ನಾನು ಹೆಸರು ಹೇಳದಿದ್ದರೆ, ಚಿತ್ರಹಿಂಸೆ ನೀಡುವುದನ್ನು ಮುಂದುವರಿಸುವುದಾಗಿ ತಿಳಿಸಿದ್ದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಆರ್‌ಎಸ್‌ಎಸ್‌ನ ಸುದರ್ಶನ್, ಇಂದ್ರೇಶ್ ಹಾಗೂ ರಾಮ್ ಮಾಧವ್ ಸೇರಿದಂತೆ ಹೆಸರು ಹೇಳುವಂತೆ ಒತ್ತಾಯಿಸಿದ್ದರು’ ಎಂದು ಠಾಕೂರ್ ನೆನಪಿಸಿದ್ದಾರೆ.

‘ನಾನು ಪ್ರಜ್ಞೆ ತಪ್ಪಿ, ಆಸ್ಪತ್ರೆಗೆ ದಾಖಲಾಗಿದ್ದ ವೇಳೆಯೂ ಅಕ್ರಮವಾಗಿ ನನ್ನನ್ನು ಬಂಧಿಸಿಡಲಾಗಿತ್ತು. ನಾನು ಹೇಳಿದ ಎಲ್ಲಾ ವಿಚಾರವನ್ನು ನಾನು ದಾಖಲಿಸಿದ್ದೇನೆ. ಸತ್ಯವೂ ಹೊರಬಂದಿದೆ. ಇದು ಸನಾತನ ಧರ್ಮಕ್ಕೆ ಸಂದ ಗೆಲುವು, ಹಿಂದುತ್ವಕ್ಕೆ ಸಿಕ್ಕ ಗೆಲುವು, ಸನಾತನಿ ರಾಷ್ಟ್ರಕ್ಕೆ ಸಿಕ್ಕ ಗೆಲುವು’ ಎಂದು ಹೇಳಿದ್ದಾರೆ.

ಆರೋಪ ನಿರಾಕರಣೆ: ಪ್ರಜ್ಞಾ ಠಾಕೂರ್ ಮಾಡಿದ ಚಿತ್ರಹಿಂಸೆ, ಚಿಕಿತ್ಸೆಯ ನಿರಾಕರಣೆ ಕುರಿತಾದ ಆರೋಪಗಳನ್ನು ವಿಶೇಷ ನ್ಯಾಯಾಧೀಶ ಎ.ಕೆ.ಲಹೋಟಿ ನೀಡಿದ ಆದೇಶದಲ್ಲಿ ತಿರಸ್ಕರಿಸಿದ್ದಾರೆ.

‘ಈ ಆರೋಪಗಳಿಗೆ ಸಂಬಂಧಿಸಿದಂತೆ ಯಾವುದೇ ಪುರಾವೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ’ ಎಂದು ಆದೇಶದಲ್ಲಿ ವಿವರಿಸಿದ್ದಾರೆ.

ಸಾಕ್ಷಿ ತೆಗೆದುಹಾಕಿದ ನ್ಯಾಯಾಲಯ: ಪ್ರಕರಣದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಹೆಸರು ಉಲ್ಲೇಖಿಸುವಂತೆ ಎಟಿಎಸ್ ಅಧಿಕಾರಿಗಳು ಹಿಂಸೆ ನೀಡಿ, ಒತ್ತಾಯಪಡಿಸಿದ್ದರು ಎಂದು ಸಾಕ್ಷಿದಾರ ಮಿಲಿಂದ್ ಜೋಶಿರಾವ್ ಅವರು ವಿಶೇಷ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದಿದ್ದನ್ನು ನ್ಯಾಯಾಲಯವು ತೆಗೆದುಹಾಕಿದೆ.

‘ಎಟಿಎಸ್‌ಗೆ ಅವರು ನೀಡಿದ ಹೇಳಿಕೆಯನ್ನು ಅವಲಂಬಿಸಲು ಸಾಧ್ಯವಾಗಲಿಲ್ಲ. ಸಾಕ್ಷಿಯು ಹೇಳಿಕೆಯನ್ನು ಮನಸ್ಸಂಕಲ್ಪವಿಲ್ಲದೇ ನೀಡಿದ್ದರು’ ಎಂದು ಎ.ಕೆ.ಲಹೋಟಿ ಅವರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ತನಿಖಾಧಿಕಾರಿಗಳಿಂದ ತೀವ್ರ ಚಿತ್ರಹಿಂಸೆ
- ಅನಾರೋಗ್ಯವಿದ್ದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ನಿರಾಕರಣೆ
- ಮಾಧ್ಯಮಗಳ ಮುಂದೆ ಪ್ರಜ್ಞಾ ಸಿಂಗ್ ಠಾಕೂರ್

‘ಅಭಿನವ್ ಭಾರತ್ ಸಂಘಟನೆ ನಿಷೇಧಿಸಿಲ್ಲ’

2008ರ ಮಾಲೇಗಾಂವ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ, ಎಲ್ಲಾ ಏಳು ಆರೋಪಿಗಳನ್ನು ಖುಲಾಸೆಗೊಳಿಸಿರುವ ನ್ಯಾಯಾಲಯವು, ಬಲಪಂಥೀಯ ತೀವ್ರವಾದಿ ಗುಂಪು ‘ಅಭಿನವ್ ಭಾರತ್’ ಈ ಸ್ಫೋಟವನ್ನು ನಡೆಸಿದೆ ಎಂಬ ಪ್ರಾಸಿಕ್ಯೂಷನ್ ವಾದವನ್ನು ತಳ್ಳಿಹಾಕಿದೆ.

‘ಸಂಘಟನೆಯನ್ನು ಭಯೋತ್ಪಾದಕ ಸಂಘಟನೆ ಎಂದು ಸರ್ಕಾರವು ಘೋಷಿಸಿಲ್ಲ’ ಎಂದು ಒತ್ತಿ ಹೇಳಿದೆ.

ಒಂದು ಸಾವಿರ ಪುಟಗಳ ಆದೇಶ ಪ್ರಕಟಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎ.ಕೆ.ಲಹೋಟಿ, ‘ಆರೋಪಿಗಳೆಲ್ಲರೂ ‘ಅಭಿನವ್ ಭಾರತ್’ ಸಂಘಟನೆಯ ಸದಸ್ಯರಾಗಿದ್ದು, ಸಂಘಟಿತ ಅಪರಾಧದ ಗುಂಪಿನ ಸದಸ್ಯರಾಗಿದ್ದರು ಎಂಬುದನ್ನು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ಪಡೆ (ಎಟಿಎಸ್) ತನ್ನ ತನಿಖೆಯಲ್ಲಿ ಉಲ್ಲೇಖಿಸಿತ್ತು. ಆದರೆ, ಸಂಘಟನೆಯನ್ನು ಇದುವರೆಗೂ ಘೋಷಿತ ಭಯೋತ್ಪಾದಕ ಸಂಘಟನೆ ಎಂದು ಕೇಂದ್ರ ಸರ್ಕಾರ ಘೋಷಿಸಿಲ್ಲ. ಅಭಿನವ್ ಭಾರತ್ ಟ್ರಸ್ಟ್ ಅಥವಾ ಸಂಸ್ಥಾ, ಸಂಘಟನೆ ಹಾಗೂ ಫೌಂಡೇಶನ್ ನಿಷೇಧಿತ ಸಂಘಟನೆಯಲ್ಲ’ ಎಂದು ನ್ಯಾಯಾಲಯವು ತಿಳಿಸಿದೆ.

ಕೇರಳ: ಸನ್ಯಾಸಿನಿಯರಿಗೆ ಷರತ್ತುಬದ್ಧ ಜಾಮೀನು

ಬಿಲಾಸ್‌ಪುರ (ಪಿಟಿಐ): ಮಾನವ ಕಳ್ಳಸಾಗಣೆ, ಬಲವಂತದ ಮತಾಂತರದ ಆರೋಪದಲ್ಲಿ ಬಂಧನಕ್ಕೀಡಾಗಿದ್ದ ಕೇರಳದ ಇಬ್ಬರು ಕ್ರೈಸ್ತ ಸನ್ಯಾಸಿನಿಯರು ಸೇರಿದಂತೆ ಮೂವರಿಗೆ ಛತ್ತೀಸಗಢದ ಬಿಲಾಸ್‌ಪುರ ಜಿಲ್ಲಾ ವಿಶೇಷ ನ್ಯಾಯಾಲಯವು ಶನಿವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

₹50,000 ಬಾಂಡ್‌ನೊಂದಿಗೆ ಇಬ್ಬರು ಸಾಕ್ಷಿದಾರರಿಂದ ಶ್ಯೂರಿಟಿ ಪಡೆದ ನ್ಯಾಯಾಲಯವು, ಸನ್ಯಾಸಿನಿಯರು ಹಾಗೂ ಮತ್ತೊಬ್ಬ ವ್ಯಕ್ತಿ ದೇಶ ತೊರೆಯದಂತೆ ಮತ್ತು ಅವರ ಪಾಸ್‌ಪೋರ್ಟ್‌ಗಳನ್ನು ಒಪ್ಪಿಸುವಂತೆ ಷರತ್ತು ವಿಧಿಸಿದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಿರಾಜುದ್ದೀನ್ ಖುರೇಷಿ ಅವರು, ಕೇರಳದ ಕ್ಯಾಥೋಲಿಕ್ ಸನ್ಯಾಸಿನಿಯರಾದ ಪ್ರೀತಿ ಮೇರಿ, ವಂದನಾ ಫ್ರಾನ್ಸಿಸ್ ಹಾಗೂ ಸುಕಮಾನ್ ಮಾಂಡವಿ ಅವರಿಗೆ ಜಾಮೀನು ಮಂಜೂರು ಮಾಡಿದ್ದಾರೆ.

ನಾರಾಯಣಪುರದಿಂದ ಮೂವರು ಬಾಲಕಿಯರನ್ನು ಬಲವಂತರವಾಗಿ ಮತಾಂತರಿಸಿ ಕಳ್ಳಸಾಗಣೆ ಮಾಡುತ್ತಿದ್ದ ಆರೋಪದ ಮೇಲೆ ಸ್ಥಳೀಯ ಬಜರಂಗದಳದ ಕಾರ್ಯಕರ್ತರು ನೀಡಿದ ದೂರಿನ ಅನ್ವಯ ರೈಲ್ವೆ ಪೊಲೀಸರು ಜುಲೈ 25ರಂದು ದುರ್ಗ್ ರೈಲು ನಿಲ್ದಾಣದ ಬಳಿ ಸನ್ಯಾಸಿನಿಯರನ್ನು ಬಂಧಿಸಿದ್ದರು.

ಸುದ್ದಿ 2 ನಿಮಿಷ

‘ಪರಮೇಶ್ವರ ಸಭೆ; ತಪ್ಪಿಲ್ಲ’

ಮಡಿಕೇರಿ: ‘ಗೃಹಸಚಿವ ಜಿ.ಪರಮೇಶ್ವರ ಅವರು ಸಮುದಾಯದ ಸಮಸ್ಯೆಗಳ ಕುರಿತು ಚರ್ಚಿಸಲು ದಲಿತ ಶಾಸಕರು, ಸಚಿವರ ಸಭೆ ನಡೆಸುವುದು ತಪ್ಪಲ್ಲ. ಸಭೆ ಕುರಿತು ಯಾರೂ ತಪ್ಪಾಗಿ ಅರ್ಥೈಸಬಾರದು’ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರತಿಪಾದಿಸಿದರು.

‘ಕಾಂಗ್ರೆಸ್‌ನಲ್ಲಿ ಎಲ್ಲರೂ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಯಾವುದೇ ಸಮುದಾಯದ ಸಮಸ್ಯೆಗಳ ಕುರಿತು ಚರ್ಚಿಸುವುದರಲ್ಲಿ ತಪ್ಪೇನಿಲ್ಲ’ ಎಂದು ಅವರು ಇಲ್ಲಿ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.



‘ಚುನಾವಣಾ ಆಯೋಗವು ಬಿಜೆಪಿ ಸೇರಿಲ್ಲ ಅಷ್ಟೇ. ಆದರೆ, ಬಾಹ್ಯ ಬೆಂಬಲ ನೀಡುವುದಾಗಿ ಹೇಳುತ್ತಿರುವಂತೆ ಕಾಣುತ್ತಿದೆ. ಏಕೆಂದರೆ, ಕರ್ನಾಟಕದ ಜೊತೆಗೆ, ಮಹಾರಾಷ್ಟ್ರ, ಹರಿಯಾಣ, ಸೇರಿ ದೇಶದ ಬಹುತೇಕ ಕಡೆ ಮತದಾರರ ಪಟ್ಟಿಯಲ್ಲಿ ದೋಷ ಉಂಟಾಗಿದೆ. ವಲಸಿಗರನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಇದರ ವಿರುದ್ಧ ರಾಹುಲ್ ಗಾಂಧಿ ಪ್ರತಿಭಟಿಸಲಿದ್ದಾರೆ’ ಎಂದು ಹೇಳಿದರು.

ಸುಹಾಸ್ ಶೆಟ್ಟಿ ಕೊಲೆ ಪ್ರಕರಣ: 18 ಕಡೆ ಎನ್‌ಐಎ ಶೋಧ

ಮಂಗಳೂರು: ಬಜರಂಗ ದಳದ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಶನಿವಾರ ಶೋಧ ನಡೆಸಿದ್ದಾರೆ.

ಈ ವೇಳೆ 11 ಮೊಬೈಲ್ ಫೋನ್‌ಗಳು, 13 ಸಿಮ್ ಕಾರ್ಡ್‌ಗಳು, ಎಂಟು ಮೆಮೊರಿ ಕಾರ್ಡ್‌ಗಳು ಸೇರಿದಂತೆ ಹಲವು ಡಿಜಿಟಲ್ ಡಿವೈಸ್‌ಗಳು, ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ರಾಜ್ಯದ 18ಕ್ಕೂ ಹೆಚ್ಚು ಕಡೆಗಳಲ್ಲಿ ಶೋಧ ನಡೆಸಲಾಗಿದೆ. ಪ್ರಕರಣದಲ್ಲಿ ಬಂಧಿತರಾಗಿರುವ 12 ಜನರ ಮನೆಗಳಲ್ಲಿ ಶೋಧ ಕಾರ್ಯ ನಡೆದಿದೆ, ಜೊತೆಗೆ, ಕೆಲವು ಶಂಕಿತರ ಮನೆಗಳಲ್ಲೂ ಪರಿಶೀಲನೆ ನಡೆಸಲಾಗಿದೆ ಎಂದು ಎನ್‌ಐಎ ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದೆ.

ಎನ್‌ಐಎ ಅಧಿಕಾರಿಗಳ ತಂಡವು, ಬಜಪೆ ಹಾಗೂ ಸುರತ್ಕಲ್ ಪೊಲೀಸ್ ಠಾಣೆ ವ್ಯಾಪ್ತಿಯ 10ಕ್ಕೂ ಹೆಚ್ಚು ಕಡೆಗಳಲ್ಲಿ ಶೋಧ ನಡೆಸಿದೆ.

ಬಜಪೆ ಸಮೀಪ ಕಿನ್ನಿಪದವು ಎಂಬಲ್ಲಿ ಮೇ 1ರಂದು ಸುಹಾಸ್ ಶೆಟ್ಟಿ ಸ್ನೇಹಿತರೊಂದಿಗೆ ಕಾರಿನಲ್ಲಿ ತೆರಳುತ್ತಿದ್ದಾಗ, ಅವರ ಮೇಲೆ ದಾಳಿ ನಡೆಸಿ ಕೊಲೆ ಮಾಡಲಾಗಿತ್ತು. ಈ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ಬಿಜೆಪಿ ಮುಖಂಡರು ಒತ್ತಾಯಿಸಿದ್ದರು. ಈ ಪ್ರಕರಣವನ್ನು ಎನ್‌ಐಎಗೆ ವಹಿಸುವಂತೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಕೇಂದ್ರ ಗೃಹ ಸಚಿವಾಲಯವು ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಿ ಜೂನ್ 7ರಂದು ಆದೇಶ ಹೊರಡಿಸಿತ್ತು.

‘ನಮ್ಮ ಮೆಟ್ರೊ’ದಲ್ಲಿ ಅಂಗಾಂಗ ಸಾಗಣೆ

ಒಂದನೇ ಪುಟದಿಂದ...

ತಕ್ಷಣ ಕಾರ್ಯಪ್ರವೃತ್ತರಾದ ಮೆಟ್ರೊ ಸುರಕ್ಷತಾ ಸಿಬ್ಬಂದಿ ಕೆಲವೇ ಗಂಟೆಗಳಲ್ಲಿ ‘ಯಕೃತ್’ ಸಾಗಾಟ ಪ್ರಕ್ರಿಯೆಯನ್ನು ಸುಗಮವಾಗಿ ಮಾಡುವಲ್ಲಿ ಸರ್ವ ರೀತಿಯ ನೆರವನ್ನೂ ನೀಡಿದ್ದರು.

ಸಾಗಾಟ ಪ್ರಕ್ರಿಯೆ ನಡೆದಿದ್ದು: ಒಬ್ಬರು ವೈದ್ಯರು ಮತ್ತು ಏಳು ವೈದ್ಯಕೀಯ ಸಿಬ್ಬಂದಿ ಯಕೃತ್ತನ್ನು ವೈದೇಹಿ ಆಸ್ಪತ್ರೆಯಿಂದ ಶುಕ್ರವಾರ ರಾತ್ರಿ ವೈಟ್‌ಫೀಲ್ಡ್ ಮೆಟ್ರೊ ನಿಲ್ದಾಣಕ್ಕೆ ಆಂಬುಲೆನ್ಸ್ ಮೂಲಕ ತಂದರು. ಮೆಟ್ರೊದ ಸಹಾಯಕ ಭದ್ರತಾ ಅಧಿಕಾರಿ (ಎಎಸ್‌ಒ) ಮತ್ತು ಮೆಟ್ರೊ ಸಿಬ್ಬಂದಿ ವೈದ್ಯರ ತಂಡವನ್ನು ಬರಮಾಡಿಕೊಂಡು, ದಾಖಲಾತಿ ಕಾರ್ಯ ಮತ್ತು ಭದ್ರತಾ ಪರಿಶೀಲನೆಗಳನ್ನು ಸಂಯೋಜಿಸಿದರು.

ಯಕೃತ್ ಪೆಟ್ಟಿಗೆಯನ್ನು ಹೊತ್ತ ಮೆಟ್ರೊ ರೈಲು ರಾತ್ರಿ 8.42ಕ್ಕೆ ವೈಟ್‌ಫೀಲ್ಡ್‌ನಿಂದ (ಕಾಡುಗೋಡಿ) ಹೊರಟು, ರಾತ್ರಿ 9.48ಕ್ಕೆ ರಾಜರಾಜೇಶ್ವರಿ ನಗರ ನಿಲ್ದಾಣಕ್ಕೆ ತಲುಪಿತ್ತು. ಆ ನಿಲ್ದಾಣದಲ್ಲಿ ಮತ್ತೊಬ್ಬ ಎಎಸ್‌ಒ ಮತ್ತು ಮೆಟ್ರೊ ಸಿಬ್ಬಂದಿ, ವೈದ್ಯಕೀಯ ತಂಡಕ್ಕೆ ನೆರವಾಗಿ, ಅಲ್ಲೇ ಕಾಯುತ್ತಿದ್ದ ಆಂಬುಲೆನ್ಸ್ ಮೂಲಕ ಸ್ಪರ್ಶ್ ಆಸ್ಪತ್ರೆಗೆ ಸುರಕ್ಷಿತವಾಗಿ ಯಕೃತ್ ತಲುಪಿಸಿದರು.

ಸಕಾಲದಲ್ಲಿ ಅಂಗಾಂಗ ತಲುಪಿಸಿ ಜೀವ ಉಳಿಸುವ ಕಾರ್ಯಾಚರಣೆಯಲ್ಲಿ ಸಮಯೋಚಿತ ಸಹಕಾರ ಮತ್ತು ಜವಾಬ್ದಾರಿ ತೋರಿದ ಸಹಾಯಕ ಭದ್ರತಾ ಅಧಿಕಾರಿಗಳು, ಗೃಹರಕ್ಷಕ ದಳದ ಸಿಬ್ಬಂದಿ ಮತ್ತು ಮೆಟ್ರೊ ಸಿಬ್ಬಂದಿಗೆ ವೈದ್ಯಕೀಯ ತಂಡ ಕೃತಜ್ಞತೆ ಸಲ್ಲಿಸಿತು.

ಮಾನವ ಅಂಗಾಂಗವನ್ನು ನಮ್ಮ ಮೆಟ್ರೊದಲ್ಲಿ ಶುಕ್ರವಾರ ರಾತ್ರಿ ಸಾಗಣೆ ಮಾಡಲಾಯಿತು

ಈ ಕಾರ್ಯಾಚರಣೆಯನ್ನು ಗೃಹ ಮತ್ತು ನಗರ ವ್ಯವಹಾರಗಳ ಸಚಿವಾಲಯ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಸಂಯುಕ್ತ ಕಾರ್ಯವಿಧಾನ ಆದೇಶದ ಮಾರ್ಗಸೂಚಿಗಳಡಿ ನೆರವೇರಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಇದು ಮೆಟ್ರೊ ರೈಲು ಮೂಲಕ ಅಂಗಾಂಗ ಸಾಗಣೆ ನಡೆಸಿದ ದೇಶದ ಎರಡನೇ ಘಟನೆಯಾಗಿದೆ.

24 ವರ್ಷದ ಯುವಕನ ಯಕೃತ್

ಅಪಘಾತಕ್ಕೆ ಒಳಗಾಗಿ 24 ವರ್ಷದ ಯುವಕ ಮೃತಪಟ್ಟಿದ್ದರು. ಅವರ ಹೃದಯ, ಯಕೃತ್ ಮತ್ತಿತರ ಅಂಗಾಂಗ ದಾನ ಮಾಡಲು ಕುಟುಂಬದವರು ನಿರ್ಧರಿಸಿದ್ದರು.

ರಾಜರಾಜೇಶ್ವರಿ ನಗರದ ಸ್ಪರ್ಶ್ ಆಸ್ಪತ್ರೆಯ 30 ವರ್ಷದ ರೋಗಿಯೊಬ್ಬರು ತೀವ್ರ ಪ್ರಮಾಣದ ಹೆಪಟೈಟಿಸ್‌ನಿಂದಾಗಿ ಯಕೃತ್ ವಿಫಲವಾಗಿತ್ತು. ಯಕೃತ್ ಕಸಿಗಾಗಿ ಕಳೆದ ಎರಡು ತಿಂಗಳಿನಿಂದ ನಿರೀಕ್ಷೆಯಲ್ಲಿದ್ದರು. ದಾನಿಯ ಯಕೃತ್ ಮತ್ತು ರೋಗಿಯ ಯಕೃತ್ ಹೊಂದಾಣಿಕೆ ಆಗುತ್ತಿದ್ದುದರಿಂದ ತಕ್ಷಣ ಕಾರ್ಯಪ್ರವೃತ್ತವಾದ ಸ್ಪರ್ಶ್ ಆಸ್ಪತ್ರೆ ವೈದ್ಯರ ತಂಡ, ಅಂಗಾಂಗ ಕಸಿ ಹಿರಿಯ ಸಮಾಲೋಚಕ ಡಾ.ಮಹೇಶ್ ಗೋಪಸೆಟ್ಟಿ ನೇತೃತ್ವದಲ್ಲಿ ಶುಕ್ರವಾರ ರಾತ್ರಿ ಯಕೃತ್ ಕಸಿ ನೆರವೇರಿಸಿದರು. ಇದೀಗ ರೋಗಿಯು ತೀವ್ರ ನಿಗಾ ಘಟಕದಲ್ಲಿದ್ದು ಚೇತರಿಸಿಕೊಳ್ಳುತ್ತಿದ್ದಾರೆ.

ಕಾರ್ಯಾಚರಣೆ ಹೇಗೆ?

ಯಕೃತ್ ಸಾಗಣೆಗೆ 3ರಿಂದ 4 ಗಂಟೆ ತಗಲುತ್ತಿತ್ತು. ಮತ್ತು ಭಾರಿ ದಟ್ಟಣೆಯ ಈ ಅವಧಿಯಲ್ಲಿ ಗ್ರೀನ್ ಕಾರಿಡಾರ್ ಮಾಡುವುದು ಕಠಿಣ ಸವಾಲಾಗಿತ್ತು.

ವೈಟ್‌ಫೀಲ್ಡ್‌ನ ಖಾಸಗಿ ಆಸ್ಪತ್ರೆಯಿಂದ 5.5 ಕಿಮೀ ದೂರದಲ್ಲಿರುವ ಕಾಡುಗೋಡಿ ಮೆಟ್ರೊ ನಿಲ್ದಾಣಕ್ಕೆ ಗ್ರೀನ್ ಕಾರಿಡಾರ್ ಮೂಲಕ ಯಕೃತ್‌ನ್ನು ಸಾಗಿಸಲಾಯಿತು. ಅಲ್ಲಿಂದ 31 ಕಿ.ಮೀ. ದೂರ ಸಾಗಿ ರಾಜರಾಜೇಶ್ವರಿ ನಗರ ಮೆಟ್ರೊ ನಿಲ್ದಾಣ ತಲುಪುತ್ತಿದ್ದಂತೆ ಯಕೃತ್ ಅನ್ನು ಮತ್ತೆ ಗ್ರೀನ್ ಕಾರಿಡಾರ್ ಮೂಲಕ 2.5 ಕಿಮೀ ದೂರದ ಸ್ಪರ್ಶ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಯಿತು. ಮೆಟ್ರೊ ತನ್ನ ನೇರಳೆ ಮಾರ್ಗದ ರೈಲಿನ ಕೊನೆಯ ಬೋಗಿಯನ್ನು ಇದಕ್ಕಾಗಿಯೇ ಮೀಸಲಿಟ್ಟಿತ್ತು. ಅಲ್ಲದೇ ಅತ್ಯಂತ ಜನದಟ್ಟಣೆಯ ಸಂಚಾರ ಸಮಯದಲ್ಲಿ ನಿತ್ಯದ ಪ್ರಯಾಣಿಕರಿಗೆ ಅಡಚಣೆ ಆಗದಂತೆ ಕ್ರಮ ಕೈಗೊಳ್ಳಲಾಗಿತ್ತು. ಎರಡೂ ನಿಲ್ದಾಣಗಳ ಎಸ್ಕಲೇಟರ್ ಮತ್ತು ಲಿಫ್ಟ್‌ಗಳನ್ನು ಕಾಯ್ದಿರಿಸಿ ಯಕೃತ್ ಸಾಗಣೆಗೆ ಅನುವು ಮಾಡಿಕೊಡಲಾಯಿತು.

ಮೆಟ್ರೊ ನಿರ್ದೇಶಕ ಸುಮಿತ್ ಭಟ್ನಾಗರ್, ಮುಖ್ಯ ಸುರಕ್ಷತಾ ಅಧಿಕಾರಿ ಸೆಲ್ವಂ ಹಾಗೂ ಮೆಟ್ರೊ ಕಾರ್ಯಾಚರಣೆ ಮುಖ್ಯಸ್ಥ ರಂಗಪ್ಪ ಅವರು ಉಸ್ತುವಾರಿ ವಹಿಸಿದ್ದರು.

ಸಾರಿಗೆ ಮುಷ್ಕರವೋ ಸಂಧಾನವೋ?

ಒಂದನೇ ಪುಟದಿಂದ...

‘2023ರಿಂದ ಪರಿಷ್ಕರಣೆಯಾಗಿರುವುದರಿಂದ ಹಿಂಬಾಕಿ ನೀಡುವುದಿಲ್ಲ. ನಾಲ್ಕು ವರ್ಷ ಪರಿಷ್ಕರಣೆ ಇಲ್ಲ ಎಂದು ಈಗ ಹೇಳುವ ಬದಲು ನಾವು ಪ್ರತಿಭಟನೆ ನಡೆಸಿದಾಗ, ಹಿಂದೆ ಮುಷ್ಕರಕ್ಕೆ ಕರೆ ನೀಡಿದ್ದ ಸಂದರ್ಭದಲ್ಲಿ ತಿಳಿಸಬೇಕಿತ್ತು. 2023ರಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಒಪ್ಪಂದದಲ್ಲಿ ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸಬೇಕು. ಅದನ್ನು ಬಿಟ್ಟು ಯಾವುದೇ ಒಪ್ಪಂದ ಇಲ್ಲ ಎನ್ನುವುದು ಸರಿಯಲ್ಲ. ಸಾಮಾಜಿಕ ನ್ಯಾಯದ ಪರವಾಗಿ ಮಾತನಾಡುವ ಸಿದ್ದರಾಮಯ್ಯರಿಂದ ಇಂಥದ್ದನ್ನು ನಿರೀಕ್ಷಿಸಿರಲಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಯಾವುದೋ ವಿದೇಶಿ ಕಂಪನಿಗೆ ₹8,000 ಕೋಟಿ ನೀಡಲು ಇವರಲ್ಲಿ ದುಡ್ಡಿದೆ. ದುಡಿಯುವ ಕಾರ್ಮಿಕರಿಗೆ ಹಿಂಬಾಕಿ ₹ 1,800 ಕೋಟಿ ನೀಡಲು ಕಷ್ಟವಾಗಿದೆ. ಸರ್ಕಾರದ ಯಾವುದೇ ಭರವಸೆಗಳನ್ನು ನಾವು ಒಪ್ಪುವುದಿಲ್ಲ. ಒಪ್ಪಂದ ಮಾಡಿಕೊಳ್ಳಬೇಕು. ಇಲ್ಲವೇ ಮುಷ್ಕರ ಎದುರಿಸಬೇಕು. ಇದೇ ನಮ್ಮ ಅಂತಿಮ ತೀರ್ಮಾನ’ ಎಂದು ಅನಂತ ಸುಬ್ಬರಾವ್ ತಿಳಿಸಿದ್ದಾರೆ.

ಸರ್ಕಾರದ ನಿಲುವು: ‘2020ರಲ್ಲಿ ನಡೆಯಬೇಕಿದ್ದ ಪರಿಷ್ಕರಣೆಯು ಕೋವಿಡ್‌ನ ಕಾರಣದಿಂದ ಮುಂದಕ್ಕೆ ಹೋಗಿತ್ತು. ಪರಿಷ್ಕರಣೆ ಮೂರು ವರ್ಷ ತಡವಾದ ಕಾರಣಕ್ಕಾಗಿಯೇ ಆರ್ಥಿಕ ನಿಯಮಾವಳಿಗಳ ಪ್ರಕಾರ 2023ರಲ್ಲಿ ಶೇ 15ರಷ್ಟು ಏರಿಕೆ ಮಾಡಲಾಗಿತ್ತು. ಸರ್ಕಾರಿ ನೌಕರರಿಗೂ ಈ ಮಟ್ಟದ ವೇತನ ಏರಿಕೆ ನೀಡಿಲ್ಲ. ಹಿಂದೆ ಮಾಡಿಕೊಂಡ ಒಪ್ಪಂದದ ಆದೇಶದ ಪ್ರಕಾರ 2027ರವರೆಗೆ ಪರಿಷ್ಕರಣೆಗೆ ಅವಕಾಶವಿಲ್ಲ’ ಎಂಬುದು ಸರ್ಕಾರದ ವಾದವಾಗಿದೆ.

‘2023ರ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಟಿಡಿ 12 ಟಿಸಿಬಿ 2023, ಬೆಂಗಳೂರು, ದಿನಾಂಕ 17-03-2023 ರಲ್ಲಿ ‘ರಸ್ತೆ ಸಾರಿಗೆ ನಿಗಮಗಳ ಅಧಿನಿಯಮ 1950 ರ ಸೆಕ್ಷನ್ 34(1) ರನ್ವಯ ದಿನಾಂಕ: 1.03.2023 ರಿಂದ ಜಾರಿಗೆ ಬರುವಂತೆ’ ಎಂದು ನಮೂದಾಗಿದೆ. 2020 ರಿಂದ ಜಾರಿಗೆ ಬರುವಂತೆ ಎಂದು ಆದೇಶದಲ್ಲಿ ತಿಳಿಸಿಲ್ಲ. ಇದುವೇ ಎಲ್ಲ ಗೊಂದಲಗಳಿಗೆ ಕಾರಣ. ಇದಕ್ಕೆ ಹಿಂದಿನ ಬಿಜೆಪಿ ಸರ್ಕಾರವೇ ಹೊಣೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ‘ಎಕ್ಸ್’ನಲ್ಲಿ ಹೇಳಿಕೆ ಹಂಚಿಕೊಂಡಿದ್ದಾರೆ.

ಮುಷ್ಕರ ದಿನ 11 ಸಾವಿರ ಖಾಸಗಿ ಬಸ್ ಬಳಕೆ

ಒಂದನೇ ಪುಟದಿಂದ...

ಮುಷ್ಕರ ದಿನ ಬೆಂಗಳೂರಿನಲ್ಲಿ 4 ಸಾವಿರ, ರಾಜ್ಯದ ವಿವಿಧೆಡೆ 7 ಸಾವಿರ ಖಾಸಗಿ ಬಸ್‌ಗಳು ಸಂಚರಿಸಲಿವೆ. ಸಭೆಯಲ್ಲಿ ಹೆಚ್ಚುವರಿ ಸಾರಿಗೆ ಆಯುಕ್ತರಾದ ಸಿ. ಮಲ್ಲಿಕಾರ್ಜುನ, ಬಿ.ಪಿ. ಉಮಾಶಂಕರ್, ಶೋಭಾ, ಖಾಸಗಿ ಬಸ್ ಸಂಘಟನೆಗಳ ಮುಖಂಡರಾದ ನಟರಾಜ ಶರ್ಮ, ರಾಧಾಕೃಷ್ಣ ಹೊಳ್ಳ, ಶಿವಣ್ಣ ಮುಂತಾದವರು ಪಾಲ್ಗೊಂಡಿದ್ದರು.

ಡಾ.ರಾಜ್ ಸಹೋದರಿ ನಾಗಮ್ಮ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ವರನಟ ಡಾ.ರಾಜಕುಮಾರ್ ಅವರ ಸಹೋದರಿ ನಾಗಮ್ಮ ಅವರ ಅಂತ್ಯಕ್ರಿಯೆ ಶನಿವಾರ ತಮಿಳುನಾಡಿನ ತಾಳವಾಡಿ ತಾಲ್ಲೂಕಿನಲ್ಲಿರುವ ದೊಡ್ಡ ಗಾಜನೂರು ಗ್ರಾಮದಲ್ಲಿರುವ ತೋಟದಲ್ಲಿ ನಡೆಯಿತು.

ಶುಕ್ರವಾರ ಚಿತ್ರೀಕರಣ ನಿಮಿತ್ತ ಗೋವಾಗೆ ತೆರಳಿದ್ದ ನಟ ಶಿವರಾಜ್‌ಕುಮಾರ್, ಸೋದರತ್ತೆಯ ನಿಧನದ ಸುದ್ದಿ ತಿಳಿದ ಕೂಡಲೇ ಪತ್ನಿ ಗೀತಾ ಹಾಗೂ ಪುತ್ರಿ ನಿವೇದಿತಾ ಜೊತೆಗೆ ಬಂದರು. ರಾಘವೇಂದ್ರ ರಾಜಕುಮಾರ್, ಅಶ್ವಿನಿ ಪುನೀತ್ ರಾಜಕುಮಾರ್, ಪುತ್ರಿ ವಂದಿತಾ, ಯುವ ನಟರಾದ ವಿನಯ್ ಹಾಗೂ ಯುವ ರಾಜಕುಮಾರ್, ನಿರ್ಮಾಪಕ ಎಸ್.ಎ.ಚಿನ್ನೇಗೌಡ ಸೇರಿದಂತೆ ಡಾ.ರಾಜ್ ಕುಟುಂಬದ ಸದಸ್ಯರು ಭಾಗವಹಿಸಿದ್ದರು.

ನಾಗಮ್ಮನವರ ‘ಮುತ್ತು ವರದ’ ನಿವಾಸದ ಆವರಣದಲ್ಲಿ ಇರಿಸಲಾಗಿದ್ದ ಪಾರ್ಥಿವ ಶರೀರಕ್ಕೆ ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು.

ತಾಳವಾಡಿಯ ದೊಡ್ಡಗಾಜನೂರು ಗ್ರಾಮದಲ್ಲಿ ಶನಿವಾರ ನಡೆದ ನಾಗಮ್ಮ ಅವರ ಅಂತ್ಯಕ್ರಿಯೆಯಲ್ಲಿ ನಟ ಶಿವರಾಜ್‌ಕುಮಾರ್–ಗೀತಾ ಶಿವರಾಜ್‌ಕುಮಾರ್ ಪಾಲ್ಗೊಂಡರು

70-100 ಸ್ಥಾನಗಳಲ್ಲಿ ಮತ ಕಳವು: ರಾಹುಲ್ ಗಾಂಧಿ

ಒಂದನೇ ಪುಟದಿಂದ...

‘ವಾಸ್ತವವಾಗಿ, ನಾನು ಇನ್ನೂ ಮುಂದೆ ಹೋಗುತ್ತೇನೆ. ಗುಜರಾತ್ ವಿಧಾನಸಭಾ ಚುನಾವಣೆಯ ಬಗ್ಗೆ ಆಗಲೇ ಅನುಮಾನ ಮೂಡಿತ್ತು. ನಾವು ದತ್ತಾಂಶ ಬಿಡುಗಡೆ ಮಾಡಿದಾಗ ಚುನಾವಣಾ ವ್ಯವಸ್ಥೆಯಲ್ಲಿ ಆಘಾತ ತರಂಗವು ಹಾದುಹೋಗುವುದನ್ನು ನೀವು ನೋಡುತ್ತೀರಿ. ಇದು ಅಕ್ಷರಶಃ ಪರಮಾಣು ಬಾಂಬ್‌ನಂತಿರಲಿದೆ’ ಎಂದರು.

‘ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ನಂತರ ಈ ವಿಷಯವನ್ನು ಗಂಭೀರವಾಗಿ ನೋಡಲು ಪ್ರಾರಂಭಿಸಿದೆ. ಕಾಂಗ್ರೆಸ್, ಶಿವಸೇನೆ (ಉದ್ಧವ್ ಬಣ) ಮತ್ತು ಎನ್‌ಸಿಪಿ (ಶರದ್ ಪವಾರ್ ಬಣ) ಎಂಬ ಮೂರು ಅಸಾಧಾರಣ ಪಕ್ಷಗಳು ಲೋಕಸಭಾ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡಿದವು. ಆದರೆ, ಕೆಲವು ತಿಂಗಳುಗಳ ಬಳಿಕ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅವಿಯಾದವು’ ಎಂದು ಅವರು ವಿಶ್ಲೇಷಿಸಿದರು.

ರಫೇಲ್ ಒಪ್ಪಂದದ ಕುರಿತ ಹೋರಾಟ ಉಲ್ಲೇಖಿಸಿದ ಅವರು, ‘ಹೋರಾಟ ಸುಲಭವಲ್ಲ’ ಎಂದರು. ಪ್ರಧಾನಿ ಕಚೇರಿ ಮತ್ತು ಎನ್‌ಎಸ್‌ಎ ರಫೇಲ್ ಒಪ್ಪಂದದಲ್ಲಿ ಮಧ್ಯ ಪ್ರವೇಶಿಸಿ, ರಫೇಲ್ ಒಪ್ಪಂದವನ್ನು ತಿರುಚಿವೆ ಎಂದು ದಾಖಲೆ ಸ್ಪಷ್ಟವಾಗಿ ಹೇಳುತ್ತದೆ. ಈ ದಾಖಲೆಯು ಪ್ರಪಂಚದ ಯಾವುದೇ ದೇಶದಲ್ಲಿ ಯಾವುದೇ ಸರ್ಕಾರವನ್ನು ಉರುಳಿಸುತ್ತಿತ್ತು ಎಂದು ಅವರು ತಿಳಿಸಿದರು.

‘ರಫೇಲ್ ಪ್ರಕರಣದಲ್ಲಿ ಏನೂ ಆಗಲಿಲ್ಲ. ದಾಖಲೆ ಎಲ್ಲಿಗೆ ಹೋಯಿತು ಎಂದು ನಿಮಗೆ ತಿಳಿದಿದೆ. ನಾನು 30 ಪ್ರಕರಣಗಳ ವಿರುದ್ಧ ಹೋರಾಡುತ್ತಿದ್ದೇನೆ. ಆಡಳಿತ ವ್ಯವಸ್ಥೆಯ ವಿರುದ್ಧ ಹೋರಾಟ ಆರಂಭಿಸಿದ ಕ್ಷಣವೇ ನಿಮ್ಮ ಮೇಲೆ ದಾಳಿ ಆರಂಭವಾಗುತ್ತದೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ನಡೆಸಿದ ಸಂಭಾಷಣೆಯನ್ನು ರಾಹುಲ್ ನೆನಪಿಸಿಕೊಂಡರು. ‘ನೀನು ಬೆಂಕಿಯೊಂದಿಗೆ ಆಟವಾಡುತ್ತಾ ಇದ್ದೀಯಾ ಎಂದು ಪ್ರಿಯಾಂಕಾ ಹೇಳಿದರು. ಬೆಂಕಿಯೊಂದಿಗೆ ಆಟವಾಡಲು ನನಗೆ ಯಾವುದೇ ಭಯವಿಲ್ಲ. ಹಾಗಾಗಿ ಹೋರಾಟ ಮುಂದುವರಿಸುತ್ತೇನೆ ಎಂಬುದಾಗಿ ಪ್ರತಿಕ್ರಿಯಿಸಿದೆ’ ಎಂದರು.

ಹಸ್ತಕ್ಷೇಪದಿಂದ ಮುಕ್ತಗೊಳಿಸಿ: ಖರ್ಗೆ

ಉಪರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಜಗದೀಪ್ ಧನಕರ್ ಅವರನ್ನು ಬಿಜೆಪಿ ನಾಯಕರು ಬಲವಂತಪಡಿಸಿದ್ದು ಸಾಂಸ್ಥಿಕ ವಶಪಡಿಸಿಕೊಳ್ಳುವಿಕೆಗೆ ದೊಡ್ಡ ಉದಾಹರಣೆ. ಧನಕರ್ ಅವರು ತಮ್ಮನ್ನು ಪ್ರತಿಪಾದಿಸಲು ಹಾಗೂ ಸ್ವಾತಂತ್ರ್ಯ ತೋರಲು ಆರಂಭಿಸಿದಾಗ ಈ ಘಟನೆ ನಡೆದಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ನ್ಯಾಯಾಂಗ, ಚುನಾವಣಾ ಆಯೋಗ ಮತ್ತು ತನಿಖಾ ಸಂಸ್ಥೆಗಳನ್ನು ರಾಜಕೀಯ ಹಸ್ತಕ್ಷೇಪದಿಂದ ಮುಕ್ತಗೊಳಿಸಬೇಕು ಮತ್ತು ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗಕ್ಕೆ ಆದ್ಯತೆ ನೀಡಬೇಕು’ ಎಂದು ಹೇಳಿದರು. ‘ನಾವು ಚುನಾವಣಾ ಪ್ರಕ್ರಿಯೆಯನ್ನು ಮುಕ್ತ ಮತ್ತು ನ್ಯಾಯಸಮ್ಮತವಾಗಿಸಬೇಕು’ ಎಂದು ಅವರು ಪ್ರತಿಪಾದಿಸಿದರು.

ಧನಕರ್ ಅನಿರೀಕ್ಷಿತ ರಾಜೀನಾಮೆಯನ್ನು ಉಲ್ಲೇಖಿಸಿದ ಅವರು, ‘ಧನಕರ್ ಅವರು ರಾಜ್ಯಸಭೆಯಲ್ಲಿ ಸಂಸದರ ಧ್ವನಿಯನ್ನು ನಿಗ್ರಹಿಸಿದಾಗ ಬಿಜೆಪಿಯವರು ಹಾಗೂ ಪ್ರಧಾನಿ ನರೇಂದ್ರ ಮೋದಿ ಬಹಳ ಸಂತೋಷಪಟ್ಟರು. ನಂತರ ಒಂದು ದಿನ ಉಪರಾಷ್ಟ್ರಪತಿಯವರು ತಮ್ಮ ಮಹತ್ವ ಅರಿತುಕೊಂಡರು. ತಾವು ಒಂದು ಸ್ವತಂತ್ರ ಸಂಸ್ಥೆ ಎಂದು ಭಾವಿಸಿದರು. ಸ್ವತಂತ್ರವಾಗಿ ಮಾತನಾಡಲು ಆರಂಭಿಸಿದರು. ಇದು ಮೋದಿ ಮತ್ತು ಬಿಜೆಪಿಗೆ ಅಸಹನೀಯವಾಗಿತ್ತು. ರಾಜೀನಾಮೆ ನೀಡುವಂತೆ ಧನಕರ್‌ಗೆ ಒತ್ತಾಯಿಸಿದರು. ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಂತಹ ಘಟನೆ ಸಂಭವಿಸಿದೆ’ ಎಂದರು.

ಹಿಂದುಳಿದವರ ದುರ್ಬಲಗೊಳಿಸುವ ಯತ್ನ: ಸಿ.ಎಂ ಕಿಡಿ

‘ಭಾರತದ ಸಂವಿಧಾನವು ಕೇವಲ ಒಂದು ಕಾನೂನು ದಾಖಲೆಯಲ್ಲ. ಇದು ಈ ರಾಷ್ಟ್ರದ ಅತ್ಯಂತ ಅನಾನುಕೂಲಕರ ಪರಿಸ್ಥಿತಿಯಲ್ಲಿರುವ ನಾಗರಿಕರೊಂದಿಗೆ ಮಾಡಿಕೊಂಡಿರುವ ನೈತಿಕ ಒಪ್ಪಂದ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಸಮಾವೇಶದ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನ್ಯಾಯದ ಕಲ್ಪನೆಯನ್ನು ಸಮಾನತೆಯ ತಳಹದಿಯ ಮೇಲೆ ನಿರ್ಮಿಸಲಾಗಿದೆ. ಭಾರತದ ಸಂವಿಧಾನವು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಭ್ರಾತೃತ್ವದ ಸಾಕಾರ ರೂಪವಾಗಿದೆ. ನಮ್ಮ ಪೂರ್ವಜರ ಕನಸಾದ ಜಾತಿರಹಿತ, ವರ್ಗರಹಿತ, ಸಮಾಜವಾದಿ ಸಮಾಜವನ್ನು ಸಾಧಿಸುವ ಗುರಿ ಹೊಂದಿದೆ. ಮೂಲಭೂತ ಹಕ್ಕುಗಳ ರಕ್ಷಕ ದೇವತೆ ಎಂದು ಕರೆಯಲ್ಪಡುವ ಭಾರತೀಯ ಸಂವಿಧಾನವು ಭಾರತೀಯ ಸಮಾಜದಲ್ಲಿ ಸಂಪನ್ಮೂಲಗಳ ವಿತರಣೆಯಲ್ಲಿನ ಐತಿಹಾಸಿಕ ಅಸಮಾನತೆಗಳು ಮತ್ತು ಸಮಾನ ಅವಕಾಶಗಳ ನಿರಾಕರಣೆಯನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ನ್ಯಾಯದ ಅತ್ಯಂತ ವಿಶಿಷ್ಟ ಪರಿಕಲ್ಪನೆಯನ್ನು ಚಿತ್ರಿಸಿದೆ’ ಎಂದರು.

‘ದೇಶದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ನೀತಿಗಳು ಮತ್ತು ರಾಜಕೀಯಕ್ಕೆ ನಾವು ಕುರುಡರಾಗಲು ಸಾಧ್ಯವಿಲ್ಲ. ಹಿಂದುಳಿದ ಮತ್ತು ಅಂಚಿನಲ್ಲಿರುವ ವರ್ಗಗಳನ್ನು ದುರ್ಬಲಗೊಳಿಸುವುದು ಮತ್ತು ಈಗಾಗಲೇ ಪ್ರಬಲವಾಗಿರುವ ಪ್ರಭುತ್ವ ರಾಜ್ಯವನ್ನು ರಚಿಸುವುದು ಅದರ ಉದ್ದೇಶ. ರಾಜ್ಯದ ಸಂಪನ್ಮೂಲಗಳು ಮತ್ತು ಅವಕಾಶಗಳನ್ನು ಸಮಾನವಾಗಿ ವಿತರಿಸುವ ಮತ್ತು ಅತ್ಯಂತ ಹಿಂದುಳಿದವರನ್ನು ತಲುಪುವ ಸಮಗ್ರ ಮತ್ತು ಬಹುತ್ವ ಸಮಾಜವನ್ನು ಮರುಸ್ಥಾಪಿಸುವ ಅವಶ್ಯಕತೆಯಿದೆ’ ಎಂದರು.

ಕರ್ನಾಟಕದ ಮುಖ್ಯಮಂತ್ರಿಯಾಗಿ, ನಾನು ಸಾಮಾಜಿಕ ನ್ಯಾಯದ ನಿಜವಾದ ಉದ್ದೇಶ ಪೂರೈಸಲು ಬದ್ಧನಾಗಿದ್ದೇನೆ. ಅದು ಸ್ವತ: ಒಂದು ಸಕಾರಾತ್ಮಕ ಕ್ರಿಯೆ. ಈ ಮೂಲಕ ಸಮಾನತೆಯನ್ನು ಸಾಧ್ಯವಾಗಿಸುವ ಮತ್ತು ನಮ್ಮೆಲ್ಲರ ನಡುವೆ ಸಹೋದರತ್ವದ ಭಾವನೆ ನಿರ್ಮಿಸಲಿದೆ. ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವವರು, ಅತ್ಯಂತ ಅಂಚಿನಲ್ಲಿರುವ ಜನರನ್ನು ಹಾಗೂ ಅಸ್ಪೃಶ್ಯತೆ ಮತ್ತು ಸಾಮಾಜಿಕ ಪ್ರತ್ಯೇಕತೆಯಿಂದ ಇತಿಹಾಸದ ಬಹಿಷ್ಕರಿಸಲ್ಪಟ್ಟವರನ್ನು ನಾವು ಗುರುತಿಸಬೇಕು. ಭಾರತದ ಸಂವಿಧಾನದಡಿಯಲ್ಲಿ ಲಭ್ಯವಿರುವ ಪ್ರತಿಯೊಂದು ಕಾರ್ಯವಿಧಾನದ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಬೇಕು ಎಂದರು.

WEEKEND CORNER

: CONTACT US :
NAIK LABORATORIES
8088904644 / 9738402209
sales@naiklaboratories.in
: LOCATIONS :
KARNATAKA, TAMIL NADU, ANDHRA PRADESH, GOA

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Hubblli

ಹೊಲ ಮಾರುವದಿದೆ
ಹುಬ್ಬಳ್ಳಿಯ ಅಗ್ರಹಾರ ತಿಮ್ಮಸಾಗರದಲ್ಲಿ ರಿಂಗ್ ರೋಡ್ ಹತ್ತಿರ 32 ಎಕರೆ (Clear Title) ಹೊಲ ಮಾರುವುದಿದೆ.
ಸಂಪರ್ಕಿಸಿರಿ : 9448366279

ರೆಂಟಲ್ ಪ್ರಾಪರ್ಟೀಸ್

Accommodation Wanted

Industrial And Factory

REQUIRED WAREHOUSE FOR RENT IN BELGAUM 40,000 SQFT CALL 98804 14447

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9845114560
9886213331
*Conditions apply

ವಾಹನ

Four Wheelers Selling

Others

BMW X3_2018 FOR SALE Company Owned & Managed. Excellent Condition, 87,000 Kms Done 27,00,000/-Only. Brokers Excuse. Call:9035789569

ವ್ಯಾಪಾರ

Business Offers

Distributors

ತನ್ಮಯಿ ಪ್ರೋಟಿನ್ ಪೌಡರ್ ರಾಜದ್ಯಂತ ಡಿಸ್ಟ್ರಿಬ್ಯೂಟರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಕ್ಕರೆ ಕಾಯಿಲೆ, ರಕ್ತದೊತ್ತಡ, ತೂಕ, ಕಡಿಮೆಯಾಗುತ್ತದೆ. ದೇಹಕ್ಕೆ ಶಕ್ತಿ ಮಂಡಿನೋವು, ಕಾಲುನೋವು, ನಿದ್ರೆ ಸಮಸ್ಯೆ, ಸೊಂಟ ಕಾಲುಗಳಲ್ಲಿ ಶಕ್ತಿ ಇಲ್ಲದವರಿಗೆ, ಬಿಸಿ ನೀರು ಅಥವಾ ಹಾಲಿನಲ್ಲಿ ಬೆರಸಿ ಕುಡಿಯುವುದರಿಂದ ನಿಮ್ಮ ಕಾಯಿಲೆಗಳು ಮುಕ್ತಿಗೊಳ್ಳುತ್ತವೆ. ಬೆಂಗಳೂರು Ph: 9019626612

ಪ್ರವಾಸ

Travel

7ದಿನಗಳ ಕಾಶಿಯಾತ್ರೆ, 9 ದಿನಗಳ ಗುಜರಾತ್. 12 ದಿನಗಳ ಮಧ್ಯಪ್ರದೇಶ. 10 ದಿನಗಳ ನೇಪಾಳ ಮುಕ್ತಿನಾಥ. 13 ದಿನಗಳ ಚಾರ್‌ಧಾಮಯಾತ್ರೆ. 6 ದಿನಗಳ ದುಬೈ ಪ್ರವಾಸ. ನಂದಿ ಹಾಲಿಡೇಸ್ ಬಸವನಗುಡಿ ಬೆಂಗಳೂರು.04 9980270467 9740228186

ಭಾರತಪರಂಪರ ದರ್ಶನ: 17.8.25 ಪುರಿಜಗನ್ನಾಥ 2ಶಕ್ತಿಪೀಠ, ಲಿಂಗರಾಜ, ಕೊಲ್ಕತ್ತ 6ದಿನ ವಿಮಾನದಲ್ಲಿ. 5.10.25 11ದಿನ ನೇಪಾಳ್ ಮುಕ್ತಿನಾಥ್ ಕಾಶಿ, ಅಯೋಧ್ಯ. ಪ್ರಕಾಶ್ ಹೆಬ್ಬಾರ್. 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸುಧಾ, ಮಯೂರ ಓದಿರಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಾಲ್ಕನೇ ವರ್ಷದ ಸವಿನೆನಪು

ಶ್ರೀಮತಿ ಎ.ಎಂ.ಲೀಲ
ಜನನ: 05.01.1952 • ಮರಣ: 03.08.2021
ದುಃಖತಪ್ತ ಪತಿ: ಕೆ. ನಾಗಭೂಷಣ ಮತ್ತು ಮಕ್ಕಳು ಎನ್.ಪದ್ಮಭೂಷಣ, ಮಗಳು ಎನ್.ಆಶಾ ಭೂಷಣ, ಮಗ ಭರತ್‌ಭೂಷಣ, ಸೊಸೆ ಜಿ.ಪಿ.ಸಂಗೀತ, ಮೊಮ್ಮಗಳು ಪಿ.ರಿಯಾ
ನಂ.1732, ಜೆ.ಪಿ.ನಗರ, ಬೆಂಗಳೂರು–560078

5ನೇ ವರ್ಷದ ಪುಣ್ಯಸ್ಮರಣೆ



ದಿ|| ಸುಧಾ ಭೈರಪ್ಪ
ಮರಣ: 3.8.2020
ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.
ಇಂತಿ ನಿಮ್ಮ ಚಿರಸ್ಮರಣೆಯಲ್ಲಿ
ಪತಿ: ಎಂ.ಎಸ್. ಭೈರಪ್ಪ.
ಮತ್ತಿಕೆರೆ, ಬೆಂಗಳೂರು.

22ನೇ ವರ್ಷದ ಪುಣ್ಯಸ್ಮರಣೆ

ಪದ್ಮಶಾಲಿ ಕನಮಾಕಲು
ಶ್ರೀಮತಿ ಜಯಮ್ಮನವರು
(ದಿವಂಗತ ಕೆ.ಪಿ.ಎಂ. ನಂಜಪ್ಪನವರ ಧರ್ಮಪತ್ನಿ)
ನಿಧನ: 03-08-2003.
ನಿಮ್ಮ ಸವಿನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ: ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುವರ್ಗದವರು

ಚಿಟಿಕೆ ಸುದ್ದಿ

‘ಆಪರೇಷನ್ ಸಿಂಧೂರ’ ಪ್ರಶ್ನಿಸಿದ ವಿಪಕ್ಷ ವಿರುದ್ಧ ಕಿಡಿ

ಪಟ್ನಾ (ಪಿಟಿಐ): ನಮ್ಮ ಸೇನಾ ಪಡೆಗಳು ತೋರಿದ ಶೌರ್ಯಕ್ಕೆ ಗೌರವ ಸಲ್ಲಿಸದೇ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳು ‘ಆಪರೇಷನ್ ಸಿಂಧೂರ’ದ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಿರುವುದು ಸರಿಯಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ಹರಿಹಾಯ್ದಿದ್ದಾರೆ.

ರಾಜನಾಥ್ ಸಿಂಗ್

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಿಂಗ್, ‘ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ದಾಳಿಗಳ ಬಗ್ಗೆ ಮೃದು ಧೋರಣೆ ಅನುಸರಿಸಿತ್ತು. ವೋಟ್ ಬ್ಯಾಂಕ್‌ಗಾಗಿ ಕೇಸರಿ ಭಯೋತ್ಪಾದನೆ ಎಂದು ಬಿಂಬಿಸಿ ಅಮಾಯಕರನ್ನು ಸಿಲುಕಿಸುವ ಪ್ರಯತ್ನ ನಡೆಸಿತು. ಮಾಲೇಗಾಂವ್ ಪ್ರಕರಣವೇ ಇದಕ್ಕೆ ಸಾಕ್ಷಿ’ ಎಂದರು.

‘1971ರ ಯುದ್ಧದ ವೇಳೆ ಇಂದಿರಾ ಗಾಂಧಿ ಅವರನ್ನು ಅಟಲ್ ಬಿಹಾರಿ ವಾಜಪೇಯಿ ಬೆಂಬಲಿಸಿದ್ದರು. 1999ರ ಕಾರ್ಗಿಲ್ ಸಮರದ ವೇಳೆ ರಾಜಕೀಯ ಮತ್ತು ಸಾಮಾಜಿಕ ಏಕತೆ ತೋರಲಾಯಿತು. ಆದರೆ ಈಗ ನಮ್ಮ ಸೈನಿಕರ ಪರಾಕ್ರಮವನ್ನು ಅನುಮಾನಿಸಲಾಗುತ್ತಿದೆ’ ಎಂದು ಸಿಂಗ್ ಬೇಸರ ವ್ಯಕ್ತಪಡಿಸಿದರು.

‘2014ಕ್ಕೂ ಹಿಂದೆ ಭಯೋತ್ಪಾದಕ ದಾಳಿ ನಿತ್ಯದ ಸಂಗತಿಯಾಗಿತ್ತು. ಕಳೆದ 11 ವರ್ಷಗಳಲ್ಲಿ ಭಯೋತ್ಪಾದನೆ ನಿಯಂತ್ರಿಸಿದ್ದೇವೆ. ದೇಶ ಸುರಕ್ಷಿತ ಕೈಗಳಲ್ಲಿದ್ದು ಬಿಹಾರದಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ’ ಎಂದು ರಾಜನಾಥ್ ಸಿಂಗ್ ಹೇಳಿದರು.

ಐಐಟಿ–ಬಿ ವಿದ್ಯಾರ್ಥಿ ಆತ್ಮಹತ್ಯೆ

ಮುಂಬೈ: ಇಲ್ಲಿನ ಭಾರತೀಯ ತಂತ್ರಜ್ಞಾನ ಸಂಸ್ಥೆ–ಬಾಂಬೆಯ (ಐಐಟಿ–ಬಿ) ಮೆಟಲರ್ಜಿಕಲ್ ಎಂಜಿನಿಯರಿಂಗ್ ಮತ್ತು ಮೆಟೀರಿಯಲ್ಸ್ ಸೈನ್ಸ್‌ನ ನಾಲ್ಕನೇ ವರ್ಷದ ವಿದ್ಯಾರ್ಥಿ ರೋಹಿತ್ ಸಿನ್ಹಾ (22) ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾಸ್ಟೆಲ್‌ನ ಕಟ್ಟಡದಿಂದ ಜಿಗಿದ ರೋಹಿತ್ ಅವರನ್ನು ಹೀರಾನಂದಿನಿ ಆಸ್ಪತ್ರೆಗೆ ದಾಖಲಿಸುವ ಮಾರ್ಗಮಧ್ಯೆ ಅಸುನೀಗಿದ್ದಾರೆ ಎಂದು ಪೊವೈ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಐಐಟಿ–ಬಿ’ನಲ್ಲಿ ಇತ್ತೀಚಿನ ವರ್ಷಗಳಲ್ಲಿ ವರದಿಯಾದ ಆತ್ಮಹತ್ಯೆಯ ಎರಡನೇ ಘಟನೆಯಿದು. 2023ರ ಫೆ.12ರಂದು ದರ್ಶನ್ ಸೋಲಂಕಿ (18) ಹಾಸ್ಟೆಲ್‌ನ 7ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು.

‘ಕರಡು ಪಟ್ಟಿಯಲ್ಲಿ ನನ್ನ ಹೆಸರಿಲ್ಲ’

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ

ಮುಖ್ಯಾಂಶಗಳು
- ಯಾದವ್ ಆರೋಪ ತಿರಸ್ಕರಿಸಿದ ಚೌಧರಿ
- ಫೋಟೊ ವಿವರ ಇರುವ ಸ್ಕ್ರೀನ್‌ಶಾಟ್ ಹಂಚಿಕೆ

ಪಾಟ್ನಾ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿ, ಚುನಾವಣಾ ಆಯೋಗವು ಪ್ರಕಟಿಸಿರುವ ಮತದಾರರ ಕರಡು ಪಟ್ಟಿಯಲ್ಲಿ ತನ್ನ ಹೆಸರು ಕಾಣೆಯಾಗಿದೆ ಎಂದು ಆರ್‌ಜೆಡಿ ಮುಖ್ಯಸ್ಥ ತೇಜಸ್ವಿ ಯಾದವ್ ಶನಿವಾರ ಆರೋಪಿಸಿದ್ದಾರೆ.

ಪತ್ರಿಕಾ ಗೋಷ್ಠಿಯೊಂದರಲ್ಲಿ ಆಯೋಗದ ವೆಬ್‌ಸೈಟ್‌ನಲ್ಲಿ ಇಪಿಐಸಿ ನಂಬರ್ ನಮೂದಿಸಿ ಯಾದವ್ ತಮ್ಮ ವಿವರಗಳನ್ನು ಪರಿಶೀಲಿಸಲು ಮುಂದಾಗಿದ್ದರು. ಆದರೆ, ವೆಬ್‌ಸೈಟ್‌ನಲ್ಲಿ ಯಾವುದೇ ವಿವರ ಲಭ್ಯವಾಗಿಲ್ಲ.

ತೇಜಸ್ವಿ ಯಾದವ್

ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ ಅವರು, ‘ನೋಡಿ ನನ್ನ ಹೆಸರು, ವಿವರವೇ ಸಿಗುತ್ತಿಲ್ಲ. ನಾನು ಚುನಾವಣೆ ಯಲ್ಲಿ ಹೇಗೆ ಸ್ಪರ್ಧಿಸಲಿ’ ಎಂದಿದ್ದರು.

ಯಾದವ್ ಆರೋಪವನ್ನು ಬಿಜೆಪಿ ನಾಯಕ, ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ತಿರಸ್ಕರಿಸಿದ್ದು, ಕರಡು ಪಟ್ಟಿಯಲ್ಲಿ ಯಾದವ್ ವಿವರ ಹಾಗೂ ಫೋಟೊ ಇರುವ ಸ್ಕ್ರೀನ್‌ಶಾಟ್ ಅನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ

‘ನಿಮಗೆ ಹೇಗೆ ವಿವರ ಹುಡುಕಬೇಕು ಎಂಬ ಜ್ಞಾನದ ಕೊರತೆ ಇದೆ’ ಎಂದು ಲೇವಡಿ ಮಾಡಿದ್ದಾರೆ.

ತೇಜಸ್ವಿ ಮಾಹಿತಿ ಇರುವ ಪುಟಗಳ ಸ್ಕ್ರೀನ್‌ಶಾಟ್ ಶೇರ್ ಮಾಡಿ, ‘ನಿಮ್ಮ ತಂದೆ ಲಾಲೂ ಪ್ರಸಾದ್ ಅವರ ಹೆಸರಿನ ಪಕ್ಕದಲ್ಲಿಯೇ ನಿಮ್ಮ ಹೆಸರೂ ಇದೆ’ ಎಂದೂ ಹೇಳಿದ್ದಾರೆ.

ಆಕ್ಷೇಪ ಸಲ್ಲಿಸದ ರಾಜಕೀಯ ಪಕ್ಷಗಳು

ನವದೆಹಲಿ: ಬಿಹಾರದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಿದ ಬಳಿಕ ಮತದಾರರ ಕರಡು ಪಟ್ಟಿ ಪ್ರಕಟಗೊಂಡ ಮೊದಲ 24 ಗಂಟೆಗಳಲ್ಲಿ ಯಾವುದೇ ರಾಜಕೀಯ ಪಕ್ಷವು ಕೂಡ ಆಕ್ಷೇಪ ಸಲ್ಲಿಸಿಲ್ಲ ಎಂದು ಚುನಾವಣಾ ಆಯೋಗವು ಶನಿವಾರ ತಿಳಿಸಿದೆ.

ಮತದಾನ ಕರಡು ಪಟ್ಟಿಯನ್ನು ಶುಕ್ರವಾರ ಸಂಜೆ 3 ಗಂಟೆಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು. ಅಲ್ಲದೇ, 12 ಪ್ರಮುಖ ರಾಜಕೀಯ ಪಕ್ಷಗಳಿಗೂ ಕರಡು ಪಟ್ಟಿಗಳನ್ನು ನೀಡಿತ್ತು.

‘ಆಗಸ್ಟ್ 1ರ ಮಧ್ಯಾಹ್ನ 3ರಿಂದ ಆಗಸ್ಟ್ 2ರ ಮಧ್ಯಾಹ್ನ 3ರವರೆಗೂ ಯಾವುದೇ ರಾಜಕೀಯ ಪಕ್ಷಗಳು ಕೂಡ ಯಾವುದೇ ಆಕ್ಷೇಪ ಸಲ್ಲಿಸಿಲ್ಲ. ಹೆಚ್ಚುವರಿಯಾಗಿ ಅರ್ಹ ಮತದಾರರ ಹೆಸರು ಸೇರ್ಪಡೆ, ತೆಗೆದುಹಾಕುವ ಬಗ್ಗೆ ಆಕ್ಷೇಪ ಸಲ್ಲಿಸಿಲ್ಲ’ ಎಂದು ಆಯೋಗ ತಿಳಿಸಿದೆ.

‘ಬೀದಿಗಿಳಿದು ಹೋರಾಟ’

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಪಾರದರ್ಶಕವಾಗಿ ನಡೆಸಿಲ್ಲ. ಚುನಾವಣಾ ಆಯೋಗದ ನಿರ್ದೇಶನಗಳನ್ನು ಪಾಲಿಸಿಲ್ಲ ಎಂದು ಆರ್‌ಜೆಡಿ ರಾಜ್ಯಸಭಾ ಸದಸ್ಯ ಸಂಜಯ್ ಯಾದವ್ ಆರೋಪಿಸಿದ್ದಾರೆ.

‘ಈ ವಿಷಯದ ವಿರುದ್ಧ ರಾಷ್ಟ್ರೀಯ ಜನತಾ ದಳ ಹಾಗೂ ಇತರೆ ವಿರೋಧ ಪಕ್ಷಗಳು ಬೀದಿಗಿಳಿದು ಹೋರಾಟ ನಡೆಸಲಿವೆ. ಇದಕ್ಕೆ ಜನರ ಬೆಂಬಲವೂ ಇದೆ. ಚುನಾವಣಾ ಆಯೋಗವು ನಮ್ಮ ಮಾತನ್ನು ಕೇಳದಿದ್ದರೆ ಜನರ ಬಳಿ ಹೋಗುತ್ತೇವೆ. ನೀವು ಪ್ರಜಾಪ್ರಭುತ್ವದಿಂದ ಜನರನ್ನು ತೆಗೆದು ಹಾಕಿದರೆ ಏನು ಉಳಿಯುತ್ತದೆ’ ಎಂದು ಪ್ರಶ್ನಿಸಿದ್ದಾರೆ.

ತೇಜಸ್ವಿ ಹೆಸರು ಇದೆ: ಇ.ಸಿ

ಮತದಾರರ ಕರಡು ಪಟ್ಟಿಯಲ್ಲಿ ತನ್ನ ಹೆಸರು ಕಾಣೆಯಾಗಿದೆ ಎಂದು ತೇಜಸ್ವಿ ಯಾದವ್ ಆರೋಪಿಸಿರುವಂತೆಯೇ ಇದಕ್ಕೆ ಚುನಾವಣಾ ಆಯೋಗವು (ಇ.ಸಿ) ಪ್ರತಿಕ್ರಿಯೆ ನೀಡಿದೆ.

‘ಬಿಹಾರದ ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯದ ಲೈಬ್ರರಿ ಕಟ್ಟಡದ ಮತದಾನ ಕೇಂದ್ರ 204ರಲ್ಲಿ ಸರಣಿ ಸಂಖ್ಯೆ 416ರಲ್ಲಿ ಪ್ರಸಕ್ತ ತೇಜಸ್ವಿ ಯಾದವ್ ಅವರ ಹೆಸರಿದೆ. ಈ ಹಿಂದೆ ಮತದಾನ ಕೇಂದ್ರ 171ರ ಸರಣಿ ಸಂಖ್ಯೆ 481ರಲ್ಲಿ ಅವರ ಹೆಸರು ಇತ್ತು’ ಎಂದು ಚುನಾವಣಾ ಆಯೋಗ ತಿಳಿಸಿದೆ.

‘ಭವಿಷ್ಯದ ಪೀಳಿಗೆಗೆ ಅಂಬೇಡ್ಕರ್ ತತ್ವಗಳೇ ಮಾರ್ಗದರ್ಶಕ’

ನಾಗ್ಪುರ (ಪಿಟಿಐ): ಸಾಮಾಜಿಕ–ಆರ್ಥಿಕ ಸಮಾನತೆ ಕುರಿತಾದ ಡಾ.ಬಿ.ಆರ್ ಅಂಬೇಡ್ಕರ್ ಅವರ ತತ್ವ–ಸಿದ್ಧಾಂತಗಳು ಭವಿಷ್ಯದ ಪೀಳಿಗೆಗೆ ಮಾರ್ಗದರ್ಶನ ಒದಗಿಸಲಿವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಭೂಷಣ್ ಗವಾಯಿ ಶನಿವಾರ ಹೇಳಿದ್ದಾರೆ.

ಇಲ್ಲಿನ ಅಂಬೇಡ್ಕರ್ ಕಾಲೇಜಿನ ವಜ್ರ ಮಹೋತ್ಸವ ಸಮಾರಂಭದಲ್ಲಿ ಗವಾಯಿ ಪಾಲ್ಗೊಂಡಿದ್ದರು. ಈ ವೇಳೆ ಮಾತನಾಡಿದ ಅವರು, ತಮ್ಮ ಜೀವನದುದ್ದಕ್ಕೂ ಅಂಬೇಡ್ಕರ್ ಅವರ ಸಾಮಾಜಿಕ–ಆರ್ಥಿಕ ಸಮಾನತೆ ತತ್ವಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದಾಗಿ ತಿಳಿಸಿದ್ದಾರೆ.

ಅಲ್ಲದೇ, ‘ಮಹಿಳಾ ಸಬಲೀಕರಣವು ಸಮಾಜವೊಂದರ ಅಭಿವೃದ್ಧಿಯನ್ನು ಅಳೆಯುವ ಮಾನದಂಡವಾಗಿದ್ದು, ಅಂಬೇಡ್ಕರ್ ಕಾಲೇಜಿನ ವಿದ್ಯಾರ್ಥಿನಿಯರು ಆ ಮಾನದಂಡವನ್ನು ಪೂರೈಸಿರುವುದನ್ನು ನೋಡಲು ಸಂತಸವಾಗುತ್ತಿದೆ. ಮಹಿಳೆಯರ ಅಭಿವೃದ್ಧಿಯು ಅಂಬೇಡ್ಕರ್ ಅವರಿಗೆ ನೀಡಬಹುದಾದ ಗೌರವವಾಗಿದೆ’ ಎಂದೂ ಹೇಳಿದ್ದಾರೆ.

ಡಾ.ಅಂಬೇಡ್ಕರ್ ಕಾಲೇಜಿನ ವಜ್ರ ಮಹೋತ್ಸವದಲ್ಲಿ ಸಿಜೆಐ ಭೂಷಣ್ ಗವಾಯಿ, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹಾಗೂ ಜಪಾನ್ ಸಂಜಾತ ಬೌದ್ಧ ಸನ್ಯಾಸಿ ಭದಂತ್ ನಾಗಾರ್ಜುನ್ ಆರ್ಯ ಪಾಲ್ಗೊಂಡಿದ್ದರು

ಯಶಸ್ವಿ ವ್ಯಕ್ತಿಗೂ, ಶ್ರೇಷ್ಠ ವ್ಯಕ್ತಿಗೂ ವ್ಯತ್ಯಾಸವಿದೆ. ಶ್ರೇಷ್ಠ ವ್ಯಕ್ತಿಯಾದವನು ತನ್ನ ಯಶಸ್ಸಿನೊಂದಿಗೆ ಸಮಾಜದ ಉನ್ನತಿಗೂ ಸೇವೆ ಸಲ್ಲಿಸುತ್ತಾನೆ. ಅಂಥ ವ್ಯಕ್ತಿಯಾಗುವ ದೃಢ ನಿಶ್ಚಯವಿದ್ದರೆ ಅಂಬೇಡ್ಕರ್ ಅವರ ತತ್ವಗಳು ನಮ್ಮನ್ನು ಮುನ್ನಡೆಸುತ್ತವೆ ಎಂದೂ ಗವಾಯಿ ತಿಳಿಸಿದ್ದಾರೆ.

‘ರಕ್ಷಂದಾ ರಾಶಿದ್‌ಗೆ ಸಂದರ್ಶಕ ವೀಸಾ ನೀಡಲು ಒಪ್ಪಿಗೆ’

ಜಮ್ಮು (ಪಿಟಿಐ): ‘ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಪಾಕಿಸ್ತಾನಕ್ಕೆ ಗಡಿಪಾರು ಮಾಡಲಾದ ಪಾಕಿಸ್ತಾನದ ರಕ್ಷಂದಾ ರಾಶಿದ್ ಅವರಿಗೆ ಸಂದರ್ಶಕ ವೀಸಾ ನೀಡಲು ನಿರ್ಧರಿಸಲಾಗಿದೆ’ ಎಂದು ಜಮ್ಮು ಮತ್ತು ಕಾಶ್ಮೀರ–ಲಡಾಖ್ ಹೈಕೋರ್ಟ್‌ಗೆ ಕೇಂದ್ರ ಗೃಹ ಸಚಿವಾಲಯವು ಮಾಹಿತಿ ನೀಡಿದೆ. ಈ ಹಿನ್ನೆಲೆಯಲ್ಲಿ ಮರಳಿ ಭಾರತಕ್ಕೆ ಬರಲು ಅವಕಾಶ ನೀಡುವಂತೆ ಕೋರಿ ನ್ಯಾಯಾಲಯಕ್ಕೆ ರಾಶಿದ್ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ರಕ್ಷಂದಾ

ಪಾಕಿಸ್ತಾನ ನಿವಾಸಿಯಾಗಿದ್ದ ರಕ್ಷಂದಾ (62) ಜಮ್ಮುವಿನ ಶೇಖ್ ಝುಹೂರ್ ಅಹ್ಮದ್ ಅವರನ್ನು 35 ವರ್ಷಗಳ ಹಿಂದೆ ಮದುವೆಯಾಗಿದ್ದರು. ಪಹಲ್ಗಾಮ್ ದಾಳಿಯ ಬಳಿಕ ಸಂದರ್ಶಕ ವೀಸಾದ ಮೇಲೆ ಬಂದಿದ್ದ ರಕ್ಷಂದಾ ಸೇರಿದಂತೆ ಪಾಕಿಸ್ತಾನದ ಹಲವು ನಾಗರಿಕರನ್ನು ಭಾರತವು ಗಡಿಪಾರು ಮಾಡಿತ್ತು.

ಷರತ್ತುಬದ್ಧ ಜಾಮೀನು ಆದೇಶ ರದ್ದುಗೊಳಿಸಿದ ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಪತ್ನಿಯೊಂದಿಗೆ ವೈವಾಹಿಕ ಸಂಬಂಧ ನಿರ್ವಹಿಸಬೇಕು. ಆಕೆಯೊಂದಿಗೆ ಘನತೆಯಿಂದ ನಡೆದುಕೊಳ್ಳಬೇಕು ಎಂಬ ಷರತ್ತಿನೊಂದಿಗೆ ವ್ಯಕ್ತಿಗೆ ನಿರೀಕ್ಷಣಾ ಜಾಮೀನು ನೀಡಿ ಜಾರ್ಖಂಡ್ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.

ದೀಪಂಕರ್ ದತ್ತಾ, ಆಗಸ್ಟೀನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ನ್ಯಾಯ ಪೀಠವು, ಈ ರೀತಿಯ ಷರತ್ತಿನೊಂದಿಗೆ ಹೈಕೋರ್ಟ್ ಜಾಮೀನು ನೀಡಬಾರದಿತ್ತು. ಇದರಿಂದ ಮತ್ತಷ್ಟು ವ್ಯಾಜ್ಯ ಉಂಟಾಗಬಹುದು ಎಂದು ಹೇಳಿತು. ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಕಳೆದ ಫೆ.25ರಂದು ಜಾರ್ಖಂಡ್ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಈ ಆದೇಶದ ವಿರುದ್ಧ ಅನಿಲ್ ಕುಮಾರ್ ಅವರು ಸುಪ್ರಿಂ ಕೋರ್ಟ್ ಮೆಟ್ಟಿಲೇರಿದ್ದರು.

‘ಅತ್ಯಾಚಾರವಾಗಬಾರದು ಎಂದರೆ ಮನೆಯಲ್ಲಿಯೇ ಇರಿ’

ಅಹಮದಾಬಾದ್ (ಪಿಟಿಐ): ‘ಅತ್ಯಾಚಾರವಾಗಬಾರದು ಎಂದರೆ ಮನೆಯಲ್ಲಿಯೇ ಇರಿ’ ಎಂಬ ಸಂದೇಶ ಹೊಂದಿದ್ದ ಪೋಸ್ಟರ್‌ಗಳನ್ನು ಗುಜರಾತ್‌ನ ಅಹಮದಾಬಾದ್‌ನ ವಿವಿಧ ರಸ್ತೆ ವಿಭಜಕಗಳ ಮೇಲೆ ಶನಿವಾರ ಅಳವಡಿಸಿರುವುದು ಕಂಡುಬಂದಿದೆ.

ಸುರಕ್ಷತಾ ಅಭಿಯಾನದ ಕುರಿತು ಅಹಮದಾಬಾದ್ ಸಂಚಾರ ಪೊಲೀಸರು ಪ್ರಾಯೋಜಿಸಿದ ಪೋಸ್ಟರ್‌ಗಳಲ್ಲಿಯೇ ಈ ರೀತಿ ಪದ ಬಳಕೆ ಮಾಡಿರುವುದಕ್ಕೆ ತೀವ್ರ ಟೀಕೆಗೆ ಗುರಿಯಾಗಿದೆ.

‘ತಡರಾತ್ರಿ ಪಾರ್ಟಿಗಳಲ್ಲಿ ಭಾಗವಹಿಸಬೇಡಿ. ಇದರಿಂದ ಅತ್ಯಾಚಾರ, ಸಾಮೂಹಿಕ ಅತ್ಯಾಚಾರವಾಗಬಹುದು. ಕತ್ತಲು, ನಿರ್ಜನ ಪ್ರದೇಶಗಳಲ್ಲಿ ನಿಮ್ಮ ಸ್ನೇಹಿತರ ಜೊತೆ ಹೋಗಬೇಡಿ. ಹೆಣ್ಣುಮಗಳು ಅತ್ಯಾಚಾರ, ಸಾಮೂಹಿಕ ಅತ್ಯಾಚಾರಕ್ಕೊಳಗಾದರೆ ಏನು ಮಾಡಬೇಕು?’ ಎಂದು ಸೋಲಾ ಹಾಗೂ ಚಾಂದ್ಲೋಡಿಯಾ ಪ್ರದೇಶಗಳಲ್ಲಿ ಹಾಕಿದ್ದ ಪೋಸ್ಟರ್‌ನಲ್ಲಿ ಬರೆಯಲಾಗಿತ್ತು. ವಿವಾದ ತೀವ್ರ ಸ್ವರೂಪ ಪಡೆಯುತ್ತಿದ್ದಂತೆಯೇ, ಅವುಗಳನ್ನು ತೆಗೆದುಹಾಕಲಾಗಿದೆ.

ಅಹಮದಾಬಾದ್‌ನಲ್ಲಿ ಅಳವಡಿಸಲಾದ ಪೋಸ್ಟರ್ –ಎಕ್ಸ್ ಚಿತ್ರ

‘ರಸ್ತೆ ಸುರಕ್ಷತೆ ಕುರಿತು ಪೋಸ್ಟರ್‌ಗೆ ಮಾತ್ರ ಸಂಚಾರ ಪೊಲೀಸರು ಪ್ರಾಯೋಜಕತ್ವ ವಹಿಸಿದ್ದರೇ ಹೊರತು, ಮಹಿಳೆಯರ ಸುರಕ್ಷತೆ ವಿಚಾರಕ್ಕಲ್ಲ’ ಎಂದು ಡಿಸಿಪಿ ನೀತಾ ದೇಸಾಯಿ (ಸಂಚಾರ ಪಶ್ಚಿಮ) ತಿಳಿಸಿದ್ದಾರೆ.

‘ಸತರ್ಕತಾ ಸ್ವಯಂಸೇವಾ ಸಂಸ್ಥೆಯು ಈ ಪೋಸ್ಟರ್ ರಚಿಸಿದ್ದು, ಇದಕ್ಕೂ ಮುನ್ನ ಪೊಲೀಸರ ಅನುಮತಿ ಪಡೆದಿರಲಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

‘ಶಾಲಾ–ಕಾಲೇಜುಗಳಲ್ಲಿ ಸಂಚಾರ ಜಾಗೃತಿ ಮೂಡಿಸಲು ಪೋಸ್ಟರ್ ರಚಿಸಿ, ತೋರಿಸಿದ್ದರು. ವಿವಾದ ಹುಟ್ಟುಹಾಕಿರುವ ಪೋಸ್ಟರ್ ಅನ್ನು ತೋರಿಸದೇ, ಅಳವಡಿಸಿದ್ದಾರೆ’ ಎಂದು ದೇಸಾಯಿ ಹೇಳಿದ್ದಾರೆ.

ಈ ವಿಚಾರ ಬೆಳಕಿಗೆ ಬರುತ್ತಿದ್ದಂತೆ ಈ ಪೋಸ್ಟರ್‌ಗಳನ್ನು ತೆಗೆದು ಹಾಕಲಾಗಿದೆ.

ಎಎಪಿ ಕಿಡಿ

‘ಗುಜರಾತ್‌ನಲ್ಲಿರುವ ಬಿಜೆಪಿ ಸರ್ಕಾರವು ಮಹಿಳೆಯರ ಸಬಲೀಕರಣದ ಕುರಿತು ಮಾತನಾಡುತ್ತಿದೆ. ವಾಸ್ತವ ಚಿತ್ರಣವು ಸಂಪೂರ್ಣವಾಗಿ ಭಿನ್ನವಾಗಿದೆ. ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ 6,500 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದು, 36 ಸಾಮೂಹಿಕ ಅತ್ಯಾಚಾರಗಳು ನಡೆದಿವೆ. ರಾಜ್ಯದಲ್ಲಿ ನಿತ್ಯವೂ 5 ಅತ್ಯಾಚಾರಗಳು ನಡೆಯುತ್ತಿವೆ’ ಎಂದು ಆಮ್ ಆದ್ಮಿ ಪಕ್ಷವು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

386 ಹುದ್ದೆಗೆ ‘ಆರ್ಥಿಕ’ ಅಡ್ಡಗಾಲು

ಒಂದನೇ ಪುಟದಿಂದ...

ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದಾಗ ನಡೆದ ಮಂಡಳಿ ಸಭೆಯಲ್ಲಿ (ಡಿ. 31) ಭಾಗವಹಿಸಿದ್ದ ಮಂಡಳಿಯ ನಿರ್ದೇಶಕರೂ ಆಗಿರುವ ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿ, ನೇಮಕಾತಿಗೆ ಸಂಬಂಧಿಸಿದಂತೆ ವಿವರವಾದ ವರದಿ ಮತ್ತು ಯಾವ ಮೂಲದಿಂದ ಅಗತ್ಯ ಅನುದಾನ ಭರಿಸಲಾಗುವುದು ಎಂಬ ಬಗ್ಗೆ ಮಾಹಿತಿ ಕೇಳಿದ್ದರು. ಅಲ್ಲದೆ, ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಜ. 17ರಂದು ಪತ್ರ ಬರೆದ ಅವರು ನೇಮಕಾತಿಯನ್ನು ತಕ್ಷಣ ಸ್ಥಗಿತಗೊಳಿಸಬೇಕು ಎಂದು ನಿರ್ದೇಶನ ನೀಡಿದ್ದರು. ಆರ್ಥಿಕ ಇಲಾಖೆಯ ಪತ್ರಕ್ಕೆ ಸಂಬಂಧಿಸಿದಂತೆ ಆಹಾರ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಪ್ರಸ್ತುತ ನಿಗಮದಲ್ಲಿ ಕಾರ್ಯಪ್ರವೃತ್ತರಾಗಿರುವ ಸಿಬ್ಬಂದಿ ಮತ್ತು ನಿಗಮದ ಚಟುವಟಿಕೆಯ ಬಗ್ಗೆ ಸಮಗ್ರವಾದ ಮಾಹಿತಿ ಒದಗಿಸಿದ್ದಾರೆ.

ಅಲ್ಲದೆ, ಸಿಬ್ಬಂದಿ ನೇಮಕಾತಿಯ ತುರ್ತಿನ ಬಗ್ಗೆಯೂ ವಿವರಿಸಿದ್ದಾರೆ.

ನಿಗಮದ ಪತ್ರದಲ್ಲಿ ಏನಿದೆ: ‘ಪ್ರಸ್ತುತ ಕೇವಲ 191 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಶೇ 80ರಷ್ಟು ಹುದ್ದೆಗಳು ಖಾಲಿ ಇವೆ. ನಿಗಮವು 223 ಸ್ಥಳಗಳಲ್ಲಿ 223 ಸಗಟು ಮಳಿಗೆಗಳು ಸೇರಿದಂತೆ 431 ಗೋದಾಮುಗಳನ್ನು ಹೊಂದಿದೆ. ಸಿಬ್ಬಂದಿಯ ತೀವ್ರ ಕೊರತೆಯ ಕಾರಣ 2–3 ಸಗಟು ಮಳಿಗೆಗಳನ್ನು ಒಬ್ಬರೇ ಸಿಬ್ಬಂದಿ ನಿರ್ವಹಿಸುತ್ತಿದ್ದಾರೆ. ನಿಗಮದ ಕೇಂದ್ರ ಕಚೇರಿಯಲ್ಲಿ 10 ವರ್ಷಗಳ ಹಿಂದೆ, ಅಂದರೆ 2014ನೇ ಸಾಲಿನಲ್ಲಿ 100ಕ್ಕಿಂತಲೂ ಹೆಚ್ಚಿನ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ, 2024ರ ಅಂತ್ಯಕ್ಕೆ ಕೇವಲ 13 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಪತ್ರದಲ್ಲಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ವಿವರಿಸಿದ್ದಾರೆ.

‘ಕೇಂದ್ರ ಕಚೇರಿಯಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಲೆಕ್ಕಪತ್ರ, ಆರ್ಥಿಕ, ಸಂಗ್ರಹಣೆ ಮತ್ತು ಮಾರುಕಟ್ಟೆ ವಿಭಾಗಗಳು ತೀವ್ರ ಹಿನ್ನಡೆ ಅನುಭವಿಸುತ್ತಿವೆ. 2009–10ನೇ ಸಾಲಿನಿಂದ ಕೇಂದ್ರ ಸರ್ಕಾರದಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪಡೆಯಬೇಕಿರುವ ಸಹಾಯಧನ ಪಡೆಯಲು ಈಗಲೂ ಕಸರತ್ತು ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಪಡೆಯಬೇಕಿರುವ ₹ 2,000 ಕೋಟಿ ಪಡೆಯಲು ಪ್ರಸ್ತಾವ ಸಲ್ಲಿಸಲು ಕೂಡ ಸಾಧ್ಯ ಆಗಿಲ್ಲ’ ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಆಹಾರ ನಿಗಮದ ಲಾಭ– ನಷ್ಟ

ಅವಧಿ	ಮೊತ್ತ (₹ ಕೋಟಿಗಳಲ್ಲಿ)
2019-10	-10.83 (ನಷ್ಟ)
2020-21	41.56
2021-22	101.05
2022-23	75.18
2023-24	-3.75 (ನಷ್ಟ– ಲೆಕ್ಕ ಪರಿಶೋಧನೆ ಆಗಿಲ್ಲ)

ವಿಶ್ವ ಈಜು ಚಾಂಪಿಯನ್‌ಷಿಪ್: ಮೆಕ್‌ಕೌನ್‌ಗೆ ಚಿನ್ನ ಡಬಲ್ ಚಿನ್ನ

ಮೆಕಿಂಟೋಷ್ ಸವಾಲು ಗೆದ್ದ ಕೇಟಿ ಲೆಡೆಕಿ

ಸಿಂಗಪುರ (ಎಎಫ್‌ಪಿ): ಅಮೆರಿಕದ ಅನುಭವಿ ಈಜುತಾರೆ ಕೇಟಿ ಲೆಡೆಕಿ ಅವರು ಶನಿವಾರ ವಿಶ್ವ ಚಾಂಪಿಯನ್‌ಷಿಪ್‌ನ ಮಹಿಳೆಯರ 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಕೆನಡಾದ ಸಮ್ಮರ್ ಮೆಕಿಂಟೋಷ್ ಅವರ ಸವಾಲನ್ನು ಮೆಟ್ಟಿನಿಂತು ಚಿನ್ನದ ಪದಕಕ್ಕೆ ಮುತ್ತಿಕ್ಕಿದರು.

28 ವರ್ಷದ ಲೆಡೆಕಿ ಅವರು ಕುತೂಹಲಕರ ಸ್ಪರ್ಧೆಯಲ್ಲಿ ವೃತ್ತಿಜೀವನದ ಏಳನೇ ವಿಶ್ವ ಚಿನ್ನವನ್ನು ಗೆದ್ದರು. ಆದರೆ, ಈ ಬಾರಿ ಹಿಂದೆಂದೂ ಕಾಣದ ತೀವ್ರ ಪೈಪೋಟಿಯನ್ನು ಅವರು ಎದುರಿಸಬೇಕಾಯಿತು.

ವಿಶ್ವದಾಖಲೆ ಹೊಂದಿರುವ ಲೆಡೆಕಿ ಅವರು 8 ನಿಮಿಷ 05.62 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ಚಾಂಪಿಯನ್‌ಷಿಪ್ ದಾಖಲೆಯನ್ನೂ ಬರೆದರು. ಅವರಿಗೆ ಪ್ರಬಲ ಸ್ಪರ್ಧೆ ನೀಡಿದ ಆಸ್ಟ್ರೇಲಿಯಾದ ಲ್ಯಾನಿ ಪ್ಯಾಲಿಸ್ಟರ್ (8:05.98) ಮತ್ತು ಮೆಕಿಂತೋಷ್ (8:07.29) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಕೂಟದಲ್ಲಿ ಈಗಾಗಲೇ ಮೂರು ಚಿನ್ನ ಗೆದ್ದಿರುವ 18 ವರ್ಷದ ಮೆಕಿಂಟೋಷ್ ಅವರಿಗೆ ಮೊದಲ ಬಾರಿ ಸ್ವರ್ಣ ಕೈತಪ್ಪಿತು. ಒಂದೇ ಕೂಟದಲ್ಲಿ ಐದು ವೈಯಕ್ತಿಕ ಚಿನ್ನ ಗೆದ್ದ ಮೈಕೆಲ್ ಫೆಲ್ಪ್ಸ್ (ಅಮೆರಿಕ) ಅವರ ದಾಖಲೆಯನ್ನು ಸರಿಗಟ್ಟುವ ಕನಸು ಕಮರಿತು. 400 ಮೀ. ಫ್ರೀಸ್ಟೈಲ್‌ನಲ್ಲಿ ಮೆಕಿಂಟೋಷ್ ಚಿನ್ನ ಗೆದ್ದರೆ, ಲೆಡೆಕಿ ಕಂಚು ಜಯಿಸಿದ್ದರು.

ಚಿನ್ನ ಗೆದ್ದ ಅಮೆರಿಕದ ಈಜುತಾರೆ ಕೇಟಿ ಲೆಡೆಕಿ (ಎಡ) ಅವರನ್ನು ಕಂಚು ಗೆದ್ದ ಕೆನಡಾದ ಸಮ್ಮರ್ ಮೆಕಿಂಟೋಷ್ ಅಭಿನಂದಿಸಿದರು –ಎಎಫ್‌ಪಿ ಚಿತ್ರ

‘ಈ ಫಲಿತಾಂಶದಿಂದ ಅಪಾರ ಸಂತಸವಾಗಿದೆ. ವೃತ್ತಿಜೀವನದ ಈ ಹಂತದಲ್ಲಿ ನಾನು ಕಳೆದುಕೊಳ್ಳಲು ಹೆಚ್ಚೇನೂ ಇಲ್ಲ ಎಂದು ಅನಿಸುತ್ತದೆ’ ಎಂದು ಈ ಸ್ಪರ್ಧೆಯಲ್ಲಿ ನಾಲ್ಕು ಬಾರಿ ಒಲಿಂಪಿಕ್ ಚಾಂಪಿಯನ್ ಆಗಿರುವ ಲೆಡೆಕಿ ಪ್ರತಿಕ್ರಿಯಿಸಿದರು.

ಮೆಕ್‌ಕೌನ್‌ಗೆ ಚಿನ್ನ ಡಬಲ್: ಆಸ್ಟ್ರೇಲಿಯಾದ ಈಜುಪಟು ಕೈಲಿ ಮೆಕ್‌ಕೌನ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಮತ್ತೆ ಪ್ರಾಬಲ್ಯ ಸಾಧಿಸಿದರು. ಮಹಿಳೆಯರ 100 ಮೀಟರ್ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿದ್ದ ಅವರು 200 ಮೀಟರ್‌ನಲ್ಲೂ ಸ್ವರ್ಣ ಗೆದ್ದರು.

24 ವರ್ಷದ ಮೆಕ್‌ಕೌನ್ ಅವರು ರೇಗನ್ ಸ್ಮಿತ್ ಅವರ ಸವಾಲನ್ನು ಮೆಟ್ಟಿನಿಂತು 2 ನಿಮಿಷ 03.33 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ಚಾಂಪಿಯನ್‌ಷಿಪ್ ದಾಖಲೆಗೂ ಪಾತ್ರವಾದರು. ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಮೆಕ್‌ಕೌನ್, ಇದೇ ವಿಭಾಗದ ಸ್ಪರ್ಧೆಯಲ್ಲಿ ಅವಳಿ ಚಿನ್ನ ಗೆದ್ದಿದ್ದರು. ಅಮೆರಿಕದ ರೇಗನ್ (2:04.29) ಬೆಳ್ಳಿ ಗೆದ್ದರೆ, ಕ್ಲೇರ್ ಕರ್ಜನ್ (2:06.04) ಕಂಚು ತಮ್ಮದಾಗಿಸಿಕೊಂಡರು.

ಅಮೆರಿಕದ ಗ್ರೆಚೆನ್ ವಾಲ್ಷ್ ಅವರು ಮಹಿಳೆಯರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. 100 ಮೀಟರ್‌ನಲ್ಲೂ ಅವರು ಚಿನ್ನಕ್ಕೆ ಮುತ್ತಿಕ್ಕಿದ್ದ ಅವರು, 24.83 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಆಸ್ಟ್ರೇಲಿಯಾದ ಅಲೆಕ್ಸಾಂಡ್ರಿಯಾ ಪರ್ಕಿನ್ಸ್ (25.31ಸೆ) ಮತ್ತು ಬೆಲ್ಜಿಯಂನ ರೂಸ್ ವ್ಯಾನೋಟರ್ಡಿಜ್ಕ್ (25.43) ಕ್ರಮವಾಗಿ ನಂತರದ ಸ್ಥಾನ ಪಡೆದರು.

ಪುರುಷರ 50 ಮೀಟರ್ ಫ್ರೀಸ್ಟೈಲ್‌ನಲ್ಲಿ ಆಸ್ಟ್ರೇಲಿಯಾದ ಕ್ಯಾಮೆರಾನ್ ಮೆಕ್‌ಇವೊಯ್ (21.14ಸೆ) ಚಿನ್ನ ಗೆದ್ದರೆ, ಬ್ರಿಟನ್‌ನ ಬೆನ್ ಪ್ರೌಡ್ (21.26) ಮತ್ತು ಅಮೆರಿಕದ ಜ್ಯಾಕ್ ಅಲೆಕ್ಸಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಂಡರು.

ಫ್ರಾನ್ಸ್‌ನ ಮ್ಯಾಕ್ಸಿಮ್ ಗ್ರೌಸೆಟ್ ಅವರು (49.62ಸೆ) ಪುರುಷರ 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕಿರೀಟ ಮುಡಿಗೇರಿಸಿಕೊಂಡರು. ಸ್ವಿಟ್ಜರ್ಲೆಂಡ್‌ನ ನೋಯ್ ಪೊಂಟಿ (49.83) ಬೆಳ್ಳಿ ಗೆದ್ದರೆ ಮತ್ತು ಕೆನಡಾದ ಇಲ್ಯಾ ಖರುನ್ (50.07) ಕಂಚು ಜಯಿಸಿದರು.

ರಿಲೆಯಲ್ಲಿ ಅಮೆರಿಕ ವಿಶ್ವದಾಖಲೆ

ಮಿಶ್ರ 4x100 ಮೀಟರ್ ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲಿ ಅಮೆರಿಕ ತಂಡವು ಚಿನ್ನದ ಸಾಧನೆಯೊಂದಿಗೆ ವಿಶ್ವದಾಖಲೆ ನಿರ್ಮಿಸಿತು.

ಅಮೆರಿಕದ ತಂಡವು 3 ನಿಮಿಷ 18.48 ಸೆಕೆಂಡ್‌ಗಳಲ್ಲಿ ಗುರಿ ತಲುಪುವ ಮೂಲಕ 2023ರಲ್ಲಿ ಆಸ್ಟ್ರೇಲಿಯಾ ತಂಡ (3:18.83) ನಿರ್ಮಿಸಿದ್ದ ದಾಖಲೆಯನ್ನು ಮುಳುಗಿಸಿತು. ಜ್ಯಾಕ್ ಅಲೆಕ್ಸಿ, ಪ್ಯಾಟ್ರಿಕ್ ಸ್ಯಾಮನ್, ಕೇಟ್ ಡಗ್ಲಾಸ್ ಮತ್ತು ಟೊರಿ ಹಸ್ಕೆ ಅವರನ್ನೊಳಗೊಂಡ ತಂಡ ಈ ಸಾಧನೆ ಮಾಡಿತು.

ರಷ್ಯಾದ ‘ತಟಸ್ಥ ಅಥ್ಲೀಟ್’ಗಳ ತಂಡವು (3:19.68) ಮತ್ತು ಫ್ರಾನ್ಸ್ (3:21.35) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡಿತು.

ಹೇಗನ್ ಟೆನಿಸ್: ನಗಾಲ್ ನಿರ್ಗಮನ

ನವದೆಹಲಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಜರ್ಮನಿಯ ಹೇಗನ್‌ನಲ್ಲಿ ನಡೆಯುತ್ತಿರುವ ಪ್ಲಾಟ್ಜ್‌ಮನ್ ಓಪನ್ ಎಟಿಪಿ 75 ಚಾಲೆಂಜರ್ ಟೂರ್ನಿಯ ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನೀಲ್ಸ್ ಮೆಕ್‌ಡೊನಾಲ್ಡ್ ಎದುರು ಸೋಲನುಭವಿಸಿದರು.

ನಗಾಲ್

27 ವರ್ಷ ವಯಸ್ಸಿನ ನಗಾಲ್, ತಮಗಿಂತ 10 ವರ್ಷ ಕಿರಿಯವನಾದ ಮೆಕ್‌ಡೋನಾಲ್ಡ್ ಎದುರು 2–6, 6–4, 4–6 ರಿಂದ ಸೋಲನುಭವಿಸಿದರು. ಫ್ರೆಂಚ್ ಓಪನ್ ಜೂನಿಯರ್ ಚಾಂಪಿಯನ್ ಆಗಿರುವ ಆತಿಥೇಯ ಜರ್ಮನಿಯ ಆಟಗಾರ 2 ಗಂಟೆ 16 ನಿಮಿಷಗಳಲ್ಲಿ ಪಂದ್ಯ ಗೆದ್ದರು.

ಎರಡೂ ಆಟಗಾರರು ಒಂದೊಂದು ಸೆಟ್ ಗೆದ್ದಾಗ ಪಂದ್ಯವನ್ನು ಶುಕ್ರವಾರಕ್ಕೆ ಮುಂದೂಡಲಾಗಿತ್ತು. ನಗಾಲ್ ಪ್ರಿಕ್ವಾರ್ಟರ್‌ಫೈನಲ್ ತಲುಪಿದ ಕಾರಣ ಆರು ರ್‍ಯಾಂಕಿಂಗ್ ಪಾಯಿಂಟ್ ಹಾಗೂ ಒಂದೂವರೆ ಲಕ್ಷ ರೂಪಾಯಿ ಬಹುಮಾನ ಪಡೆದರು.

ಸುರೇಶ್‌ಗೆ ಸೋಲು: ಅಮೆರಿಕದ ಲೆಕ್ಸಿಂಗ್ಟನ್‌ನಲ್ಲಿ ನಡೆಯುತ್ತಿರುವ ಲೆಕ್ಸಿಂಗ್ಟನ್ ಓಪನ್ ಟೂರ್ನಿಯಲ್ಲಿ ಭಾರತದ ಯುವ ಆಟಗಾರ ದಕ್ಷಿಣೇಶ್ವರ್ ಸುರೇಶ್ 6–7 (4), 4–6 ರಿಂದ ತಮಗಿಂತ ಉನ್ನತ ರ್‍ಯಾಂಕಿನ ಎಲಿಯಟ್ ಸ್ಪಿಝ್ಝಿರಿ ಅವರಿಗೆ ಮಣಿದರು.

ಏಳು ರಾಜ್ಯಗಳಲ್ಲಿ ಈಶ ಗ್ರಾಮೋತ್ಸವ

ನವದೆಹಲಿ: ಭಾರತದ ಅತಿ ದೊಡ್ಡ ಗ್ರಾಮೀಣ ಕ್ರೀಡಾ ಉತ್ಸವ ಎನಿಸಿರುವ ಈಶ ಗ್ರಾಮೋತ್ಸವದ 17ನೇ ಆವೃತ್ತಿಗೆ ಇದೇ ತಿಂಗಳ 10 ರಂದು ಮೈಸೂರಿನಲ್ಲಿ ಚಾಲನೆ ನೀಡಲಾಗುವುದು. ಈ ಹಿಂದಿನ ಗ್ರಾಮೋತ್ಸವಗಳಿಗಿಂತ ದೊಡ್ಡ ಪ್ರಮಾಣದಲ್ಲಿ– ಒಟ್ಟು ಏಳು ರಾಜ್ಯಗಳಲ್ಲಿ– ಈ ಬಾರಿಯ ಗ್ರಾಮೋತ್ಸವ ನಡೆಯಲಿದೆ.

ಕರ್ನಾಟಕ, ಆಂಧ್ರಪ್ರದೇಶ, ಕೇರಳ, ತಮಿಳುನಾಡು, ತೆಲಂಗಾಣ, ಪುದುಚೇರಿ ಮತ್ತು (ಮೊದಲ ಬಾರಿಗೆ) ಒಡಿಶಾ ರಾಜ್ಯಗಳ 35,000 ಕ್ಕೂ ಹೆಚ್ಚು ಗ್ರಾಮಗಳಲ್ಲಿ ಈ ಕ್ರೀಡೋತ್ಸವ ವ್ಯಾಪಿಸಿದೆ. ಈ ಬಾರಿ 6,000ಕ್ಕೂ ಹೆಚ್ಚು ತಂಡಗಳು ಪಾಲ್ಗೊಳ್ಳಲಿವೆ.

5,000ಕ್ಕೂ ಹೆಚ್ಚು ಮಹಿಳೆಯರು ಸೇರಿದಂತೆ 50,000 ಕ್ರೀಡಾಪಟುಗಳು ಮೈದಾನಕ್ಕೆ ಇಳಿಯಲಿದ್ದಾರೆ. ಪಂದ್ಯಾವಳಿಯಲ್ಲಿ ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಆಟಗಳು ಇವೆ.

ಸೆಪ್ಟೆಂಬರ್ 21ರಂದು ಕೊಯಮತ್ತೂರಿನ ಈಶ ಯೋಗ ಕೇಂದ್ರದ ಆದಿಯೋಗಿ ಸಮ್ಮುಖದಲ್ಲಿ ಅಂತಿಮ ಪಂದ್ಯ ನಡೆಯಲಿದೆ. ದೈಹಿಕ ಅಂಗವಿಕಲ ಆಟಗಾರರಿಗಾಗಿ ಪ್ಯಾರಾ ವಾಲಿಬಾಲ್ ಕೂಡ ಇರಲಿದೆ ಎಂದು ಈಶ ಗ್ರಾಮೋತ್ಸವದ ಸಂಯೋಜಕ ಸ್ವಾಮಿ ಪುಲಕ ಅವರು ತಿಳಿಸಿದ್ದಾರೆ.

ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ವಿಜೇತರಿಗೆ ತಲಾ ₹5 ಲಕ್ಷ ನೀಡಲಾಗುತ್ತದೆ ಎಂದೂ ತಿಳಿಸಿದ್ದಾರೆ. ಗ್ರಾಮೋತ್ಸವದಲ್ಲಿ ಒಟ್ಟು ₹67 ಲಕ್ಷ ಬಹುಮಾನ ಗೆಲ್ಲುವ ಅವಕಾಶವಿದೆ.

ಹಂಗಾಮಿ ಸಮಿತಿಗೆ ರಾಜೀನಾಮೆ

ನವದೆಹಲಿ (ಪಿಟಿಐ): ಮುಂಬರುವ ಭಾರತ ಬಾಕ್ಸಿಂಗ್ ಫೆಡರೇಷನ್‌ನ (ಬಿಎಫ್‌ಐ) ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಹಂಗಾಮಿ ಸಮಿತಿ ಅಧ್ಯಕ್ಷ ಅಜಯ್ ಸಿಂಗ್ ಅವರು ತಮ್ಮ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದಾರೆ.

ವರ್ಲ್ಡ್ ಬಾಕ್ಸಿಂಗ್ ಅಧ್ಯಕ್ಷ ಬೋರಿಸ್ ವಾನ್ ಡರ್ ಫೋರ್ಸ್ಟ್ ಅವರು ಚುನಾವಣೆಗೆ ವೀಕ್ಷಕರಾಗಿ ಉಪಸ್ಥಿತರಿರಲಿದ್ದಾರೆ. ಹಂಗಾಮಿ ಸಮಿತಿ ಶುಕ್ರವಾರ ಪದಾಧಿಕಾರಿಗಳ ಚುನಾವಣಾ ದಿನಾಂಕವನ್ನು ಆಗಸ್ಟ್ 21ಕ್ಕೆ ನಿಗದಿಪಡಿಸಿದ ಮರುದಿನವೇ ಅವರು ರಾಜೀನಾಮೆ ನೀಡಿದ್ದಾರೆ.

‘ನಾನು ಚುನಾವಣೆಗೆ ಸ್ಪರ್ಧಿಸುವ ಉದ್ದೇಶ ಹೊಂದಿರುವುದರಿಂದ, ಹಿತಾಸಕ್ತಿ ಸಂಘರ್ಷ ತಪ್ಪಿಸಲು ಮತ್ತು ಪಾರದರ್ಶಕತೆಯ ಉದ್ದೇಶದಿಂದ ನನ್ನ ರಾಜೀನಾಮೆ ನೀಡುತ್ತಿದ್ದೇನೆ’ ಎಂದು ಅವರು ವಾನ್ ಡರ್ ಫೋರ್ಸ್ಟ್ ಅವರಿಗೆ ಉದ್ದೇಶಿಸಿ ಆಗಸ್ಟ್ 1ರಂದು ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಚೆಸ್ ವಿಶ್ವಕಪ್ ಗೆದ್ದ ನಾಗ್ಪುರ ಆಟಗಾರ್ತಿಯ ಸಾಧನೆ ಕೊಂಡಾಡಿದ ನ್ಯಾಯಮೂರ್ತಿ ಬಿ.ಆರ್. ಗವಾಯಿ

ದಿವ್ಯಾ ಮನೆಗೆ ಸಿಜೆಐ ಭೇಟಿ, ಅಭಿನಂದನೆ

ನಾಗ್ಪುರ (ಪಿಟಿಐ): ಫಿಡೆ ಮಹಿಳಾ ವಿಶ್ವಕಪ್ ಗೆದ್ದ ದಿವ್ಯಾ ದೇಶಮುಖ್ ಅವರ ಇಲ್ಲಿನ ನಿವಾಸಕ್ಕೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಶನಿವಾರ ಭೇಟಿ ನೀಡಿ ಅವರ ಸಾಧನೆಗೆ ಅಭಿನಂದನೆ ಸಲ್ಲಿಸಿದರು.

ಬಿ.ಆರ್. ಗವಾಯಿ

ಮಹಿಳಾ ಚೆಸ್ ವಿಶ್ವ ಕಪ್ ಗೆದ್ದ ಅತಿ ಕಿರಿಯ ಆಟಗಾರ್ತಿಯರೆಂಬ ಹಿರಿಮೆಗೆ 19 ವರ್ಷ ವಯಸ್ಸಿನ ದಿವ್ಯಾ ಪಾತ್ರರಾಗಿದ್ದರು. ಈ ವೇಳೆ ಅವರು ದಿವ್ಯಾ ಕುಟುಂಬದ ಜೊತೆಗಿನ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ಅಮರಾವತಿಯವರು. ದಿವ್ಯಾ ಅವರ ಅಜ್ಜ ಡಾ.ಕೆ.ಜಿ.ದೇಶಮುಖ್ ಅವರು ಈ ಹಿಂದೆ ಅಮರಾವತಿಯ ಸಂತ ಗಾಡ್ಗೆ ಬಾಬಾ ಅಮರಾವತಿ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದರು.

‘ಕುಲಪತಿ ಮತ್ತು ನಾನು ಆತ್ಮೀಯ ಸ್ನೇಹಿತರಾಗಿದ್ದೆವು. ನಾವು ಒಂದೇ ಕುಟುಂಬದಂತೆ ಇದ್ದೆವು. ನಾನು 50–55 ವರ್ಷಗಳ ಹಿಂದಿನ ವರ್ಷಗಳಿಗೆ ಮರಳಿ ಭಾವುಕನಾದೆ. ಹಲವು ವರ್ಷಗಳ ನಂತರ ಆದ ಸಮ್ಮಿಲನ ಇದು. ನಾವೆಲ್ಲ ಹೆಮ್ಮೆಪಟ್ಟುಕೊಳ್ಳುವಂತೆ ಆಡಿದ ದಿವ್ಯಾ ಅವರನ್ನು ಅಭಿನಂದಿಸಲು ನಾನು ವಿಶೇಷವಾಗಿ ಬಂದೆ’ ಎಂದು ಗವಾಯಿ ಅವರು ಸುದ್ದಿಗಾರರಿಗೆ ತಿಳಿಸಿದರು.

ದಿವ್ಯಾ ದೇಶಮುಖ್ ಅವರನ್ನು ಅಭಿನಂದಿಸಿದ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಎಕ್ಸ್ ಚಿತ್ರ

ದಿವ್ಯಾಗೆ ₹3 ಕೋಟಿ ಬಹುಮಾನ

ನಾಗ್ಪುರ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಮಹಿಳಾ ಚೆಸ್ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಅವರಿಗೆ ನಗದು ಬಹುಮಾನವಾಗಿ ₹3 ಕೋಟಿ ಮೊತ್ತದ ಚೆಕ್ ಹಸ್ತಾಂತರಿಸಿದರು.

ಜಾರ್ಜಿಯಾದ ಬಟುಮಿಯಲ್ಲಿ ಅವರು ಸ್ವದೇಶದ ಕೋನೇರು ಹಂಪಿ ಅವರನ್ನು ಜುಲೈ 28ರಂದು ನಡೆದ ಫೈನಲ್‌ನ ಟೈಬ್ರೇಕರ್‌ನಲ್ಲಿ ಮಣಿಸಿ ವಿಶ್ವಕಪ್ ಚಾಂಪಿಯನ್ ಆಗಿದ್ದರು. ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೂ ಏರಿದ್ದರು.

ಮುಖ್ಯಮಂತ್ರಿ ಫಡಣವೀಸ್ ಅವರೂ ನಾಗ್ಪುರದವರು. ಶನಿವಾರ ನಗರದಲ್ಲಿ ಹಮ್ಮಿಕೊಂಡಿದ್ದ ಸಾರ್ವಜನಿಕ ಸಮಾರಂಭದಲ್ಲಿ ಈ ಬಹುಮಾನ ನೀಡಲಾಯಿತು.

ದಿವ್ಯಾ ಅವರಿಗೆ ಸಾಧನೆ ಮುಂದುವರಿಸಲು ಮುಂದೆಯೂ ಬೆಂಬಲ ನೀಡುವುದಾಗಿ ಮುಖ್ಯಮಂತ್ರಿ ಆಶ್ವಾಸನೆ ನೀಡಿದರು. ಕ್ರೀಡಾ ಸಚಿವ ಮಾಣಿಕರಾವ್ ಕೋಕಟೆ ಈ ವೇಳೆ ಹಾಜರಿದ್ದರು.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

MAINTENANCE

Job Role: Maintenance Executive/ Manager
No. of Position: 03 Nos.
Work Location: Open to work anywhere in Karnataka
Experience: 6-18yrs
Qualification: BE-Electrical-EEE
Roles & Responsibilities:
- Overall Responsibility of Effective maintenance of all Electrical & Controls for minimizing equipment downtime.
- Manpower and Resource Planning. Plan daily maintenance activities and ensure for their execution
- Liasoning with Air & Pollution control bodies, BSNL, BESCOM etc. Electrical & Fire Safety. Energy Audits & Electrical Energy Management.

ITI- FITTER

Job Role: ITI- Fitter
Work Location: Bangalore-KBG
Experience: 5yrs
Qualification: ITI-Fitter
Roles & Responsibilities:
- Hands on experience on plumbing related activity.
- Handling of RO operation.
- Maintenance of printing machine dampening system. Servicing of pumps. Cleaning activity of printing machine folder.
- Maintenance of cooling towers. Air cooling & hydrant system maintenance. CTP processor water line & chilling system maintenance.

Salary will be based on qualification and experience.
Please send your application for the above position **by 15/8/2025** mentioning the job applied for (subject of the e-mail) with updated resume to:

The Manager-Recruitment
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಭಾರತದ ನೆರವಿಗೆ ಜೈಸ್ವಾಲ್, ಆಕಾಶ್

ಐದನೇ ಟೆಸ್ಟ್ • ಆರಂಭ ಆಟಗಾರನಿಗೆ ಜೀವದಾನಗಳ ಲಾಭ • ಜಡೇಜ, ವಾಷಿಂಗ್ಟನ್ ಅರ್ಧಶತಕ • ಇಂಗ್ಲೆಂಡ್‌ಗೆ 374 ರನ್ ಗುರಿ

• ಸಿದ್ಧಿ ಕಿರಣ್



ಶತಕ ದಾಖಲಿಸಿದ ಸಂಭ್ರಮದಲ್ಲಿ ಯಶಸ್ವಿ ಜೈಸ್ವಾಲ್ –ಪಿಟಿಐ ಚಿತ್ರ

ಲಂಡನ್: ವೀರರಿಗೆ ಅದೃಷ್ಟದ ಬಲವೂ ಇರುತ್ತದೆ ಎಂಬ ಮಾತಿದೆ. ಅದಕ್ಕೆ ತಕ್ಕಂತೆ ಭಾರತ ತಂಡದ ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ತಮ್ಮ ಅದೃಷ್ಟದ ಮೇಲೆ ಸವಾರಿ ಮಾಡಿ ಶನಿವಾರ ಶತಕ ಬಾರಿಸಿದರು. ಅವರೊಂದಿಗೆ ಆಕಾಶ್‌ದೀಪ್, ರವೀಂದ್ರ ಜಡೇಜ ಮತ್ತು ವಾಷಿಂಗ್ಟನ್ ಸುಂದರ್ ಅರ್ಧಶತಕಗಳ ಮೂಲಕ ಎರಡನೇ ಇನಿಂಗ್ಸ್‌ಗೆ ಬಲ ತುಂಬಿದರು. ಇದರಿಂದ ಐದನೇ ಟೆಸ್ಟ್ ಗೆಲ್ಲಲು ಇಂಗ್ಲೆಂಡ್‌ಗೆ ಸವಾಲಿನ ಗುರಿ ಎದುರಾಗಿದೆ.

ಪಂದ್ಯದ ಮೂರನೇ ದಿನ ಎರಡು ಸೇರಿದಂತೆ ಒಟ್ಟು ನಾಲ್ಕು ಜೀವದಾನಗಳ ಲಾಭ ಪಡೆದ ಜೈಸ್ವಾಲ್, ಇಂಗ್ಲೆಂಡ್ ಇದಕ್ಕೆ ದಂಡ ತೆರುವಂತೆ ಮಾಡಿದರು. ಪ್ರತ್ಯಾಕ್ರಮಣದ ಆಟದಲ್ಲಿ ಅವರು 164 ಎಸೆತಗಳಲ್ಲಿ 118 ರನ್ ಬಾರಿಸಿದರು. ಅಲ್ಲದೆ, ಆಕಾಶ್ (66), ಜಡೇಜ (53) ಮತ್ತು ವಾಷಿಂಗ್ಟನ್ (53) ಅವರ ಬ್ಯಾಟಿಂಗ್ ನೆರವಿನಿಂದ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 396 ರನ್ ಗಳಿಸಿ ಆಲೌಟ್ ಆಯಿತು.

ಗೆಲುವಿಗೆ 374 ರನ್‌ಗಳ ಸವಾಲಿನ ಗುರಿ ಪಡೆದ ಇಂಗ್ಲೆಂಡ್ ದಿನದಾಟದ ಮುಕ್ತಾಯಕ್ಕೆ 13.5 ಓವರ್‌ಗಳಲ್ಲಿ 1 ವಿಕೆಟ್‌ಗೆ 50 ರನ್ ಗಳಿಸಿದೆ. ಗೆಲುವಿಗೆ ಇನ್ನೂ 324 ರನ್ ದೂರದಲ್ಲಿದೆ.

ಕೊನೆಯ ಅವಕಾಶದಲ್ಲಿ ತನ್ನ ವೇಗದ ಬೌಲರ್‌ಗಳು ಅಗತ್ಯಕ್ಕೆ ಸ್ಪಂದಿಸಲಿದ್ದು, ಆ್ಯಂಡರ್ಸನ್– ತೆಂಡೂಲ್ಕರ್ ಟ್ರೋಫಿ ಸರಣಿಯನ್ನು 2–2 ಸಮಮಾಡಿಕೊಳ್ಳುವ ವಿಶ್ವಾಸದಲ್ಲಿ ಭಾರತ ತಂಡವಿದೆ. ಆದರೆ, ಇಂಗ್ಲೆಂಡ್ ತಂಡವು ಈ ಪಂದ್ಯವನ್ನು ಗೆದ್ದು ಸರಣಿ ವಶಮಾಡಿಕೊಳ್ಳುವ ಛಲದಲ್ಲಿದೆ.

ಮೂರು ದಿನಗಳಲ್ಲಿ ಮೊದಲ ಬಾರಿ ಬೌಲರ್‌ಗಳಿಗೆ ಪಿಚ್ ಹೆಚ್ಚಿನ ನೆರವು ನೀಡಿದಂತೆ ಕಾಣಲಿಲ್ಲ. ಬೆಳಿಗ್ಗೆ ಹದವಾದ ಬಿಸಿಲೂ ಇದ್ದು ಪಿಚ್ ಬ್ಯಾಟರ್‌ಗಳಿಗೆ ಅನುಕೂಲವಾಗಿರುವಂತೆ ಕಂಡಿತು. ಆದರೆ ವೇಗಿಗಳು ಕರಾರುವಾಕ್ ಬೌಲಿಂಗ್ ಮಾಡಿದಲ್ಲಿ ಅವರಿಗೂ ಯಶಸ್ಸು ಅಸಾಧ್ಯವಾಗಿರಲಿಲ್ಲ. ಇಲ್ಲೇ ಇಂಗ್ಲೆಂಡ್ ಹಿನ್ನಡೆ ಕಂಡಿತು. ಯಶಸ್ವಿ ಮತ್ತು 'ನೈಟ್ ವಾಚ್‌ಮನ್' ಆಕಾಶ್ ದೀಪ್ ಇದರ ಲಾಭ ಪಡೆದರು. ಅದರಲ್ಲೂ ಆಕಾಶ್ ಜೀವನಶ್ರೇಷ್ಠ 66 ರನ್ (94 ಎಸೆತ) ಹೊಡೆದರು.

ಅನುಭವಿ ಕ್ರಿಸ್ ವೋಕ್ಸ್ ಮೊದಲ ದಿನ ಗಾಯಾಳಾಗಿ ಹೊರನಡೆದಿದ್ದರು. ಅವರ ಗೈರಿನಲ್ಲಿ ಇತರ ವೇಗಿಗಳಾದ ಗಸ್ ಅಟ್ಕಿನ್ಸನ್, ಜೋಶ್ ಟಂಗ್ ಮತ್ತು ಜೆಮಿ ಓವರ್ಟನ್ ಅವರು ತಮ್ಮ ಲೈನ್ ಮತ್ತು ಲೆಂಗ್ತ್‌ನಲ್ಲಿ ಎಡವಿದರು. ಇದರಿಂದ ಯಶಸ್ವಿ ಮತ್ತು ಆಕಾಶ್ ಬೌಲರ್‌ಗಳನ್ನು ವಿಶ್ವಾಸದಿಂದ ಆಡಿದರು. ಫುಲ್ಲರ್ ಲೆಂಗ್ತ್ ಎಸೆತಗಳಲ್ಲಿ ಮೊದಲೆರಡು ದಿನ ಇತ್ತಂಡಗಳು ವಿಕೆಟ್‌ಗಳನ್ನು ಪಡೆದಿದ್ದವು. ಆದರೆ ಮೂರನೇ ದಿನ ಕೆಲವು ಎಸೆತಗಳಷ್ಟೇ ಅಪಾಯಕಾರಿಯಾಗಿ ಕಂಡವು.

ಇಂಗ್ಲೆಂಡ್ ಎದುರು ಬ್ಯಾಟಿಂಗ್ ಆಸ್ವಾದಿಸುವ ಜೈಸ್ವಾಲ್, ಆ ತಂಡದ ಎದುರು ನಾಲ್ಕನೇ ಮತ್ತು ಒಟ್ಟಾರೆ ಆರನೇ ಶತಕ ದಾಖಲಿಸಿದರು. ಆಕಾಶ್ ಸಹ ಬ್ಯಾಟರ್ ರೀತಿ ಕುದುರಿಕೊಂಡು ಇಂಗ್ಲೆಂಡ್ ಬೌಲರ್‌ಗಳನ್ನು ಹತಾಶ ಗೊಳಿಸಿದರು. ಆಕಾಶ್ ಬಾರಿಸಿದ ಪ್ರತಿಯೊಂದು ಬೌಂಡರಿಗೂ, ಸಾಕಷ್ಟು ಸಂಖ್ಯೆಯಲ್ಲಿದ್ದ ಭಾರತೀಯ ಪ್ರೇಕ್ಷಕರಿಂದ ಹರ್ಷೋದ್ಗಾರಗಳು ಕೇಳಿಬಂದವು.

ಇಂಗ್ಲೆಂಡ್ ನಂತರ ಶಾರ್ಟ್ ಬಾಲ್‌ಗಳನ್ನು ಪ್ರಯೋಗಿಸತೊಡಗಿತು. ಆದರೆ ಜೈಸ್ವಾಲ್ ಮತ್ತು ಆಕಾಶ್ ಅವುಗಳನ್ನು ಕಟ್, ಪುಲ್ ಮತ್ತ ಹುಕ್ ಮಾಡುವ ಮೂಲಕ ಪ್ರತ್ಯುತ್ತರ ನೀಡಿದರು. ಆಕಾಶ್ ಮುಂದಡಿಯಿಟ್ಟು ಬಾರಿಸಿದ ಪುಲ್ ಹೊಡೆತಗಳು ವೀಕ್ಷಕ ವಿವರಣೆ ಮಾಡುತ್ತಿದ್ದ ದಿಗ್ಗಜ ಆಟಗಾರ ರಿಕಿ ಪಾಂಟಿಂಗ್ ಮೆಚ್ಚುಗೆ ಪಡೆದವು.

ಈ ವೇಳೆ ಓವರ್ಟನ್ ಇಂಗ್ಲೆಂಡ್‌ಗೆ ದಿನದ ಮೊದಲ ಯಶಸ್ಸು ದೊರಕಿಸಿ ಕೊಟ್ಟರು. ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಕ್ಯಾಚಿತ್ತ ಆಕಾಶ್‌ಗೆ ನಿರಾಸೆ ಉಂಟಾಯಿತು. ಆದರೆ ತಮ್ಮ ಕೆಲಸವನ್ನು ಉತ್ತಮ ವಾಗಿಯೇ ನಿರ್ವಹಿಸಿದ ಭಾವ ಅವರಲ್ಲಿ ಕಂಡಿತು. ಮೂರನೇ ವಿಕೆಟ್‌ಗೆ 107 ರನ್‌ಗಳ ಜೊತೆಯಾಟ ಭಾರತವನ್ನು ಅಪಾಯದಿಂದ ಪಾರು ಮಾಡಿತ್ತು.

ಇಂಗ್ಲೆಂಡ್‌ನಲ್ಲಿ 50+ ಅಧಿಕ ರನ್ ಗಳಿಸಿದ ಆಟಗಾರರು (ಒಂದೇ ಸರಣಿಯಲ್ಲಿ)		
50+ರನ್	ಆಟಗಾರ	ವರ್ಷ
6	ರವೀಂದ್ರ ಜಡೇಜ	2025
5	ಸುನಿಲ್ ಗಾವಸ್ಕರ್	1979
5	ವಿರಾಟ್ ಕೊಹ್ಲಿ	2018
5	ರಿಷಭ್ ಪಂತ್	2025

ವಾಷಿಂಗ್ಟನ್



ಜಡೇಜ

ಈ ಸರಣಿಯಲ್ಲಿ ಹಲವು ಬಾರಿ ಪೆಂಡುಲಮ್‌ನಂತೆ ಮೇಲುಗೈ ಬದಲಾಗುತ್ತಾ ಹೋಗಿದೆ. ಲಂಚ್ ನಂತರ ಮೊದಲ ಎಸೆತದಲ್ಲೇ ಶುಭಮನ್ ಗಿಲ್ ನಿರ್ಗಮಿಸಿದ್ದರಿಂದ ಇಂಗ್ಲೆಂಡ್ ನಿಟ್ಟುಸಿರುಟ್ಟಿತು. ಕನ್ನಡಿಗ ಕರುಣ್ ನಾಯರ್ ಸರಾಗವಾಗಿ ಆಡಲಿಲ್ಲ. ಆದರೆ ಇನ್ನೊಂದೆಡೆ ಜೈಸ್ವಾಲ್ ಶತಕ ಪೂರೈಸಿದರು. ಆದರೆ ಕರುಣ್ ಅವರ ವಿಕೆಟ್ ಪಡೆದ ಇಂಗ್ಲೆಂಡ್ ಪಂದ್ಯದ ಮೇಲೆ ಮರಳಿ ಹಿಡಿತ ಸಾಧಿಸಿತು.

ಸರಣಿಯಲ್ಲಿ ಕೆಲ ಅಮೋಘ ಇನಿಂಗ್ಸ್ ಆಡಿರುವ ಜಡೇಜ ಮತ್ತೆ ಎದುರಾಳಿ ತಂಡವನ್ನು ಕಾಡಿದರು. ಸರಣಿಯಲ್ಲಿ ದಾಖಲೆಯ ಆರನೇ ಅರ್ಧ ಶತಕ ದಾಖಲಿಸಿದ ಜಡೇಜ ಅವರು ಧ್ರುವ ಜುರೇಲ್ (34) ಅವರೊಂದಿಗೆ ಏಳನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಅನುಭವಿ ಆಲ್‌ರೌಂಡರ್ ಈ ಸರಣಿಯಲ್ಲಿ ಒಟ್ಟು 516 ರನ್ ಗಳಿಸಿದರು.

ಜುರೇಲ್ ನಿರ್ಗಮನದ ಬಳಿಕ ಜಡೇಜ ಅವರನ್ನು ಸೇರಿಕೊಂಡ ವಾಷಿಂಗ್ಟನ್ ತಂಡದ ಮೊತ್ತವನ್ನು ಮತ್ತಷ್ಟು ಹಿಗ್ಗಿಸಿದರು. ಜಡೇಜ ಔಟಾದ ಬಳಿಕ ವಾಷಿಂಗ್ಟನ್ ರನ್ ವೇಗವನ್ನು ಹೆಚ್ಚಿಸಿಕೊಂಡರು. ಅವರ ಇನಿಂಗ್ಸ್‌ನಲ್ಲಿ ನಾಲ್ಕು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಸೇರಿದ್ದವು. ಕೊನೆಯ ವಿಕೆಟ್ ಜೊತೆಯಾಟದಲ್ಲಿ ಪ್ರಸಿದ್ಧ್‌ ಕೃಷ್ಣ ಅವರೊಂದಿಗೆ 39 ರನ್ ಸೇರಿಸಿದರು. ಅಷ್ಟೂ ರನ್‌ಗಳು ವಾಷಿಂಗ್ಟನ್ ಬ್ಯಾಟ್‌ನಿಂದಲೇ ಬಂದವು. ಹೀಗಾಗಿ, ತಂಡದ ಮೊತ್ತ 400ರ ಸಮೀಪ ಬರಲು ಸಾಧ್ಯವಾಯಿತು. ಜೋಶ್ ಟಂಗ್ ಐದು ವಿಕೆಟ್ ಗೊಂಚಲು ಪಡೆದರು.

ಸಿರಾಜ್ ಪೆಟ್ಟು: ಜ್ಯಾಕ್ ಕ್ರಾಲಿ (14) ಮತ್ತು ಬೆನ್ ಡಕೆಡ್ (ಔಟಾಗದೇ 34) ಮೊದಲ ವಿಕೆಟ್‌ಗೆ 50 ರನ್ ಸೇರಿಸಿ ಇಂಗ್ಲೆಂಡ್ ಹೋರಾಟಕ್ಕೆ ಉತ್ತಮ ಆರಂಭ ಒದಗಿಸಿದರು. ಆದರೆ, ದಿನದಾಟದ ಕೊನೆಯ ಎಸೆತದಲ್ಲಿ ಕ್ರಾಲಿ ವಿಕೆಟ್ ಪಡೆಯುವ ಮೂಲಕ ಮೊಹಮ್ಮದ್ ಸಿರಾಜ್ ಪೆಟ್ಟು ನೀಡಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 224 (69.4 ಓವರುಗಳಲ್ಲಿ)
ಇಂಗ್ಲೆಂಡ್: 247 (51.2 ಓವರುಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ: 396 (88 ಓವರುಗಳಲ್ಲಿ)
(ಶುಕ್ರವಾರ: 2 ವಿಕೆಟ್‌ಗೆ 75)
ಜೈಸ್ವಾಲ್ ಸಿ ಓವರ್ಟನ್ ಬಿ ಟಂಗ್ 118 (164ಎ, 4x14, 6x2)
ಆಕಾಶ್ ಸಿ ಅಟ್ಕಿನ್ಸನ್ ಬಿ ಓವರ್ಟನ್ 66 (94ಎ, 4x12)
ಗಿಲ್ ಎಲ್‌ಬಿಡಬ್ಲ್ಯು ಬಿ ಅಟ್ಕಿನ್ಸನ್ 11 (9ಎ, 4x2)
ಕರುಣ್ ಸಿ ಸ್ಮಿತ್ ಬಿ ಅಟ್ಕಿನ್ಸನ್ 17 (32ಎ, 4x3)
ಜಡೇಜ ಸಿ ಬ್ರೂಕ್ ಬಿ ಟಂಗ್ 53 (77ಎ, 4x5)
ಜುರೇಲ್ ಎಲ್‌ಬಿಡಬ್ಲ್ಯು ಬಿ ಓವರ್ಟನ್ 34 (46ಎ, 4x4)
ಸುಂದರ್ ಸಿ ಕ್ರಾಲಿ ಬಿ ಟಂಗ್ 53 (46ಎ, 4x4, 6x4)
ಸಿರಾಜ್ ಎಲ್‌ಬಿಡಬ್ಲ್ಯು ಬಿ ಟಂಗ್ 0 (3ಎ)
ಪ್ರಸಿದ್ಧ ಔಟಾಗದೇ 0 (2ಎ)
ಇತರೆ: 26 (ಬೈ 13, ಲೆಗ್‌ಬೈ 5, ನೋಬಾಲ್ 2, ವೈಡ್ 6)
ವಿಕೆಟ್ ಪತನ: 3-177 (ಆಕಾಶ್ ದೀಪ್, 42.1), 4-189 (ಶುಭಮನ್ ಗಿಲ್, 44.1), 5-229 (ಕರುಣ್ ನಾಯರ್, 54.3), 6-273 (ಯಶಸ್ವಿ ಜೈಸ್ವಾಲ್, 64.2), 7-323 (ಧ್ರುವ್ ಜುರೇಲ್, 76.2), 8-357 (ರವೀಂದ್ರ ಜಡೇಜ, 83.2), 9-357 (ಮೊಹಮ್ಮದ್ ಸಿರಾಜ್, 83.5), 10-396 (ವಾಷಿಂಗ್ಟನ್ ಸುಂದರ್, 87.6)
ಬೌಲಿಂಗ್: ಗಸ್ ಅಟ್ಕಿನ್ಸನ್ 27-3-127-3, ಜೋಶ್ ಟಂಗ್ 30-4-125-5, ಜೆಮಿ ಓವರ್ಟನ್ 22-2-98-2, ಜೇಕಬ್ ಬೆಥೆಲ್ 4-0-13-0, ಜೋ ರೂಟ್ 5-1-15-0
ಇಂಗ್ಲೆಂಡ್: 1 ವಿಕೆಟ್‌ಗೆ 50 ರನ್ (13.5 ಓವರ್)
ಕ್ರಾಲಿ ಬಿ ಸಿರಾಜ್ 14 (36ಎ, 4x2)
ಡಕೆಟ್ ಔಟಾಗದೇ 34 (48ಎ, 4x4
ಇತರೆ: 2 (ಲೆಗ್‌ಬೈ 1, ನೋಬಾಲ್ 1)
ವಿಕೆಟ್ ಪತನ: 1-50 (ಜ್ಯಾಕ್ ಕ್ರಾಲಿ, 13.5)
ಬೌಲಿಂಗ್: ಆಕಾಶ್ ದೀಪ್: 5-1-15-0, ಪ್ರಸಿದ್ಧ ಕೃಷ್ಣ 5-1-23-0, ಮೊಹಮ್ಮದ್ ಸಿರಾಜ್ 3.5-0-11-1

ಕೋಲ್ಕತ್ತದಲ್ಲಿ ಪ್ರತಿಮೆ ಅನಾವರಣ
ಡಿಸೆಂಬರ್‌ನಲ್ಲಿ ಮೆಸ್ಸಿ ಭಾರತಕ್ಕೆ

ಲಯೋನೆಲ್ ಮೆಸ್ಸಿ

ಕೋಲ್ಕತ್ತ (ಪಿಟಿಐ): ಎಲ್ಲವೂ ಅಂದು ಕೊಂಡಂತೆ ನಡೆದರೆ, ಫುಟ್‌ಬಾಲ್ ದಿಗ್ಗಜ ಲಯೋನೆಲ್ ಮೆಸ್ಸಿ ಅವರನ್ನು ದಶಕದ ನಂತರ ಮೊದಲ ಬಾರಿ ಕಾಣುವ ಅವಕಾಶ ಕೋಲ್ಕತ್ತದ ಫುಟ್‌ಬಾಲ್ ಪ್ರಿಯರಿಗೆ ಡಿಸೆಂಬರ್‌ನಲ್ಲಿ ಒದಗಲಿದೆ. ಅರ್ಜೆಂಟೀನಾದ ತಾರೆಯ ಮೂರು ದಿನಗಳ ಭಾರತ ಪ್ರವಾಸ ಇಲ್ಲಿಂದಲೇ ಶುರುವಾಗಲಿದೆ.

ಅವರು ಅಹ್ಮದಾಬಾದ್, ಮುಂಬೈ ಮತ್ತು ನವದೆಹಲಿಗೂ ಭೇಟಿ ನೀಡಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯೊಂದಿಗೆ ಭಾರತ ಪ್ರವಾಸ ಕೊನೆಗೊಳ್ಳಲಿದೆ.

'ಎಲ್ಲ ಏರ್ಪಾಡುಗಳು ಅಂತಿಮ ಗೊಳ್ಳುತ್ತಿದೆ. ಮುಂಬೈನ ವಾಂಖೆಡೆ ಕ್ರೀಡಾಂಗಣದ ಬುಕ್ಕಿಂಗ್ ಕೂಡ ಆಗಿದೆ. ಆದರೆ ಮೆಸ್ಸಿ ಅವರ ಅಧಿಕೃತ ಒಪ್ಪಿಗೆಗೆ ಕಾಯಲಾಗುತ್ತಿದೆ ಎಂದು ಈ ಬೆಳವಣಿಗೆ ಅನುಸರಿಸುತ್ತಿರುವ ಮೂಲವೊಂದು ತಿಳಿಸಿದೆ. ಮೆಸ್ಸಿ ಅವರ ಸಾಮಾಜಿಕ ಜಾಲತಾಣದಿಂದ ಯಾವುದೇ ಕ್ಷಣದಲ್ಲಿ ಒಪ್ಪಿಗೆ ಬರಬಹುದು ಎಂದೂ ಮೂಲ ತಿಳಿಸಿದೆ.

ವೇಳಾಪಟ್ಟಿಯ ಅನುಸಾರ ಮೆಸ್ಸಿ ಡಿಸೆಂಬರ್ 12ರ ರಾತ್ರಿ ಕೋಲ್ಕತ್ತಕ್ಕೆ ಬಂದಿಳಿಯಲಿದ್ದಾರೆ.

ಮೆಸ್ಸಿ ಪ್ರತಿಮೆ: ಕೋಲ್ಕತ್ತದ ವಿಐಪಿ ರಸ್ತೆಯ ಲೇಕ್‌ಟೌನ್‌ನ ಶ್ರೀಭೂಮಿಯಲ್ಲಿ ಮೆಸ್ಸಿ ಅವರ 70 ಅಡಿ ಎತ್ತರದ ಪ್ರತಿಮೆಯನ್ನು ಸ್ವತಃ ಅವರೇ ಡಿ. 13ರಂದು ಅನಾವರಣ ಗೊಳಿಸಲಿದ್ದಾರೆ. 'ವಿಶ್ವದಲ್ಲೇ ಇದು ವಿಶ್ವಕಪ್ ವಿಜೇತನ ಅತಿ ದೊಡ್ಡ ಪ್ರತಿಮೆಯಾಗಲಿದೆ' ಎಂದು ಸಂಘಟಕರು ತಿಳಿಸಿದ್ದಾರೆ.

ಅವರು ನಂತರ ಮಧ್ಯಾಹ್ನ 12 ರಿಂದ ಈಡನ್‌ಗಾರ್ಡನ್‌ನಲ್ಲಿ ತಲಾ ಏಳು ಮಂದಿ ಇರುವ ತಂಡಗಳ ನಡುವೆ ಆಡಲಾಗುವ 'ಗೋಟ್ ಕಪ್' ಪ್ರದರ್ಶನ ಪಂದ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಪ್ರದರ್ಶನ ಪಂದ್ಯದಲ್ಲಿ ಸೌರವ್ ಗಂಗೂಲಿ, ಲಿಯಾಂಡರ್ ಪೇಸ್, ಜಾನ್ ಅಬ್ರಹಾಂ, ಬೈಚುಂಗ್ ಭುಟಿಯಾ ಮತ್ತಿತರರು ಪಾಲ್ಗೊಳ್ಳುವ ನಿರೀಕ್ಷೆಯಿದೆ.

13ರಂದು ಅವರು ಅಹಮದಾಬಾದಿಗೆ ತೆರಳಲಿದ್ದು ಶಾಂತಿ ಗ್ರಾಮದಲ್ಲಿ ಅದಾನಿ ಪ್ರತಿಷ್ಠಾನದ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. 14ರಂದು ಅವರು ಮುಂಬೈ ತಲುಪಲಿದ್ದು ಅಂದು ಸಂಜೆ ಗೋಟ್ ಕನ್ಸರ್ಟ್ ಮತ್ತು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಗೋಟ್ ಕಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

15ರಂದು ಅವರು ನವದೆಹಲಿಯಲ್ಲಿ ಪ್ರಧಾನಿ ಮೋದಿ ಅವರೊಂದಿಗೆ ಭೇಟಿಯ ನಂತರ ಫಿರೋಜ್ ಶಾ ಕೋಟ್ಲಾದಲ್ಲಿ ಪ್ರದರ್ಶನ ಪಂದ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ.

2011ರಲ್ಲಿ ಭೇಟಿ: ಮೆಸ್ಸಿ ಅವರು ಮೊದಲ ಬಾರಿ 2011ರ ಆಗಸ್ಟ್‌ನಲ್ಲಿ ಭಾರತಕ್ಕೆ ಬಂದಿದ್ದರು. ಆಗಸ್ಟ್ 31ರಂದು ಕೋಲ್ಕತ್ತಕ್ಕೆ ಬಂದಿಳಿದ ಅವರು ಸಾಲ್ಟ್ ಲೇಕ್ ಕ್ರೀಡಾಂಗಣದಲ್ಲಿ ವೆನೆಜುವೆಲಾ ವಿರುದ್ಧ ಪ್ರದರ್ಶನ ಪಂದ್ಯದಲ್ಲಿ ಆಡಿದ್ದರು. ಮೆಸ್ಸಿ ತಂಡ 1–0 ಯಿಂದ ಆ ಪಂದ್ಯ ಜಯಿಸಿತ್ತು

ಇಂಡಿಯನ್ ಗ್ರ್ಯಾನ್‌ಪ್ರಿ: ಲೋಕೇಶ್‌ಗೆ ಬೆಳ್ಳಿ

ಲೋಕೇಶ್

ಲುಧಿಯಾನ (ಪಿಟಿಐ): ಕರ್ನಾಟಕದ ಲೋಕೇಶ್ ಸತ್ಯನಾಥನ್ ಅವರು ಲುಧಿಯಾನದಲ್ಲಿ ಶನಿವಾರ ನಡೆದ ಇಂಡಿಯನ್ ಗ್ರ್ಯಾನ್‌ಪ್ರಿ ಕೂಟದಲ್ಲಿ ಬೆಳ್ಳಿ ಪದಕ ಗೆದ್ದರು.

25 ವರ್ಷದ ಲೋಕೇಶ್ ಅವರು ಪುರುಷರ ಲಾಂಗ್‌ಜಂಪ್‌ನಲ್ಲಿ 7.68 ಮೀಟರ್ ಸಾಧನೆ ತೋರಿದರು. ಹರಿಯಾಣದ ಮಹೊಮ್ಮದ್ ಅಟ್ಟಾ ಸಾಜಿದ್ (7.79 ಮೀ) ಮತ್ತು ರೈಲ್ವೆಯ ಸ್ವಾಮಿನಾಥನ್ ಆರ್. (7.65ಮೀ) ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕ ಗೆದ್ದರು.

ಅಭಿನವ್ ಗರ್ಗ್ ಚಾಂಪಿಯನ್ • ಅಶ್ವತಿ ಮಿಂಚು
ಪ್ರಶಸ್ತಿ ಡಬಲ್‌ಗೆ ಶೈನಾ 'ಮುತ್ತು'

ಪ್ರಜಾವಾಣಿ ವಾರ್ತೆ

ಎರಡು ವಿಭಾಗಗಳ ಪ್ರಶಸ್ತಿ ಗೆದ್ದ ಶೈನಾ ಮಣಿಮುತ್ತು ಅವರ ಆಟದ ಭಂಗಿ

ಮಂಗಳೂರು: ಅಗ್ರಕ್ರಮಾಂಕದ ಎದುರಾಳಿಯನ್ನು ಮಣಿಸಿದ ಬೆಂಗಳೂರಿನ ಶೈನಾ ಮಣಿಮುತ್ತು ಅವರು ಶನಿವಾರ ಮುಕ್ತಾಯಗೊಂಡ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ 19 ವರ್ಷದೊಳಗಿನ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿ ಸಿಕೊಂಡರು. ಎರಡನೇ ಶ್ರೇಯಾಂಕಿತೆಯನ್ನು ಮಣಿಸಿದ ಅವರು ಸೀನಿಯರ್ ಮಹಿಳಾ ವಿಭಾಗದ ಪ್ರಶಸ್ತಿಯನ್ನೂ ಗೆದ್ದುಕೊಂಡರು.

ನಗರದ ಉರ್ವ ಕ್ರೀಡಾ ಸಂಕೀರ್ಣದಲ್ಲಿ ನಡೆದ ಟೂರ್ನಿಯ 19 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಶೈನಾ 21–10, 21–9ರಲ್ಲಿ ಮೈಸೂರಿನ ದಿಯಾ ಭೀಮಯ್ಯ ಅವರನ್ನು ಮಣಿಸಿದರು. ಸೀನಿಯರ್ ವಿಭಾಗದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಲಕ್ಷ್ಯ ರಾಜೇಶ್ ವಿರುದ್ಧ 21–18, 21–12ರ ಗೆಲುವು ಸಾಧಿಸಿದರು. ಆರ್ಮಿ ಪಬ್ಲಿಕ್ ಸ್ಕೂಲ್‌ನ 10ನೇ ತರಗತಿ ವಿದ್ಯಾರ್ಥಿನಿ ಶೈನಾ, ಎಂಕೆಬಿಎಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಪುರುಷರ 19 ವರ್ಷದೊಳಗಿನವರ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರ ಕ್ರಮಾಂಕದ ಅಭಿನವ್ ಗರ್ಗ್ 21–12, 21–19ರಲ್ಲಿ ಓಂ ಮಾಕಾ ಎದುರು ಜಯ ಸಾಧಿಸಿದರು. ಸೀನಿಯರ್ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ 4ನೇ ಶ್ರೇಯಾಂಕದ ತುಷಾರ್ ಸುವೀರ್ ವಿರುದ್ಧ 21–11, 21–10ಲ್ಲಿ ಗೆದ್ದು ನಿಕೋಲಸ್ ರಾಜ್ ಪ್ರಶಸ್ತಿಗೆ ಮುತ್ತಿಕ್ಕಿದರು.

ಸಿಂಗಲ್ಸ್ ಮತ್ತು ಮಹಿಳೆಯರ ಡಬಲ್ಸ್‌ನಲ್ಲಿ ಮುಗ್ಗರಿಸಿದರೂ ಮಿಶ್ರ ಡಬಲ್ಸ್‌ನಲ್ಲಿ ದಿಯಾ ಭೀಮಯ್ಯ ಪ್ರಶಸ್ತಿ ಗೆದ್ದರು. ಸುಮಿತ್ ಜೊತೆಗೂಡಿದ ಅವರು ಕ್ರಿಸ್ ಬ್ಯಾಪ್ಟಿಸ್ಟ್ ಮತ್ತು ಮೌನಿತಾ ಜೋಡಿಯನ್ನು 18–21, 21–9, 21–15ರಲ್ಲಿ ಸೋಲಿಸಿದರು.

ಫೈನಲ್ ಪಂದ್ಯಗಳ ಫಲಿತಾಂಶಗಳು

ಪುರುಷರ ವಿಭಾಗ: ಸೀನಿಯರ್: ಬೆಂಗಳೂರಿನ ನಿಕೋಲಸ್ ರಾಜ್‌ಗೆ ಬೆಂಗಳೂರಿನ ತುಷಾರ್ ಸುವೀರ್ ಎದುರು 21–11, 21–10ಲ್ಲಿ ಜಯ. 19 ವರ್ಷದೊಳಗಿನವರು: ಬೆಂಗಳೂರಿನ ಅಭಿನವ್ ಗರ್ಗ್‌ಗೆ ಬೆಂಗಳೂರಿನ ಓಂ ಮಾಕಾ ವಿರುದ್ಧ 21–12, 21–19ರಲ್ಲಿ ಜಯ.

ಸೀನಿಯರ್ ಡಬಲ್ಸ್: ಮೈಸೂರಿನ ಕಿಶಲ್ ಗಣಪತಿ–ಸುಮಿತ್‌ಗೆ ಕುಶಾಲ್ ರಾಜ್–ಪ್ರಕಾಶ್ ರಾಜ್ ವಿರುದ್ಧ 21–17, 21–19ರಲ್ಲಿ ಗೆಲುವು. 19 ವರ್ಷದೊಳಗಿನವರು: ಮೈಸೂರಿನ ಅಮಿತ್ ರಾಜ್ ನಟರಾಜ್–ಹಾರ್ದಿಕ್ ದಿವ್ಯಾಂಶ್‌ಗೆ ದಕ್ಷಿಣ ಕನ್ನಡದ ಕ್ರಿಸ್ ಬ್ಯಾಪ್ಟಿಸ್ಟ್–ಮೈಸೂರಿನ ಸುಮಿತ್ ಎ.ಆರ್ ವಿರುದ್ಧ 21–18, 21–17ರಲ್ಲಿ ಗೆಲುವು.

ಮಹಿಳೆಯರು: ಸೀನಿಯರ್: ಬೆಂಗಳೂರಿನ ಶೈನಾ ಮಣಿಮುತ್ತುಗೆ ಲಕ್ಷ್ಯ ರಾಜೇಶ್ ವಿರುದ್ಧ 21-18, 21-12ರಲ್ಲಿ ಜಯ. 19 ವರ್ಷದೊಳಗಿನವರು: ಶೈನಾ ಮಣಿಮುತ್ತುಗೆ ಮೈಸೂರಿನ ದಿಯಾ ಭೀಮಯ್ಯ ವಿರುದ್ಧ 21–10, 21–9ರಲ್ಲಿ ಜಯ. ಸೀನಿಯರ್ ಡಬಲ್ಸ್: ಬೆಂಗಳೂರಿನ ಗ್ಲೋರಿಯಾ ಅಠಾವಳೆ-ಪ್ರೇರಣಾ ಜೋಡಿಗೆ ಮೈಸೂರಿನ ಅಶ್ವತಿ ವರ್ಗೀಸ್-ದಿಯಾ ಭೀಮಯ್ಯ ವಿರುದ್ಧ 21–19, 21–14ರಲ್ಲಿ ಜಯ. 19 ವರ್ಷದೊಳಗಿನವರ ಡಬಲ್ಸ್: ಅಶ್ವತಿ ವರ್ಗೀಸ್–ಲಕ್ಷ್ಯ ರಾಜೇಶ್‌ಗೆ ಬೆಂಗಳೂರಿನ ಇಶಿಕಾ ಕಶ್ಯಪ್-ತನಿಕಾ ಮೋಹನ್ ಎದುರು 21–11, 21–11ರಲ್ಲಿ ಗೆಲುವು.

ಮಿಶ್ರ ವಿಭಾಗ: ಸೀನಿಯರ್: ಪ್ರಕಾಶ್ ರಾಜ್–ಕರ್ಣಿಕ ಶ್ರೀಗೆ ಮೈಸೂರಿನ ಕಿಶಲ್ ಗಣಪತಿ–ರಶ್ಮಿ ಗಣೇಶ್ ವಿರುದ್ಧ 24–22, 24–22ರಲ್ಲಿ ಜಯ. 19 ವರ್ಷದೊಳಗಿನವರು: ಮೈಸೂರಿನ ಸುಮಿತ್ ಎ.ಆರ್–ದಿಯಾ ಭೀಮಯ್ಯಗೆ ಕ್ರಿಸ್ ಬ್ಯಾಪ್ಟಿಸ್ಟ್-ಬೆಂಗಳೂರಿನ ಮೌನಿತಾ ಎ.ಎಸ್ ವಿರುದ್ಧ 18–21, 21–9, 21–15ರಲ್ಲಿ ಜಯ.

ಕೆವಿಎಸ್ ರಾಷ್ಟ್ರೀಯ ಕ್ರೀಡಾಕೂಟ
ಬೆಂಗಳೂರು ತಂಡ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ಆರಂಭಗೊಂಡ ಕೇಂದ್ರೀಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದ 14 ವರ್ಷದೊಳಗಿನ ಬಾಲಕಿಯರ ಕಬಡ್ಡಿ ಸ್ಪರ್ಧೆಯಲ್ಲಿ ಬೆಂಗಳೂರು ತಂಡವು ಶುಭಾರಂಭ ಮಾಡಿತು.

ಕೇಂದ್ರೀಯ ವಿದ್ಯಾಲಯಗಳ ಸಂಘಟನೆಯ ಆಶ್ರಯದಲ್ಲಿ ನಗರದ ಕೇಂದ್ರೀಯ ವಿದ್ಯಾಲಯ ಹೆಬ್ಬಾಳದಲ್ಲಿ ನಡೆದ ಲೀಗ್ ಹಂತದ ಪಂದ್ಯದಲ್ಲಿ ಬೆಂಗಳೂರು ತಂಡವು 34–23 ಅಂಕಗಳಿಂದ ಎರ್ನಾಕುಳಂ ತಂಡದ ವಿರುದ್ಧ ಗೆಲುವು ಸಾಧಿಸಿತು.

ಇತರ ಫಲಿತಾಂಶ: ಲಖನೌ ತಂಡ 25–19 ರಿಂದ ಭೋಪಾಲ್ ವಿರುದ್ಧ; ಜಬಲ್‌ಪುರ 38–10ರಿಂದ ಭುವನೇಶ್ವರ ವಿರುದ್ಧ; ಚೆನ್ನೈ 27– 15 ಕೋಲ್ಕತ್ತ ವಿರುದ್ಧ; ರಾಂಚಿ 32–19ರಿಂದ ಚಂಡೀಗಢ ವಿರುದ್ಧ; ಮುಂಬೈ 23–20ರಿಂದ ಜಮ್ಮು ವಿರುದ್ಧ; ಡೆಹ್ರಾಡೂನ್ 27–23ರಿಂದ ಹೈದರಾಬಾದ್ ವಿರುದ್ಧ ಗೆಲುವು ಸಾಧಿಸಿದವು.

ಪಟ್ನಾ ತಂಡ 44–28ರಿಂದ ವಾರಣಾಸಿ ಎದುರು; ಲಖನೌ 29–22ರಿಂದ ಜೈಪುರ ಎದುರು; ದೆಹಲಿ 39–18ರಿಂದ ಜಬಲ್‌ಪುರ ಎದುರು; ಚೆನ್ನೈ 36–10ರಿಂದ ಅಹಮದಾಬಾದ್ ಎದುರು; ಆಗ್ರಾ 35–18ರಿಂದ ಗುವಾಹಟಿ ಎದುರು; ಮುಂಬೈ 18–17ರಿಂದ ಭೋಪಾಲ್ ಎದುರು ಜಯ ಸಾಧಿಸಿದವು.

ಕೇಂದ್ರೀಯ ವಿದ್ಯಾಲಯಗಳ 54ನೇ ರಾಷ್ಟ್ರೀಯ ಕ್ರೀಡಾಕೂಟದ 14 ವರ್ಷದೊಳಗಿನ ಬಾಲಕಿಯರ ಕಬಡ್ಡಿ ಸ್ಪರ್ಧೆಯ ಉದ್ಘಾಟನಾ ಪಂದ್ಯದಲ್ಲಿ ಭೋಪಾಲ್ (ಪಿಂಕ್) ತಂಡದ ಆಟಗಾರ್ತಿಯರು ಲಖನೌ ತಂಡದ ರೈಡರ್ ಅನ್ನು ಹಿಡಿದೆಳೆದರು ಪ್ರಜಾವಾಣಿ ಚಿತ್ರ/ ಕೃಷ್ಣ ಕುಮಾರ್ ಪಿ.ಎಸ್.

ಸೆಮಿಯಲ್ಲಿ ಸೋತ ಲಕ್ಷ್ಯ, ತರುಣ್

ಮಕಾವ್ (ಪಿಟಿಐ): ಲಕ್ಷ್ಯ ಸೇನ್ ಮತ್ತು ತರುಣ್ ಮನ್ನೇಪಲ್ಲಿ ಅವರು ಮಕಾವ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಶನಿವಾರ ಹೊರಬಿದ್ದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿತು.

ಇವರಿಬ್ಬರ ವಿರುದ್ಧ ಕ್ರಮವಾಗಿ ಗೆದ್ದ ಅಲ್ವಿ ಫರ್ಹಾನ್ ಮತ್ತು ಜಸ್ಟಿನ್ ಹೊ ಅವರು ಭಾನುವಾರ ಪ್ರಶಸ್ತಿಗಾಗಿ ಸೆಣಸಾಡಲಿದ್ದಾರೆ.

2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಅವರು ಇಂಡೊನೇಷ್ಯಾದ ಅಲ್ವಿ ಫರ್ಹಾನ್ ಅವರ ವೇಗ ಮತ್ತು ಕರಾರುವಾಕ್ ಹೊಡೆತಗಳಿಗೆ ಸಾಟಿಯಾಗಲಿಲ್ಲ. ಅಲ್ವಿ ಸೆಮಿಫೈನಲ್ ಪಂದ್ಯವನ್ನು 21–16, 21–9 ರಿಂದ ಕೇವಲ 39 ನಿಮಿಷಗಳಲ್ಲಿ ಗೆದ್ದರು. ಈ ಮೂಲಕ ಲಕ್ಷ್ಯ ಅವರ ಪ್ರಶಸ್ತಿ ಬರ ಮುಂದುವರಿಯಿತು. ಫರ್ಹಾನ್ 2023ರ ವಿಶ್ವ ಜೂನಿಯರ್ ಚಾಂಪಿಯನ್ ಆಗಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 47ನೇ ಸ್ಥಾನದಲ್ಲಿರುವ ತರುಣ್ ಮನ್ನೇಪಲ್ಲಿ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ 21–19, 16–21, 16–21 ರಿಂದ ಮಲೇಷ್ಯಾದ ಜಸ್ಟಿನ್ ಹೊ ಅವರನ್ನು ಒಂದು ಗಂಟೆ 21 ನಿಮಿಷಗಳಲ್ಲಿ ಸೋಲಿಸಿದರು. ಈ ಪಂದ್ಯದಲ್ಲಿ ಮೇಲುಗೈ ಬದಲಾಗುತ್ತ ಹೋಯಿತು. ಇಬ್ಬರೂ ತಾವೇ ಆಗಿ ತಪ್ಪುಗಳನ್ನು ಎಸಗಿದರು.

ಲಕ್ಷ್ಯ ವಿರುದ್ಧ ಪಂದ್ಯದಲ್ಲಿ ಮೊದಲ ಗೇಮ್‌ನಲ್ಲಿ 0–3 ಹಿನ್ನಡೆಯಿಂದ ಚೇತರಿಸಿದ ಬಳಿಕ ಫರ್ಹಾನ್ ಮೇಲುಗೈ ಸಾಧಿಸಿದರು. 11–7ರಲ್ಲಿ ಮುನ್ನಡೆದ ಅವರು ರ‍್ಯಾಲಿಗಳ ವೇಗವನ್ನು ನಿಯಂತ್ರಿಸಿದರು. ನಿಖರ ಡ್ರಾಪ್‌ಗಳು ಮತ್ತು ಪ್ರಬಲ ಸ್ಮ್ಯಾಶ್‌ಗಳ ಮೂಲಕ ಭಾರತದ ಆಟಗಾರನ ಲಯ ತಪ್ಪಿಸಿದರು.

ಭಾನುವಾರ, ಆಗಸ್ಟ್ 3, 2025 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಅನ್ನದಾತ ಸುಖೀಭವ’

ಆಂಧ್ರ ಪ್ರದೇಶ ಸರ್ಕಾರ ರೈತರಿಗೆ ವಾರ್ಷಿಕ ₹20,000 ಪ್ರೋತ್ಸಾಹಧನ ನೀಡುವ ‘ಅನ್ನದಾತ ಸುಖೀಭವ’ ಯೋಜನೆಗೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಶನಿವಾರ ಚಾಲನೆ ನೀಡಿದರು

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

ರಷ್ಯಾದಿಂದ ತೈಲ ಖರೀದಿ ಮುಂದುವರಿಕೆ?

ತೈಲ ಖರೀದಿಯು ದೀರ್ಘಾವಧಿಯ ಗುತ್ತಿಗೆ ಎಂದು ಮೂಲಗಳಿಂದ ವಿವರಣೆ

ನವದೆಹಲಿ (ರಾಯಿಟರ್ಸ್): ದಂಡ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬೆದರಿಕೆ ಒಡ್ಡಿದ್ದರೂ, ರಷ್ಯಾದಿಂದ ಕಚ್ಚಾ ತೈಲ ಖರೀದಿ ಮುಂದುವರಿಯಲಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಹೇಳಿವೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಯು 'ದೀರ್ಘಾವಧಿಯ ಗುತ್ತಿಗೆ ಒಪ್ಪಂದ' ಎಂದು ಮೂಲವೊಂದು ಹೇಳಿದೆ. 'ಈ ಖರೀದಿಯನ್ನು ಇದ್ದಕ್ಕಿದ್ದಂತೆ ನಿಲ್ಲಿಸುವುದು ಸುಲಭವಲ್ಲ' ಎಂದು ಅದು ವಿವರಿಸಿದೆ.

ರಷ್ಯಾದಿಂದ ಶಸ್ತ್ರಾಸ್ತ್ರಗಳನ್ನು ಹಾಗೂ ಕಚ್ಚಾ ತೈಲವನ್ನು ಖರೀದಿಸುತ್ತಿರುವುದಕ್ಕೆ ಭಾರತದ ಮೇಲೆ ದಂಡ ವಿಧಿಸಲಾಗುತ್ತದೆ ಎಂದು ಟ್ರಂಪ್ ಅವರು ಜುಲೈ ಕೊನೆಯಲ್ಲಿ ಹೇಳಿದ್ದಾರೆ. ಆದರೆ ದಂಡವು ಎಷ್ಟಿರುತ್ತದೆ ಎಂಬುದನ್ನು ಅವರು ತಿಳಿಸಿಲ್ಲ.

ಕೇಂದ್ರ ಸರ್ಕಾರದ ನೀತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಎಂದು ಇಬ್ಬರು ಹಿರಿಯ ಅಧಿಕಾರಿಗಳನ್ನು ಉಲ್ಲೇಖಿಸಿ ಅಮೆರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ. ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರವು ಕಂಪನಿಗಳಿಗೆ ಯಾವುದೇ ಸೂಚನೆ ನೀಡಿಲ್ಲ ಎಂದು ಅಧಿಕಾರಿಯೊಬ್ಬರು ಹೇಳಿರುವುದಾಗಿ ವರದಿಯು ಹೇಳಿದೆ.

'ತೈಲ ಖರೀದಿಯ ವಿಚಾರದಲ್ಲಿ ನಾವು ಮಾರುಕಟ್ಟೆಯಲ್ಲಿ ಏನು ಲಭ್ಯವಿದೆ, ಜಾಗತಿಕ ಪರಿಸ್ಥಿತಿ ಏನಿದೆ ಎಂಬುದನ್ನು ಗಮನಿಸುತ್ತೇವೆ' ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸುದ್ದಿಗಾರರಿಗೆ ಶುಕ್ರವಾರ ಹೇಳಿದ್ದರು.

ಭಾರತವು ರಷ್ಯಾದ ಜೊತೆ 'ಸ್ಥಿರವಾದ ಹಾಗೂ ಕಾಲದ ಪರೀಕ್ಷೆಯನ್ನು ಗೆದ್ದಿರುವ' ಪಾಲುದಾರಿಕೆಯನ್ನು ಹೊಂದಿದೆ. ಭಾರತವು ಬೇರೆ ದೇಶಗಳ ಜೊತೆ ಹೊಂದಿರುವ ಸಂಬಂಧವನ್ನು ಮೂರನೆಯ ದೇಶದ ಕನ್ನಡಕದ ಮೂಲಕ ಗ್ರಹಿಸಬಾರದು ಎಂದು ಕೂಡ ಜೈಸ್ವಾಲ್ ಅವರು ಹೇಳಿದ್ದರು.

ಅಮೆರಿಕದ ಶ್ವೇತಭವನದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಆದರೆ, ರಷ್ಯಾದಿಂದ ಖರೀದಿಸುವ ಕಚ್ಚಾ ತೈಲಕ್ಕೆ ರಿಯಾಯಿತಿ ಕಡಿಮೆ ಆಗುತ್ತಿರುವ ಕಾರಣಕ್ಕೆ ಭಾರತದ ತೈಲ ಸಂಸ್ಕರಣಾ ಕಂಪನಿಗಳು ಅಲ್ಲಿಂದ ಕಚ್ಚಾ ತೈಲ ಖರೀದಿಸುವುದು ಕಡಿಮೆ ಆಗುತ್ತಿದೆ ಎಂದು ಮೂಲವೊಂದು ಈ ಈಚೆಗೆ ತಿಳಿಸಿದೆ.

ಕೇಂದ್ರ ಸರ್ಕಾರದ ಮಾಲೀಕತ್ವದ ತೈಲ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್, ಹಿಂದುಸ್ತಾನ್ ಪೆಟ್ರೋಲಿಯಂ, ಭಾರತ್ ಪೆಟ್ರೋಲಿಯಂ, ಎಂಆರ್‌ಪಿಎಲ್ ಕಳೆದ ಒಂದು ವಾರದಿಂದ ರಷ್ಯಾದ ಕಚ್ಚಾ ತೈಲಕ್ಕೆ ಬೇಡಿಕೆ ಇರಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಈ ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ಭಾರತವು ಆಮದು ಮಾಡಿಕೊಂಡಿರುವ ಕಚ್ಚಾ ತೈಲದಲ್ಲಿ ರಷ್ಯಾದ ಪಾಲು ಶೇ 35ರಷ್ಟಿದೆ. ಜನವರಿಯಿಂದ ಜೂನ್‌ವರೆಗಿನ ಅವಧಿಯಲ್ಲಿ ಭಾರತವು ರಷ್ಯಾದಿಂದ ಪ್ರತಿದಿನ 17.5 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ಖರೀದಿಸಿದೆ.

ಮುಖ್ಯಾಂಶಗಳು
- 'ರಷ್ಯಾದಿಂದ ಆಮದು: ನೀತಿ ಬದಲಾವಣೆ ಇಲ್ಲ'
- ಕಚ್ಚಾ ತೈಲ ಪೂರೈಕೆಯಲ್ಲಿ ರಷ್ಯಾ ಮೊದಲ ಸ್ಥಾನದಲ್ಲಿ

ರಷ್ಯಾದಿಂದ ಭಾರತ ತೈಲ ಖರೀದಿ ಮಾಡದೆಂದು ಕೇಳಿರುವೆ: ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): 'ಇನ್ನು ಮುಂದೆ ರಷ್ಯಾದಿಂದ ಭಾರತ ತೈಲ ಖರೀದಿಸುವುದಿಲ್ಲ ಎಂದು ಕೇಳಿದ್ದೇನೆ. ಈ ಮಾಹಿತಿ ಸರಿಯೋ ಅಥವಾ ತಪ್ಪೋ ಗೊತ್ತಿಲ್ಲ. ಆದರೆ ನಿಜವಾಗಿದ್ದರೆ ಇದೊಂದು ಉತ್ತಮ ನಡೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ಹೇಳಿದ್ದಾರೆ.

ಭಾರತದಿಂದ ಅಮೆರಿಕ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 25ರಷ್ಟು ಸುಂಕ ಹೇರುವ ಕುರಿತ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ ಮಾರನೆ ದಿನವೇ ಟ್ರಂಪ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

'ರಷ್ಯಾದಿಂದ ತೈಲವನ್ನು ಖರೀದಿಸದಿರುವ ನಿರ್ಧಾರವನ್ನು ಭಾರತ ಕೈಗೊಂಡಿದೆ ಎಂದು ಕೇಳಿರುವೆ. ಈ ಬೆಳವಣಿಗೆ ಕುರಿತು ನನಗೆ ನಿಖರ ಮಾಹಿತಿ ಇಲ್ಲ. ಮುಂದೆ ಏನಾಗುತ್ತದೆಯೋ ಕಾದು ನೋಡಬೇಕು' ಎಂದಿದ್ದಾರೆ.

ಚುಟುಕು ಸುದ್ದಿ

ಉಕ್ರೇನ್ ಡ್ರೋನ್ ದಾಳಿಗೆ ಮೂವರ ಸಾವು: ರಷ್ಯಾ

ಕೀವ್ (ಎಪಿ): ಉಕ್ರೇನ್ ಅಹೋರಾತ್ರಿ ನಡೆಸಿದ ಡ್ರೋನ್ ದಾಳಿಯಲ್ಲಿ ಮೂವರು ನಾಗರಿಕರು ಸಾವಿಗೀಡಾಗಿದ್ದಾರೆ. ರಷ್ಯಾದ ಎಂಟು ಪ್ರದೇಶ ಮತ್ತು ರಷ್ಯಾ ಆಕ್ರಮಿತ ಕ್ರಿಮಿಯಾ ದ್ವೀಪದ ಮೇಲೆ ದಾಳಿ ನಡೆಸಿದ್ದ 112 ಡ್ರೋನ್‌ಗಳನ್ನು ನಾಶಗೊಳಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಉಕ್ರೇನ್ ಗಡಿ ಸಮೀಪದ ರೋಸ್ತೋವ್, ಪೆನ್‌ಝಾ, ಸಮಾರಾ ಪ್ರದೇಶಗಳಲ್ಲಿ ಡ್ರೋನ್ ದಾಳಿಗೆ ತಲಾ ಒಬ್ಬರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮಧ್ಯೆ ರಷ್ಯಾ ದಾಳಿಗೆ ಬಳಸಿದ್ದ 53 ಡ್ರೋನ್‌ಗಳ ಪೈಕಿ 45 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ವಾಯು ಸೇನೆ ತಿಳಿಸಿದೆ.

ಶುಕ್ರವಾರ ಉಕ್ರೇನ್ ರಾಜಧಾನಿ ಕೀವ್ ಮೇಲೆ ರಷ್ಯಾ ನಡೆಸಿದ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳಲ್ಲಿ 31 ಜನರು ಮೃತಪಟ್ಟು, 150ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

ಮಾರ್ಟರ್ ಸ್ಫೋಟ: ಐವರು ಮಕ್ಕಳ ಸಾವು

ಪೆಶಾವರ್ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಗ್ರಾಮವೊಂದರಲ್ಲಿ ಹಳೆಯ ಮಾರ್ಟರ್‌ನೊಂದಿಗೆ ಮಕ್ಕಳು ಶನಿವಾರ ಆಟವಾಡುತ್ತಿದ್ದ ವೇಳೆ, ಅದು ಸ್ಫೋಟಗೊಂಡ ಪರಿಣಾಮ ಐವರು ಮಕ್ಕಳು ಮೃತಪಟ್ಟು, ಇತರ 12 ಮಂದಿ ಗಾಯಗೊಂಡಿದ್ದಾರೆ.

ಲಕ್ಕಿ ಮರ್ವಾತ್ ಜಿಲ್ಲೆಯ ಬೆಟ್ಟ ಪ್ರದೇಶದಲ್ಲಿ ಮಕ್ಕಳ ಗುಂಪಿಗೆ ಸ್ಫೋಟಗೊಂಡಿರದ ಮಾರ್ಟರ್ ಸಿಕ್ಕಿತ್ತು. ಅದನ್ನು ಅವರು ಗ್ರಾಮಕ್ಕೆ ತಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1370	(1375)
ಸೋಯಾ (ರಿಫೈನ್ಡ್)	₹1230	(1235)
ಸೂರ್ಯಕಾಂತಿ (ರಿಫೈನ್ಡ್)	₹1375	(1380)
ಪಾಮೋಲಿನ್	₹1205	(1210)



ಅಮೆರಿಕದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ 'ಫಾಲ್ಕನ್– 9' ರಾಕೆಟ್ ನಾಲ್ವರು ಗಗನಯಾನಿಗಳಿದ್ದ ಬಾಹ್ಯಾಕಾಶ ಕೋಶ ಹೊತ್ತು ನಭಕ್ಕೆ ಚಿಮ್ಮಿತು ಎಪಿ/ಪಿಟಿಐ ಚಿತ್ರ

15 ಗಂಟೆಯಲ್ಲಿ ನಾಲ್ವರು ಗಗನಯಾನಿಗಳು ಐಎಸ್‌ಎಸ್‌ಗೆ: ಸ್ಪೇಸ್‌ಎಕ್ಸ್ ಸಾಧನೆ

ಕೇಪ್ ಕೆನವೆರಲ್ (ಎಪಿ): ಅಮೆರಿಕದ ಸ್ಪೇಸ್‌ಎಕ್ಸ್ ನಾಲ್ವರು ಗಗನಯಾನಿಗಳನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್) ಶನಿವಾರ ತಲುಪಿಸಿದೆ.

ಕೇವಲ 15 ಗಂಟೆಗಳಲ್ಲಿ ಈ ಬಾಹ್ಯಾಕಾಶಯಾನವನ್ನು ಪೂರ್ಣಗೊಳಿಸಿರುವುದು ಗಮನಾರ್ಹ.

ನಾಸಾದ ಜೆನಾ ಕಾರ್ಡ್‌ಮ್ಯಾನ್, ಮೈಕ್ ಫಿನ್ಕೆ, ಜಪಾನ್‌ನ ಕಿಮಿಯಾ ಯುಯಿ ಹಾಗೂ ರಷ್ಯಾದ ಒಲೆಗ್ ಪ್ಲಾಟೊನೋವ್ ಅವರು ಇದ್ದ ಬಾಹ್ಯಾಕಾಶ ಕೋಶ ಹೊತ್ತ ರಾಕೆಟ್ 'ಫಾಲ್ಕನ್–9' ಅನ್ನು, ಇಲ್ಲಿನ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಉಡ್ಡಯನ ಮಾಡಲಾಯಿತು.

ಈ ನಾಲ್ವರು ಗಗನಯಾನಿಗಳು ಐಎಸ್‌ಎಸ್‌ನಲ್ಲಿ ಆರು ತಿಂಗಳು ಇರುವರು. ಕಳೆದ ಮಾರ್ಚ್‌ನಿಂದ ಐಎಸ್‌ಎಸ್‌ನಲ್ಲಿ ಇರುವ ನಾಲ್ವರು ಗಗನಯಾನಿಗಳನ್ನು ಸ್ಪೇಸ್‌ಎಕ್ಸ್‌ನ ಬಾಹ್ಯಾಕಾಶ ಕೋಶ ಬುಧವಾರದ ವೇಳೆ ಭೂಮಿಗೆ ಮರಳಿ ಕರೆದುಕೊಂಡು ಬರಲಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)			ರಾಮನಗರ ರೇಷ್ಮೆಗೂಡು		ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)		ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಬೆಂಗಳೂರು	100 ಕ್ಕೆ	₹485	ಮಿಶ್ರತಳಿ(ಸಿ.ಬಿ)	₹386-625	ಆರ್‌ಎಸ್‌ಎಸ್-4	₹200	ಅರಸೀಕೆರೆ	₹27000-30000
	12 ಕ್ಕೆ	₹66	ದ್ವಿತಳಿ (ಬಿ.ವಿ)	₹472-733	ಆರ್‌ಎಸ್‌ಎಸ್-5	₹194	ಬೆಂಗಳೂರು	₹20000-25000
ಮೈಸೂರು:	100 ಕ್ಕೆ	₹495			ಗುಡ್ ಲಾಟ್	₹178		

ಶ್ರಾವಣ ಮಾಸದ ಪರಿಣಾಮ ಬೆಲೆ ಇಳಿಕೆ

ಮೊಟ್ಟೆ ದರ ₹135 ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರಾವಣ ಮಾಸದಲ್ಲಿ ಧಾರ್ಮಿಕ ಆಚರಣೆಗಳು ಹೆಚ್ಚಿರುವ ಪರಿಣಾಮವಾಗಿ ಸಗಟು ಮೊಟ್ಟೆ ದರವು ಇಳಿಕೆ ಆಗಿದೆ. ಈ ಮಾಸದಲ್ಲಿ ಕೆಲವರು ಮೊಟ್ಟೆ, ಮಾಂಸ ಸೇವಿಸುವುದಿಲ್ಲ.

ಜುಲೈ 2ರಂದು ಸಗಟು ದರ ₹620 (100 ಮೊಟ್ಟೆಗೆ) ಇತ್ತು. ಇದು ಆಗಸ್ಟ್ 2ಕ್ಕೆ ₹485ಕ್ಕೆ ಇಳಿದಿದೆ. ಒಟ್ಟು ₹135ರಷ್ಟು ಇಳಿಕೆ ಆಗಿದೆ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ದರ ಇಳಿಕೆ ಸಹಜ. ಅಲ್ಲದೆ, ಮಹಾರಾಷ್ಟ್ರಕ್ಕೆ ರಾಜ್ಯದಿಂದ ಪೂರೈಕೆಯಾಗುತ್ತಿದ್ದ ಮೊಟ್ಟೆ ಪ್ರಮಾಣ ಇಳಿಕೆ ಆಗಿದೆ. ಇವೆಲ್ಲ ದರ ಇಳಿಕೆಗೆ ಕಾರಣ ಎಂದು ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿಯ (ಎನ್‌ಇಸಿಸಿ) ಮೈಸೂರು ವಿಭಾಗದ ಮಾರುಕಟ್ಟೆ ಅಭಿವೃದ್ಧಿ ಅಧಿಕಾರಿ ವಿ. ಶೇಷನಾರಾಯಣ 'ಪ್ರಜಾವಾಣಿ'ಗೆ ತಿಳಿಸಿದರು.

ಕೋಳಿಗಳಿಗೆ ಆಹಾರವಾಗಿ ನೀಡುವ ಮೆಕ್ಕೆಜೋಳದ ಬೆಲೆಯು ಕಳೆದ ಬಾರಿ ಮಳೆಯ ಕಾರಣಕ್ಕೆ ಏರಿಕೆಯಾಗಿತ್ತು. ಈ ಬಾರಿ ದರ ಕಡಿಮೆ ಇದೆ. ಇದು ಕೂಡ ಮೊಟ್ಟೆ ಬೆಲೆ ಇಳಿಕೆಗೆ ಕಾರಣವಾಗಿದೆ ಎಂದು ತಿಳಿಸಿದರು.

ಆದರೆ, ಚಿಲ್ಲರೆ ಅಂಗಡಿ ವ್ಯಾಪಾರಿಗಳು ಬೆಲೆ ಇಳಿಕೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಿಲ್ಲ. ಒಂದು ಮೊಟ್ಟೆಯು ₹6ರಿಂದ ₹6.5 ದರಕ್ಕೆ ಮಾರಾಟ ಆಗುತ್ತಿದೆ, ವರ್ತಕರಿಗೆ ಲಾಭ ಸಿಗುತ್ತಿದೆ ಎಂದು ಹೇಳಿದರು.

100 ಮೊಟ್ಟೆ ದರ

	ಬೆಂಗಳೂರು ವಲಯ	ಮೈಸೂರು ವಲಯ
ಜುಲೈ 2	₹620	₹625
ಆಗಸ್ಟ್ 2	₹485	₹495

ಸೌದಿಗೆ ಮೈಸೂರಿನಿಂದ 4 ಲಕ್ಷ ಮೊಟ್ಟೆ

ಇದೇ ಮೊದಲ ಬಾರಿಗೆ ಮೈಸೂರಿನಿಂದ ಸೌದಿ ಅರೇಬಿಯಾಕ್ಕೆ ಒಂದು ಕಂಟೇನರ್ ಮೊಟ್ಟೆ ರಫ್ತು ಮಾಡಲಾಗಿದೆ. ಈ ಕಂಟೇನರ್‌ನಲ್ಲಿ 4.22 ಲಕ್ಷ ಮೊಟ್ಟೆಗಳಿರುತ್ತವೆ ಎಂದು ಶೇಷನಾರಾಯಣ ಹೇಳಿದರು.

'ಮತ್ತೆ ಬೇಡಿಕೆ ಬಂದರೆ ಮೊಟ್ಟೆ ಪೂರೈಸಲು ಸಿದ್ಧವಾಗಿದ್ದೇವೆ. ಆದರೆ, ರಫ್ತು ಮಾಡಲು ಇರುವ ನಿಯಮಗಳು ತೊಂದರೆ ಉಂಟು ಮಾಡುತ್ತಿವೆ. ಸರ್ಕಾರ ನಿಯಮಗಳನ್ನು ಸಡಿಲಿಸಿದರೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಆ. 7ರಿಂದ ಜೆಎಸ್‌ಡಬ್ಲ್ಯು ಸಿಮೆಂಟ್ ಐಪಿಒ

ನವದೆಹಲಿ (ಪಿಟಿಐ): ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ಜೆಎಸ್‌ಡಬ್ಲ್ಯು ಸಿಮೆಂಟ್ ₹3,600 ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ.

ಷೇರುಗಳಿಗೆ ಬಿಡ್ ಸಲ್ಲಿಸಲು ಆಗಸ್ಟ್ 7ರಿಂದ 11ರವರೆಗೆ ಅವಕಾಶ ಇರಲಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್ಸ್) ಆಗಸ್ಟ್ 6ರಂದು ಐಪಿಒಗೆ ಅರ್ಜಿ ಸಲ್ಲಿಸಬಹುದಾಗಿದೆ.

ಈಕ್ವಿಟಿ ಷೇರುಗಳ ಹಂಚಿಕೆ ಮೂಲಕ ₹1,600 ಕೋಟಿ ಮತ್ತು ಆಫರ್ ಫಾರ್ ಸೇಲ್‌ನಿಂದ (ಒಎಫ್‌ಎಸ್) ₹2 ಸಾವಿರ ಕೋಟಿ ಸಂಗ್ರಹಿಸಲಿದೆ. ಸಂಗ್ರಹಿಸಿದ ಬಂಡವಾಳವನ್ನು ರಾಜಸ್ಥಾನದ ನಾಗೌರ್‌ನಲ್ಲಿನ ಹೊಸ ಸಿಮೆಂಟ್ ಘಟಕಕ್ಕೆ ಬಳಸಲಾಗುವುದು. ಅಲ್ಲದೆ, ಸಾಲ ಮರುಪಾವತಿಸಲು ಮತ್ತು ಕಂಪನಿಯ ವ್ಯವಹಾರ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತದೆ.

ಐಪಿಒ ಮೂಲಕ ₹4 ಸಾವಿರ ಕೋಟಿ ಸಂಗ್ರಹಿಸುವುದಾಗಿ ಕಂಪನಿ ಈ ಮೊದಲು ತಿಳಿಸಿತ್ತು.

ಟಾಟಾ ಪವರ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಪವರ್ ಕಂಪನಿಯು ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹1,262 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹1,189 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 6ರಷ್ಟು ಹೆಚ್ಚಳವಾಗಿದೆ. ಹೆಚ್ಚಿದ ವರಮಾನದಿಂದ ಲಾಭದ ಪ್ರಮಾಣ ಏರಿಕೆಯಾಗಿದೆ ಎಂದು ಕಂಪನಿ ತಿಳಿಸಿದೆ.

ಕಳೆದ ಜೂನ್ ತ್ರೈಮಾಸಿಕದಲ್ಲಿ ವರಮಾನವು ₹16,810 ಕೋಟಿಯಷ್ಟಿತ್ತು. ಈ ಬಾರಿ ₹17,464 ಕೋಟಿಗೆ ಹೆಚ್ಚಳವಾಗಿದೆ. ಜೂನ್ ತ್ರೈಮಾಸಿಕದಲ್ಲಿ 30 ಲಕ್ಷ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಕೆ ಮಾಡಲಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರಸ್ತುತ ಕಂಪನಿಯು 1.3 ಕೋಟಿ ಬಳಕೆದಾರರನ್ನು ಹೊಂದಿದ್ದು, 2030ರ ವೇಳೆಗೆ 4 ಕೋಟಿ ಗ್ರಾಹಕರನ್ನು ಹೊಂದುವ ಗುರಿ ಹಾಕಿಕೊಂಡಿದೆ.

ಅಮೆರಿಕ: ಭಾರತದ ಹೊಸ ಎಂಟು ಕಾನ್ಸುಲರ್ ಕಚೇರಿಗಳ ಉದ್ಘಾಟನೆ

ನ್ಯೂಯಾರ್ಕ್/ಎಡಿಶನ್ (ಪಿಟಿಐ): ಅಮೆರಿಕದ ಎಂಟು ನಗರಗಳಲ್ಲಿ ಭಾರತವು ಹೊಸದಾಗಿ ಕಾನ್ಸುಲರ್ ಕಚೇರಿಗಳನ್ನು ಆರಂಭಿಸಿದೆ. ಇದರಿಂದ, ಇಲ್ಲಿರುವ ಭಾರತೀಯರಿಗೆ ವೀಸಾ, ಪಾಸ್‌ಪೋರ್ಟ್ ಸೇರಿದಂತೆ ವಿವಿಧ ಸೇವೆಗಳನ್ನು ಸುಲಭವಾಗಿ ಪಡೆಯಲು ಸಹಾಯವಾಗಲಿದೆ.

ಬಾಸ್ಟನ್, ಕೊಲಂಬಸ್, ಡಲ್ಲಾಸ್, ಡೆಟ್ರಾಯ್ಟ್, ಎಡಿಸನ್, ಒರ್ಲಾಂಡೊ, ರಾಲಿ ಹಾಗೂ ಸ್ಯಾನ್ ಜೋಸ್ ನಗರದಲ್ಲಿ ಆರಂಭಗೊಂಡಿರುವ ಹೊಸ ಕಾನ್ಸುಲರ್ ಕಚೇರಿಗಳನ್ನು (ಐಸಿಎಸಿ) ಅಮೆರಿಕದ ಭಾರತೀಯ ರಾಯಭಾರಿ ವಿನಯ್ ಕ್ವಾತ್ರಾ ಅವರು ಶನಿವಾರ ವರ್ಚುವಲ್ ಆಗಿ ಉದ್ಘಾಟಿಸಿದರು. ಲಾಸ್ ಏಂಜಲೀಸ್‌ನಲ್ಲಿ ಸದ್ಯದಲ್ಲಿಯೇ ಮತ್ತೊಂದು ಕಚೇರಿ ಆರಂಭವಾಗಲಿದೆ.

ಆಗಸ್ಟ್ 1ರಿಂದಲೇ ಕಾನ್ಸುಲರ್‌ನಲ್ಲಿ ಪಾಸ್‌ಪೋರ್ಟ್, ವೀಸಾ, ಒಸಿಐ, ಶರಣಾಗತಿ ಪ್ರಮಾಣಪತ್ರ, ಜೀವಿತಾವಧಿ ಪ್ರಮಾಣಪತ್ರ, ಜನನ ಹಾಗೂ ವಿವಾಹ ಪ್ರಮಾಣಪತ್ರ, ಪೊಲೀಸ್ ಕ್ಲಿಯರೆನ್ಸ್ ಸೇರಿದಂತೆ ಇನ್ನಿತರ ಸೇವೆಗಳು ಆರಂಭಗೊಂಡಿವೆ.

ಐಸಿಎಸಿ ಕೇಂದ್ರಗಳ ವಿಸ್ತರಣೆಯಿಂದ ಅಮೆರಿಕದಲ್ಲಿ ಭಾರತವು 17 ಕಾನ್ಸುಲರ್ ಕೇಂದ್ರಗಳನ್ನು ಹೊಂದಿದಂತಾಗಿದೆ. ಇದರಿಂದ, ಭಾರತ ಹಾಗೂ ಅಮೆರಿಕದ ನಿವಾಸಿಗಳಿಗೆ ಕಾನ್ಸುಲರ್ ಸೇವೆಗಳು ಮತ್ತಷ್ಟು ಹತ್ತಿರವಾಗಿವೆ.

ಕಾನ್ಸುಲರ್ ಸೇವೆಗಳ ಮಹತ್ತರ ವಿಸ್ತರಣೆ ಎಂದು ಬಣ್ಣಿಸಿರುವ ಕ್ವಾತ್ರಾ, ಇಡೀ ಅಮೆರಿಕದಾದ್ಯಂತ ಭಾರತೀಯ ರಾಯಭಾರ ಕಚೇರಿಯು ತನ್ನ ಹೆಜ್ಜೆಗುರುತು ಮೂಡಿಸಿದೆ. ಇದರಿಂದ ಇಲ್ಲಿ ನೆಲಸಿರುವ ಸುಮಾರು 50 ಲಕ್ಷ ಭಾರತೀಯರಿಗೆ ಇನ್ನಷ್ಟು ನೆರವಾಗಲಿದೆ ಎಂದು ತಿಳಿಸಿದ್ದಾರೆ.

ಎಲ್ಲ ಐಸಿಎಸಿ ಕೇಂದ್ರಗಳು ಶನಿವಾರ ಸೇರಿದಂತೆ ವಾರಕ್ಕೆ ಆರು ದಿನ ಕೆಲಸ ಮಾಡಲಿವೆ. ಇದರಿಂದ, ವಾರದ ದಿನಗಳಲ್ಲಿ ಕೆಲಸ ಅವಧಿಯ ಹೊರತಾಗಿಯೂ ಜನರು ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

ಫೆಡರಲ್ ಬ್ಯಾಂಕ್ ಲಾಭ ಇಳಿಕೆ

ಮುಂಬೈ (ಪಿಟಿಐ): ಫೆಡರಲ್ ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇ 15ರಷ್ಟು ಕಡಿಮೆ ಆಗಿದ್ದು, ₹862 ಕೋಟಿಗೆ ತಲುಪಿದೆ. ವಸೂಲಾಗದ ಸಾಲದ ಪ್ರಮಾಣದಲ್ಲಿನ ಏರಿಕೆಯಿಂದಾಗಿ, ಸಂಭಾವ್ಯ ನಷ್ಟವನ್ನು ನಿಭಾಯಿಸಲು ತೆಗೆದಿರಿಸಬೇಕಾದ ಮೊತ್ತ ಹೆಚ್ಚಾಗಿದೆ. ಇದು ಲಾಭದ ಪ್ರಮಾಣ ತಗ್ಗಲು ಒಂದು ಕಾರಣವಾಗಿದೆ.

ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಸಾಲ ನೀಡಿಕೆಯು ಹೆಚ್ಚಲಿದೆ ಎಂದು ಬ್ಯಾಂಕ್ ಅಂದಾಜು ಮಾಡಿದೆ. ಅಲ್ಲದೆ, ನಿವ್ವಳ ಬಡ್ಡಿ ವರಮಾನದ ಪ್ರಮಾಣ ಹೆಚ್ಚಬಹುದು ಎಂಬ ನಿರೀಕ್ಷೆಯೂ ಅದಕ್ಕೆ ಇದೆ. ಕಿರುಸಾಲ ವಲಯದಲ್ಲಿನ ಸಮಸ್ಯೆಯು ಎಲ್ಲೆಡೆ ಕಂಡುಬರುತ್ತಿದ್ದು, ಇದು ಕೂಡ ಎನ್‌ಪಿಎ ಪ್ರಮಾಣ ಹೆಚ್ಚಾಗಲು ಕಾರಣ ಎಂದು ಹೇಳಿದೆ.

ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಸಾಲ ನೀಡಿಕೆ ಪ್ರಮಾಣವು ಶೇ 12–13ರ ಮಟ್ಟವನ್ನು ತಲುಪಲಿದೆ ಎಂದು ಬ್ಯಾಂಕ್‌ನ ಸಿಇಒ ಕೆ.ವಿ.ಎಸ್. ಮಣಿಯನ್ ಹೇಳಿದ್ದಾರೆ. ಸಂಭಾವ್ಯ ನಷ್ಟವನ್ನು ನಿರ್ವಹಿಸಲು ಬ್ಯಾಂಕ್ ತೆಗೆದಿರಿಸುವ ಮೊತ್ತವು ಈ ಬಾರಿಯ ಜೂನ್ ತ್ರೈಮಾಸಿಕದಲ್ಲಿ ₹437 ಕೋಟಿಗೆ ಹೆಚ್ಚಳ ಕಂಡಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹173 ಕೋಟಿ ಆಗಿತ್ತು.

ದಕ್ಷಿಣ ಭಾರತದ ರಾಜ್ಯಗಳಿಗೆ ಕೇಂದ್ರ ಕೈಗಾರಿಕಾ ಸಚಿವಾಲಯದ ಸಲಹೆ

'ಕೇಂದ್ರದ ಕೈಗಾರಿಕಾ ವಸಾಹತು ಮಾದರಿ ಅನುಸರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರವು ರೂಪಿಸಿರುವ ಕೈಗಾರಿಕಾ ವಸಾಹತುಗಳ ಮಾದರಿಯನ್ನು ದಕ್ಷಿಣ ಭಾರತದ ರಾಜ್ಯಗಳು ಅಳವಡಿಸಿಕೊಳ್ಳಬೇಕು' ಎಂದು ಕೇಂದ್ರ ಕೈಗಾರಿಕಾ ಸಚಿವಾಲಯದ ಕಾರ್ಯದರ್ಶಿ ಅಮರದೀಪ್ ಸಿಂಗ್ ಭಾಟಿಯಾ ಸಲಹೆ ನೀಡಿದರು.

'ವಿಕಸಿತ ಭಾರತ@2047' ಉಪಕ್ರಮದ ಭಾಗವಾಗಿ ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ, ದಕ್ಷಿಣ ಭಾರತದ ಕೈಗಾರಿಕಾ ಇಲಾಖೆ ಮತ್ತು ಉದ್ಯಮ ಪ್ರತಿನಿಧಿಗಳ ದುಂಡುಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

'ಕೈಗಾರಿಕೆಗಳ ಸರಾಗ ಕಾರ್ಯನಿರ್ವಹಣೆಗೆ ಅನುಕೂಲವಾಗುವಂತಹ 'ಕೈಗಾರಿಕಾ ವಸಾಹತು' ಮಾದರಿಯನ್ನು ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮದ ಅಡಿ ಅಭಿವೃದ್ಧಿಪಡಿಸಲಾಗಿದೆ. ದೇಶದಾದ್ಯಂತ ಇಂತಹ 20 ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅವು ವಿಶಾಲವಾದ ರಸ್ತೆ, ನೆಲದಡಿಯ ವಿದ್ಯುತ್ ಜಾಲ, ಒಳಚರಂಡಿ, ಘನತ್ಯಾಜ್ಯ ಸಂಸ್ಕರಣಾ ಘಟಕ, ಕೊಳಚೆ ನೀರು ಸಂಸ್ಕರಣಾ ಘಟಕ, ಸೌರವಿದ್ಯುತ್ ಘಟಕಗಳನ್ನು ಹೊಂದಿರಲಿವೆ' ಎಂದರು.

ದುಂಡುಮೇಜಿನ ಸಭೆಯಲ್ಲಿ ಅಮರ್ ದೀಪ್ ಸಿಂಗ್ ಭಾಟಿಯಾ ಮಾತನಾಡಿದರು. ಎನ್.ಸೆಲ್ವಕುಮಾರ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

'ಈ ಕೈಗಾರಿಕಾ ವಸಾಹತುಗಳ ಮಾದರಿಯನ್ನು ಆಯಾ ಕೈಗಾರಿಕಾ ವಲಯದ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಬಹುದಾಗಿದೆ. ಜವಳಿ ಕ್ಷೇತ್ರಕ್ಕೆ ಅಗತ್ಯವಿರುವಂತೆ ಕೆಲ ಸವಲತ್ತುಗಳನ್ನು ಸೇರಿಸಿಕೊಳ್ಳಬಹುದಾಗಿದೆ ಮತ್ತು ಅಗತ್ಯವಿಲ್ಲದ ಸವಲತ್ತುಗಳನ್ನು ಕೈಬಿಡಬಹುದಾಗಿದೆ. ಅದೇ ರೀತಿ ಸ್ಮಾರ್ಟ್‌ಫೋನ್ ಪಾರ್ಕ್, ಏರೋಸ್ಪೇಸ್ ಪಾರ್ಕ್, ಆಟೋ ಪಾರ್ಕ್‌ಗಳಿಗೆ ಹೊಂದಿಕೆಯಾಗುವ ರೀತಿಯಲ್ಲಿ ಮಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ' ಎಂದರು.

ರಾಜ್ಯದ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್.ಸೆಲ್ವಕುಮಾರ್, 'ಕೈಗಾರಿಕಾ ವಸಾಹತು ಅಥವಾ ಟೌನ್‌ಶಿಪ್‌ಗಳಲ್ಲಿ ಸಂಗ್ರಹವಾಗುವ ತೆರಿಗೆ ಹಣವು, ಅಲ್ಲಿಗೇ ಬಳಕೆಯಾಗುವುದಿಲ್ಲ. ಈ ಸಮಸ್ಯೆಯನ್ನು ತಪ್ಪಿಸುವ ಸಲುವಾಗಿ ಹೊಸ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ' ಎಂದರು.

'ವಿಶೇಷ ಹೂಡಿಕೆ ಪ್ರದೇಶಗಳಲ್ಲಿ (ಎಸ್‌ಐಆರ್) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯೇ ತೆರಿಗೆ ಸಂಗ್ರಹಿಸಲಿದೆ. ಅದರಲ್ಲಿ ಶೇ 30ರಷ್ಟನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಿ, ಶೇ 70ರಷ್ಟು ಮೊತ್ತವನ್ನು ಈ 'ಎಸ್‌ಐಆರ್'ಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿಪಡಿಸಲು ಬಳಸಿಕೊಳ್ಳಲಿದೆ' ಎಂದರು.

ಸಿಐಐ, ಅಸೋಚಾಂ, ಫಿಕ್ಕಿ, ಕಾಸಿಯಾ, ಪೀಣ್ಯ–ದಾಬಸ್‌ಪೇಟೆ, ವೈಟ್‌ಫೀಲ್ಡ್, ಹಾರೋಹಳ್ಳಿ, ವಸಂತನರಸಾಪುರ ಕೈಗಾರಿಕಾ ಸಂಘಗಳ ಪ್ರತಿನಿಧಿಗಳು ದುಂಡುಮೇಜಿನ ಸಭೆಯಲ್ಲಿ ಭಾಗಿಯಾಗಿದ್ದರು.

Together We Can
ಕೆನರಾ ಬ್ಯಾಂಕ್
Canara Bank
A Government of India Undertaking

ಜೀನ್ಸ್ ಪಾರ್ಕ್ ಸಭೆ: ಸೌಲಭ್ಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಬಳ್ಳಾರಿ ಹೊರವಲಯದ ಸಂಜೀವರಾಯನ ಕೋಟೆಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ 154 ಎಕರೆಯ ಜೀನ್ಸ್ ಪಾರ್ಕ್‌ಗೆ ಸಂಬಂಧಿಸಿದಂತೆ ಅಧಿಕಾರಿಗಳ ಮತ್ತು ಹೂಡಿಕೆದಾರರ ಸಭೆ ಶನಿವಾರ ನಡೆಯಿತು.

'ಸದ್ಯ ಜೀನ್ಸ್ ವಾಷಿಂಗ್ ಘಟಕಗಳು ಇರುವ ನಗರದ ಮುಂಡ್ರಿಗಿ ಕೈಗಾರಿಕಾ ಪ್ರದೇಶದಲ್ಲೇ ಸಮಸ್ಯೆಗಳಿವೆ. ಇನ್ನು ನಗರದಿಂದ ಹತ್ತಾರು ಕಿ.ಮೀ ದೂರದಲ್ಲಿರುವ ಸಂಜೀವರಾಯನ ಕೋಟೆಯಲ್ಲಿ ಏನು ವ್ಯವಸ್ಥೆ ಕಲ್ಪಿಸುತ್ತೀರಿ' ಎಂದು ಜೀನ್ಸ್ ವಾಷಿಂಗ್ ಘಟಕಗಳ ಸಂಘದ ಮುಖಂಡ ಸಿರಿವೇಲು ಇಬ್ರಾಹಿಂ ಪ್ರಶ್ನಿಸಿದರು.

'ಮುಂಡ್ರಿಗಿ ಕೈಗಾರಿಕಾ ಪ್ರದೇಶದ ನಿವೇಶನಗಳನ್ನು 10 ವರ್ಷಗಳ ಲೀಸ್ ಕಮ್ ಸೇಲ್ ಆಧಾರದಲ್ಲಿ ವಿತರಿಸಲಾಗಿದೆ. ಈಗ ನೋಂದಣಿಗೆ ಪ್ರಯತ್ನಿಸಿದರೆ, ಲಕ್ಷಾಂತರ ರೂಪಾಯಿ ಲಂಚ ಕೇಳಲಾಗುತ್ತಿದೆ. ಇದೇ ಸಮಸ್ಯೆ ಸಂಜೀವರಾಯನಕೋಟೆಯಲ್ಲಿ ಪುನರಾವರ್ತನೆಯಾದರೆ ಯಾರು ಹೊಣೆ' ಎಂದು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್, 'ಸಂಜೀವರಾಯನ ಕೋಟೆಯಲ್ಲಿ ಅಭಿವೃದ್ಧಿಪಡಿಸುತ್ತಿರುವ ಜೀನ್ಸ್ ಪಾರ್ಕ್ ಅತ್ಯಂತ ವ್ಯವಸ್ಥಿತ, ಸುಸಜ್ಜಿತ ಕೈಗಾರಿಕಾ ಪ್ರದೇಶ ಆಗಿರಲಿದೆ. ಮುಂಡ್ರಿಗಿ ಕೈಗಾರಿಕಾ ಪ್ರದೇಶದ ಸಮಸ್ಯೆಗಳೇ ಬೇರೆ ಇವೆ. ಇಲ್ಲಿ ಜೀನ್ಸ್ ಪಾರ್ಕ್ ಸ್ಥಾಪನೆಯಾದರೆ, ಒಂದು ಲಕ್ಷ ಜನಕ್ಕೆ ಪ್ರತ್ಯಕ್ಷ, ಪರೋಕ್ಷವಾಗಿ ಉದ್ಯೋಗ ಸಿಗಲಿದೆ' ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಮೊಹಮದ್ ಝುಬೇರ, ಜವಳಿ ಇಲಾಖೆ ಉಪ ನಿರ್ದೇಶಕರು ಮಂಜುನಾಥ್, ಕೆಐಎಡಿಬಿ ಅಧಿಕಾರಿ ಜನಾರ್ದನ ನಾಯ್ಕ, ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆ ಅಧ್ಯಕ್ಷ ಯಶವಂತರಾಜ್ ನಾಗಿರೆಡ್ಡಿ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸೌಹಾರ್ದ ಕದಡುವ ಚಿತ್ರಕ್ಕೆ ಮನ್ನಣೆ: ಪಿಣರಾಯಿ

'ದಿ ಕೇರಳ ಸ್ಟೋರಿಗೆ ಪ್ರಶಸ್ತಿ: ಸಂಘ ಪರಿವಾರದ ಕಾರ್ಯಸೂಚಿ ಕಾರಣ'

ತಿರುವನಂತಪುರ (ಪಿಟಿಐ): 'ದಿ ಕೇರಳ ಸ್ಟೋರಿ' ಚಲನಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ನೀಡಿರುವುದನ್ನು ಟೀಕಿಸಿರುವ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಇದು ದೇಶದ ಸೌಹಾರ್ದ ಕದಡುವಂತಹ ಸಿನಿಮಾಗೆ ಮನ್ನಣೆ ನೀಡಿದಂತಾಗಿದೆ' ಎಂದಿದ್ದಾರೆ.

'ರಾಷ್ಟ್ರ ಪ್ರಶಸ್ತಿ ಸಮಿತಿಯ ತೀರ್ಪುಗಾರರು ದೇಶದ ಏಕತೆಯನ್ನು ಕದಡುವ ಹೂರಣ ಇರುವ ಇಂತಹ ಸಿನಿಮಾಗೆ ಪ್ರಶಸ್ತಿ ನೀಡುವ ಮೂಲಕ ಕೇರಳದ ಕಮ್ಯುನಿಸಂ ಅನ್ನು ಗುರಿಯಾಗಿಸಿಕೊಂಡ ಧೋರಣೆಯನ್ನು ಸಮರ್ಥಿಸಿದ್ದಾರೆ' ಎಂದು ವಿಜಯನ್ ಅವರು ಶನಿವಾರ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೇರಳ ಸಂಸ್ಕೃತಿ ಸಚಿವ ಸಜಿ ಚೆರಿಯನ್, 'ಇದು ಸಂಘ ಪರಿವಾರದ ರಾಜಕೀಯ ಕಾರ್ಯಸೂಚಿ' ಎಂದು ಆರೋಪಿಸಿದ್ದಾರೆ.

ಈ ಚಿತ್ರವು ವಿಭಜನೆಯನ್ನು ಉತ್ತೇಜಿಸುತ್ತದೆ. ಸಮಾಜದಲ್ಲಿ ದ್ವೇಷವನ್ನು ಹರಡುತ್ತದೆ ಮತ್ತು ಕೇರಳದ ಜನರನ್ನು ಅವಮಾನಿಸುತ್ತದೆ ಎಂದಿದ್ದಾರೆ.

'ನಮ್ಮ ನಟಿ–ನಟರಾದ ಊರ್ವಶಿ ಹಾಗೂ ವಿಜಯರಾಘವನ್ ಅವರು ಪ್ರಶಸ್ತಿ ಸ್ವೀಕರಿಸುವುದು ಹೆಮ್ಮೆಯ ಸಂಗತಿ. ಆದರೆ, ಅವರ ಜೊತೆಯಲ್ಲಿ 'ಕೇರಳ ಸ್ಟೋರಿ' ಚಿತ್ರವನ್ನು ಹೇಗೆ ಗುರುತಿಸುವುದು? ಯಾವ ಆಧಾರದ ಮೇಲೆ ಪ್ರಶಸ್ತಿ ನೀಡುವ ಈ ನಿರ್ಧಾರ ಕೈಗೊಂಡಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

ದೇಶದಲ್ಲಿ ಸಂಘ ಪರಿವಾರದ ರಾಜಕೀಯವು ಭಯ ಹುಟ್ಟಿಸುತ್ತಿದೆ. ದ್ವೇಷವನ್ನು ಹರಡಲು ಆಡಳಿತ ಪಕ್ಷವು ಸಣ್ಣ ಅವಕಾಶವನ್ನೂ ಬಳಸಿಕೊಳ್ಳುತ್ತಿದೆ. ಅದರ ಒಂದು ಭಾಗವೇ ಈ ಪ್ರಶಸ್ತಿ ಎಂದು ಆರೋಪಿಸಿದ್ದಾರೆ.

ತೀರ್ಪುಗಾರರ ನಿರ್ಧಾರವನ್ನು ಕೇರಳ ಹಣಕಾಸು ಸಚಿವ ಕೆ.ಎನ್.ಬಾಲಗೋಪಾಲ್ ಅವರೂ ಟೀಕಿಸಿದ್ದು, 'ದಿ ಕೇರಳ ಸ್ಟೋರಿಯು ರಾಜ್ಯದ ವಿರುದ್ಧ ಸುಳ್ಳು ಅಭಿಯಾನ' ಎಂದು ಕರೆದಿದ್ದಾರೆ.

'ದಿ ಕೇರಳ ಸ್ಟೋರಿ' ಚಿತ್ರದ ಪೋಸ್ಟರ್

ಕೇರಳವು ಲವ್ ಜಿಹಾದ್‌ನ ಕೇಂದ್ರವಾಗಿದೆ. ಅವರ ಧರ್ಮಕ್ಕೆ ಮತಾಂತರಗೊಳಿಸಲು ಸಿರಿಯಾಕ್ಕೆ ಕರೆದೊಯ್ಯಲಾಗುತ್ತದೆ ಎಂದು ಈ ಸಿನಿಮಾ ಕಥೆ ಹೇಳುತ್ತದೆ. ಕೇರಳದ ಜನರು ಇದನ್ನು ನಂಬುವುದಿಲ್ಲ. ಆದರೆ, ಹೊರ ರಾಜ್ಯ ಹಾಗೂ ವಿದೇಶದ ಜನರಿಗೆ ಸತ್ಯ ಗೊತ್ತಿರುವುದಿಲ್ಲ ಎಂದಿದ್ದಾರೆ.

2023ನೇ ಸಾಲಿನ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ತೀರ್ಪುಗಾರರ ಮಂಡಳಿಯ ಅಧ್ಯಕ್ಷ, ಚಲನಚಿತ್ರ ನಿರ್ಮಾಪಕ ಅಶುತೋಷ್ ಗೋವಾರಿಕರ್ ಅವರು ದೆಹಲಿಯಲ್ಲಿ ಶುಕ್ರವಾರ ಘೋಷಿಸಿದ್ದರು.

'ದಿ ಕೇರಳ ಸ್ಟೋರಿ' ಚಿತ್ರಕ್ಕಾಗಿ ಸುದಿಪ್ತೋ ಸೇನ್ ಅವರಿಗೆ 'ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ' ದೊರೆತಿದೆ. ಇದೇ ಚಿತ್ರಕ್ಕೆ 'ಅತ್ಯುತ್ತಮ ಛಾಯಾಚಿತ್ರಗ್ರಹಣ ಪ್ರಶಸ್ತಿ'ಯೂ ಸಂದಿದೆ.

ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿಯಿಂದ ಬಹಿರಂಗ

ಸಾವು: ಪರಿಹಾರದಲ್ಲಿ 'ತಾರತಮ್ಯ'

● ಎಂ.ಮಹೇಶ್

ಮೈಸೂರು: ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ, ಜಾನುವಾರುಗಳ ಮಾಲೀಕರಿಗೆ ಹಾಗೂ ಬೆಳೆ ನಾಶ ಅನುಭವಿಸಿದ ರೈತರಿಗೆ ಪರಿಹಾರ ನೀಡುವಲ್ಲಿ ಅರಣ್ಯ ಇಲಾಖೆಯು ತಾರತಮ್ಯ ನೀತಿ ಅನುಸರಿಸುತ್ತಿರುವುದು ಕಂಡುಬಂದಿದೆ.

ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಇಲ್ಲಿನ ಒಡನಾಡಿ ಸೇವಾ ಸಂಸ್ಥೆಯು ಸಲ್ಲಿಸಿದ್ದ ಅರ್ಜಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕಚೇರಿಯಿಂದ ಮಾಹಿತಿ ನೀಡಿದ್ದು, ಅದರಲ್ಲಿರುವ ಅಂಕಿ–ಅಂಶಗಳು ಪರಿಹಾರ ವಿತರಣೆಯಲ್ಲಿ 'ಪ್ರದೇಶವಾರು ತಾರತಮ್ಯ' ಆಗಿರುವುದಕ್ಕೆ ಕನ್ನಡಿ ಹಿಡಿದಿವೆ.

2021–22ನೇ ಸಾಲಿನಿಂದ 2023–24ರವರೆಗೆ ಮಾಹಿತಿ ನೀಡಲಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಹೆಚ್ಚಿನ ಪರಿಹಾರ ಕೊಟ್ಟಿರುವುದು, ಕೆಲವೆಡೆ ಕನಿಷ್ಠ ಪರಿಹಾರ ಒದಗಿಸಲಾಗಿದೆ.

ರಾಮನಗರದಲ್ಲಿ ಹೆಚ್ಚು: ಉದಾಹರಣೆಗೆ, 2021–22ರಲ್ಲಿ ರಾಮನಗರ ವೃತ್ತದಲ್ಲಿ ಮೂವರು ಮೃತಪಟ್ಟಿದ್ದು, ಒಟ್ಟು ₹ 22.50 ಲಕ್ಷ ಪರಿಹಾರ ಕೊಡಲಾಗಿದೆ. ಕೋಲಾರದಲ್ಲಿ ಮೂವರ ಕುಟುಂಬದವರಿಗೆ ಕೊಟ್ಟಿರುವುದು ₹ 18.50 ಲಕ್ಷ ಮಾತ್ರ. ಅಂತೆಯೇ, ಬಳ್ಳಾರಿ, ಬೀದರ್, ಚಿಕ್ಕಮಗಳೂರು, ಮಂಡ್ಯ, ಮಂಗಳೂರು ವೃತ್ತಗಳಲ್ಲಿ ಪ್ರತಿ ಕುಟುಂಬಕ್ಕೆ ತಲಾ ₹ 7.50 ಲಕ್ಷ ನೀಡಲಾಗಿದೆ.

ಚಾಮರಾಜನಗರ ಜಿಲ್ಲೆ ಮಲೆ–ಮಹದೇಶ್ವರ ವೃತ್ತದಲ್ಲಿ ಒಬ್ಬರಿಗೆ ನೀಡಿರುವುದು ಕೇವಲ ₹ 1.68 ಲಕ್ಷ. ಚಿಕ್ಕಬಳ್ಳಾಪುರದ ಪ್ರಕರಣದಲ್ಲಿ ₹2 ಲಕ್ಷ ಪರಿಹಾರ ಸಂದಾಯವಾಗಿದೆ. ಮೈಸೂರು ವೃತ್ತದ ಹುಣಸೂರು ವನ್ಯಜೀವಿ ವಲಯದಲ್ಲಿ ಮೃತಪಟ್ಟ 6 ಮಂದಿಯ ಕುಟುಂಬಗಳಿಗೆ ಪಾವತಿಸಿರುವುದು ಒಟ್ಟು ₹ 35 ಲಕ್ಷ. ಇದೇ ರೀತಿಯ ತಾರತಮ್ಯವನ್ನು 2022–23 ಹಾಗೂ 2023–24ನೇ ಸಾಲಿನಲ್ಲೂ ಮಾಡಿರುವುದನ್ನು ಅಂಕಿ–ಅಂಶಗಳು ಹೇಳುತ್ತಿವೆ.

2023–24ರಲ್ಲಿ ರಾಮನಗರದಲ್ಲಿ 4 ಪ್ರಕರಣಗಳಲ್ಲಿ ಕೊಟ್ಟಿರುವುದು ಬರೋಬ್ಬರಿ ₹ 60ಲಕ್ಷ. ಬಿಆರ್‌ಟಿ ವಲಯದಲ್ಲಿನ 8 ಪ್ರಕರಣಗಳಿಗೆ ₹ 80 ಲಕ್ಷ ಕೊಡಲಾಗಿದೆ. ಭದ್ರಾದಲ್ಲಿ ಒಬ್ಬರಿಗೆ ₹ 15 ಲಕ್ಷ ನೀಡಿದ್ದರೆ, ಮೈಸೂರಿನಲ್ಲಿ ಒಂದು ಪ್ರಕರಣದಲ್ಲಿ ಪಾವತಿಸಿರುವುದು ₹ 10 ಲಕ್ಷ.

ಸಾವಿನಲ್ಲೂ...: 'ಬೆಂಗಳೂರು ವೃತ್ತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಒಂದು ರೀತಿಯ ಪರಿಹಾರ, ಇತರ ವೃತ್ತಗಳಲ್ಲಿ ಮತ್ತೊಂದು ಪ್ರಮಾಣದಲ್ಲಿ ಪರಿಹಾರ ಕೊಡುತ್ತಿರುವುದು ಖಂಡನೀಯ. ಎಲ್ಲರನ್ನೂ, ಎಲ್ಲವನ್ನೂ ಏಕರೂಪವಾಗಿ ನೋಡುತ್ತಿಲ್ಲವೇಕೆ?' ಎಂದು ಕೇಳುತ್ತಾರೆ ಒಡನಾಡಿ ಸೇವಾ ಸಂಸ್ಥೆಯ ಎಂ.ಎಲ್. ಪರಶುರಾಮ್.

'ಯಾವ ಮಾನದಂಡ ಆಧರಿಸಿ ಪರಿಹಾರ ಹಂಚಿಕೆ ಮಾಡಲಾಗುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಕಷ್ಟಪಟ್ಟು ಬೆಳೆದ ಬೆಳೆ ರಕ್ಷಣೆಗೆ ಹಾಗೂ ಸರಿಯಾದ ಪ್ರಮಾಣದಲ್ಲಿ ಪರಿಹಾರ ಸಿಗದಿರುವುದು ಕೂಡ ಕಾಡಂಚಿನ ಜನರು ವನ್ಯಪ್ರಾಣಿಗಳ ಮೇಲೆ ದಾಳಿ ನಡೆಸುವುದಕ್ಕೆ, ವಿಷ ಹಾಕುವುದಕ್ಕೆ ಪ್ರೇರಣೆ ಕೊಟ್ಟಂತಾಗುತ್ತಿದೆ. ಇದೆಲ್ಲ ಕಾರಣದಿಂದಾಗಿಯೇ ಮಾನವ–ವನ್ಯಪ್ರಾಣಿ ಸಂಘರ್ಷ ಮುಂದುವರಿಯುತ್ತಿದೆ. ಆದ್ದರಿಂದ, ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದು ಕೋರುತ್ತಾರೆ ಅವರು.

'ಕಾಡಂಚಿನಲ್ಲಿ ಸಂತ್ರಸ್ತರಾದರಿಗೆ ಮಾನವೀಯ ಕಾರಣದಿಂದ ಬದುಕು ಕಟ್ಟಿಕೊಡಬೇಕು. ಎಲ್ಲ ಸಾವುಗಳನ್ನೂ ಸಮಾನವಾಗಿ ಪರಿಗಣಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಚಿಂತಿಸಬೇಕು. ಬೆಳೆ ನಾಶಕ್ಕೆ ವೈಜ್ಞಾನಿಕವಾಗಿ ಪರಿಹಾರ ಕೊಡಬೇಕು' ಎಂದು ಒತ್ತಾಯಿಸಿದರು.

ಮುಖ್ಯಾಂಶಗಳು
- ಒಂದೊಂದು ಜಿಲ್ಲೆಗೆ ಒಂದೊಂದು 'ನ್ಯಾಯ'
- ಕಾಡಂಚಿನ ಜನರ ಮುಗಿಯದ ಸಂಕಷ್ಟ
- ದ್ವೇಷದ ಮನೋಭಾವ ಬೆಳೆಯುವುದಕ್ಕೆ 'ಕಾರಣ'

> **ಕಾಡುಪ್ರಾಣಿಗಳ ದಾಳಿಯಿಂದ ಸಾವಿಗೀಡಾದವರ ಕುಟುಂಬಕ್ಕೆ ಪರಿಹಾರ ಕೊಡುವಲ್ಲಿ ತಾರತಮ್ಯ ಸರಿಯಲ್ಲ. ಎಲ್ಲ ಪ್ರಕರಣದಲ್ಲೂ ಸಮಾನ ಪರಿಹಾರ ಕೊಡಬೇಕು**
> **ಬಡಗಲಪುರ ನಾಗೇಂದ್ರ**
> ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

> **ನ್ಯಾಯಯುತವಾದ ಪರಿಹಾರ ದೊರೆಯದಿದ್ದಾಗ ಕಾಡಂಚಿನ ಜನರು ವನ್ಯಪ್ರಾಣಿಗಳ ಕುರಿತು ಸೇಡಿನ ಮನೋಭಾವಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ**
> **ಎಂ.ಎಲ್. ಪರಶುರಾಮ್**
> ಒಡನಾಡಿ ಸೇವಾ ಸಂಸ್ಥೆ

ಮೂರು ಸಾಲುಗಳಲ್ಲಿ ನೀಡಿದ ಪರಿಹಾರದ ಮೊತ್ತ

ಕಾಡುಪ್ರಾಣಿಗಳ ದಾಳಿಯಿಂದ ಸಂತ್ರಸ್ತರಾದವರಿಗೆ ಅರಣ್ಯ ಇಲಾಖೆಯಿಂದ ವಿವಿಧ ರೀತಿಯಲ್ಲಿ ಪರಿಹಾರ ಕೊಡಲಾಗುತ್ತಿದೆ. ಬೆಳೆ ಹಾನಿ, ಜಾನುವಾರು ಸಾವು, ಮಾನವ ಸಾವು, ಶಾಶ್ವತ ಅಂಗವೈಕಲ್ಯ, ಗಾಯಗೊಂಡವರು, ಆಸ್ತಿ ಹಾನಿ ಹಾಗೂ ಮಾಸಾಶನ ಒದಗಿಸಲಾಗುತ್ತಿದೆ.

ಇದಕ್ಕಾಗಿ, 2021–22ನೇ ಸಾಲಿನಲ್ಲಿ ಒಟ್ಟು ₹ 27.41 ಕೋಟಿ, 2022–23ರಲ್ಲಿ ₹ 34.13 ಕೋಟಿ ಹಾಗೂ 2023–24ನೇ ಸಾಲಿನಲ್ಲಿ ₹ 47.12 ಕೋಟಿ ವ್ಯಯಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಭಾನುವಾರ, ಆಗಸ್ಟ್ 3, 2025 | ₹ 7.00
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಧಿಕೃತ ನಿವಾಸ ಖಾಲಿ
ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ದೆಹಲಿಯ ಸಿಜೆಐ ಅಧಿಕೃತ ನಿವಾಸವನ್ನು ಶನಿವಾರ ಖಾಲಿ ಮಾಡಿದರು

ಶಾಲಾ ಶುಲ್ಕ: ಮಸೂದೆ ಮಂಡನೆಗೆ ನಿರ್ಧಾರ
ಖಾಸಗಿ ಶಾಲೆಗಳ ಶುಲ್ಕವನ್ನು ನಿಯಂತ್ರಿಸುವ ಮಸೂದೆಯನ್ನು ಮುಂದಿನ ಮುಂಗಾರು ಅಧಿವೇಶನದಲ್ಲಿ ಮಂಡಿಸುವುದಾಗಿ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಶನಿವಾರ ತಿಳಿಸಿದ್ದಾರೆ

ದಿನದ ಹೊತ್ತು ಕಲಬುರಗಿ ಸುತ್ತು 3
ಮುಂಗಾರಿನ ಆಮಂತ್ರಣ ಬೈಕ್ ಚಾರಣ 2

ದನ ಕಾಯೋನು ಅನ್ನಬೇಡಿ... ಆತನ ಗಳಿಕೆಯನ್ನೊಮ್ಮೆ ನೋಡಿ!

ವಡಗೇರಾ ಪಟ್ಟಣದ ದನಗಾಹಿಗಳು ಜಾನುವಾರುಗಳೊಂದಿಗೆ ಹೊರಟಾಗ...

• ವಾಟ್ಕರ್ ನಾಮದೇವ

ವಡಗೇರಾ (ಯಾದಗಿರಿ ಜಿಲ್ಲೆ): 'ದನ ಕಾಯೋನು' ಎಂದು ಈ ಹಿಂದೆ ಮೂದಲಿಸುತ್ತಿದ್ದವರೇ ಈಗ ಇವರು ಮಾಡುವ 'ಕಾಯಕ'ದಿಂದ ಗಳಿಸುತ್ತಿರುವ ಆದಾಯ ಕಂಡು ಹುಬ್ಬೇರಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಹೆಚ್ಚುತ್ತಿರುವುದರಿಂದ ದನಗಾಹಿಗಳು ಜಾನುವಾರು ಮೇಯಿಸುವುದು ಹಾಗೂ ಕಾಯುವ ಮೂಲಕ ತಿಂಗಳಿಗೆ ₹30 ಸಾವಿರದವರೆಗೂ ಆದಾಯ ಗಳಿಸುತ್ತಿದ್ದಾರೆ.

ಪಟ್ಟಣದಲ್ಲಿ ನೂರಾರು ಮಂದಿ ಜಾನುವಾರು ಸಾಕಾಣಿಕೆ ಮಾಡುತ್ತಿದ್ದಾರೆ. ಅವುಗಳನ್ನು ಕಾಯಲು, ಮೇಯಿಸಲು ಎರಡ್ಮೂರು ದನಗಾಹಿಗಳ ತಂಡಗಳಿವೆ. ಒಂದೊಂದು ತಂಡದಲ್ಲಿ ಇಬ್ಬರು ಅಥವಾ ಮೂವರು ದನಗಾಹಿಗಳಿದ್ದಾರೆ. ಪ್ರತಿ ತಂಡವೂ 100ರಿಂದ 150 ದನಗಳನ್ನು ಮೇಯಿಸುತ್ತದೆ.

ಬೆಳಿಗ್ಗೆ 9 ಗಂಟೆಗೆ ಮಾಲೀಕರು ತಮ್ಮ ಜಾನುವಾರನ್ನು ನಿರ್ದಿಷ್ಟ ಜಾಗಕ್ಕೆ ತಂದು ಬಿಡಬೇಕು. ಎಲ್ಲ ದನಗಳು ಬಂದ ನಂತರ ದನಗಾಹಿಗಳು ದನ ಮೇಯಿಸಲು ಜಮೀನುಗಳಿಗೆ ಹೊಡೆದುಕೊಂಡು ಹೋಗುತ್ತಾರೆ. ಸಂಜೆ ಮತ್ತೆ ನಿಗದಿತ ಸ್ಥಳಕ್ಕೆ ತಂದು ಬಿಡುತ್ತಾರೆ. ಇದು ದನಗಾಹಿಗಳ ನಿತ್ಯದ ಕಾಯಕ.

> **ಇಂದಿನ ತುಟ್ಟಿ ಕಾಲದಲ್ಲಿ ಪ್ರತಿಯೊಂದರ ಬೆಲೆಯೂ ಏರಿಕೆಯಾಗಿದೆ. ಹೀಗಾಗಿ ದನ ಕಾಯಲು ಕೂಲಿ ದರ ನಿಗದಿ ಮಾಡಿದ್ದೇವೆ. ನಿತ್ಯ 200 ದನಗಳನ್ನು ಕಾಯುತ್ತೇವೆ**
> **ಬಂದಪ್ಪ ಬಾಡದ,** ದನಗಾಹಿ, ವಡಗೇರಾ

> **ದನಗಾಹಿಗಳಿಗೆ ಮುಂಗಡವಾಗಿ ಒಂದು ವರ್ಷದ ಹಣ ಪಾವತಿಸಬೇಕು. ಆಗ ಮಾತ್ರ ಅವರು ದನ ಕಾಯಲು ಹೊಡೆದುಕೊಂಡು ಹೋಗುತ್ತಾರೆ**
> **ಭೀಮನಗೌಡ ಪಾಟೀಲ,** ಕರಿಕಳ್ಳಿ ರೈತ

ಕಾಯಲು ದರ ನಿಗದಿ: ಈ ಹಿಂದೆ ದನಗಾಹಿಗಳಿಗೆ ತಿಂಗಳ ಕೂಲಿ ಎಂದು ₹30ರಿಂದ ₹50 ನೀಡಲಾಗುತ್ತಿತ್ತು. ಜತೆಗೆ ಹಬ್ಬದ ಸಂದರ್ಭಗಳಲ್ಲಿ ವಿಶೇಷ ಆಹಾರ ಹಾಗೂ ಹೊಸ ಬಟ್ಟೆ ನೀಡುತ್ತಿದ್ದರು. ಆದರೆ, ಈಗ ಕಾಲ ಬದಲಾಗಿದೆ. ತಿಂಗಳಿಗೆ ಒಂದು ಎಮ್ಮೆಗೆ ₹600, ಆಕಳಿಗೆ ₹550, ಕರುವಿಗೆ ₹300 ಕೂಲಿ ದರ ನಿಗದಿಪಡಿಸಿದ್ದಾರೆ. ಪ್ರತಿ ತಿಂಗಳು ದನಗಾಹಿಗಳ ತಂಡ ₹50,000ದಿಂದ ₹75,000 ಗಳಿಸುತ್ತಿದೆ.

ಗೊಬ್ಬರದಿಂದಲೂ ಆದಾಯ: ನಿಗದಿಪಡಿಸಿದ ಸ್ಥಳದಲ್ಲಿ ದನಗಳು ಹಾಕಿರುವ ಸಗಣಿಯನ್ನು ಸಂಗ್ರಹಿಸಿ ತಿಪ್ಪೆಗೆ ಹಾಕುತ್ತಾರೆ. ವರ್ಷದ ನಂತರ ಅದನ್ನು ಜಮೀನು ಇರುವ ರೈತರಿಗೆ, ಟ್ರ್ಯಾಕ್ಟರ್‌ನ ಒಂದು ಲೋಡ್‌ಗೆ ₹3 ಸಾವಿರದಂತೆ ಮಾರಾಟ ಮಾಡುತ್ತಾರೆ. ಹೀಗೆ ಸಂಗ್ರಹಿಸುವ ಸಗಣಿ 5ರಿಂದ 6 ಲೋಡ್‌ಗಳಷ್ಟು ಆಗುತ್ತದೆ ಎಂದು ದನಗಾಹಿಗಳು ಹೇಳುತ್ತಾರೆ.

'ಈ ಹಿಂದೆ ಶಾಲೆಯಲ್ಲಿ ಮಕ್ಕಳು ಏನಾದರೂ ತಪ್ಪು ಮಾಡಿದರೆ, ಸರಿಯಾಗಿ ಓದು- ಬರಹ ಬಾರದಿದ್ದರೆ ಮಕ್ಕಳಿಗೆ ದನ ಕಾಯಲು ಹೋಗು ಎಂದು ಶಿಕ್ಷಕರು ಅಪಹಾಸ್ಯ ಮಾಡುತ್ತಿದ್ದರು. ಈಗ ದನ ಕಾಯುವವರೂ ಗ್ರಾಮೀಣ ಭಾಗದಲ್ಲಿ ಖಾಸಗಿ ಶಾಲೆಯ ಶಿಕ್ಷಕರಿಗಿಂತಲೂ ಹೆಚ್ಚಿನ ಹಣ ಗಳಿಸುತ್ತಿದ್ದಾರೆ' ಎನ್ನುತ್ತಾರೆ ದನಗಳ ಮಾಲೀಕ ಶಿವಕುಮಾರ ಕೊಂಕಲ್.

'ಎರಡ್ಮೂರು ದಶಕಗಳ ಹಿಂದೆ ಆಕಳು ಕರು ಹಾಕಿದರೆ, ಊರ ಜಾತ್ರೆ, ದಸರಾ, ದೀಪಾವಳಿ, ಮನೆಯಲ್ಲಿ ಶುಭ ಕಾರ್ಯಗಳು ನಡೆದರೆ ದನ ಕಾಯುವವರಿಗೆ ಹೊಸ ಬಟ್ಟೆ, ಹೊಸ ಚಪ್ಪಲಿ ಕೊಟ್ಟು ಅವರನ್ನು ಮನೆಗೆ ಕರೆಯಿಸಿ ಊಟ ಹಾಕಿಸುವ ಪರಿಪಾಟವಿತ್ತು. ಈಗ ಅದೆಲ್ಲವೂ ನಿಂತಿದೆ. ದನಕಾಯುವವರು ಎಲ್ಲದಕ್ಕೂ ಹಣವನ್ನೇ ಕೇಳುತ್ತಾರೆ' ಎಂದು ಹೇಳುತ್ತಾರೆ.

ಯಾದಗಿರಿ ಕೃಷಿ ಪ್ರಧಾನವಾದ ಜಿಲ್ಲೆಯಾಗಿದೆ. ಹೊಲಕ್ಕೆ ಸಗಣಿ, ಉಳುಮೆಗೆ ಎತ್ತುಗಳು, ಹೈನುಗಾರಿಕೆ ಹಾಗೂ ನಿತ್ಯದ ಖರ್ಚಿಗೆ ಆಕಳು, ಎಮ್ಮೆಗಳನ್ನು ಇಲ್ಲಿನ ರೈತರು ಸಾಕುವುದು ಸಾಮಾನ್ಯವಾಗಿದೆ. ಮೇವಿಗೆ ಪೂರಕ ವಾದ ಕುರುಚಲು ಬೆಟ್ಟಗಳು, ಕೃಷ್ಣಾ ಮತ್ತು ಭೀಮಾ ನದಿ, ಹಳ್ಳಗಳು ಸಹ ಜಾನುವಾರು ಸಾಕಾಣಿಕೆಗೆ ಆಸರೆಯಾಗಿವೆ.

ರಾಜ್ಯ ಕ್ರೀಡಾ ವಲಯ ನಿತ್ರಾಣ

ರಾಜ್ಯದಲ್ಲಿ ಪುರಸ್ಕಾರಗಳ ಬರ; ಸಾಧನೆಗೆ ತಕ್ಕ ಮನ್ನಣೆಯ ಕೊರತೆ; ಪ್ರಮುಖ ಕ್ರೀಡಾಪಟುಗಳ ವಲಸೆ

• ಗಿರೀಶ ದೊಡ್ಡಮನಿ

ಒಳನೋಟ



ಬೆಂಗಳೂರು: 'ಈಜು ಕ್ರೀಡೆ ಬಹಳ ದುಬಾರಿ. ಉನ್ನತ ಸಾಧನೆ ಮಾಡುತ್ತ ಹೋದಂತೆ ವೆಚ್ಚವೂ ಜಾಸ್ತಿ. ಆದರೆ ಕರ್ನಾಟಕ ಸರ್ಕಾರವು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಗೆದ್ದು ಬಂದಾಗಲೂ ದೊಡ್ಡ ಮೊತ್ತ ಕೊಡುವುದಿಲ್ಲ. ತರಬೇತಿಗಾಗಿ ವಿಶೇಷ ಅನುದಾನಗಳೂ ಕಡಿಮೆ. ನಾನು ರೈಲ್ವೆ ಇಲಾಖೆಯಲ್ಲಿದ್ದೇನೆ. ವೇತನ ಬರುವುದರಿಂದ ಖರ್ಚುಗಳನ್ನು ನಿಭಾಯಿಸುತ್ತೇನೆ. ನೌಕರಿ ಇಲ್ಲದ ಈಜುಪಟುಗಳ ಕಥೆ ಏನು? ಅದಕ್ಕಾಗಿಯೇ ನಾನು ಕೇರಳ ರಾಜ್ಯವನ್ನು ರಾಷ್ಟ್ರೀಯ ಕೂಟದಲ್ಲಿ ಪ್ರತಿನಿಧಿಸುತ್ತಿದ್ದೇನೆ. ಪದಕ ಜಯಿಸಿದಾಗ ಕೇರಳದಲ್ಲಿ ಹೆಚ್ಚು ಮೊತ್ತ ನೀಡುತ್ತಾರೆ' ಎನ್ನುವುದು ರಾಷ್ಟ್ರೀಯ ಈಜು ಚಾಂಪಿಯನ್, ಕರ್ನಾಟಕದ ಹರ್ಷಿಕಾ ಜಯರಾಮ್ ಅವರ ನುಡಿ.

ಭುವನೇಶ್ವರದಲ್ಲಿ ನಡೆದ 78ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ ವಿಭಾಗದಲ್ಲಿ ಬೆಳ್ಳಿ ಗೆದ್ದ ಶ್ರೀನಿಧಿ ನಟೇಶನ್, ಪುರುಷರ 50 ಮೀಟರ್ಸ್ ಬಟರ್‌ಫ್ಲೈನಲ್ಲಿ ಹೊಸ ದಾಖಲೆ ಬರೆದ ಬೆನೆಡಿಕ್ಟ್ ರೋಹಿತ್, 4X100 ಮೀ ಮೆಡ್ಲೆಯಲ್ಲಿ ನೂತನ ದಾಖಲೆ ಬರೆದ ಜೋಶುವಾ ಥಾಮಸ್ ಅವರು ತಮಿಳುನಾಡು ರಾಜ್ಯವನ್ನು ಪ್ರತಿನಿಧಿಸಿದ್ದರು. ಆದರೆ ಅವರೆಲ್ಲರಿಗೂ ಈಜು ಕೌಶಲಗಳ ಕಲಿಕೆ ಮಾತ್ರ ಬೆಂಗಳೂರಿನಲ್ಲಿ ಆಗಿತ್ತು. ಮೆಡ್ಲೆಯಲ್ಲಿ ಥಾಮಸ್ ಅವರಿದ್ದ ತಂಡವು ಹಿಂದಿಕ್ಕಿದ್ದು ಕರ್ನಾಟಕ ತಂಡವನ್ನೇ. ಇವರೆಲ್ಲರೂ ಹೋದ ವರ್ಷ ನಡೆದಿದ್ದ ನ್ಯಾಷನಲ್ ಗೇಮ್ಸ್‌ನಲ್ಲಿ ಪದಕಗಳನ್ನು ಗೆದ್ದಿದ್ದರು. ಇವರಿಗೆ ಸುಮಾರು ₹ 12 ರಿಂದ ₹ 15 ಲಕ್ಷದವರೆಗೆ ಪುರಸ್ಕಾರವನ್ನು ಅಲ್ಲಿಯ ಸರ್ಕಾರ ನೀಡಿತ್ತು.

ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ಏಕಲವ್ಯ ಇತ್ಯಾದಿ ಪ್ರಶಸ್ತಿಗಳನ್ನು ರಾಜ್ಯ ಸರ್ಕಾರದಿಂದ ನೀಡಲಾಗುತ್ತದೆ. ಆದರೆ ಕಳೆದ ಮೂರು ವರ್ಷಗಳಿಂದ ಈ ಪ್ರಶಸ್ತಿಗಳನ್ನೇ ಕೊಟ್ಟಿಲ್ಲ. ಈ ಅವಧಿಯಲ್ಲಿ ರಾಜ್ಯದ ಹಲವು ಆಟಗಾರರು ಬೇರೆ ಬೇರೆ ಕೂಟಗಳಲ್ಲಿ ಸಾಧನೆ ಮಾಡಿದ್ದಾರೆ. ರಾಜ್ಯದ ಅತ್ಯುನ್ನತ ಕ್ರೀಡಾ ಗೌರವಗಳು ತಮಗೆ ಲಭಿಸಿಲ್ಲವೆಂಬ ಬೇಸರ ಅವರಲ್ಲಿ ಮನೆ ಮಾಡಿದೆ.

ಈಜು ಕ್ರೀಡೆಯ 'ಕಾಶಿ' ಎಂದೇ ಖ್ಯಾತವಾಗಿರುವ ಬೆಂಗಳೂರಿನ ಈಜುಕೊಳಗಳಲ್ಲಿ ಈಗ ಆತಂಕದ ಅಲೆಗಳು ಏಳುತ್ತಿವೆ. ಇಲ್ಲಿಯ ಪ್ರತಿಭೆಗಳು ಹೊರರಾಜ್ಯಕ್ಕೆ ವಲಸೆ ಹೋಗುತ್ತಿರುವುದು ಒಂದು ಸಂಕಟವಾದರೆ, ಇಲ್ಲಿಯ ಉತ್ಕೃಷ್ಟ ತರಬೇತಿ ಪದ್ಧತಿಯ ಒಳಹೊರಗನ್ನು ಅರಿತ ಈಜುಪಟುಗಳು ಬೇರೆ ರಾಜ್ಯಗಳನ್ನು ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪ್ರತಿನಿಧಿಸುತ್ತಿರುವುದು, ಇಲ್ಲಿಯ ತರಬೇತುದಾರರ ಮುಖದಲ್ಲಿ ಚಿಂತೆಯ ಗೆರೆಗಳನ್ನು ಮೂಡಿಸಿದೆ.

ಹೀಗೆ ಪಟ್ಟಿ ಮಾಡುತ್ತ ಹೋದರೆ; ರಾಜ್ಯದ ಮೂಲೆಮೂಲೆಗಳಿಂದಲೂ ಕ್ರೀಡಾಕ್ಷೇತ್ರದ ಹಿನ್ನಡೆಗೆ ಉದಾಹರಣೆಗಳು ಸಾಲುಗಟ್ಟುತ್ತವೆ. ಇವಕ್ಕೆಲ್ಲ ಕಾರಣ ಹುಡುಕುತ್ತ ಸಾಗಿದರೆ ಸರ್ಕಾರದ ಕೆಲವು ಅಧಿಕಾರಿಗಳು 'ದುಡ್ಡಿನ ಕೊರತೆ. ಅನುದಾನ ಕಡಿಮೆ' ಎಂದು ಪಿಸುಗುಟ್ಟುತ್ತಾರೆ. ಆದರೆ ಇದರಿಂದಾಗಿ ಕರ್ನಾಟಕವು ಮೊದಲಿನಿಂದಲೂ ಪಾರಮ್ಯ ಸಾಧಿಸಿರುವ ಕೆಲವು ಕ್ರೀಡೆಗಳ ಮೇಲಿನ ಹಿಡಿತ ಮೆಲ್ಲಗೆ ಸಡಿಲವಾಗುತ್ತಿದೆ.

ಸೈಕ್ಲಿಸ್ಟ್‌ಗಳ ಕಣಜವೆಂದೇ ಪ್ರಸಿದ್ಧವಾದ ವಿಜಯಪುರ, ಬಾಗಲಕೋಟೆ ಜಿಲ್ಲೆಯ ಬಹುವರ್ಷಗಳ ಕನಸು ಅತ್ಯಾಧುನಿಕ ವೆಲೋಡ್ರಮ್ ನಿರ್ಮಾಣ ಕಾರ್ಯವು ಸರಿಸುಮಾರು ಒಂದೂವರೆ ದಶಕದಿಂದ ಕುಂಟುತ್ತಲೇ ಸಾಗಿದೆ. ಈ ಅವಧಿಯಲ್ಲಿ ರಾಜ್ಯದಲ್ಲಿ ವಿವಿಧ ಪಕ್ಷಗಳು ಆಡಳಿತ ನಡೆಸಿವೆ.

ಆದರೆ ವಿಜಯಪುರದಲ್ಲಿ ನಿರ್ಮಾಣವಾಗುತ್ತಿರುವ ವೆಲೋಡ್ರಮ್ ಕಾಮಗಾರಿ ಮುಗಿದಿಲ್ಲ. ಹೀಗಾಗಿ ಇಲ್ಲಿ ಸೈಕ್ಲಿಸ್ಟ್‌ಗಳು ರಸ್ತೆಗಳನ್ನೇ ಅವಲಂಬಿಸಬೇಕಾಗಿದೆ. ಇದರಿಂದಾಗಿ ರಸ್ತೆ ಅಪಘಾತಗಳಲ್ಲಿ ಸೈಕ್ಲಿಸ್ಟ್‌ಗಳು ಗಂಭೀರ ಗಾಯಕ್ಕೊಳಗಾದ ನಿದರ್ಶನಗಳೂ ಇವೆ.

ಟ್ರ್ಯಾಕ್ ಸೈಕ್ಲಿಂಗ್ ವಿಭಾಗದಲ್ಲಿಯೂ ಸೂಕ್ತ ತರಬೇತಿ ಪಡೆಯಲು ವೆಲೋಡ್ರಮ್ ಅಗತ್ಯವಿದೆ. ಈ ಸೌಲಭ್ಯದ ಕೊರತೆಯಿಂದಾಗಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಇಲ್ಲಿಯವರಿಗೆ ನಿರೀಕ್ಷಿತ ಫಲಿತಾಂಶ ಸಾಧನೆ ಮಾಡಲು ಸಾಧ್ಯವಾಗುತ್ತಿಲ್ಲ. ಗಾಯದ ಸಮಸ್ಯೆಗಳು ಈ ಕ್ರೀಡೆಗಳಲ್ಲಿ ಹೆಚ್ಚು. ಅದಕ್ಕಾಗಿ ಸೈಕ್ಲಿಂಗ್ ಗಾಯ ನಿರ್ವಹಣೆ ಮತ್ತು ಕ್ರೀಡಾ ವಿಜ್ಞಾನ ಕೇಂದ್ರದ ಅಗತ್ಯವೂ ಈ ಭಾಗಕ್ಕೆ ಇದೆ ಎಂಬ ಬೇಡಿಕೆಗೆ ಮನ್ನಣೆ ಸಿಕ್ಕಿಲ್ಲ.

'ನಮ್ಮ ವಿಜಯಪುರದ ಸೈಕ್ಲಿಸ್ಟ್‌ಗಳು ರಸ್ತೆ ರೇಸ್‌ನಲ್ಲಿ ಕಿಂಗ್, ಆದರೆ ಟ್ರ್ಯಾಕ್‌ನಲ್ಲಿ ಜೀರೊ. ಏಕೆಂದರೆ ಇಲ್ಲಿ ಟ್ರ್ಯಾಕ್‌ಗೆ ಅಗತ್ಯವಿರುವ ವೆಲೋಡ್ರಮ್ ಇಲ್ಲ. ಸುಮಾರು 15–16 ವರ್ಷಗಳಿಂದ ಅಂತರರಾಷ್ಟ್ರೀಯ ದರ್ಜೆಯ ವೆಲೋಡ್ರಮ್ ನಿರ್ಮಾಣ ನಡೆಯುತ್ತಿದೆ. ಆದರೆ ಒಂದಿಲ್ಲೊಂದು ದೋಷಗಳಿಂದಾಗಿ ಅದು ಪೂರ್ಣವಾಗುತ್ತಿಲ್ಲ. ಇದರಿಂದಾಗಿ ನಮ್ಮ ಭಾಗದ ಮಕ್ಕಳಿಗೆ ಅಭ್ಯಾಸ ಮಾಡಲು ಸಾಧ್ಯವಾಗುತ್ತಿಲ್ಲ. ಆದರೂ ನಮ್ಮ ಕೆಲವು ಸೈಕ್ಲಿಸ್ಟ್‌ಗಳು ತಮ್ಮ ಸ್ವಪ್ರಯತ್ನದಿಂದ ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ಪದಕ ಗೆದ್ದ ಉದಾಹರಣೆಗಳಿವೆ. ಇಲ್ಲಿಯ ಪ್ರತಿಭಾನ್ವಿತರು ಬೇರೆ ರಾಜ್ಯಗಳಿಗೆ ವಲಸೆ ಹೋಗುವುದನ್ನು ತಕ್ಕಮಟ್ಟಿಗೆ ನಾವು ತಡೆದಿದ್ದೇವೆ. ಆದರೆ ಸರ್ಕಾರದಿಂದ ಸಿಗುತ್ತಿರುವ ಸೌಲಭ್ಯ ಮತ್ತು ಉದ್ಯೋಗ ಮೀಸಲಾತಿಗಳು ಹೆಚ್ಚಬೇಕು. ಏಕೆಂದರೆ, ಬಹುತೇಕ ಬಡಕುಟುಂಬಗಳ ಮಕ್ಕಳೇ ಹೆಚ್ಚಾಗಿ ಸೈಕ್ಲಿಂಗ್‌ಗೆ ಬರುತ್ತಾರೆ. ಆದ್ದರಿಂದ ಪ್ರೋತ್ಸಾಹ ಯೋಜನೆಗಳು ಜಾಸ್ತಿಯಾಗಬೇಕು. ವೆಲೋಡ್ರಮ್ ಸೌಲಭ್ಯಗಳು ಬೇಕು' ಎಂದು ಕರ್ನಾಟಕ ರಾಜ್ಯ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷ ರಾಜು ಬಿರಾದಾರ ಹೇಳುತ್ತಾರೆ.

6

ಯುವಸಬಲೀಕರಣ -ಕ್ರೀಡಾ ಇಲಾಖೆ ಆಯವ್ಯಯ ₹ ಕೋಟಿಗಳಲ್ಲಿ (4 ವರ್ಷ)

ವರ್ಷ	ರಾಜಸ್ವ	ಬಂಡವಾಳ	ಒಟ್ಟು
2021–22	95.36	24.00	119.36
2022–23	88.02	74.00	162.02
2023–24	99.78	94.50	194.28
2024–25	115.31	87.50	202.81

* ರಾಜಸ್ವ: ಕಾರ್ಯಕ್ರಮಗಳಿಗೆ ವಿನಿಯೋಗ ಮಾಡುವ ಹಣ
* ಬಂಡವಾಳ: ಮೂಲಸೌಲಭ್ಯಗಳ ಅಭಿವೃದ್ಧಿ ಮತ್ತು ನಿರ್ಮಾಣ ವೆಚ್ಚ

> **ಒಲಿಂಪಿಕ್ಸ್ ಪದಕವಿಜೇತರಿಗೆ ₹ 6 ಕೋಟಿ ಬಹುಮಾನ ನೀಡುತ್ತೇವೆ. ಏಷ್ಯನ್ ಗೇಮ್ಸ್ ಮತ್ತಿತರ ಕೂಟಗಳ ವಿಜೇತರಿಗೂ ಉತ್ತಮ ಮೊತ್ತ ನೀಡಲಾಗುತ್ತಿದೆ. ರಾಷ್ಟ್ರೀಯ ಕ್ರೀಡಾಕೂಟದ ಪದಕವಿಜೇತರಿಗೆ ಪುರಸ್ಕಾರ ಮೊತ್ತದ ಕುರಿತು ತೀರ್ಮಾನ ತೆಗೆದುಕೊಳ್ಳುತ್ತೇವೆ**
> **ನವೀನ್ ರಾಜ್ ಸಿಂಗ್,** ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ, ಕ್ರೀಡಾ ಇಲಾಖೆ

ಪ್ರತಿಭಟನೆ

ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ

ಮಾನವ ಕಳ್ಳಸಾಗಾಣಿಕೆ ಮತ್ತು ಬಲವಂತದ ಮತಾಂತರ ಆರೋಪದ ಮೇಲೆ ಛತ್ತೀಸಗಢದಲ್ಲಿ ಕ್ರೈಸ್ತ ಸನ್ಯಾಸಿನಿಯರ ಬಂಧನವನ್ನು ವಿರೋಧಿಸಿ ಕ್ರೈಸ್ತ ಸಂಘಟನೆಗಳು ಬೆಂಗಳೂರಿನಲ್ಲಿ ಶನಿವಾರ ಪ್ರತಿಭಟನೆ ನಡೆಸಿದವು

'ಸ್ವದೇಶಿ ವಸ್ತುಗಳನ್ನೇ ಬಳಸಿ'

ಸುಂಕ ಸಮರದ ವಿರುದ್ಧ ಪ್ರಧಾನಿ ಮೋದಿ ಪರೋಕ್ಷ ಪ್ರಸ್ತಾಪ

ವಾರಾಣಸಿ (ಪಿಟಿಐ): ಜಾಗತಿಕ ಆರ್ಥಿಕತೆಯು ಅನಿಶ್ಚಿತತೆಯಲ್ಲಿರುವ ಈ ಸಂದರ್ಭದಲ್ಲಿ ದೇಶೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವುದೇ ನಿಜವಾದ ದೇಶ ಸೇವೆ ಎಂದು ನರೇಂದ್ರ ಮೋದಿ ಅವರು ಶನಿವಾರ ಹೇಳಿದರು.

ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವ ಮೂಲಕ 'ಸ್ವದೇಶಿ' ತತ್ವವನ್ನು ಅಳವಡಿಸಿಕೊಳ್ಳುವಂತೆ ನಾಗರಿಕರನ್ನು ಕೋರಿದರು.

ಅಮೆರಿಕದ ಸುಂಕ ಸಮರ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಾಗ್ದಾಳಿ ಬೆನ್ನಲ್ಲೇ ಮೋದಿ ಅವರು ಈ ರೀತಿ ಕರೆ ನೀಡಿದರು.

ವಾರಾಣಸಿಯಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಆರ್ಥಿಕ ಪ್ರಗತಿ ಬಗ್ಗೆ ಮಾತನಾಡುತ್ತಲೇ ಜಾಗತಿಕ ವಿದ್ಯಮಾನಗಳ ಬಗ್ಗೆ ಗಮನ ಸೆಳೆಯಲು ಇಚ್ಛಿಸುತ್ತೇನೆ. ಜಾಗತಿಕ ಆರ್ಥಿಕತೆಯು ಅಸ್ಥಿರತೆ ಮತ್ತು ಅನಿಶ್ಚಿತತೆಯನ್ನು ಎದುರಿಸುತ್ತಿದೆ. ಇಂಥ ಸಂದರ್ಭದಲ್ಲಿ ಎಲ್ಲ ದೇಶಗಳು ಸ್ವದೇಶಿ ಉತ್ಪನ್ನಗಳಿಗೆ ಆದ್ಯತೆ ನೀಡುತ್ತಿವೆ. ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆಯತ್ತ ದಾಪುಗಾಲಿಡುತ್ತಿರುವ ಭಾರತ ಸಹ ಇದೇ ಹಾದಿಯಲ್ಲಿದೆ' ಎಂದು ಹೇಳಿದರು.

6

'ಉತ್ತರ ಪ್ರದೇಶದಲ್ಲಿ ತಯಾರಾದ ಕ್ಷಿಪಣಿಗಳಿಂದ ಉಗ್ರರಿಗೆ ತಕ್ಕ ಶಾಸ್ತಿ'

ಪಾಕಿಸ್ತಾನವು ಭಾರತದ ವಿರುದ್ಧ ಮತ್ತೆ ಯಾವುದೇ ಪಾಪಕೃತ್ಯ ಎಸಗಿದಲ್ಲಿ ಉತ್ತರ ಪ್ರದೇಶದಲ್ಲಿ ತಯಾರಾದ ಕ್ಷಿಪಣಿಗಳು ಭಯೋತ್ಪಾದಕನ್ನು ನಿರ್ನಾಮ ಮಾಡಲಿವೆ ಎಂದು ಪ್ರಧಾನಿ ಮೋದಿ ಅವರು ಹೇಳಿದರು.

'ಪಹಲ್ಗಾಮ್ ಉಗ್ರ ದಾಳಿ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡಿದ್ದೆ. ಶಿವನ ಆಶೀರ್ವಾದದಿಂದಾಗಿ 'ಆಪರೇಷನ್ ಸಿಂಧೂರ'ದ ಮೂಲಕ ಅದು ಸಾಧ್ಯವಾಯಿತು. ಈ ಯಶಸ್ಸನ್ನು ಮಹದೇವನ ಪಾದಕ್ಕೆ ಅರ್ಪಿಸುತ್ತೇನೆ' ಎಂದರು.

ಮೋದಿ ಹೇಳಿದ್ದು...

- ಪಾಕಿಸ್ತಾನದಲ್ಲಿನ ಉಗ್ರರ ಅಡಗುದಾಣಗಳನ್ನು ಭಾರತ ನಾಶ ಮಾಡಿದೆ ಎಂಬ ಸತ್ಯವನ್ನು ಅರಗಿಸಿಕೊಳ್ಳಲು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳಿಗೆ ಸಾಧ್ಯವಾಗಿಲ್ಲ
- ಸೇನಾ ಪಡೆಗಳ ಪರಾಕ್ರಮವನ್ನು ಕಾಂಗ್ರೆಸ್ ಪದೇ ಪದೇ ಅವಮಾನಿಸಿದೆ. 'ಆಪರೇಷನ್ ಸಿಂಧೂರ'ವನ್ನು 'ತಮಾಷೆ' ಎಂದು ಕರೆದಿದೆ
- ನವ ಭಾರತವು ಶಿವನನ್ನು ಆರಾಧಿಸುತ್ತದೆ. ಆದರೆ, ಅಗತ್ಯ ಬಿದ್ದಾಗ ಶತ್ರುಗಳ ವಿರುದ್ಧ 'ಕಾಲ ಭೈರವ'ನಾಗಿ ಬದಲಾಗುತ್ತದೆ
- 'ಆಪರೇಷನ್ ಸಿಂಧೂರ'ದಿಂದ ಭಾರತದಲ್ಲಿಯೇ ತಯಾರಾದ ರಕ್ಷಣಾ ಸಾಧನಗಳ ಸಾಮರ್ಥ್ಯದ ಅನಾವರಣವಾಗಿದೆ
- ಬ್ರಹ್ಮೋಸ್ ಕ್ಷಿಪಣಿಗಳು ಕನಸಿನಲ್ಲಿಯೂ ಶಾಂತವಾಗಿ ನಿದ್ದೆ ಮಾಡಲಾಗದಂತಹ ಭಯವನ್ನು ಭಯೋತ್ಪಾದಕರಲ್ಲಿ ಹುಟ್ಟುಹಾಕಿವೆ



6

ಮಳೆಯಿಂದ ತಂಪಾಗಿರುವ ವಾತಾವರಣದಲ್ಲಿ ಬೆಚ್ಚಗಿನ ಭಾವಗಳನ್ನು ಹೊರಸೂಸಿದ ಗಂಡು ನವಿಲೊಂದು ಸಂಗಾತಿಯನ್ನು ಒಲೈಸಲು ಗರಿಬಿಚ್ಚಿ ಕುಣಿದ ದೃಶ್ಯ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕಳ್ಳಿಗೆ ಗ್ರಾಮದಲ್ಲಿ ಶನಿವಾರ ನೋಡುಗರ ಮನ ಮುದಗೊಳಿಸಿತು

ಚಿತ್ರ: ವಿಕ್ರಂ ಕಾಂತಿಕೆರೆ

ಜಮ್ಮು–ಕಾಶ್ಮೀರ: ಇಬ್ಬರು ಉಗ್ರರ ಎನ್‌ಕೌಂಟರ್

ಶ್ರೀನಗರ (ಪಿಟಿಐ): ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಭದ್ರತಾ ಪಡೆಯು ಶನಿವಾರ ಎನ್‌ಕೌಂಟರ್ ನಡೆಸಿ, ಇಬ್ಬರು ಉಗ್ರರನ್ನು ಹತ್ಯೆಗೈದಿದೆ.

ಅಖಲ್ ಅರಣ್ಯ ಪ್ರದೇಶದಲ್ಲಿ ಉಗ್ರರು ಇರುವ ಮಾಹಿತಿ ಆಧರಿಸಿ ಭದ್ರತಾ ಪಡೆಯು ಕಾರ್ಯಾಚರಣೆ ನಡೆಸಿದೆ. ಶುಕ್ರವಾರ ಸಂಜೆ ಎರಡೂ ಕಡೆಯವರ ಮಧ್ಯೆ ಪರಸ್ಪರ ಗುಂಡಿನ ಚಕಮಕಿ ನಡೆದಿದೆ. ಶನಿವಾರ ಕಾರ್ಯಾಚರಣೆಯನ್ನು ಮುಂದುವರಿಸಿದ ಭದ್ರತಾ ಪಡೆಯು ಉಗ್ರರನ್ನು ಹತ್ಯೆಗೈದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತಪಟ್ಟ ಉಗ್ರರ ಗುರುತು ಮತ್ತು ಸಂಘಟನೆಯ ಪತ್ತೆಗೆ ತನಿಖೆ ನಡೆಯುತ್ತಿದ್ದು, ಕಾರ್ಯಾಚರಣೆ ಮುಂದುವರಿದಿದೆ ಎಂದು ಅವರು ತಿಳಿಸಿದ್ದಾರೆ.

ಶಾಲಾ ನೀರಿನ ಟ್ಯಾಂಕ್‌ನೊಳಗೆ ಕೀಟನಾಶಕ: ಮೂವರ ಬಂಧನ

ಬೆಳಗಾವಿ: ಸವದತ್ತಿ ತಾಲ್ಲೂಕಿನ ಹೂಲಿಕಟ್ಟಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಕುಡಿಯುವ ನೀರಿನ ಟ್ಯಾಂಕ್‌ಗೆ ಕೀಟನಾಶಕ ಸುರಿದ ಆರೋಪದ ಮೇಲೆ ಗ್ರಾಮದ ಸಾಗರ ಪಾಟೀಲ, ನಾಗನಗೌಡ ಪಾಟೀಲ ಮತ್ತು ಕೃಷ್ಣ ಮಾದರ ಎಂಬುವರನ್ನು ಸವದತ್ತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಶ್ರೀರಾಮ ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದ ಸಾಗರ ಪಾಟೀಲ, 13 ವರ್ಷಗಳಿಂದ ಶಾಲೆಯ ಮುಖ್ಯಶಿಕ್ಷಕರು ಆಗಿರುವ ಸುಲೇಮಾನ್ ಗೋರಿನಾಯ್ಕ ಅವರ ವರ್ಗಾವಣೆ ಬಯಸಿದ್ದ. ಕೃತ್ಯದ ಮೂಲಕ ಮುಖ್ಯ ಶಿಕ್ಷಕನಿಗೆ ಕೆಟ್ಟ ಹೆಸರು ತರಲು ಬಯಸಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಸುದ್ದಿಗಾರರಿಗೆ ತಿಳಿಸಿದರು.

'ಜುಲೈ 14ರಂದು ಹೂಲಿಕಟ್ಟಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟ ಸೇವಿಸಿದ ನಂತರ, ಕೀಟನಾಶಕ ಬೆರೆಸಿದ್ದ ನೀರನ್ನು ಕುಡಿದು 11 ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಳಿಕ ಅವರು ಗುಣಮುಖರಾದರು' ಎಂದರು.

'ಮೂವರು ಆರೋಪಿಗಳು ಪರಸ್ಪರ ಪರಿಚಿತರು. ಸಾಗರ ಡಾಬಾ ನಡೆಸುತ್ತಿದ್ದು, ನಾಗನಗೌಡ ಆತನ ಸಂಬಂಧಿ. ಸಾಗರನೊಂದಿಗೆ ಈ ಹಿಂದೆ ಚಾಲಕನಾಗಿ ಕೆಲಸ ಮಾಡುತ್ತಿದ್ದ ಕೃಷ್ಣ, ಬೇರೆ ಜಾತಿ ಹುಡುಗಿಯೊಂದಿಗೆ ಸಂಬಂಧ ಹೊಂದಿದ್ದ. ಅದನ್ನು ಬಹಿರಂಗಪಡಿಸುವುದಾಗಿ ಸಾಗರ ಬೆದರಿಸಿ, ಕೃಷ್ಣ ಮೂಲಕ ಈ ಕೃತ್ಯ ಎಸಗಿದ್ದ. ಇದಕ್ಕೆ ವಿದ್ಯಾರ್ಥಿಯೊಬ್ಬನಿಗೆ ಆಮಿಷವೊಡ್ಡಿ ಬಳಸಿಕೊಳ್ಳಲಾಗಿತ್ತು' ಎಂದರು.

'ತನಿಖಾ ತಂಡಗಳು ಪ್ರಕರಣ ಪತ್ತೆಹಚ್ಚಲು ವೈಜ್ಞಾನಿಕ ಪುರಾವೆ ಬಳಸಿದವು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದವು. ಘಟನೆ ವೇಳೆ ಶಾಲೆ ಆವರಣದೊಳಗೆ ಹೊರಗಿನವರು ಯಾರೂ ಬಂದಿರಲಿಲ್ಲ. ಕೃತ್ಯಕ್ಕೆ ವಿದ್ಯಾರ್ಥಿಯೊಬ್ಬನನ್ನು ಬಳಸಿಕೊಂಡಿದ್ದು ದೃಢಪಟ್ಟಿತು' ಎಂದರು.

ಪರಿಶಿಷ್ಟರ ಮೇಲೆ 975 ದೌರ್ಜನ್ಯ ಪ್ರಕರಣ • ಮಹಿಳೆಯರು, ಮಕ್ಕಳ ಮೇಲಿನ ದೌರ್ಜನ್ಯಗಳೂ ಹೆಚ್ಚಳ

ಆರು ತಿಂಗಳಲ್ಲಿ 526 ಕೊಲೆ

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲಿ 2025ರ ಜನವರಿಯಿಂದ ಜೂನ್ ಅಂತ್ಯದ ವರೆಗೆ 526 ಕೊಲೆಗಳು ನಡೆದಿದ್ದು, ವಿವಿಧ ಪೊಲೀಸ್ ಠಾಣೆಗಳಲ್ಲಿ 6,952 ಹಲ್ಲೆ ಪ್ರಕರಣಗಳು ದಾಖಲಾಗಿವೆ.

ಇದೇ ಅವಧಿಯಲ್ಲಿ ಗಲಭೆ ಪ್ರಕರಣಗಳು ಕಡಿಮೆಯಾಗಿದ್ದರೂ ಗುಂಪು ಘರ್ಷಣೆ, ಮಹಿಳೆಯರು ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಳವಾಗಿವೆ.

ಜಮೀನಿಗೆ ಸಂಬಂಧಿಸಿದ ವ್ಯಾಜ್ಯ, ಹಳೇ ದ್ವೇಷ, ಶೀಲ ಶಂಕೆ, ಎರಡು ಗುಂಪುಗಳ ನಡುವೆ ಘರ್ಷಣೆ, ಪ್ರೇಮ ವೈಫಲ್ಯ, ಪ್ರತಿಷ್ಠೆಗಾಗಿ ರೌಡಿಗಳ ನಡುವೆ ಕಾಳಗ, ಚಿನ್ನಾಭರಣ ಹಾಗೂ ಇತರೆ ಕಾರಣಗಳಿಗೆ ಕೊಲೆಗಳು ನಡೆದಿವೆ. ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ ಧರ್ಮದ್ವೇಷದ ಕಾರಣಕ್ಕೆ ಕೊಲೆಗಳು ನಡೆದಿವೆ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

> **ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಹಾಗೂ ಸಾರ್ವಜನಿಕರ ಸಮಸ್ಯೆಯನ್ನು ಖುದ್ದು ಆಲಿಸಲು ದೇಶದಲ್ಲೇ ಮೊದಲ ಬಾರಿಗೆ ರಾಜ್ಯದಲ್ಲಿ 'ಮನೆ ಮನೆಗೆ ಪೊಲೀಸ್' ಯೋಜನೆ ಜಾರಿಗೆ ತರಲಾಗಿದೆ**
> **ಜಿ.ಪರಮೇಶ್ವರ,** ಗೃಹ ಸಚಿವ

2022ರಲ್ಲಿ ಜನವರಿಯಿಂದ ಜೂನ್ ವರೆಗೆ 715 ಕೊಲೆಗಳು ನಡೆದಿದ್ದವು. ಇದೇ ಅವಧಿಯಲ್ಲಿ 2023ರಲ್ಲಿ 650 ಕೊಲೆಗಳು ನಡೆದಿದ್ದವು. ಈ ವರ್ಷ 526 ಕೊಲೆಗಳು ನಡೆದಿದ್ದು, 181 ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿರುವ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಎರಡು ಪ್ರಕರಣಗಳಲ್ಲಿ ಮಾತ್ರವೇ ಅಪರಾಧಿಗಳಿಗೆ ಶಿಕ್ಷೆಯಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

6

2025ರ ಜನವರಿ 1ರಿಂದ ಜೂನ್ 30ರ ವರೆಗೆ ದಾಖಲಾದ ಪ್ರಕರಣಗಳು

ಕೃತ್ಯ	ದಾಖಲಾದ ಪ್ರಕರಣ	ದೋಷಾರೋಪ ಪಟ್ಟಿ	ಶಿಕ್ಷೆಯಾದ ಪ್ರಕರಣ
ಕೊಲೆ	526	181	2
ಅತ್ಯಾಚಾರ	340	99	1
ಹಲ್ಲೆ	6,952	1,851	0
ಗುಂಪು ಘರ್ಷಣೆ	1,557	216	0
ಗಲಭೆ	3	1	0
ಎನ್‌ಡಿಪಿಎಸ್	2,102	1,364	179
ಸಾಮಾಜಿಕ ಮಾಧ್ಯಮ ಪ್ರಕರಣಗಳು	384	82	12
ಸಂಘಟಿತ ಅಪರಾಧಗಳು	5,200	3,078	285
ಎಸ್‌ಸಿ, ಎಸ್‌ಟಿ ಸಮುದಾಯದವರ ಮೇಲಿನ ದೌರ್ಜನ್ಯ	975	396	26
ದ್ವೇಷ ಭಾಷಣ	42	7	1
ಮಹಿಳೆಯರು, ಮಕ್ಕಳ ಮೇಲಿನ ದೌರ್ಜನ್ಯ	6,859	2,010	2

ಸದ್ದು ಮಾಡಿದ್ದ ಕೊಲೆ ಪ್ರಕರಣಗಳು

- **ವಿಜಯಪುರ:** ಫೆ.11ರಂದು ಭೀಮಾ ತೀರದ ಕುಖ್ಯಾತ ರೌಡಿ ಚಂದಪ್ಪ ಹರಿಜನನ ಸಹಚರ ಬಾಗಪ್ಪ ಹರಿಜನ ಕೊಲೆ
- **ಬೆಂಗಳೂರು:** ಮಾರ್ಚ್ 27ರಂದು ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ಕಮ್ಮನಹಳ್ಳಿಯ ಮನೆಯೊಂದರಲ್ಲಿ ಪತ್ನಿ ಕೊಂದು ಮೃತದೇಹವನ್ನು ಟ್ರಾಲಿ ಬ್ಯಾಗ್‌ನಲ್ಲಿ ತುಂಬಿಟ್ಟಿದ್ದ ಪತಿ
- **ದಕ್ಷಿಣ ಕನ್ನಡ:** ಮೇ 1ರಂದು ರೌಡಿ ಶೀಟರ್ ಸುಹಾಸ್ ಶೆಟ್ಟಿ ಹತ್ಯೆ
- **ಬೆಂಗಳೂರು:** ಜುಲೈ 15ರಂದು ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ

ಮುಂಗಾರಿನ ಆಮಂತ್ರಣ ಬೈಕ್ ಚಾರಣ

ಬೈಕ್ ಸವಾರಿ ಅನುಭವ ಪಡೆಯಬಯಸುವ ಬೈಕರ್‌ಗಳು ಮುಂಗಾರು ಋತುವನ್ನೇ ಹೆಚ್ಚಾಗಿ ಇಷ್ಟಪಡುತ್ತಾರೆ. ಪ್ರಕೃತಿಯ ಸೊಬಗನ್ನು ಸವಿಯುವುದರ ಜೊತೆಗೆ ಸಾಹಸಗಳಿಗೆ ಮೈಯೊಡ್ಡುವುದು ಯುವಪೀಳಿಗೆಗೆ ಅಚ್ಚುಮೆಚ್ಚು. ಸಾಗುವ ಹಾದಿ, ಸ್ಥಳ, ಜನರನ್ನು ಆಪ್ತವಾಗಿಸಿಕೊಳ್ಳುತ್ತ, ಅನುಭವಗಳನ್ನು ಜೋಳಿಗೆಗೆ ತುಂಬಿಕೊಳ್ಳುತ್ತ, ಬದುಕಿನಲ್ಲಿ ಉತ್ಸಾಹ ತುಂಬಿಕೊಳ್ಳಲು ಇವರು ಬಯಸುತ್ತಾರೆ.

• ಇ.ಎಸ್. ಸುಧೀಂದ್ರ ಪ್ರಸಾದ್

ಮಳೆ ಹನಿಗಳು ನೆಲವನ್ನು ಸೋಕಿದ ಕೆಲಕಾಲದ ಬಳಿಕ ಎಲ್ಲೆಡೆ ಹಸಿರು ಉಕ್ಕುತ್ತದೆ. ಬೆಟ್ಟಗಳಿಗೆ ಮುತ್ತಿಕ್ಕುವ ಮೋಡಗಳು, ಮೈಯನ್ನು ನೇವರಿಸುವ ತಂಪುಗಾಳಿ, ಸುರಿಯುವ ಸೋನೆ ಮಳೆ... ಬೈಕ್ ಚಾರಣಿಗರನ್ನು ಮನೆಯಲ್ಲಿ ಕೂತಿರಲು ಬಿಡುವುದಿಲ್ಲ. ಪರ್ವತ ಪ್ರದೇಶಗಳಲ್ಲಿನ ಹಸಿರು ಹೆದ್ದಾರಿಯ ಚಾರಣ ಅವರನ್ನು ಮಳೆ ಬೀಳುತ್ತಿದ್ದಂತೆ ಕೈಬೀಸಿ ಕರೆಯುತ್ತದೆ. ವೈವಿಧ್ಯಮಯ ಅನುಭವ ಪಡೆಯಲು ಹೊಸ ಸಾಹಸಕ್ಕೆ ಅಣಿಯಾಗುವಂತೆ ಪ್ರೇರೇಪಿಸುತ್ತದೆ. ಬೈಕ್ ಏರಿ ಹೊರಟ ಚಾರಣಿಗರಿಗೆ ಮಳೆಗಾಲದ ಪರ್ವತಗಳ, ಬೆಟ್ಟಗುಡ್ಡಗಳ ಪ್ರವಾಸ ಭಿನ್ನ ಲೋಕವನ್ನು ತೆರೆದಿಡುತ್ತದೆ.

ಮಳೆ ಸುರಿಯುವ ನಾದದ ಜೊತೆಗೆ ಎಲ್ಲೆಡೆ ಕಾಣುವ ಹಸಿರಿನಿಂದ ಭೂಮಿಯ ಚಿತ್ರಣ ಬದಲಾಗಿರುತ್ತದೆ. ಪಶ್ಚಿಮ ಘಟ್ಟದಿಂದ ಹಿಡಿದು ಪೂರ್ವದ ಪರ್ವತಗಳವರೆಗೆ, ಹಿಮಾಲಯದಿಂದ ಡೆಕ್ಕನ್ ಪ್ರಸ್ಥಭೂಮಿಯವರೆಗೂ ಹಸಿರು. ಈ ಹಸಿರಿನಲ್ಲೂ ವೈವಿಧ್ಯವಿದೆ. ತಿಳಿ ಹಸಿರು, ಗಿಣಿ ಹಸಿರು, ಗಾಢ ನೀಲಿಯಿಂದ ಕೂಡಿದ ಹಸಿರು ಜೀವಕ್ಕೆ ಹೊಸ ಉಸಿರು ಕೊಡುತ್ತದೆ. ಹಲವು ಕೆಲಸಗಳಲ್ಲಿ ಹೈರಾಣಾದ ಜೀವಕ್ಕೆ ಹೊಸ ಚೈತನ್ಯ, ಹೊಸ ಹುರುಪು ತುಂಬುತ್ತದೆ. ಹಾಗಾಗಿ ಚಾರಣವಾಗಲಿ, ಬೈಕ್ ಸವಾರಿಯಾಗಲಿ, ಬೀಸುವ ತಣ್ಣನೆ ಗಾಳಿಗೆ, ಮಳೆ ಹನಿಗೆ ಮೈಯೊಡ್ಡಿ ಸಾಗುವಾಗಿನ ಅದರ ರೋಮಾಂಚನ ಬೇರೆದೇ ರೀತಿಯದು.

ಮಳೆಗಾಲದಲ್ಲಿ ಬೈಕ್ ಸವಾರಿ ಎಂದರೆ ಮಳೆಗೆ ಮೈಯೊಡ್ಡುವುದಷ್ಟೇ ಅಲ್ಲ; ಹಲವು ಅನಿರೀಕ್ಷಿತ, ಅನಪೇಕ್ಷಿತ ಸನ್ನಿವೇಶಗಳಿಗೆ ಎದುರಾಗುವುದು ಅನಿವಾರ್ಯ. ಹಸಿರು ಹೊದ್ದ ಬೆಟ್ಟಗುಡ್ಡಗಳ ಜೊತೆಗೆ ನೊರೆ ಉಕ್ಕಿಸಿ ಹರಿಯುವ ಜಲಪಾತಗಳು, ಕೆಸರು ತುಂಬಿದ ರಸ್ತೆಗಳು, ಮನಸ್ಸಿಗೆ ಆಹ್ಲಾದ ನೀಡುವ ಜುಳುಜುಳು ಎನ್ನುವ ತೊರೆಗಳು, ದಾರಿಯ ನಡುವೆ ಕಪ್ಪು ಹಂಚಿನ ಮಾಡಿನ ಮನೆಗಳು, ನೀರು ತುಂಬಿದ ಗದ್ದೆಗಳು ಪ್ರಯಾಣದುದ್ದಕ್ಕೂ ಎದುರಾಗುತ್ತವೆ. ನೆನಪಿನಲ್ಲಿ ದಾಖಲಾಗುವ ಇಂತಹ ಚಿತ್ರಗಳು ಸವಾರರ ದಾರಿ ಸಾಗುವಾಗಿನ ಆಯಾಸವನ್ನು ಕಡಿಮೆ ಮಾಡುತ್ತವೆ; ಪ್ರಯಾಣದ ಹುರುಪನ್ನು ಹೆಚ್ಚಿಸುತ್ತವೆ.

ಬೈಕರ್ ಗ್ರೂಪ್‌ಗಳು ಈಗ ನಗರ, ಪಟ್ಟಣ ಎನ್ನದೆ ಎಲ್ಲೆಡೆ ಹುಟ್ಟಿಕೊಂಡಿವೆ. ಮುಂಜಾನೆ ರೈಡ್‌ನಿಂದ ಹಿಡಿದು ಮುಂಗಾರು ರೈಡ್‌ನವರೆಗೂ ಇವರು ಅನ್ವೇಷಣೆ ಮಾಡದ ದಾರಿಗಳಿಲ್ಲ. ನೋಡದೇ ಇರುವ ಚಂದದ ತಾಣಗಳಿಲ್ಲ. ಸಾಮಾಜಿಕ ಮಾಧ್ಯಮಗಳ ಭರಾಟೆಯ ಈ ದಿನಗಳಲ್ಲಿ ಇವರಲ್ಲಿ ಪ್ರತಿಯೊಬ್ಬರದ್ದೂ ಒಂದೊಂದು ಪ್ರವಾಸ ಕಥನ. ಪ್ರಕೃತಿಯ ಮೋಹಕ ದೃಶ್ಯಗಳನ್ನು ಕಂಡ ಯಾರಿಗಾದರೂ ಬೈಕ್ ಏರಿ ಹೊರಟುಬಿಡಬೇಕೆಂಬ ಹಂಬಲ ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ.

ಮಲೆನಾಡಿನ ಭಾಗದಲ್ಲಿನ ಪಯಣ ಕ್ಷಣಕ್ಷಣಕ್ಕೂ ವಿಸ್ಮಯಕಾರಿಯಾದ ಅನುಭವ. ಬೈಕ್‌ನಲ್ಲಿ ಸಾಗುವಾಗ ದಾರಿಯ ಪ್ರತಿ ತಿರುವೂ ಬದುಕಿನ ತಿರುವಿಗೆ ರೂಪಕವಾಗಿ ನಿಲ್ಲುತ್ತದೆ. ಅದು ನಮ್ಮ ಹಲವು ಕತೆಗಳನ್ನು ನೆನಪಿಸುತ್ತದೆ; ಬದುಕಿನ ಮತ್ತೊಂದು ನಿರ್ಧಾರಕ್ಕೆ ಪ್ರೇರಣೆ ನೀಡುತ್ತದೆ. ಮಳೆಗಾಲದಲ್ಲಿ ವಿಶಿಷ್ಟವಾದ ಪರಿಮಳ ಎಲ್ಲೆಡೆ ಹರಡಿರುತ್ತದೆ. ಅದು ಯಾವುದೋ ಕಾಡು ಹೂವಿನ ಪರಿಮಳವಾಗಿರಬಹುದು ಅಥವಾ ಮಣ್ಣಿನ ಸುವಾಸನೆಯೂ ಇರಬಹುದು. ಅನಿರೀಕ್ಷಿತವಾಗಿ ಕಾಣಿಸುವ ದಾರಿ ಪಕ್ಕದ ಚಹಾದ ಅಂಗಡಿಯ ಒಲೆಯಿಂದ ಎದ್ದ ಹೊಗೆಯೂ ಆಗಿರಬಹುದು. ಇಂತಹ ಅಂಗಡಿಗಳಲ್ಲಿ ಚಹಾ ಕುಡಿದು ಮೈ ಮನಸ್ಸುಗಳನ್ನು ಹಗುರವಾಗಿಸಿಕೊಂಡು ಅಲ್ಲಿಂದ ಎದ್ದರೆ ಮುಂದಿನ ದಾರಿ ಖುಷಿಯಾಗಿ ತೆರೆದುಕೊಳ್ಳುತ್ತದೆ.

ಸಿಹಿ, ಕಹಿ ಅನುಭವ ಇದ್ದದ್ದೇ...

ಪ್ರತಿ ಬೈಕ್ ರೈಡ್‌ನಲ್ಲಿ ಶಿಸ್ತು ಮತ್ತು ಸಮಯ ಪಾಲನೆ ಮುಖ್ಯ. ನಾನು ಮುಂಜಾನೆ 5.30ಕ್ಕೆ ಏಳುತ್ತೇನೆ. ಮಂಜಿನಿಂದ ಆವರಿಸಿದ ಸಾಲು ಮರಗಳ ನಡುವೆ ಸಾಗುವುದು ಮನಸ್ಸಿಗೆ ಶಾಂತಿ, ಆಹ್ಲಾದ ನೀಡುತ್ತದೆ. ಹೀಗೆ ಹೊರಡುವ ಮುನ್ನ ನನ್ನ ಕಾಲುಗಳು, ಬೆನ್ನು ಮತ್ತು ಕೈಗಳು ಯಾವುದೇ ನೋವಿಲ್ಲದೆ ಆರಾಮವಾಗಿವೆಯೇ ಎಂಬುದನ್ನು ಮೊದಲು ಪರೀಕ್ಷಿಸಿಕೊಳ್ಳುತ್ತೇನೆ. ಅಲ್ಪ ಉಪಹಾರದೊಂದಿಗೆ ರೈಡಿಂಗ್ ಆರಂಭಗೊಳ್ಳುತ್ತದೆ.

ಮುಂಗಾರಿನ ಪ್ರಯಾಣದಲ್ಲಿ ಹಲವು ಸುಂದರ ಹಾಗೂ ಕಹಿ ಘಟನೆಗಳೂ ದಾಖಲಾಗಿವೆ. ಎಷ್ಟೇ ಎಚ್ಚರ ವಹಿಸಿದರೂ ಒಮ್ಮೆ ಬೈಕ್ ರಸ್ತೆ ಬದಿಗೆ ಜಾರಿಯೇಬಿಟ್ಟಿತು. ಕೆಳಗೆ ಬಿದ್ದ ನನಗೆ ಸಾಕಷ್ಟು ಪೆಟ್ಟಾಯಿತು. ಮೊಬೈಲ್ ಕೂಡಾ ಕೆಸರಿಗೆ ಬಿದ್ದ ಪರಿಣಾಮ, ಅಲ್ಲಿಯವರೆಗೂ ದಾಖಲಾಗಿದ್ದ ಎಲ್ಲಾ ಚಿತ್ರಗಳೂ ನಾಶವಾದವು. ಹೀಗಾಗಿ ಮುಂಗಾರು ಎಷ್ಟು ಸುಂದರವೋ, ಅಷ್ಟೇ ಅಪಾಯಕಾರಿಯೂ ಹೌದು ಎನ್ನುವುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು.

ರೋಶಿನಿ ಮೀರಸ್ಕರ್, ಐಟಿ ಉದ್ಯೋಗಿ, ಬೆಂಗಳೂರು

ಪ್ರಯಾಣದ ವೇಳೆ ಹುಲಿ, ಆನೆಗಳು ಎದುರಾಗಬಹುದು ಎಚ್ಚರ!

ಮುಂಗಾರಿನಲ್ಲಿ ಮಳೆಕಾಡಿನಲ್ಲಿ ಬೈಕ್ ಪ್ರವಾಸ ನಡೆಸಬೇಕೆಂದರೆ ಕಾಡಷ್ಟೇ ಎಂದುಕೊಳ್ಳುವುದು ತಪ್ಪು. ಅಲ್ಲಿ ಹುಲಿ, ಆನೆಗಳು ಎದುರಾಗಬಹುದು. ಹೀಗೇ ಒಮ್ಮೆ ಚಲಕುಡಿಯಿಂದ ವಾಲ್‌ಪರೈಗೆ ಪ್ರಯಾಣಿಸುತ್ತಿದ್ದಾಗ, ಬಾಲಕನೊಬ್ಬನನ್ನು ಹುಲಿ ಎಳೆದೊಯ್ದಿದ್ದು ದೊಡ್ಡ ಸುದ್ದಿಯಾಗಿತ್ತು. ಆನೆಗಳೂ ಅಲ್ಲಲ್ಲಿ ಎದುರಾದವು. ಇವುಗಳಿಂದ ಅಂತರ ಕಾಯ್ದುಕೊಳ್ಳುವುದು ತಿಳಿದಿಲ್ಲವೆಂದರೆ, ಅಪಾಯಕ್ಕೆ ಆಹ್ವಾನ ನೀಡಿದಂತೆ.

ಮಳೆಗಾಲದಲ್ಲಿ ಬೈಕ್ ಸವಾರಿ ಅಪಾಯವೆಂದು ಹೆದರಬೇಕಿಲ್ಲ. ಮುಖ್ಯವಾಗಿ ಪ್ರಕೃತಿಯನ್ನು ಆಸ್ವಾದಿಸುವುದು ಈ ಸವಾರಿಯ ಮುಖ್ಯ ಉದ್ದೇಶ. ನಾನು ಈವರೆಗೂ ಪ್ರವಾಸ ಮಾಡಿದ್ದರಲ್ಲಿ 'ಬಾಹುಬಲಿ' ಸಿನಿಮಾದಲ್ಲಿ ಚಿತ್ರೀಕರಣಗೊಂಡಿರುವ ಮಿನಿ ನಯಾನಗರ ಎಂದೇ ಕರೆಯುವ 'ಆತೀರಪಿಳ್ಳಿ ಜಲಪಾತ'ದ ಸೊಬಗು ಎಷ್ಟು ವರ್ಣಿಸಿದರೂ ಕಡಿಮೆ.

ಪ್ರತಿಯೊಂದು ಪ್ರಯಾಣದಲ್ಲೂ ಹೊಸ ಅನುಭವಗಳು ಸೇರಿಕೊಂಡಿವೆ. ನಾನು ಸುಮಾರು 34 ಬೈಕರ್ ಗುಂಪುಗಳಲ್ಲಿದ್ದೇನೆ. ಸುಮಾರು 600ಕ್ಕೂ ಹೆಚ್ಚು ಮಹಿಳಾ ಸವಾರರು ನನ್ನ ಗೆಳತಿಯರು. ಅವರ ಜತೆಗೂಡಿ ಪ್ರಕೃತಿಗೆ ಮೈಯೊಡ್ಡುವುದು ಒಂದು ರೋಮಾಂಚನ.

ರೂಬಿ, ಉದ್ಯಮಿ ಹಾಗೂ ಬೈಕ್ ರೈಡರ್

ಬೈಕ್ ಸವಾರರಿಗೆ ಕುದುರೆಮುಖ ಪ್ರಯಾಣ ಬಹಳ ಅಚ್ಚುಮೆಚ್ಚು...

ರೂಪಕವಾಗುವ ಮಳೆ ಹಾದಿ

ಹೆಲ್ಮೆಟ್‌ನ ಗ್ಲಾಸ್ ಮೇಲೆ ಮುತ್ತುಗಳಂತೆ ಬಿದ್ದು, ದಾರದಂತೆ ಹರಿಯುವ ಹಾಗೂ ಬೈಕ್‌ನ ಟ್ಯಾಂಕ್ ಮೇಲೆ ಬಿದ್ದು ಸಿಡಿಯುವ ಮಳೆಯ ಹನಿಗಳು ಕವಿಯಾಗುವಂತೆ ಪ್ರೇರೇಪಿಸುತ್ತವೆ. ಸಿನಿಮಾಗಳ ಮಳೆ ಹಾಡುಗಳು ತಾವಾಗಿಯೇ ತುಟಿಮೀರಿ ಬರುತ್ತವೆ. ಬೈಕಿನ ಹಿಂದೆ ಕೂತ ಜೊತೆಗಾರ ಇಲ್ಲವೇ ಜೊತೆಗಾತಿ ಆ ಹಾಡಿಗೆ ತಮ್ಮದೇ ದನಿಯನ್ನು ಸೇರಿಸುತ್ತಾರೆ. ಇಲ್ಲವೇ ಹೊಸದೊಂದು ಹಾಡು ಹಿಂದಿನಿಂದ ಬರುತ್ತದೆ.

ಇದು ಒಂದು ಕಡೆ ಮಧುರವಾದ, ಖುಷಿಯಾದ ಪಯಣ ಎನಿಸಿದರೂ ಸಾಹಸಕ್ಕೆ ಆಹ್ವಾನಿಸುವ ಪಯಣವೂ ಹೌದು. ಮುಂದಾಗುವುದನ್ನು ಮೊದಲಿಗೇ ನಿರೀಕ್ಷಿಸುವಂತಿಲ್ಲವಾದರೂ ಅದಕ್ಕೆ ತಕ್ಕುದಾದ ಸಿದ್ಧತೆ ಮತ್ತು ಮುನ್ನೆಚ್ಚರಿಕೆ ಮಾಹಿತಿ ಪಡೆದು ಮುಂದುವರೆಯುವುದು ಉತ್ತಮ. ಇಲ್ಲದಿದ್ದರೆ ಅವಘಡಕ್ಕೆ ಬೈಕ್ ಸವಾರರು ಆಹ್ವಾನ ಕೊಟ್ಟಂತಾಗುತ್ತದೆ. ಹೀಗಾಗಿ, ಇಂತಹ ಪ್ರವಾಸಗಳಲ್ಲಿ ಪ್ರತಿಯೊಬ್ಬ ಬೈಕ್ ಸವಾರನದ್ದು ಒಂದೊಂದು ಅನುಭವ ಕಥನ...

ಪಶ್ಚಿಮ ಘಟ್ಟದಲ್ಲಿ ಕರ್ನಾಟಕ, ಕೇರಳ, ತಮಿಳುನಾಡಿನ ಸಾಕಷ್ಟು ಪ್ರದೇಶಗಳು ಮುಂಗಾರಿನಲ್ಲಿ ಬಗೆಬಗೆಯ ಅನುಭವ ನೀಡುವಂತಿವೆ. ತೀರ್ಥಹಳ್ಳಿ, ಮೈಸೂರು, ಮಡಿಕೇರಿ, ಕುಶಾಲನಗರ ರಸ್ತೆಗಳು, ಶಿರಾಡಿ ಹಾಗೂ ಚಾರ್ಮಾಡಿ ಘಾಟ್ ಮುಂಗಾರಿನಲ್ಲಿ ಅಪಾಯಕಾರಿಯಾದರೂ ಹೆಚ್ಚು ಖುಷಿ ನೀಡುವಂತದ್ದು. ಮಡಿಕೇರಿ, ಚಿಕ್ಕಮಗಳೂರಿನ ಕಾಫಿ ತೋಟಗಳು, ಪರ್ವತಕ್ಕೆ ಮುತ್ತಿಕ್ಕುವ ಮೋಡಗಳು ಹಾಗೂ ಹೆಜ್ಜೆ ಹೆಜ್ಜೆಗೂ ಎದುರಾಗುವ ಸವಾಲುಗಳು ಕೊಡುವ ಖುಷಿಗೆ ಕೊನೆ ಮೊದಲಿಲ್ಲ.

ಕೇರಳದ ವಯನಾಡ್‌ನಿಂದ ಮುನ್ನಾರ್ ಮಾರ್ಗದ ಹಸಿರು ರಾಶಿ ತುಂಬಿದ ಕಣಿವೆಗಳು, ಮೆಣಸಿನ ತೋಟಗಳು ಮತ್ತು ಮಂಜು ತುಂಬಿದ ಟೀ ತೋಟಗಳು, ವಾಲ್‌ಪರೈ, ಆತೀರಪಿಳ್ಳಿ ಜಲಪಾತ, ವಯನಾಡ್, ವಾಗಮಾನ್, ಕುರುವಾ ದ್ವೀಪ, ಬಾಣಾಸುರ ಅಣೆಕಟ್ಟು ಹಾಗೂ ತಮಿಳುನಾಡಿನ ದಟ್ಟ ಕಾಡುಗಳು, ಅಲ್ಲಲ್ಲಿ ರಸ್ತೆ ದಾಟುವ ಆನೆಯ ಹಿಂಡುಗಳನ್ನು ಸುರಕ್ಷಿತ ಅಂತರದಿಂದ ನೋಡುವುದೇ ಸೊಬಗು.

ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರದ ಕೊಂಕಣ ಪ್ರದೇಶದ ರಸ್ತೆಯಲ್ಲಿ ಮುಂಗಾರಿನಲ್ಲಿ ಬೈಕ್‌ನಲ್ಲಿ ಸಾಗುವುದೂ ರೋಮಾಂಚನಕಾರಿ ಅನುಭವ. ಸಾಲು ಸಾಲು ತೆಂಗಿನಮರಗಳು, ಸಮುದ್ರ ತೀರ, ಹಿನ್ನೀರ ಬೆಡಗು, ಮೀನು ಹಿಡಿಯುವ ಚಿತ್ರಣ ಎಲ್ಲವೂ ಮನಸ್ಸಿಗೆ ಆಹ್ಲಾದ ನೀಡುವಂತದ್ದು. ಮಹಾರಾಷ್ಟ್ರದ ಲೋನಾವಾಲಾ, ಮಹಾಬಲೇಶ್ವರದ ಘಟ್ಟ ಪ್ರದೇಶದ ತಿರುವುಗಳಲ್ಲಿ ಸಾಗುವುದು ಮತ್ತೊಂದು ಸಾಹಸದ ಅನುಭವ. ಮೇಘಾಲಯದ ಶಿಲ್ಲಾಂಗ್‌ನಿಂದ ಚಿರಾಪುಂಜಿ ನಡುವಿನ ಮಾರ್ಗದಲ್ಲಿ ಮೋಡಗಳ ತುಣುಕುಗಳು ಸಾಗುವುದು ಮತ್ತೊಂದು ಅನುಭವ. ಹೆಜ್ಜೆ ಹೆಜ್ಜೆಗೂ ಸಿಗುವ ಭೋರ್ಗರೆವ ಜಲಪಾತಗಳು, ಎಡೆಬಿಡದೆ ಸುರಿಯುವ ಮಳೆಯಲ್ಲಿ ಸಾಗುವ ಪ್ರಯಾಣ ಕೊಡುವ ಅನುಭವವೇ ಬೇರೆ ಎಂಬುದು ಅಲ್ಲಿ ಓಡಾಡಿರುವ ಬಹಳಷ್ಟು ಸವಾರರ ಅನಿಸಿಕೆ.

ಇದರಂತೆಯೇ ಸಿಕ್ಕಿಂನಿಂದ ಬಂಗಾಳದ ಉತ್ತರ ಭಾಗ, ಸಿಲಿಗುರಿಯಿಂದ ಜುಲುಕ್ ಅಥವಾ ಗಾಂಗ್‌ಟಕ್ ಮಾರ್ಗದ ಟೀ ತೋಟದ ರಮಣೀಯ ದೃಶ್ಯವನ್ನು ಒಮ್ಮೆಯಾದರೂ ಕಣ್ತುಂಬಿಕೊಳ್ಳಬೇಕು. ಮಳೆಗಾಲದಲ್ಲಿ ಬೈಕ್ ಸವಾರರದು ಕೇವಲ ಸೌಂದರ್ಯ ಕಣ್ತುಂಬಿಕೊಳ್ಳುವ ಅನುಭವಗಳ ಪಯಣವಷ್ಟೇ ಅಲ್ಲ. ಬದಲಿಗೆ ತಮ್ಮ ಕುಶಲತೆ, ಜಾಗೃತಿ ಹಾಗೂ ಪ್ರಕೃತಿಯನ್ನು ನಾವೆಷ್ಟು ಗೌರವಿಸುತ್ತೇವೆ, ಆನಂದಿಸುತ್ತೇವೆ, ಪ್ರೀತಿಸುತ್ತೇವೆ ಎಂಬುವುದನ್ನು ತೋರ್ಪಡಿಸುವ ಪಯಣವೂ ಹೌದು.

3ನೇ ಪುಟಕ್ಕೆ...

ಇದು ಪ್ಲಾಸ್ಟಿಕ್ ರಸ್ತೆ!

• ಸಂಧ್ಯಾ ಹೆಗಡೆ

ಗಾಳಿಯಲ್ಲಿ ತೂರಾಡುತ್ತ ಎಲ್ಲಿಂದಲೋ ಬಂದು ರಸ್ತೆ ಅಂಚಿನಲ್ಲಿ ಅಪ್ಪಚ್ಚಿಯಾಗಿ ಬಿದ್ದಿದ್ದ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಅನ್ನು ಪರಿಸರ ಪ್ರೇಮಿಯೊಬ್ಬ ತೆಗೆದು ಸುರುಳಿ ಸುತ್ತುತ್ತ ಸಾಗುತ್ತಾನೆ. ಮುಂದೆ ಒಂದೊಂದೇ ಕ್ಯಾರಿಬ್ಯಾಗ್ ಸೇರುತ್ತ ಸೇರುತ್ತ ಆ ಸುರುಳಿ ದೊಡ್ಡ ಉಂಡೆಯಾಗಿ, ತಳ್ಳಲಾರದಷ್ಟು ಭಾರವಾಗುತ್ತದೆ. ಅದು ಬೃಹದಾಕಾರವಾಗಿ ಬೆಳೆದು ಆತನನ್ನೇ ನುಂಗುವ ಬ್ರಹ್ಮರಾಕ್ಷಸನ ರೂಪ ತಾಳುತ್ತದೆ...

ಏಕ ಬಳಕೆಯ ಪ್ಲಾಸ್ಟಿಕ್‌ನ ದುಷ್ಪರಿಣಾಮಗಳ ಗಾಢತೆಯನ್ನು ಢಾಳಾಗಿ ಬಿಂಬಿಸಿದ್ದ ಈ ರೀಲ್‌ವೊಂದು ಒಂದೆರಡು ವರ್ಷಗಳ ಹಿಂದೆ ಹಲವರ ಮನಕಲಕಿದ್ದು ಸುಳ್ಳಲ್ಲ. ಬಹಳಷ್ಟು ಮಂದಿ ಇದಕ್ಕೆ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಜಾಗ ಕೊಟ್ಟಿದ್ದರು.

ಪ್ರತಿನಿತ್ಯ ಉತ್ಪತ್ತಿಯಾಗುವ ಕಸ, ಅದರಲ್ಲೂ ಮುಖ್ಯವಾಗಿ ಜೀವ ಸಂಕುಲಕ್ಕೆ ಕಂಟಕಪ್ರಾಯವಾದ ಏಕ ಬಳಕೆಯ ಪ್ಲಾಸ್ಟಿಕ್‌ನ ವಿಲೇವಾರಿ ಆಡಳಿತ ವ್ಯವಸ್ಥೆಗೆ ದೊಡ್ಡ ಸವಾಲಾಗಿದೆ. ಡಂಪಿಂಗ್ ಯಾರ್ಡ್‌ಗಳು ಪ್ಲಾಸ್ಟಿಕ್ ಗುಡ್ಡಗಳಾಗಿ ಪರಿವರ್ತನೆಯಾಗುತ್ತಿವೆ. ಪ್ಲಾಸ್ಟಿಕ್ ಬಾಟಲಿಗಳು, ಕುರುಕಲು ತಿಂಡಿಗಳ ಕವರ್‌ಗಳು ಜಲಮೂಲ ಸೇರಿ ಮಾಲಿನ್ಯ ಸೃಷ್ಟಿಸುತ್ತಿವೆ. ಯಾವ ನಗರವೂ ಈ ಸಮಸ್ಯೆಯಿಂದ ಹೊರತಾಗಿಲ್ಲ.

ಸಂಕೀರ್ಣವಾದ ಈ ಪ್ಲಾಸ್ಟಿಕ್ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಪುಟ್ಟ ಪ್ರಯತ್ನವೊಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿದೆ.

ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿಗಳು ಮನೆ–ಮನೆಗಳಿಂದ ಸಂಗ್ರಹಿಸಿದ ಕಸದಲ್ಲಿ ಹೆಕ್ಕಿ ತೆಗೆದ ಸುಮಾರು 170 ಟನ್ ಪ್ಲಾಸ್ಟಿಕ್ ಬಳಸಿ ಕರಾವಳಿಯಲ್ಲಿ ಅಂದದ ರಸ್ತೆ ನಿರ್ಮಾಣ ಮಾಡಲಾಗಿದೆ.

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತಲಪಾಡಿಯಿಂದ ನಂತೂರುವರೆಗೆ, ಸುರತ್ಕಲ್‌ನಿಂದ ಉಡುಪಿ ಜಿಲ್ಲೆಯ ಸಾಸ್ತಾನದವರೆಗೆ ಕಡಿಮೆ ಸಾಂದ್ರತೆಯ ಪಾಲಿಥಿಲೀನ್ (ಎಲ್‌ಡಿಪಿಇ) ಬಳಸಿ ಒಟ್ಟು 47 ಕಿ.ಮೀ ಸರ್ವಿಸ್ ರಸ್ತೆ, 20 ಕಿ.ಮೀ ಮುಖ್ಯ ರಸ್ತೆ ನಿರ್ಮಿಸಲಾಗಿದೆ. ಪ್ಲಾಸ್ಟಿಕ್ ಪವಡಿಸಿದ ರಸ್ತೆಯಲ್ಲಿ ವಾಹನಗಳು ಸಂಚರಿಸುತ್ತಿವೆ.

ಮಂಗಳೂರು ಹೊರವಲಯದಲ್ಲಿ ನಿರ್ಮಿಸಿರುವ ಪ್ಲಾಸ್ಟಿಕ್ ಹೊದಿಕೆಯ ಸರ್ವಿಸ್ ರಸ್ತೆ ಚಿತ್ರಗಳು: ಫಕ್ರುದ್ದೀನ್ ಎಚ್.

ಪ್ರಕೃತಿಗೆ ಮಾರಕವಾಗಿರುವ ಪ್ಲಾಸ್ಟಿಕ್‌ನ ವಿಲೇವಾರಿಯೇ ದೊಡ್ಡ ಸವಾಲು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಪ್ಲಾಸ್ಟಿಕ್‌ಗಳನ್ನು ಬಳಸಿ ರಸ್ತೆ ನಿರ್ಮಿಸಲಾಗಿದೆ. ಇದಕ್ಕಾಗಿ ಸುಮಾರು 170 ಟನ್ ಪ್ಲಾಸ್ಟಿಕ್ ಬಳಕೆಯಾಗಿದೆ.

ಏನಿದು ಪ್ಲಾಸ್ಟಿಕ್ ಹೊದಿಕೆಯ ರಸ್ತೆ?

ಹೆಚ್ಚು ಮಳೆಯಾಗುವ ಕರಾವಳಿಯಂತಹ ಪ್ರದೇಶಗಳಲ್ಲಿ ಡಾಂಬರ್ ರಸ್ತೆಗಳಲ್ಲಿ ಬಹುಬೇಗ ಹೊಂಡಗಳು ಇಣುಕುವುದು ಸಾಮಾನ್ಯ. ಜನರಿಂದ ಹಿಡಿಶಾಪ ಹಾಕಿಸಿಕೊಳ್ಳುವ ಅಧಿಕಾರಿಗಳು ಇದಕ್ಕೆ ಪರಿಹಾರ ಹುಡುಕ ಹೊರಟಾಗ ಹೊಳೆದಿದ್ದು ಪ್ಲಾಸ್ಟಿಕ್ ಹೊದಿಕೆಯ ರಸ್ತೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಂಗಳೂರು ಕಚೇರಿಯ ಯೋಜನಾ ನಿರ್ದೇಶಕರು, ರಸ್ತೆ ನಿರ್ಮಾಣದಲ್ಲಿ ಪ್ಲಾಸ್ಟಿಕ್ ಬಳಸಬಹುದಾದ ಕುರಿತು ಯೋಜನಾ ವರದಿಯೊಂದನ್ನು ಸಿದ್ಧಪಡಿಸಿ ಕೇಂದ್ರ ಹೆದ್ದಾರಿ ಇಲಾಖೆಗೆ ಸಲ್ಲಿಸಿದ್ದರು. ಹೆದ್ದಾರಿ ನಿರ್ಮಾಣಕ್ಕೆ ಮಾನದಂಡ ರೂಪಿಸುವ ಇಂಡಿಯನ್ ರೋಡ್ ಕಾಂಗ್ರೆಸ್ (ಐಆರ್‌ಸಿ) ಈ ವರದಿಗೆ ಒಪ್ಪಿಗೆ ನೀಡಿತು. ಇದರ ಫಲವಾಗಿ ಇಲ್ಲಿ ಈಗ, ಒಟ್ಟು 67 ಕಿ.ಮೀ ರಸ್ತೆ ಪ್ಲಾಸ್ಟಿಕ್ ಹೊದಿಕೆಯೊಂದಿಗೆ ಮೈಚಾಚಿಕೊಂಡಿದೆ.

ರಸ್ತೆ ನಿರ್ಮಾಣದಲ್ಲಿ ಜಲ್ಲಿ ಮತ್ತು ಬಿಟುಮಿನ್ ಮಿಶ್ರಣದ ತಂತ್ರಜ್ಞಾನ ಹೆಚ್ಚು ಪ್ರಚಲಿತದಲ್ಲಿದೆ. ಸುಮಾರು 160 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಡಾಂಬರ್ ಬಿಸಿ ಮಾಡುವಾಗ, ಸಂಸ್ಕರಿಸಿದ ಎಲ್‌ಡಿಪಿಇ ಪ್ಲಾಸ್ಟಿಕ್ ಜೊತೆ ಸೇರಿಸಿ, ಅದನ್ನು ಜಲ್ಲಿ ಮೇಲೆ ಸುರಿದರೆ ರಸ್ತೆಯ ಗಟ್ಟಿತನ ಹೆಚ್ಚಾಗಿ, ದೀರ್ಘ ಬಾಳಿಕೆ ಬರುತ್ತದೆ. ಡಾಂಬರ್ ಮತ್ತು ಎಲ್‌ಡಿಪಿಇ ಪ್ಲಾಸ್ಟಿಕ್ ಅನ್ನು ಶೇಕಡ 90:10ರ ಅನುಪಾತದಲ್ಲಿ ಬಳಕೆ ಮಾಡಲಾಗುತ್ತದೆ ಎನ್ನುತ್ತಾರೆ ಎನ್‌ಎಚ್‌ಎಐ ಯೋಜನಾ ನಿರ್ದೇಶಕ ಅಬ್ದುಲ್ ಜಾವೇದ್ ಅಜ್ಮಿ.

ಪ್ಲಾಸ್ಟಿಕ್ ಎಲ್ಲಿಂದ?

ಐಆರ್‌ಸಿ ಅನುಮತಿ ಸಿಕ್ಕಿದೇ ತಡ ಗುತ್ತಿಗೆದಾರ ಕಂಪನಿ ದೊಡ್ಡ ಪ್ರಮಾಣದ ಎಲ್‌ಡಿಪಿಇ ಎಲ್ಲಿ ಸಿಗಬಹುದೆಂದು ಹುಡುಕಾಟ ನಡೆಸಿದಾಗ ಅವರ ಕಣ್ಣಿಗೆ ಬಿದ್ದಿದ್ದು ಸಮಗ್ರ ಘನತ್ಯಾಜ್ಯ ನಿರ್ವಹಣಾ ಕೇಂದ್ರಗಳು (ಎಂಆರ್‌ಎಫ್).

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಂಕ ಎಡಪದವು, ಕೆದಂಬಾಡಿ, ಶಂಭೂರು, ಉಜಿರೆ ಈ ನಾಲ್ಕು ಸ್ಥಳಗಳಲ್ಲಿ ಎಂಆರ್‌ಎಫ್‌ಗಳನ್ನು ಸ್ಥಾಪನೆ ಮಾಡಲಾಗಿದೆ. ಈ ಕೇಂದ್ರಗಳಲ್ಲಿ ಜನವರಿಯಿಂದ ಮೇ ವರೆಗೆ ಸಂಗ್ರಹವಾದ ಕ್ಯಾರಿಬ್ಯಾಗ್, ಪ್ಯಾಕೇಜಿಂಗ್ ಕವರ್‌ಗಳನ್ನು ಸಂಸ್ಕರಿಸಿ, ರಸ್ತೆ ನಿರ್ಮಾಣಕ್ಕೆ ನೀಡಲಾಗಿದೆ.

ಬಂಡಲ್ ಪೇರಿಸುತ್ತಿರುವ ಕೆಲಸಗಾರರು

ಯಶಸ್ಸು ಇಲ್ಲಿ ಮಾತ್ರ

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ದಕ್ಷಿಣ ಕನ್ನಡ, ಉಡುಪಿ, ಬಳ್ಳಾರಿ ಮತ್ತು ರಾಮನಗರ ಜಿಲ್ಲೆಗಳಲ್ಲಿ ಎಂಆರ್‌ಎಫ್ ಘಟಕಗಳನ್ನು ಪ್ರಾಯೋಗಿಕವಾಗಿ ನಿರ್ಮಿಸಲು 2023ರಲ್ಲಿ ಯೋಜನೆ ರೂಪಿಸಿತ್ತು. ಅವುಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಈ ಘಟಕಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

ಕುರ್‌ಕುರೆ, ಲೇಸ್‌ನಂತಹ ಕುರುಕಲು ತಿಂಡಿಯ ಪ್ಲಾಸ್ಟಿಕ್ ಕವರ್‌ಗಳು, ನೀರು ಕುಡಿದು ಎಸೆಯುವ ಬಾಟಲಿಗಳು, ಪಾರ್ಸೆಲ್ ಸುತ್ತಿಕೊಂಡು ಬರುವ ರಟ್ಟು, ರದ್ದಿ ಪೇಪರ್‌ಗಳು, ಕ್ಯಾರಿಬ್ಯಾಗ್‌ಗಳು... ಹೀಗೆ ಮನೆಯಲ್ಲಿ ನಿತ್ಯ ಉತ್ಪತ್ತಿಯಾಗುವ ಕಸವೇ ಇಲ್ಲಿ ಕಾಸು ತಂದು ಕೊಡುತ್ತಿವೆ. ಕಸದಿಂದ ಬರುವ ಆದಾಯವೇ ಇಲ್ಲಿ ದುಡಿಯುವ ಮಹಿಳೆಯರಿಗೆ ನಿತ್ಯದ ತುತ್ತು ನೀಡುತ್ತಿದೆ. ಮಂಗಳೂರಿನ ಮಂಗಳಾ ರಿಸೋರ್ಸಸ್ ಮ್ಯಾನೇಜ್‌ಮೆಂಟ್ ಸಂಸ್ಥೆ ಈ ಎಂಆರ್‌ಎಫ್‌ಗಳ ನಿರ್ವಹಣೆಯ ಹೊಣೆ ವಹಿಸಿಕೊಂಡಿದೆ.

ಜಿಲ್ಲೆಯಲ್ಲಿ 223 ಗ್ರಾಮ ಪಂಚಾಯಿತಿಗಳು ಇವೆ. ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿ ಎಲ್ಲ ಪಂಚಾಯಿತಿಗಳೂ ಸ್ವಚ್ಛ ಸಂಕೀರ್ಣ ಘಟಕಗಳನ್ನು ಹೊಂದಿವೆ. ಪ್ರತಿ ಮನೆಯಿಂದ ಸಂಗ್ರಹಿಸುವ ಒಣ ಕಸವನ್ನು ಇಲ್ಲಿ ಪ್ರತ್ಯೇಕಿಸಿ ಎಂಆರ್‌ಎಫ್‌ಗೆ ಪೂರೈಕೆ ಮಾಡಲಾಗುತ್ತದೆ.

'ಎಂಆರ್‌ಎಫ್‌ನಲ್ಲಿ ಪೇಪರ್, ರಟ್ಟು, ಟೆಟ್ರಾ ಪ್ಯಾಕ್, ಕ್ಯಾರಿಬ್ಯಾಗ್, ಪೆಟ್ ಬಾಟಲ್, ಮಲ್ಟಿ ಲೇಯರ್ ಪ್ಲಾಸ್ಟಿಕ್, ಬಟ್ಟೆ... ಹೀಗೆ 33 ಪ್ರತ್ಯೇಕ ವಿಭಾಗಗಳಲ್ಲಿ ಕಸವನ್ನು ವಿಂಗಡಣೆ ಮಾಡುತ್ತೇವೆ. ಕೇಂದ್ರಕ್ಕೆ ಬೇಕಾದ ಯಂತ್ರಗಳು ಜಿಲ್ಲಾ ಪಂಚಾಯಿತಿಯ ಮುತುವರ್ಜಿಯಲ್ಲಿ ಅಳವಡಿಕೆಯಾಗಿವೆ' ಎನ್ನುತ್ತಾರೆ ಮಂಗಳಾ ರಿಸೋರ್ಸಸ್ ಮ್ಯಾನೇಜ್‌ಮೆಂಟ್ ನಿರ್ದೇಶಕ ಸಚಿನ್ ಶೆಟ್ಟಿ.

ಎಂಆರ್‌ಎಫ್‌ಗಳಲ್ಲಿ ಕೆಲಸ ಮಾಡುವವರಲ್ಲಿ ಶೇಕಡ 80ರಷ್ಟು ಮಹಿಳೆಯರು. ಅವರು ಕೈಗೆ ಗ್ಲೌಸ್, ಮೈಗೆ ಏಪ್ರಾನ್ ಹಾಕಿಕೊಂಡು ಯಂತ್ರದ ಧಾರೆಯಲ್ಲಿ ಸರಸರನೆ ಮುಂದೆ ಓಡುವ ಕಸವನ್ನು ಹೆಕ್ಕಿ ಹೆಕ್ಕಿ ಪ್ರತ್ಯೇಕಿಸುತ್ತಾರೆ. ಪುರುಷರು ಅವುಗಳನ್ನು ಬಂಡಲ್ ಕಟ್ಟಿ ಪೇರಿಸಿಡುತ್ತಾರೆ. ಸ್ವಚ್ಛತೆಯೇ ಮೊದಲ ಆದ್ಯತೆ ಎಂಬಂತೆ ಘಟಕಗಳನ್ನು ಅತ್ಯಂತ ಶಿಸ್ತುಬದ್ಧವಾಗಿ, ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಈ ಮಹಿಳೆಯರ ಪಾತ್ರ ದೊಡ್ಡದು.

ಘಟಕ ಭರ್ತಿಯಾದಂತೆ ಈ ಬಂಡಲ್‌ಗಳು ಲಾರಿಯಲ್ಲಿ ಕಲಬುರಗಿ, ಬೆಳಗಾವಿ, ಸೂರತ್, ಮುಂಬೈ ಭಾಗಗಳ ಸಿಮೆಂಟ್ ಫ್ಯಾಕ್ಟರಿ, ರಿಸೈಕಲ್ ಘಟಕಗಳನ್ನು ಸೇರುತ್ತವೆ. ಅಲ್ಲಿ ಸುಂದರ ಉತ್ಪನ್ನಗಳಾಗಿ ರೂಪುಗೊಂಡು ಮತ್ತೆ ಮಾರುಕಟ್ಟೆಗೆ ಬರುತ್ತವೆ.

'ಹಲವಾರು ಧಾರ್ಮಿಕ ಕ್ಷೇತ್ರಗಳನ್ನು ಹೊಂದಿರುವ ಜಿಲ್ಲೆಗೆ ವರ್ಷವಿಡೀ ಪ್ರವಾಸಿಗರ ಭೇಟಿ ಇದ್ದೇ ಇರುತ್ತದೆ. ನದಿಗಳಲ್ಲಿ ಸ್ನಾನ ಮಾಡಿ ಬಟ್ಟೆಯನ್ನು ಅಲ್ಲಿಯೇ ಬಿಸಾಡಿ ಹೋಗುವವರೂ ಇರುತ್ತಾರೆ. ಇಂತಹ ಬಟ್ಟೆಗಳೂ ಎಂಆರ್‌ಎಫ್‌ಗೆ ಬರುತ್ತವೆ. ಬಹುಪ್ರಮಾಣದಲ್ಲಿ ಬರುವ ಬಟ್ಟೆ, ಚಪ್ಪಲಿಗಳ ಪರ್ಯಾಯ ಬಳಕೆ ಬಗ್ಗೆ ಯೋಚಿಸುತ್ತಿದ್ದೇವೆ' ಎನ್ನುತ್ತಾರೆ ಮಂಗಳಾ ರಿಸೋರ್ಸಸ್ ಮ್ಯಾನೇಜ್‌ಮೆಂಟ್‌ನ ಅಧ್ಯಕ್ಷ ದಿಲ್‌ರಾಜ್ ಆಳ್ವ.

'ಶೂನ್ಯ ರೂಪಾಯಿ ಮಾದರಿ' ಎಂಆರ್‌ಎಫ್, ಶೂನ್ಯ ತ್ಯಾಜ್ಯದ ಮಾದರಿ ಕೂಡ ಆಗಿದೆ. ಇಲ್ಲಿ ಯಾವುದೇ ವಸ್ತುವನ್ನೂ 'ತ್ಯಾಜ್ಯ' ಎಂದು ಭುವಿಯ ಒಡಲಿಗೆ ಎಸೆಯುವುದಿಲ್ಲ. ಎಲ್ಲವೂ ಪುನರ್ಬಳಕೆಯಾಗುತ್ತವೆ. ತ್ಯಾಜ್ಯವನ್ನು ತಗ್ಗಿಸಿ ಅದನ್ನೇ ಸಂಪನ್ಮೂಲವಾಗಿ ಸದ್ಬಳಕೆ ಮಾಡಿಕೊಳ್ಳುವ ಪ್ರಯತ್ನ ಇಲ್ಲಿ ಯಶಸ್ವಿಯಾಗಿದೆ.



ಆಗುಂಬೆಯ ಕಾನನದಲ್ಲಿ...

• ಶೇಖರ್ ಗೌಳೇರ್

ಸುರಿಯುವ ಮಳೆಗೆ ಮತ್ತೊಂದು ಹೆಸರೇ ಆಗುಂಬೆ. 'ಮಿಸ್ಟಿಕಲ್ ಆಗುಂಬೆ' ಎನ್ನುವ ಉಭಯವಾಸಿಗಳ ಶಿಬಿರ ಆಗುಂಬೆ ಕಾಡಿನಲ್ಲಿ ನಡೆದಿತ್ತು. ಆಗ ಮಳೆಯಲ್ಲಿ ನೆನೆಯುವುದಲ್ಲದೇ ಹಸಿರು ಹಾವು, ಕಟ್ಟು ಹಾವು, ಬಳೆವಡಕ, ಹಾರುವ ಓತಿ ಮುಂತಾದವುಗಳನ್ನು ನೋಡಿದ ನೆನಪುಗಳು ಮರುಕಳಿಸಿದವು. ಗೋವಾ ಮಾನ್ಸೂನ್ ಟ್ರೆಕಿಂಗ್ ವೇಳೆ ಮಳೆಯಲ್ಲಿ ತೊಯ್ದದ್ದು ನೆನಪಿಗೆ ಬಂದು ಯಾವಾಗ ಯೂಥ್ ಹಾಸ್ಟೆಲ್‌ನವರು ಮಾನ್ಸೂನ್ ಚಾರಣ ಏರ್ಪಡಿಸುತ್ತಾರೋ ಎಂದು ಕಾದು ಕುಳಿತಿದ್ದೆ. ಒಂದು ದಿನ 'ಕಾನನ ಕಂಜರ್ವೇಶನ್' ಸಂಸ್ಥೆಯಿಂದ ಕರೆ ಬಂದಿತು. ಆಗುಂಬೆಯಲ್ಲಿ 'ಉಭಯವಾಸಿಗಳ' ಎರಡು ದಿನ ಶಿಬಿರ ಏರ್ಪಡಿಸಿರುವ ವಿಷಯವನ್ನು ತಿಳಿಸಿದರು. ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡೆ. ಶಿಬಿರ 15 ಜನ ಆಸಕ್ತರಿಗೆ ಮಾತ್ರ ಮೀಸಲಾಗಿತ್ತು.

ಕ್ಯಾಮೆರಾ ಬ್ಯಾಗ್, ಬಟ್ಟೆ ಬರೆಗಳನ್ನು ತುಂಬಿಕೊಂಡು ಆಗುಂಬೆಗೆ ಹೊರಟಾಗ ಮಳೆ ಬೀಳುತ್ತಲೇ ಇತ್ತು. ಆಗುಂಬೆ ತಲುಪಿದಾಗ ಮಳೆ ರಭಸವಾಗಿತ್ತು. ಬಿದರುಗೋಡು ಸಾವಿರ ಜನಸಂಖ್ಯೆ ಹೊಂದಿದ್ದು ಕಾಡಿನ ಗರ್ಭದಲ್ಲಿರುವ ಊರು. ವಿಶೇಷವೆಂದರೆ ಊರಿನ ಮುಕ್ಕಾಲು ಭಾಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ್ದರೆ, ಕಾಲು ಭಾಗ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿಗೆ ಸೇರಿದೆ. ಅಂಥ ಊರಿನಲ್ಲಿ ರಾಜ್ಯದ ಮೂಲೆ ಮೂಲೆಯಿಂದ ಬಂದಿದ್ದ ಹನ್ನೊಂದು ಮಂದಿ ಪ್ರಕೃತಿ ಪ್ರೇಮಿಗಳು ಸೇರಿದ್ದೆವು. ನಮ್ಮಲ್ಲಿ ಛಾಯಾಗ್ರಾಹಕರು, ಉಭಯವಾಸಿ ತಜ್ಞರು, ಪ್ರಕೃತಿ ತಜ್ಞರು, ಪ್ರಾಣಿಶಾಸ್ತ್ರದ ವಿದ್ಯಾರ್ಥಿಗಳು ಇದ್ದದ್ದು ವಿಶೇಷ. ಆಗುಂಬೆಯ 'ಕಾನನ ಕಂಜರ್ವೇಶನ್' ಸಂಘಟನೆಯು ಜೊಯೆಲ್ ನೇತೃತ್ವದಲ್ಲಿ ಸಂಶೋಧನೆ, ಉಭಯವಾಸಿಗಳ ಶಿಬಿರ, ಸೂಕ್ಷ್ಮಜೀವಿಗಳ ಅವಲೋಕನ, ಸಂರಕ್ಷಣೆಯನ್ನು ಸ್ವಯಂ ಸೇವಾ ನೆಲೆಯಲ್ಲಿ ನಡೆಸುತ್ತಿದೆ.

5ನೇ ಪುಟಕ್ಕೆ...

ಗೋಲ್ಡನ್ ಬ್ಯಾಕ್ಡ್ ಕಪ್ಪೆ

ಜಾಮೀಯಾ ಮಸೀದಿ

ದಿನದ ಹೊತ್ತು ಕಲಬುರಗಿ ಸುತ್ತು

• ಮಹಾಂತೇಶ ಗ.ಓಶಿಮಠ

ಜಾಮೀಯಾ ಮಸೀದಿ ಕಲಬುರಗಿಯ ಪ್ರಮುಖ ಆಕರ್ಷಣೆ. ಇಂಡೋ ಇಸ್ಲಾಂ ಶೈಲಿಯ ಅದ್ಭುತ ಮಸೀದಿಯೊಳಗೆ ಸಾಕಷ್ಟು ಐತಿಹಾಸಿಕ ಕಥೆಗಳಿವೆ. ಕೆಲ ವರ್ಷಗಳ ಹಿಂದೆ ನಗರದಲ್ಲಿ ನಿರ್ಮಾಣಗೊಂಡ ಬುದ್ಧವಿಹಾರ ಕೂಡ ಅನೇಕ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಇವುಗಳಲ್ಲದೇ ಅನೇಕ ಸ್ಮಾರಕಗಳು ನಗರದಲ್ಲಿದ್ದು, ಸರಿಯಾದ ನಿರ್ವಹಣೆಯಿಲ್ಲದೆ ಸೊರಗಿವೆ.

ಮುಂಗಾರು ಮಳೆಗೆ ಶೃಂಗಾರಗೊಂಡಿದ್ದ ಜಾಮೀಯಾ ಮಸೀದಿಯ ಸುತ್ತಲಿನ ಇಳೆಯನ್ನು ಮೋಡಗಳ ಮರೆಯಿಂದ ಇಣುಕುತ್ತಿದ್ದ ಸೂರ್ಯನ ಕಿರಣಗಳು ಚುಂಬಿಸುತ್ತಾ ರಮಣೀಯತೆಯನ್ನು ಸೃಷ್ಟಿಸಿದ್ದವು. ಆಹ್ಲಾದಕರ ಪರಿಸರದಲ್ಲಿ ಪರಾಗವನ್ನು ಹೀರಲು ಬಂದಿದ್ದ ಚಿಟ್ಟೆಗಳನ್ನು ಕಬಳಿಸುತ್ತಿದ್ದ ಕಾಜಾಣ ಹಾಗೂ ಚದುರಿದ್ದ ಕಾಳುಗಳನ್ನು ಹೆಕ್ಕುತ್ತಿದ್ದ ಬೆಳವಗಳನ್ನು ನೋಡುತ್ತಾ ಭವ್ಯವಾದ ಪಾರಂಪರಿಕ ಪ್ರಾರ್ಥನಾ ಮಂದಿರದೊಳಗೆ ನಾವು ಪ್ರವೇಶಿಸಿದೆವು. ಮಸೀದಿಯ ಒಳಗಡೆ ಇಮಾಮರು ಸಲ್ಲಿಸುತ್ತಿದ್ದ ಪ್ರಾರ್ಥನೆ ಕಿವಿಗಳಿಗೆ ಬಿತ್ತು. ಬೃಹತ್ ಕಂಬಗಳ ಮೇಲೆ ಬಿಲ್ಲಿನಂತೆ ಬಾಗಿದ್ದ ಕಮಾನುಗಳ ನಡುವೆ ಸುಮಾರು 60 ಮೀಟರ್ ದೂರದಲ್ಲಿ ಸಲ್ಲಿಸುತ್ತಿದ್ದ ಪ್ರಾರ್ಥನೆಯು ಸ್ಪಷ್ಟವಾಗಿ ಕೇಳಿಸುತ್ತಿತ್ತು.

ಬಹುಮನಿ ಕೋಟೆ

ಹೌದು! ನಾವೀಗ ಕಾಲಕಾಲಕ್ಕೆ ತನ್ನ ಹೆಸರನ್ನು ಕಲಬುರಗಿ, ಆಸನಾಬಾದ್ ಹಾಗೂ ಗುಲ್ಬರ್ಗಾ ಎಂದು ಬದಲಾಯಿಸಿಕೊಳ್ಳುತ್ತಾ ಈಗ ಮತ್ತೆ ಕಲಬುರಗಿ ಎಂದು ಕರೆಸಿಕೊಳ್ಳುತ್ತಿರುವ ಕಲ್ಯಾಣ ಕರ್ನಾಟಕದ ಪ್ರಮುಖ ನಗರಕ್ಕೆ ಮಲೆನಾಡಿನಿಂದ ಬಂದಿಳಿದಿದ್ದೆವು. ಬೆಳ್ಳಂಬೆಳಿಗ್ಗೆ ಶುರುವಾದ ಒಂದು ದಿನದ ನಮ್ಮ ನಗರ ಪ್ರವಾಸ ಶತಮಾನದ ಹಿಂದೆ ನಿರ್ಮಿಸಿದ ಕಲಾತ್ಮಕ ಕೆತ್ತನೆಯ ಶ್ರೀ ಶರಣಬಸವೇಶ್ವರ ಗುಡಿಯಿಂದ ಪ್ರಾರಂಭವಾಯಿತು. ಭಕ್ತಾದಿಗಳಿಂದ ತುಂಬಿದ್ದ ಗುಡಿಯ ವಿಶಾಲವಾದ ಪ್ರಾಂಗಣವನ್ನು ಸುತ್ತಿ, ಸ್ವಾಮಿಗಳ ಗದ್ದುಗೆಯ ದರ್ಶನ ಮಾಡಿ, ನಗರದ ಐತಿಹಾಸಿಕ ಕೋಟೆಗೆ ಲಗ್ಗೆ ಇಟ್ಟೆವು. ಕೋಟೆಯ ಪ್ರವೇಶದೊಂದಿಗೆ ಎಡ ಬದಿಯಲ್ಲಿ ತುಸು ಸಾಗಿದಾಗ ನಮಗೆ ಏಷಿಯಾದಲ್ಲಿಯೇ ದೊಡ್ಡದೆನ್ನಲಾದ ಜಾಮಿಯಾ ಮಸೀದಿ ಎದುರಾಯಿತು. ಪರ್ಷಿಯಾದ ವಾಸ್ತುಶಿಲ್ಪಿ ಮಹಮ್ಮದ ರಫೀಯಾ ಮಾರ್ಗದರ್ಶನದಲ್ಲಿ ಬಹಮನಿಯ ರಾಜ ಒಂದನೆಯ ಮಹಮದ ಶಾಹ್‌ನ ಆಳ್ವಿಕೆಯಲ್ಲಿ ಕ್ರಿ.ಶ. 1367 ರಲ್ಲಿ ಇದನ್ನು ನಿರ್ಮಿಸಲಾಗಿದೆ. ಇಂಡೋ ಇಸ್ಲಾಂ ಶೈಲಿಯ ಅದ್ಭುತ ಮಸೀದಿಯಲ್ಲಿ 115 ಕಂಬಗಳು, ವಿವಿಧಾಕಾರದ 250 ಕಮಾನುಗಳು ಹಾಗೂ 105 ಗುಮ್ಮಟಗಳಿವೆ. 150 ಪುಷ್ಪಗಳಿಂದ ಅಲಕೃಂತ ಭವನದಲ್ಲಿ ತಂಪು ವಾತಾವರಣವಿರುವಂತೆ ಹಾಗೂ ಪ್ರತಿಧ್ವನಿಯಾಗದಂತೆ ರಚಿಸಿದ ವಾಸ್ತು ಬೆರಗುಗೊಳಿಸಿತು.

ಮಸೀದಿ ಸುತ್ತಲಿರುವ ಕೋಟೆಯ ಕೊತ್ತಲುಗಳನ್ನು ಏರಿಳಿಯುತ್ತಾ ಏಷಿಯಾದಲ್ಲೇ ಅತಿ ಉದ್ದವೆಂಬ ಹೆಗ್ಗಳಿಕೆಯ ತೋಪು ವೀಕ್ಷಿಸಿ, ಕೋಟೆಯ ಪ್ರವೇಶ ದ್ವಾರದ ರಕ್ಷಣೆಗೆ ಕಟ್ಟಲಾದ 'ರಣಮಂಡಲ'ವೆಂಬ ಚೌಕಾಕಾರದಲ್ಲಿರುವ ಬೃಹದಾಕಾರದ ಕಟ್ಟಡವನ್ನು ಹತ್ತಿಳಿದೆವು. ಕೋಟೆಯನ್ನು ಸುತ್ತಾಡಿದ ತರುವಾಯ ಬಹಮನಿ ಅರಸರ ಸಮಾಧಿಗಳಿರುವ 'ಹಫ್ತ್ ಗುಂಬಜ್'ಗಳತ್ತ ಸಾಗಿದೆವು. ಪ್ರಾಚ್ಯವಸ್ತು ಇಲಾಖೆಯ ಸುಪರ್ದಿಯಲ್ಲಿರುವ ಒಟ್ಟು ಏಳು ಸಮಾಧಿಗಳು ನಗರದ ಮಧ್ಯಭಾಗದಲ್ಲಿಯೇ ಇವೆ. ತುಘಲಕ, ಇಂಡೋ ಇಸ್ಲಾಂ ಹಾಗೂ ರಜಪೂತ ಶೈಲಿಯಲ್ಲಿ ಇವುಗಳನ್ನು ಕಟ್ಟಲಾಗಿವೆ.

ಬುದ್ಧ ವಿಹಾರ
ಚಿತ್ರ: ತಾಜುದ್ದೀನ್ ಆಜಾದ್

'ಹಫ್ತ್ ಗುಂಬಜ್' ಮುಂದೆ ಇರುವ ರಸ್ತೆಯಿಂದ ಬಲಕ್ಕೆ ನೇರವಾಗಿ ಸಾಗಿದರೆ 15ನೆ ಶತಮಾನದಲ್ಲಿ ಕಲಬುರಗಿಯಲ್ಲಿ ನೆಲೆ ನಿಂತಿದ್ದ ಪ್ರಸಿದ್ಧ ಸೂಫಿ ಸಂತ ಬಂದೇ ನವಾಜರ ದರ್ಗಾವಿದೆ. ಬಹಮನಿ ಸುಲ್ತಾನ ಅಹಮ್ಮದ ಶಹನಿಂದ ಗುರುಗಳ ಸ್ಮರಣಾರ್ಥ ಕಟ್ಟಿಸಿದ ದರ್ಗಾವು ನಗರದ ಅತ್ಯಂತ ಜನನಿಬಿಡ ಸ್ಥಳದಲ್ಲಿದೆ. ಇಲ್ಲಿಗೆ ದೇಶ–ವಿದೇಶಗಳಿಂದ ಭಕ್ತರು ಬರುತ್ತಾರೆ. ಬಂದೇ ನವಾಜ ದರ್ಗಾದ ಗುಮ್ಮಟದ ಒಳಭಾಗದಲ್ಲಿ ಇತ್ತೀಚಿಗೆ ಬಣ್ಣಬಣ್ಣದ ಗಾಜುಗಳಿಂದ ಅಲಂಕಾರವನ್ನು ಮಾಡಲಾಗಿದೆ. ಇಲ್ಲಿನ ಕುಸುರಿ ಕೆಲಸ ಸೆಳೆಯುತ್ತದೆ. ಸ್ಥಳೀಯರು ಹಾಗೂ ಇತಿಹಾಸದ ಉಪನ್ಯಾಸಕರಾದ ಶಂಭುಲಿಂಗ ವಾಣಿಯವರ ಸಲಹೆಯಂತೆ ಬೆಳಿಗ್ಗೆಯೇ ಸ್ಥಳಗಳ ಪಟ್ಟಿಯನ್ನು ಕ್ರಮವಾಗಿ ಹೊಂದಿಸಿಕೊಂಡಿದ್ದರಿಂದ ನಮ್ಮ ಸುತ್ತಾಟದ ನಿರ್ವಹಣೆ ವ್ಯವಸ್ಥಿತವಾಗಿ ನಡೆದಿತ್ತು.

ಅರ್ಧ ದಿನದಲ್ಲಿ ನಗರದ ಮಧ್ಯದಲ್ಲಿರುವ ತಾಣಗಳನ್ನು ನೋಡಿ ಮುಗಿಸಿದ್ದ ನಾವು ಇನ್ನುಳಿದ ದೋ ಮಿನಾರ್, ಹಸನ್ ಗಂಗು ಗೋರಿ, ಶಹಾ ಬಜಾರ್ ಮಸೀದಿ, ಚೋರ್ ಗುಂಬಜ್ ಹಾಗೂ ಮುಂತಾದ ತಾಣಗಳನ್ನು ನೋಡ ಬೇಕಿತ್ತು. ಖಾನಾವಳಿಯೊಂದನ್ನು ಹೊಕ್ಕು ಊಟ ಮಾಡಿದ ನಂತರ ತಿರುಗಾಟ ಮುಂದುವರಿಯಿತು. ಕೆಲ ಪಾರಂಪರಿಕ ಸ್ಥಳಗಳು ಸ್ವಲ್ಪ ದೂರವಿರುವ ಕಾರಣ ಆಟೊ ಒಂದನ್ನು ಬಾಡಿಗೆಗೆ ಗೊತ್ತುಪಡಿಸಿ ಒಂದೊಂದೆ ಸ್ಥಳಗಳನ್ನು ಹುಡುಕಿ ಹುಡುಕಿ ನೋಡಿದೆವು.

ಶರಣಬಸವೇಶ್ವರ ದೇವಸ್ಥಾನ

ದೇಶ–ವಿದೇಶಗಳ ಪ್ರವಾಸಿಗರನ್ನು ಚುಂಬಕದಂತೆ ಸೆಳೆಯಬಲ್ಲ ಅವಕಾಶವಿರುವ ಕಲಬುರಗಿಯಲ್ಲಿ ಅನೇಕ ಸ್ಮಾರಕಗಳು ಯಾವುದೇ ನಿರ್ವಹಣೆಯಿಲ್ಲದೆ ಹಾಳು ಕೊಂಪೆಗಳಾಗಿವೆ. ನಗರದ ಮತ್ತೊಂದು ಪ್ರಸಿದ್ಧ ತಾಣ ಬುದ್ಧ ವಿಹಾರಕ್ಕೆ ಬಸ್ ಏರಿ ಸುಮಾರು ಎಂಟು ಕಿಲೋಮೀಟರ್ ದೂರ ಕ್ರಮಿಸಿದೆವು. ಪ್ರಶಾಂತ ಸ್ಥಳದಲ್ಲಿರುವ ಶ್ವೇತ ವರ್ಣದ ಬುದ್ಧ ವಿಹಾರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ವಿಹಾರದಲ್ಲಿ ಧ್ಯಾನ ಮಾಡಿ ಸುತ್ತಲಿರುವ ಉದ್ಯಾನವನದಲ್ಲಿ ಕೆಲ ಹೊತ್ತು ತಿರುಗಾಡಿ ಮನ ಹಗುರಮಾಡಿಕೊಂಡೆವು.

ಬುದ್ಧ ವಿಹಾರದಿಂದ ಹಿಂದಿರುಗುತ್ತಾ ಪಟ್ಟಿಯಲ್ಲಿದ್ದ ಕೊನೆಯ ಸ್ಥಳ ಪ್ರಾಚ್ಯ ವಸ್ತು ಸಂಗ್ರಹಾಲಯ ಹೊಕ್ಕೆವು. ಬಹಮನಿ ಕಾಲದ ಸ್ಮಾರಕಗಳಲ್ಲಿ ಮೌರ್ಯ, ಚಾಲುಕ್ಯ, ರಾಷ್ಟ್ರಕೂಟ, ಬಹಮನಿ, ಹೊಯ್ಸಳ, ವಿಜಯನಗರ ಕಾಲದ ಪ್ರಾಚ್ಯ ವಸ್ತುಗಳನ್ನು ಅಲ್ಲದೆ ಜೈನ, ಬೌದ್ಧ ಹಾಗೂ ಸಿಂಧೂ ನಾಗರಿಕತೆಯ ಅನೇಕ ವಸ್ತುಗಳನ್ನು ಪ್ರದರ್ಶಿಲಾಗಿದೆ. ಪ್ರಾಚೀನ ವಸ್ತುಗಳನ್ನು ನೋಡಿ ಹೊರ ಬರುತ್ತಿದ್ದಂತೆ ದಿಗಂತದ ಅಂಚಿಗೆ ಸೂರ್ಯನು ನಿರ್ಗಮಿಸುತ್ತಿದ್ದ. ನಗರದ ಅಪ್ಪನ ಕೆರೆಯ ಮುಗಿಲಿನಲ್ಲಿ ಬೆಳ್ಳಕ್ಕಿಗಳು ಮರಳಿ ಗೂಡು ತಲುಪುತ್ತಿದ್ದವು.

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2025
ಓದುಗರ ವೇದಿಕೆಗೆ ಬರಹ ಆಹ್ವಾನ
ರೀಲ್ಸ್ ಲೋಕದಲ್ಲಿ...
ಮೊಬೈಲ್ ಬಂದ ಮೇಲೆ ಬದುಕು ಮಗ್ಗಲು ಬದಲಿಸಿದೆ. ರಿಯಲ್ ಲೋಕದಿಂದ ರೀಲ್ಸ್ ಲೋಕದಲ್ಲಿ ವಿಹರಿಸುವವರು ಹೆಚ್ಚಾಗಿದ್ದಾರೆ. ಎಲ್ಲಿಯಾದರೂ ಐದು ನಿಮಿಷ ಕಾಯುವ ಸಂದರ್ಭ ಬಂದರೆ ಕೂಡಲೇ ಮೊಬೈಲ್‌ನ ಸ್ಕ್ರೀನ್ ತಡವಿ ರೀಲ್ಸ್ ನೋಡುವುದರಲ್ಲಿ ಮಗ್ನರಾಗುತ್ತಾರೆ. ಚಿಕ್ಕ ಮಕ್ಕಳು ಕೂಡ ರೀಲ್ಸ್ ನೋಡಿ ನಗುವುದು, ಮತ್ತೆ ಮತ್ತೆ ನೋಡಲು ಹಟ ಹಿಡಿಯುವುದು ಬದುಕಿನ ಭಾಗದಂತಾಗಿದೆ. ರೀಲ್ಸ್‌ಗಳ ಮೂಲಕ ಬೇರೆಯವರ ಲೋಕವನ್ನು ಇಣುಕಿ ನೋಡುವುದು ಸಂತೋಷ ಕೊಡುವಂತಿದೆ. ರೀಲ್ಸ್ ಲೋಕದಿಂದ ನಿಮ್ಮ ಬದುಕಿನಲ್ಲಿ ಆದ ಬದಲಾವಣೆಗಳು, ಫಜೀತಿಗಳ ಕುರಿತು ಬರೆಯಿರಿ.

ಬರಹ 250 ಪದಗಳ ಮಿತಿಯಲ್ಲಿರಲಿ.
ಆಯ್ದ ಬರಹಗಳನ್ನು ಪ್ರಕಟಿಸಲಾಗುವುದು
ಬರಹ ತಲುಪಲು ಕೊನೆಯ ದಿನಾಂಕ
ಆಗಸ್ಟ್ 15, 2025
ಇ–ಮೇಲ್: deepavali@prajavani.co.in

ಮುಂಗಾರಿನ ಆಮಂತ್ರಣ ಬೈಕ್ ಚಾರಣ


ಬೈಕ್‌ರೈಡ್

2ನೇ ಪುಟದಿಂದ...
ಬೈಕ್ ಸವಾರಿ ಹಾದಿಯಲ್ಲಿ...

ಮುಂಗಾರಿನ ಆರಂಭದಲ್ಲಿ ರಸ್ತೆ ಜಾರುವುದು ಹೆಚ್ಚು. ಅದರಲ್ಲೂ ಅಲಲ್ಲಿ ಬಿದ್ದಿರುವ ಎಂಜಿನ್ ಆಯಿಲ್ ಹನಿಗಳು, ನೆನೆದ ಒಣ ಎಲೆಗಳಿಂದ ಬೈಕ್‌ಗಳು ಜಾರುವ ಅಪಾಯವೂ ಇದೆ. ಹೀಗಾಗಿ ಮುಂಗಾರಿನಲ್ಲಿ ಅವಸರ ಸಲ್ಲದು. ಇದರೊಂದಿಗೆ ಮಂಜು ಹೊದ್ದ ರಸ್ತೆಗಳಲ್ಲಿ ಮಂದ ಬೆಳಕು, ಆಗಾಗ್ಗ ಮಸುಕಾಗುವ ಹೆಲ್ಮೆಟ್‌ಗಳ ಗಾಜು, ಧೋ ಎಂದು ಸುರಿವ ಮಳೆಯಿಂದ ಪಾರಾಗಲು ಹೆಚ್ಚುವರಿ ಎಚ್ಚರಿಕೆ ಅತ್ಯಗತ್ಯ. ಏಕಾಏಕಿ ಜೋರಾದ ಮಳೆ, ಧುತ್ತನೆ ಎದುರಾಗುವ ಧರೆಗುರುಳಿದ ಮರ, ಅಲ್ಲಲ್ಲಿ ಗುಡ್ಡ ಕುಸಿತ ಹೀಗೆ ಹಲವು ಅನಿರೀಕ್ಷಿತಗಳಿಗೂ ಸವಾರರು ಸಜ್ಜಾಗಬೇಕು ಎಂಬುದು ರೂಬಿ ಅವರ ಅನುಭವದ ಮಾತು.

ನಗರ ಹಾಗೂ ಪಟ್ಟಣಗಳ ಪ್ರದೇಶಗಳಲ್ಲಿ ನೀರು ತುಂಬಿರುವ ರಸ್ತೆ ಗುಂಡಿಗಳ ಆಳವನ್ನು ಊಹಿಸುವುದು ಕಷ್ಟ. ಅದರಲ್ಲೂ ಬೃಹತ್ ವಾಹನಗಳು ಪಕ್ಕದಲ್ಲಿ ಸಾಗುವಾಗ ಇಂಥ ರಸ್ತೆ ಗುಂಡಿಗಳು ಎದುರಾದರೆ ದೊಡ್ಡ ಅಪಾಯವನ್ನೇ ಆಹ್ವಾನಿಸಿದಂತೆ.

ಪ್ರಯಾಣದುದ್ದಕ್ಕೂ ಸ್ಥಳೀಯ ಜನರು ಹಾಗೂ ಪ್ರಕೃತಿಯನ್ನು ಗೌರವಿಸಬೇಕು ಎಂಬುದು ಅನುಭವಿ ಸವಾರರ ಸಲಹೆ. ಹೀಗಾಗಿ, ಪ್ರಕೃತಿಯಲ್ಲಿ ಕಳಿಯದ ಪ್ಲಾಸ್ಟಿಕ್ ಹಾಗೂ ಇತರ ವಸ್ತುಗಳನ್ನು ಬೇಕಾಬಿಟ್ಟಿಯಾಗಿ ಬಿಸಾಡದೆ, ಜವಾಬ್ದಾರಿಯುತವಾಗಿ ವಿಲೇವಾರಿ ಮಾಡಬೇಕು ಎಂಬುದು ರೈಡರ್‌ಗಳ ಪ್ರಾಮಾಣಿಕ ಸಲಹೆ.

ಅದು ಕರ್ನಾಟಕದ ಮಲೆನಾಡಿನ ತಿರುವುಗಳೇ ತುಂಬಿರುವ ಪ್ರದೇಶವಾಗಲೀ, ಕರಾವಳಿಯ ಬೀಸುಗಾಳಿಯಲ್ಲಿ ಸಾಗುವುದೇ ಆಗಲಿ ಅಥವಾ ಹಿಮಾಲಯ ಪರ್ವತದ ಕಲ್ಲು ರಾಶಿಯ ರಸ್ತೆಯೇ ಆಗಿರಲಿ, ಅದು ಭಾರತದ ಪ್ರಕೃತಿ ಸೊಬಗಿನ ನಡುವೆ ಸಾಗುವ ಒಂದು ಭಾವನಾತ್ಮಕ ಪಯಣ; ಅದು ಭಾರತದ ಆತ್ಮವನ್ನು ಅರಿಯುವ ಯಾನ. ಇಲ್ಲಿನ ಪ್ರತಿಯೊಂದು ಪಯಣವೂ ಒಂದು ಪ್ರತ್ಯೇಕ ಜಗತ್ತನ್ನು, ಬದುಕನ್ನು ಕಾಣಿಸುತ್ತದೆ. ನಮ್ಮನ್ನು ಹೊಸ ಮನುಷ್ಯರನ್ನಾಗಿಸುತ್ತದೆ.

ಮರೆಯಾಗುತ್ತಿರುವ ಮಳೆಗಾಲದ ಖಾದ್ಯಗಳು

• ಬೀರಣ್ಣ ನಾಯಕ ಮೊಗಟಾ

ಗುಡು ಗುಡು ಗುಡುಗಮ್ಮಾ
ಹಪ್ಪಳ ತಾರೆ ನಾಗಮ್ಮಾ
ಸಪ್ಪಳ ಮಾಡದೇ ತಿನ್ನೋಣ
ಮಳೆರಾಯನ ಪದ ಹಾಡೋಣ

ಇದು ಚುಟುಕು ಕವಿ ದಿನಕರ ದೇಸಾಯಿಯವರ ಪದ್ಯ. ಮಳೆಗಾಲದ ಮಲೆನಾಡಿನ ಬದುಕು ತೆರೆದಿಡುವ ಕವಿತೆಯೂ ಹೌದು. ಮೇ ತಿಂಗಳ ಅಂತ್ಯದಿಂದ ಮಳೆ ಶುರುವಾದರೆ ಗಣೇಶ ಚೌತಿ ಮುಗಿಯುವವರೆಗೂ ಮಲೆನಾಡು ಮಳೆನಾಡಾಗಿರುತ್ತದೆ. ಮನೆಯಿಂದ ಆಚೆ ಹೋಗಲು ಸಾಧ್ಯವಾಗದಷ್ಟು ಮಳೆ ಹೊಯ್ಯುತ್ತಿರುತ್ತದೆ. ಹೀಗಾಗಿಯೇ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದಷ್ಟು ಖಾದ್ಯಗಳು ಮಳೆಗಾಲದ ತಿನಿಸುಗಳೆಂದೇ ಸಿದ್ಧಗೊಳ್ಳುತ್ತಿದ್ದವು. ಮನೆಯ ಅಪ್ಪಪಕ್ಕದಲ್ಲಿ ಸಿಗುವ ಪದಾರ್ಥಗಳಿಂದ ಸಿದ್ಧಗೊಳ್ಳುವ ತಿನಿಸುಗಳಿಂದ ಮಳೆಗಾಲ ಪೂರ್ತಿ ಬಾಯಿ ಚಪಲ ತೀರಿಸಿಕೊಳ್ಳಬಹುದಿತ್ತು.

ಹಲಸಿನ ಬೀಜ

ಹುರಿದ ಹಲಸಿನಬೇಳೆ (ಬೀಜ), ನೆಲಗಡಲೆ, ಕಡಲೆ, ಕೆಂಡದಲ್ಲಿ ಸುಟ್ಟು, ಸಿಪ್ಪೆ ತೆಗೆದ ಗೇರುಬೀಜ, ಹಲಸಿನ ಹಪ್ಪಳ, ಖಾರ ಹಪ್ಪಳ, ಗೆಣಸಿನ ಹಪ್ಪಳ, ವಿಶೇಷ ರೀತಿಯಲ್ಲಿ ಬೆರಕೆ ಹಾಕಿ ಮಾಡಿದ ಕಳಲೆ, ತಗಟೆ ಸೊಪ್ಪು, ಅಣಬೆ, ಕೆಸುವಿನ ಪಲ್ಯಗಳು, ಪತ್ರೊಡೆ... ಇವೆಲ್ಲದರ ಜೊತೆಗೆ ಕರಾವಳಿ ಭಾಗದ ಜನರ ಸಿಹಿ ತಿನಿಸು ಹುರಿಯಕ್ಕಿ ಉಂಡೆ ಮಳೆಗಾಲಕ್ಕೆ ಹೇಳಿ ಮಾಡಿಸಿದ ತಿಂಡಿಗಳಾಗಿದ್ದವು.

ಮಳೆಗಾಲದಲ್ಲಿ ಮಾತ್ರ ಲಭ್ಯವಿರುವ ಗುಳ್ಳೆ, ಕಲ್ಲೇಡಿ, ಕಂಯ್ಜಿಬ್ಬು, ಕೊಚ್ಚಗ್ಯಾ ಮುಂತಾದ ಮಾಂಸಾಹಾರಿ ಖಾದ್ಯಗಳೂ ಬಲುರುಚಿಕರ. ಊರವರೆಲ್ಲಾ ಸೇರಿ ಬೆಟ್ಟಕ್ಕೆ ಜಾರುತ್ತ, ಏರುತ್ತ ಅಣಬೆ ಹುಡುಕುವ ಪರಿ, ಬಿದಿರಿನ ಹಿಂಡಿನಲ್ಲಿ ಕಳಲೆ ಕಡಿಯುವ ಚಾಕಚಕ್ಯ, ಗದ್ದೆಗಳಲ್ಲಿ ಗುಳ್ಳೆಗಳನ್ನು ಆರಿಸುವ ಬಗ್ಗೆ, ನೀರು ತುಂಬಿದ ಗದ್ದೆಗಳಲ್ಲಿ ಕಂಯ್ಜಿಬ್ಬಿನ ಬೇಟೆ, ಮಳೆಗಾಲದ ಸಮಯದಲ್ಲಿ ಮಾತ್ರ ಹರಿಯುವ ಕಚ್ಚರ್ಕಿ(ಸಣ್ಣ ಹಳ್ಳ)ಯ ಕಲ್ಲುಗಳ ನಡುವೆ ಕಲ್ಲೇಡಿ ಹಿಡಿಯುವ ಸಾಹಸ ಇವೆಲ್ಲವೂ ಒಂದು ತೆರನಾದ ಮಳೆಗಾಲದ ಮನರಂಜನೆ ಕೂಡ ಆಗಿತ್ತು.

ಇವುಗಳಲ್ಲಿ ಕೆಲವು ತಿನಿಸುಗಳಲ್ಲಿ ಔಷಧೀಯ ಗುಣಗಳು ಇವೆ. ಹೀಗಾಗಿ ವರ್ಷಕ್ಕೊಮ್ಮೆಯಾದರೂ ಆರೋಗ್ಯದ ದೃಷ್ಟಿಯಿಂದಲೂ ಇವುಗಳನ್ನು ತಿನ್ನಬೇಕೆಂಬ ಪ್ರತೀತಿ ಇತ್ತು. ಈಗೀಗ ಹಳ್ಳಿಗಳಲ್ಲಿ ಜನರೇ ಮಾಯವಾಗಿ, ಮಲೆನಾಡಿನ ಮಳೆಗಾಲ ಒಂದು ರೀತಿ ಬರಡಾಗಿದೆ. ಹಲಸಿನ ಹಪ್ಪಳ, ಗೇರುಬೀಜದ ಹೊರತಾಗಿ ಬಹುತೇಕ ತಿನಿಸುಗಳು ಕಾಣೆಯಾಗುತ್ತಿವೆ.

ಕಳಲೆ

ಮುನ್ನೋಟ 03-08-2025 ರಿಂದ 09-08-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಎಲ್ಲಾ ವಿಚಾರಗಳನ್ನು ತಲೆಗೆ ತುಂಬಿಕೊಂಡು ಗೊಂದಲದ ಗೂಡಾಗಿರುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಆಸ್ತಿ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ಧರ್ಮಪೀಠಾಧಿಪತಿಗಳಿಗೆ ಉತ್ತಮ ಗೌರವ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಂಪಾದನೆ ಮಾಡುವ ಬಗ್ಗೆ ಸಾಕಷ್ಟು ವಿಚಾರವನ್ನು ಮಾಡುವಿರಿ. ಆದಾಯವು ಉತ್ತಮವಾಗಿರುತ್ತದೆ. ಆಸ್ತಿ ಖರೀದಿಯ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ. ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ತಯಾರಿಸುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗುತ್ತದೆ. ಅತಿಯಾದ ಉಷ್ಣವು ದೇಹದಲ್ಲಿ ಆರೋಗ್ಯ ವ್ಯತ್ಯಾಸವನ್ನು ಉಂಟು ಮಾಡಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಲಾಭ ಹೆಚ್ಚುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮಗೆ ಸಮಾಜದಿಂದ ಬಹಳ ಗೌರವ ದೊರೆಯುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಬಂಧುಗಳ ಸಹಕಾರ ಸಿಗುವುದು ಬಹಳ ಕಡಿಮೆ. ಸ್ಥಿರಾಸ್ತಿಯ ವ್ಯವಹಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಕಟ್ಟಡ ನಿರ್ಮಾಣ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಈಗ ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಇರುತ್ತದೆ. ಶೀತ ಸಂಬಂಧಿ ಕಾಯಿಲೆಗಳು ಕೆಲವರನ್ನು ಕಾಡಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಬಹಳ ಆತ್ಮವಿಶ್ವಾಸದಿಂದ ಮುನ್ನಡೆಯುವಿರಿ. ಆದಾಯವು ಕಡಿಮೆ ಇರುತ್ತದೆ. ಧಾರ್ಮಿಕ ಕೆಲಸಗಳನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಬಂಧುಗಳ ಸಹಕಾರದ ಬದಲು ವಿರೋಧವು ಹೆಚ್ಚುತ್ತದೆ. ಚುರುಕಾಗಿ ಕೆಲಸ ಮಾಡುವಿರಿ. ಆಸ್ತಿ ವ್ಯವಹಾರಗಳಿಂದ ಹಣ ಬಂದರೂ, ಉಳಿಯುವುದಿಲ್ಲ. ವಿದ್ಯಾರ್ಥಿಗಳಿಗೆ ಸ್ವಲ್ಪ ಉತ್ತಮ ಫಲಿತಾಂಶ ಬರುವ ಸಾಧ್ಯತೆಯಿದೆ. ದೇಹದಲ್ಲಿ ಪಿತ್ತ ಹೆಚ್ಚಾಗಿ ಆರೋಗ್ಯ ಹದಗೆಡಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವೈರಾಗ್ಯದ ಕಡೆಗೆ ಆಸಕ್ತಿಯನ್ನು ಬೆಳೆಸಿಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಸ್ವಲ್ಪ ಆದಾಯವನ್ನು ನಿರೀಕ್ಷೆ ಮಾಡಬಹುದು. ಭೂಮಿ ಮಾರಾಟದಿಂದ ಆದಾಯ ಹೆಚ್ಚುತ್ತದೆ. ಪಶು ವ್ಯಾಪಾರ ಮಾಡುವವರಿಗೂ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಗುವ ಸಾಧ್ಯತೆಯಿದೆ. ರಾಜಕಾರಣಿಗಳಿಗೆ ಹಣದ ಮುಗ್ಗಟ್ಟು ಎದುರಾಗಿ, ಮುಜುಗರವಾಗಬಹುದು. ಸುಗಂಧ ದ್ರವ್ಯಗಳನ್ನು ಮಾರುವವರಿಗೆ ಲಾಭವಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬಹಳ ಧೈರ್ಯಶಾಲಿಗಳಾಗಿ ಎಲ್ಲಾ ಕೆಲಸಗಳಲ್ಲಿಯೂ ಮುನ್ನುಗ್ಗುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಚುರುಕಾಗಿ ಕೆಲಸ ಮಾಡಿ ಎಲ್ಲರ ಗಮನ ಸೆಳೆಯಲು ಪ್ರಯತ್ನ ಪಡುವಿರಿ. ತಾಯಿಯಿಂದ ಅತಿ ಹೆಚ್ಚು ಸಹಕಾರ ಸಹಾಯ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಸಿಗುವುದು ಕಡಿಮೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಹಿರಿಯರನ್ನು ಓಲೈಸಲು ಪ್ರಯತ್ನಪಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಬೀಜೋತ್ಪಾದನೆ ಮಾಡುವವರಿಗೆ ಲಾಭವಿದೆ. ವಿದೇಶದಲ್ಲಿ ಓದಬೇಕೆನ್ನುವ ಬಯಕೆ ಈಡೇರುತ್ತದೆ. ರಾಜಕಾರಣಿಗಳು ವ್ಯವಹಾರಗಳಿಂದ ಹಣ ಕಳೆದುಕೊಳ್ಳಬಹುದು. ಸಂಗಾತಿಯ ವೆಚ್ಚ ಏರಿಕೆಯಾಗುವ ಸಾಧ್ಯತೆಯಿದೆ. ಆಭರಣ ತಯಾರಕರಿಗೆ ಕುಸಿದಿದ್ದ ಬೇಡಿಕೆ ಮತ್ತೆ ಬರುತ್ತದೆ. ಹಿರಿಯರಿಂದ ಧನಸಹಾಯವನ್ನು ನಿರೀಕ್ಷೆ ಮಾಡಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾರದ ಆರಂಭದಲ್ಲಿ ಒಂದು ಸಂದೇಶ ದೊರೆತು ಮನಸಿಗೆ ಬಹಳ ಆನಂದವಾಗುತ್ತದೆ. ಆದಾಯವು ಕಡಿಮೆ ಇರುತ್ತದೆ. ಖರ್ಚು ಹೆಚ್ಚಾಗುವ ಸಾಧ್ಯತೆಯಿದೆ. ನಿಮ್ಮ ಶತ್ರುಗಳನ್ನು ಹುಡುಕಿ ನಿಗ್ರಹ ಮಾಡುವಿರಿ. ವಿದೇಶಗರಿಗೆ ಭೂಮಿಯನ್ನು ಕೊಡಿಸುವ ಕೆಲಸ ಮಾಡುತ್ತಿರುವವರಿಗೆ ಹೆಚ್ಚು ಲಾಭವಿದೆ. ರಾಜಕೀಯದಲ್ಲಿರುವವರಿಗೆ ಸ್ವಲ್ಪ ಅನುಕೂಲಗಳು ಹೆಚ್ಚಬಹುದು. ಸಂಗಾತಿಯಿಂದ ನಿರೀಕ್ಷಿತ ಪ್ರಮಾಣದ ಆರ್ಥಿಕ ಸಹಕಾರ ಸಿಗುವುದಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ವಾರದ ಆರಂಭದಲ್ಲಿ ಸ್ವಲ್ಪ ಆಲಸ್ಯವಿದ್ದರೂ ನಂತರ ಚೇತರಿಕೆಯಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇದ್ದರೂ ಕೂಡ ತೊಂದರೆ ಇರುವುದಿಲ್ಲ. ನಿಮ್ಮ ಕೆಲಸ ಕಾರ್ಯಗಳಿಗೆ ನಿರೀಕ್ಷಿತ ಸಹಾಯ ಸಿಗುತ್ತದೆ. ಕೃಷಿ ಸಂಶೋಧಕರಿಗೆ ಉತ್ತಮ ಗೌರವ ಸಿಗುತ್ತದೆ. ಕೃಷಿ ಭೂಮಿಯನ್ನು ಖರೀದಿಸುವ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಮೇಲ್ದರ್ಜೆಯನ್ನು ಪಡೆಯಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹೆಚ್ಚು ಪರಾಕ್ರಮದಿಂದ ಹೋರಾಡುವಿರಿ. ಜನ ಸಮೂಹದ ನಡುವೆ ಮಾತನಾಡುವಾಗ ಹೆಚ್ಚು ಎಚ್ಚರದಿಂದಿರುವುದು ಒಳ್ಳೆಯದು. ನಿಮ್ಮ ಶತ್ರುಗಳು ಯಾರೆಂದು ಈಗ ನಿಮಗೆ ತಿಳಿಯುತ್ತದೆ. ಶ್ರದ್ಧೆಯಿಂದ ಕೆಲಸಮಾಡಿ ಉದ್ಯೋಗದಲ್ಲಿ ಹೆಸರು ಮಾಡುವಿರಿ. ಕೃಷಿಭೂಮಿ ಮಾರಾಟ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಫಲಿತಾಂಶ ಕಡಿಮೆಯಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಬೇಕಾದ ಸಮಯದಲ್ಲಿ ಬಂಧುಗಳು ಕೈಕೊಡುವ ಸಾಧ್ಯತೆಯಿದೆ. ಭೂಮಿ ವ್ಯವಹಾರ ಮಾಡುವವರಿಗೆ ನಿರೀಕ್ಷೆಗೆ ಮೀರಿದ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ದೊರೆಯುತ್ತದೆ. ಸರ್ಕಾರಿ ವ್ಯವಹಾರಗಳನ್ನು ಮಾಡುತ್ತಿರುವವರಿಗೆ ಸ್ವಲ್ಪ ಹಿನ್ನಡೆಯಾಗುವ ಸಾಧ್ಯತೆಗಳಿವೆ. ಅನಿರೀಕ್ಷಿತವಾಗಿ ದೈವ ದರ್ಶನಕ್ಕೆ ಹೋಗುವಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಸಂಗಾತಿಯ ಸಹಕಾರದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಬಂಧುಗಳನ್ನು ಓಲೈಸಿಕೊಂಡು ನಿಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುವಿರಿ. ಸಂಸಾರದಲ್ಲಿ ಸಂತೋಷವಿರುತ್ತದೆ. ಭೂಮಿಯನ್ನು ಅಭಿವೃದ್ಧಿಪಡಿಸುವವರಿಗೆ ಹೆಚ್ಚು ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶವನ್ನು ಪಡೆಯುವ ಯೋಗವಿದೆ.

ಪದಬಂಧ 2903

ಮೇಲಿನಿಂದ ಕೆಳಕ್ಕೆ
1. ತಿಂಗಳಿಂದ ಕೂಡಿದ ವ್ಯಾಕರಣ ವಿಶೇಷ 3
2. ಕಿವಿಗೆ ಇಂಪಾದದ್ದು 3
3. ಲೆಕ್ಕಾಚಾರದ ಚತುರ ಯಂತ್ರ 3
4. ಕೊನೆಯಲ್ಲಿ ನಯದಿಂದಿರುವ ಪುತ್ರ 3
7. ಕೈಲಾಸಕ್ಕೆ ಸಮನಾದ ಕೆಲಸ 3
9. ಸುಖವಾಗಿ ಅಲೆದಾಡಬಹುದಾದ ಬೌದ್ಧ ದೇವಾಲಯ 3
10. ಕೆಳಗಿನಿಂದ ಮೇಲೆ ನೋಡುವ ಸಂತ ಖುಷಿಯಾಗಿದ್ದಾನೆ 3
11. ಸೂರ್ಯನಂತೆ ಬೆಳಗುವ ಕುಪ್ಪಸ 3
12. ಸ್ನೇಹ-ಸಲ್ಲಾಪದಂತೆ, ಕೋಪ-ಜಗಳದಲ್ಲೂ ದ್ರವ ತುಂಬಿದೆ 3
13. ಆಂತರ್ಯದ ಅಹವಾಲು 3
16. ಸಂಬಳಕ್ಕಾಗಿ ಮಾಡುವ ಕೆಲಸ 3
18. ಇಪ್ಪತ್ತೈದು ವರ್ಷಗಳ ಸಂಭ್ರಮಾಚರಣೆಗೆ ಬರುವ ಬೆಳ್ಳಿ 3
19. ಜೀವನದಲ್ಲಿ ಅಭಿರುಚಿ ಪಡೆದ ಕಲಾಸಕ್ತ 3
20. ಕಾತರದ ಕಳವಳ 3
21. ಇದಕ್ಕೆ ಆಗುವ ಸಾಧ್ಯತೆಯಿದೆ 3
22. ಲಕ್ಷ್ಮೀ, ಜಾನಕೀ, ಪಾರ್ವತೀ ಮುಂತಾದ ದೇವತೆಗಳ ಕಾಂತ 3

ಎಡದಿಂದ ಬಲಕ್ಕೆ
1. ಇನ್ನಷ್ಟು ಕಾಣಬೇಕೆನಿಸುವ ಸುಂದರ ಸ್ವಪ್ನ 5
3. ಗುಂಪಿನ ಅಗ್ರ ಪೂಜೆಯನ್ನು ಸ್ವೀಕರಿಸುವವ 5
5. ಕವಿವಾಣಿಯಲ್ಲಿ ಕಾಡಿಗೆ, ನಾಡಿಗೆ, ಬೀಡಿಗೆ ಬಂದ ಮಂಗಳ ಮಾಸ 3
6. ಅಡಿಗರ ಎಲ್ಲಾ ಕವನಗಳ ಸಂಗ್ರಹ 5
8. ಪದ್ಯ ಸಾಹಿತಿಗೆ ಸಿಗುವ ಸ್ಫೂರ್ತಿಯ ಕಾಲ 5
10. ನಿಜ ಮತ್ತು ವಾಸ್ತವದ ಜೊತೆ ಕೈ ಜೋಡಿಸುವ ಈಶ್ವರ 5
12. ಅಪರೂಪಕ್ಕೊಮ್ಮೆ ಕತ್ತಲಾವರಿಸಿದರೆ ಈ ರೂಪ ಪಡೆಯುತ್ತೆ 5
14. ಮಹಾಭಾರತದಲ್ಲಿ ನೀತಿ ಬೋಧಿಸಿದ ದಾಸೀ ಪುತ್ರ 3
15. ಕಡಲಲ್ಲಿ ಹಾಯುವ ಕುಟುಂಬವೆಂಬ ದೋಣಿ 5
17. ಬದುಕಿನಲ್ಲಿ ಡಂಬಾಚಾರವಿಲ್ಲದ ಸಾದಾ ವ್ಯಕ್ತಿ 5
19. ರುಚಿಯಾದ ದ್ರವದಿಂದ ತುಂಬಿರುವ ವಸ್ತು 5
21. ರಾಮ ರಹೀಮರನ್ನು ಏಕವಾಗಿ ಕಂಡ ಶ್ರೇಷ್ಠ 5
23. ಪೃಥ್ವಿಗೆ, ಪ್ರಾಣಕ್ಕೆ ಪ್ರಿಯನಾದ ಪತಿ 3
24. ಮಂಗಗಳ ಒಡೆಯ 5
25. ಮಾತು, ಮಂತ್ರ, ಮಾಟದಿಂದ ತನ್ನದಾಗಿಸಿಕೊಳ್ಳುವ ಕಲೆ 5



ಪದಬಂಧ ಉತ್ತರ -2902

ಮೇಲಿಂದ ಕೆಳಕ್ಕೆ
1.ಕುಂಕುಮ 2.ತಬಲ 3.ಆಗಸ 4.ಸರ್ಪಾಸ್ತ್ರ 7.ಬಡಗು 9.ಕನವರಿಸು 10.ಗುಡಾರ 11. ಹಕಾರಪ್ರಿಯ 15.ಮಣ 18.ಪ್ರಥಮ 19.ಯಮುನಾ 20.ಮಮತೆ 21.ವಿವಿಧ 22.ಕವಳ

ಎಡದಿಂದ ಬಲಕ್ಕೆ
1.ಕುಂಭಜಾತ 3.ಆಷಾಡಮಾಸ 5.ಬಹಿರಂಗ 6.ಮನೋಬಲ 8.ಸಕಲಶಾಸ್ತ್ರ 10.ಗುರುಗುಹ 12.ಪವನಸುತ 14.ಕಾಮಕಸ್ತೂರಿ 16.ರವಿಕಿರಣ 17.ಸುಪ್ರಭಾತ 19.ಯಮನಿಯಮ 21.ವಿಮರ್ಷಕ 23.ಮಹಾದೇವಿ 24.ನಾಗರಿಕತೆ 25.ಧರ್ಮಸ್ಥಳ

ನಾಕುತಂತಿ ಮತ್ತು ಅಲ್ಲಮಪ್ರಭುವಿನ ವಚನ

• ವಿಜಯ್ ಮಹಾಂತೇಶ ಪಾಪನಾಳ

‘ಶಬ್ದಗಾರುಡಿಗ’ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ. ಬೇಂದ್ರೆ) ಕನ್ನಡ ಸಾಹಿತ್ಯದ ಮೇರು ಪ್ರತಿಭೆ. ಅಂಬಿಕಾತನಯದತ್ತನ ಕವಿವಾಣಿಗೆ ಮನಸೋಲದ ಕನ್ನಡಿಗನಿಲ್ಲ ಎನ್ನುವುದು ಸಹಜ ಮಾತಾಗುವುದೇ ವಿನಃ ಅದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ದ.ರಾ.ಬೇಂದ್ರೆಯವರು ಮಥಿಸಿ ಮಥಿಸಿ ಕವನಗಳ ನವನೀತವನ್ನೆ ಕಡೆದವರು. ಬೇಂದ್ರೆ ಕಾವ್ಯ ಹೊಳೆಯಿಸುವ ರಸಾನುಭೂತಿಗಳು ‘ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ ಬೀಸುವ ಚುಂಬಕ ಗಾಳಿ’ಯ ವೇಗ-ಆವೇಗಗಳನ್ನು ಉಂಟುಮಾಡುವಂಥವು.

ಕನ್ನಡಕ್ಕೆ ಎರಡನೆಯ ಜ್ಞಾನಪೀಠ ತಂದುಕೊಟ್ಟ ಕವನ ಸಂಕಲನ ‘ನಾಕುತಂತಿ’ ಬೇಂದ್ರೆಯವರ 19ನೆಯ ಕೃತಿಯಾಗಿ 1964 ರಲ್ಲಿ ಪ್ರಕಟವಾಯಿತು. ಈ ಕೃತಿಗೆ ಈಗ 60 ವರ್ಷದ ಷಷ್ಠಿಪೂರ್ತಿಯ ಸಂಭ್ರಮ. ಇದರಲ್ಲಿ ಒಟ್ಟು 44 ಕವಿತೆಗಳಿದ್ದು ಈ ಸಂಕಲನದ ಸಮಗ್ರ ತಾತ್ವಿಕ ತಳಹದಿಯೇ ‘ನಾಲ್ಕರ’ ಒಗಟಿನ ಮೇಲೆ ನಿಂತಿದೆ ಎನ್ನಬಹುದು.

ಬೇಂದ್ರೆಯವರ ಕಾವ್ಯ ಸೃಷ್ಟಿಯ ಮೇಲೆ ಪ್ರಭಾವ ಬೀರಿದ ಸಮ್ಯಕ್ ಶಕ್ತಿಗಳು ಅನೇಕ. ಕವಿಮನವು ತನ್ನ ಚಿಂತನೆಯ ಕ್ರಮಕ್ಕೆ ಪೂರಕವಾಗಿಯೋ ಪ್ರತಿಷೇಧವಾಗಿಯೋ ಬರುವ ಯಾವುದನ್ನೇ ಆಗಲಿ ಅನುಸಂಧಾನಿಸುವುದು ಅನಿವಾರ್ಯ. ಹಾಗೆ ಬೇಂದ್ರೆಯವರ ಮೇಲೆ ಪ್ರಗಾಢವಾದ ಪ್ರಭಾವ ಬೀರಿದವರು ಹನ್ನೆರಡನೆಯ ಶತಮಾನದ ಶಿವಶರಣರು- ಅದರಲ್ಲೂ ಪ್ರಮುಖವಾಗಿ ಅಲ್ಲಮಪ್ರಭು, ಬಸವಣ್ಣ ಮತ್ತು ಅಕ್ಕಮಹಾದೇವಿಯರಂಥ ವಚನಕಾರರು. ಈ ಕುರಿತು ಬೇಂದ್ರೆಯವರು 1974 ರಷ್ಟು ಹಿಂದೆಯೇ ತಮ್ಮ ‘ಸಾಹಿತ್ಯದ ವಿರಾಟ್ ಸ್ವರೂಪ’ ಎಂಬ ಗ್ರಂಥದ ಪುಟ 196 ರಲ್ಲಿ ಸ್ಪಷ್ಟವಾಗಿಯೇ ಹೀಗೆ ಬರೆಯುತ್ತಾರೆ:

‘ಸಾಹಿತ್ಯ ಕವಿಯ ಸೃಷ್ಟಿ ಶಬ್ದದ ಮಾಯೆ. ವಚನಗಳ ಮಾತು ಹಾಗಲ್ಲ. ಬಸವನ ವಚನಗಳೇ ಆಗಲಿ, ಮಹಾದೇವಿಯ ವಚನಗಳೇ ಆಗಲಿ, ಪ್ರಭುವಿನ ವಚನಗಳೇ ಆಗಲಿ ಅವುಗಳಲ್ಲಿ ಮಹತ್ತರವಾದ ಪ್ರಾಣಶಕ್ತಿಯು ಸ್ಪಂದಿಸುವುದು. ಅವರ ಜೀವನವೇ ಬೇರೆ ಕವಿಗಳಿಗೆ ಕಾವ್ಯ ವಸ್ತುವಾಯಿತು. ಸಾಹಿತ್ಯ ಕವಿಗಳಿಗೆ ಆ ವರ ಜೀವನವಿಲ್ಲ’.


ದ.ರಾ. ಬೇಂದ್ರೆ



ನಾಕುತಂತಿಯ ಮುಖಪುಟ

ಇದಲ್ಲದೆ, ತಮ್ಮ ‘ನಮನ’ ಎನ್ನುವ ಕವನ ಸಂಗ್ರಹದಲ್ಲಿ ಬರೆದ ‘ನನ್ನದು ಈ ಕನ್ನಡ ನಾಡು’ ಎಂಬ ಕವಿತೆಯಲ್ಲಿ ಶಿವಶರಣರ ಕುರಿತು ಬೇಂದ್ರೆಯವರು ಹಾಡಿದ್ದು ಹೀಗೆ:

‘ಆ ನಂದಿಯಲ್ಲಿ, ಹಲ ಮಂದಿಯಲ್ಲಿ,
ಯುಗ ಸಂಧಿಯಲ್ಲಿ ಬಸವನ್ನಾ ಬೆಳಗಿಸಿ
ಅನುಭಾವ ಮೋಡ, ಘನದಾಚೆ ನೋಡ, ಸಿಡಿಲ್ ಮಿಂಚು
ಕೂಡ ಪ್ರಭುವಾಗಿ ಬೆಳಗಿಸಿ
ಇಹದೇವಿಯಾಗಿ, ಮಹದೇವಿಯಾಗಿ, ಬಹತಾಯಿಯಾಗಿ ಶ್ರೀಶೈಲಾ ತೊಳಗಿಸಿ
ಕಲ್ಯಾಣಿ ಕಟ್ಟಿ, ಉಳವಿಯನು ಮುಟ್ಟಿ, ದಿಗ್ದೇಶ ಮೆಟ್ಟಿ ಲಿಂಗಾಂಗ ಅಪ್ಪಿದಾ’

ಇದು ಶಿವಶರಣರನ್ನು ಬೇಂದ್ರೆಯವರು ಸಾಕ್ಷಾತ್ಕರಿಸಿಕೊಂಡು ಕೊಂಡಾಡಿದ ಪರಿ.

ಕನ್ನಡ ಸಾಹಿತ್ಯದ ನಾಲ್ಕು ನಾಯಕ ರತ್ನಗಳು:

ಈ ಮೇಲೆ ಉದಾಹರಿಸಿದ ದೃಷ್ಟಾಂತಗಳಲ್ಲದೆ ಬೇಂದ್ರೆಯವರು ಇನ್ನೊಂದೆಡೆ ಅಲ್ಲಮಪ್ರಭುವಿನ ಕುರಿತು ಬಹು ವಿಶೇಷವಾದ ರೀತಿಯಲ್ಲಿ ವಿವೇಚಿಸಿದ್ದಾರೆ. ‘ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು’ ಎಂಬುದು ಬೇಂದ್ರೆಯವರ ಮಹತ್ವದ ಗದ್ಯ ಕೃತಿ. ಇದು 1968 ರಲ್ಲಿ ಬೇಂದ್ರೆಯವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೀಡಿದ ಉಪನ್ಯಾಸಗಳ ಸಂಕಲಿತ ಕೃತಿ. ಈ ಕೃತಿಯಲ್ಲಿ ಬೇಂದ್ರೆಯವರು ಹೆಸರಿಸುವ ಕನ್ನಡ ಸಾಹಿತ್ಯದ ನಾಲ್ಕು ನಾಯಕ ರತ್ನಗಳಲ್ಲಿ ಅಲ್ಲಮಪ್ರಭು ಸಹ ಒಬ್ಬ ನಾಯಕ ರತ್ನ. ಆದ್ದರಿಂದ, ಬೇಂದ್ರೆಯವರ ಮೇಲಿನ ಶಿವಶರಣರ ಪ್ರಭಾವ ಅವರ ಕವನ, ಗದ್ಯ ಕೃತಿಗಳಿಂದಲೇ ನಮಗೆ ತಿಳಿಯುತ್ತದೆ.

ಹಾಗಾದರೆ, ನಾಕುತಂತಿ ಕವನಕ್ಕೆ ಯಾವ ವಚನ ಸ್ಫೂರ್ತಿಯಾಯಿತು?

ನಾಕುತಂತಿ ಕವಿತೆಯಲ್ಲಿ ಬೇಂದ್ರೆಯವರು ‘ನಾನು, ನೀನು, ಆನು, ತಾನು’ ಎಂಬ ಚತರ್ರಸಗಳನ್ನು ಜೀವನದ ಆತ್ಯಂತಿಕ ತಾತ್ವಿಕ ನೆಲೆಗಟ್ಟೆಂದು ಹೇಳುತ್ತಾರೆ. ಇದಕ್ಕೆ ಆಧಾರವಾಗಿ ನಿಲ್ಲುವುದು ಅಲ್ಲಮಪ್ರಭುವಿನ ಈ ವಚನ:

‘ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ
ಸ್ವಯಂ ಎಂಬುದು ಪ್ರಮಾಣ, ಪರಂ ಎಂಬುದು ಪ್ರಮಾಣ
ಪ್ರಮಾಣ ಎಂಬುದು ಪ್ರಮಾಣ
ಗುಹೇಶ್ವರನೆಂಬುದು ಅಪ್ರಮಾಣ!’

ಗಮನಿಸಬೇಕಾದ ಅಂಶವೆಂದರೆ ಇದೊಂದು ವಚನವನ್ನು ಬೇಂದ್ರೆಯವರು ಅನೇಕ ಕಡೆ ಪದೇಪದೇ ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. ‘ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು' ಕೃತಿಯಲ್ಲಿ ಪುಟ 26 ರಲ್ಲಿ ಮತ್ತು ಅವರ ಮರಾಠಿ ಗ್ರಂಥವಾದ ‘ಸಂತ ಮಹಂತಾಂಚಾ ಪೂರ್ಣ ಶಂಭೂ ವಿಠ್ಠಲ’ದ ಪುಟ 12ರಲ್ಲಿ ಅಲ್ಲದೆ ಇನ್ನೂ ಹಲವಾರು ಸಂದರ್ಭಗಳಲ್ಲಿ ಅಲ್ಲಮಪ್ರಭುವಿನ ಈ ವಚನವನ್ನು ಬೇಂದ್ರೆಯವರು ನಿರ್ವಚಿಸಿದ್ದಾರೆ. ಬೇಂದ್ರೆಯವರ ಮೇಲೆ ಅಲ್ಲಮಪ್ರಭು ಅಷ್ಟು ಆಳವಾದ ಪ್ರಭಾವ ಬೀರಲು ಕಾರಣವೆಂದರೆ, ಬೇಂದ್ರೆಯವರೆ ಹೇಳುವಂತೆ, ಅಲ್ಲಮಪ್ರಭುವಿನ ಪರಿಪೂರ್ಣ ವ್ಯಕ್ತಿತ್ವ ಮತ್ತು ನಿರಹಂಕಾರ. ಅಲ್ಲಮಪ್ರಭುವಿನ ಕುರಿತು ಬೇಂದ್ರೆಯವರ ಈ ಮಾತುಗಳನ್ನು ನಾವು ಗಮನಿಸಬೇಕು:

‘ಅಲ್ಲಮಪ್ರಭುದೇವನೆಂದರೆ ಭಕ್ತ ಹೃದಯದ ‘ಎದೆಯ ಒಕ್ಕಲಿಗ’ ನಿದ್ದಂತೆ. ಅವರಲ್ಲಿ ನಾವು ಅಹಂಕಾರದ ಲವಲೇಶವನ್ನೂ ಕಾಣುವಂತಿಲ್ಲ. ಅಲ್ಲಮಪ್ರಭುದೇವರ ಪ್ರತಿಯೊಂದು ಮಾತಿನಲ್ಲಿಯೂ ನಾವು ಜ್ಯೋತಿಯನ್ನು ಕಾಣಬಹುದು. ಜ್ಯೋತಿ ಎಂದರೆ ಮಾರ್ಗದರ್ಶಕ ಶಕ್ತಿ. ಇದು ವಿಜ್ಞಾನ ಮಾರ್ಗ!’

ಅಲ್ಲಮಪ್ರಭು ಈ ವಚನದಲ್ಲಿ ‘ನಾನು, ನೀನು, ಸ್ವಯಂ, ಪರಂ’ ಎಂಬ ನಾಲ್ಕು ರೂಪಗಳ ಮೂಲಕ ತಾತ್ವಿಕ ಸಂದೇಶವೊಂದನ್ನು ನೀಡುತ್ತಾನೆ. ಈ ವಚನವು ನಾಕುತಂತಿ ಕವನದಲ್ಲಿ ಬೇಂದ್ರೆಯವರು ಸಾಕ್ಷಾತ್ಕರಿಸಿಕೊಂಡ ಅನುಭವದ ಅಧ್ಯವಸಾಯವಾಗುತ್ತದೆ. ಹಾಗೆ ಬೇಂದ್ರೆಯವರ ಚಿಂತನೆಯ ಅನುಭವಕ್ಕೆ ಪ್ರೇರಕವಾಗಿ ಅಲ್ಲಮಪ್ರಭುವಿನ ಅನುಭಾವದ ವಚನವು ನಿಂತು ಪ್ರತಿಫಲಿತವಾಗುವುದು ಅಭಿಷ್ಟುತವಾದ ‘ನಾಕುತಂತಿ’ ಎಂಬ ಚತುಷ್ಟಯ.

ಜಿ. ಎಸ್. ಆಮೂರರ ಅಭಿಮತ:

ಬೇಂದ್ರೆಯವರ ಕಾವ್ಯದ ಕುರಿತು ಆಳವಾಗಿ ವಿಮರ್ಶಿಸಿದ ಜಿ. ಎಸ್. ಆಮೂರರು ನಾಕುತಂತಿ ಕವಿತೆಯ ಕುರಿತು ಹೇಳುವುದು ಹೀಗೆ:

‘ಆತ್ಮಾ ಚತುಷ್ಪಾತ್’ ಎಂಬ ಮಾತು ಉಪನಿಷತ್ತಿನಲ್ಲಿದೆ. ಆದರೆ ಬೇಂದ್ರೆಯವರ ಸಾಲುಗಳ ನಿಜವಾದ ಮೂಲ ಅಲ್ಲಮನ ವಚನದಲ್ಲಿದೆ ಎಂದೆನಿಸುತ್ತದೆ. ಇಲ್ಲಿ ‘ನಾನು’, ‘ನೀನು’ ಹಾಗೆಯೇ ಉಳಿದು ‘ಸ್ವಯಂ’ ಎನ್ನುವುದು ‘ಆನು’ ಆಗಿ ‘ಪರಂ’ ಎನ್ನುವುದು ‘ತಾನು’ ಆಗಿ ಪರಿವರ್ತಿತವಾಗಿದೆ’.

ಅಲ್ಲಮಪ್ರಭುವಿನ ವಚನವನ್ನು ಆಧಾರವಾಗಿಟ್ಟುಕೊಂಡು ತಮ್ಮ ಅನುಭವದ ಮೂಸೆಯಿಂದ ಬೇಂದ್ರೆಯವರು ನಾಕುತಂತಿ ಕವಿತೆಯಲ್ಲಿ ಈ ‘ನಾನು, ನೀನು, ಆನು, ತಾನು’ ಎಂಬ ಚತುಷ್ಟಯವನ್ನು ನಾಲ್ಕು ಭಾಗಗಳಲ್ಲಿ ಅದರ ನಾಲ್ಕು ತತ್ವ ಸ್ವರೂಪಗಳಲ್ಲಿ ನಿರೂಪಿಸುತ್ತಾರೆ.

ಇಂಥ ಅನುಪಮವಾದ ಕೃತಿಗೆ ಈಗ ಷಷ್ಠಿಪೂರ್ತಿ ಎನ್ನುವುದು ಒಂದು ಸಂಭ್ರಮವೂ ಹೌದು, ಬೇಂದ್ರೆಯವರ ನಾಕುತಂತಿಯನ್ನು ಇಂದಿನ ಕಾಲದ ಸಾಂಸ್ಕೃತಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಅನುಸಂಧಾನಿಸುವ ಹೊಸ ಅವಕಾಶವೂ ಹೌದು. ❖

ಪೈರೋಕ್ಲಾಸ್ಟಿಕ್ ಬಂಡೆಕಲ್ಲು

ಲಾವಾ ರಸ ಉಕ್ಕಿ ಶಿಲೆಯಾದಾಗ

• ಕೆ.ಓಂಕಾರ ಮೂರ್ತಿ

ಬೇಲೂರು, ಹಳೇಬೀಡು, ಹಂಪಿಯಲ್ಲಿ ಶಿಲೆಗಳು ಸಂಗೀತ ಹಾಡಿದರೆ ಇಲ್ಲೊಂದು ಗ್ರಾಮದ ಶಿಲೆಗಳು ಸಾವಿರಾರು ವರ್ಷಗಳ ಇತಿಹಾಸ ಹೇಳುತ್ತಿವೆ. ಈ ಶಿಲೆಗಳನ್ನು ಯಾರೂ ಕೆತ್ತಿಲ್ಲ, ರೂಪ ನೀಡಿಲ್ಲ, ರಕ್ಷಿಸಿಲ್ಲ. ಬದಲಾಗಿ ಸಾವಿರಾರು ವರ್ಷಗಳ ಹಿಂದೆ ಭೂಮಿಯಲ್ಲಿ ಉಂಟಾದ ಜ್ವಾಲಾಮುಖಿಯಲ್ಲಿ ಹರಿದು ಬಂದ ಲಾವಾ ರಸ ಗಟ್ಟಿಯಾಗಿ ಕ್ರಮೇಣ ಶಿಲೆಗಳಾಗಿವೆ.

ಅದುವೇ ಕೋಲಾರ ಜಿಲ್ಲೆಯ ಪೆದ್ದಪಲ್ಲಿ ಪೈರೋಕ್ಲಾಸ್ಟಿಕ್ ರಾಕ್ಸ್. ನೋಡುಗರ ಕಣ್ಣಿಗೆ ಬಂಡೆಗಳಂತೆ ಕಾಣುತ್ತವೆ. ಊರಿನ ಕೆರೆಗಳ ಬಳಿಯೋ, ಬೆಟ್ಟ ಗುಡ್ಡಗಳ ಬಳಿಯೋ ಇರುವ ಕಲ್ಲು ಬಂಡೆಗಳಂತೆ ಭಾಸವಾಗುತ್ತವೆ. ಆದರೆ, ಒಳಹೊಕ್ಕಿ ನೋಡಿದರೆ ಈ ಬಂಡೆಗಳ ಅಥವಾ ಶಿಲೆಗಳ ದೊಡ್ಡ ಇತಿಹಾಸ ಬಿಚ್ಚಿಕೊಳ್ಳುತ್ತದೆ. ಭೂಮಿಯಲ್ಲಿ ಸ್ಫೋಟ ಪ್ರಕ್ರಿಯೆ ನಡೆದು ಜ್ವಾಲಾಮುಖಿಯಿಂದ ಹೊರಹೊಮ್ಮಿದ ತುಣುಕುಗಳಿಗೆ ‘ಪೈರೋಕ್ಲಾಸ್ಟಿಕ್’ ಎನ್ನುತ್ತಾರೆ. ಅವೇ ಪೈರೋಕ್ಲಾಸ್ಟಿಕ್ ಬಂಡೆ ಅಥವಾ ಶಿಲೆಗಳಾಗಿವೆ.

ಇವುಗಳನ್ನು ಪತ್ತೆ ಹಚ್ಚಿ 1976ರಲ್ಲೇ ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕ ಎಂದು ಘೋಷಿಸಲಾಗಿದೆ. ಗ್ರಾನೈಟ್ ಶಿಲೆಗಳಂತೆ ಇವು ಭಾಸವಾಗುತ್ತವೆ. ದೊಡ್ಡ ಬಂಡೆ ಒಂದು ಕಡೆ ಇದ್ದರೆ ಅಲ್ಲಲ್ಲಿ ಸಣ್ಣ ಕಲ್ಲುಗಳು ಚದುರಿಕೊಂಡಿವೆ.

ಚಿನ್ನದ ಗಣಿಯಿಂದ ಪ್ರಸಿದ್ಧಿ ಪಡೆದಿರುವ ಕೆಜಿಎಫ್ ನಗರದ ಮಗ್ಗುಲಲ್ಲೇ ಇರುವ ಪುಟ್ಟ ಗ್ರಾಮ ಪೆದ್ದಪಲ್ಲಿ ಒಡಲಲ್ಲಿ ಪೈರೋಕ್ಲಾಸ್ಟಿಕ್ ಶಿಲೆಗಳು ಇವೆ. ಈ ಗ್ರಾಮದ ಗಂಗಮ್ಮನ ಜಾತ್ರೆ ಬಹಳ ಪ್ರಸಿದ್ಧಿ. ಚಿನ್ನ ತೆಗೆಯಲು ಬಂದ ಬ್ರಿಟಿಷರು ಕೂಡ ಗಂಗಮ್ಮನ ಜಾತ್ರೆಗೆ ಹೋಗಲು ಕಾರ್ಮಿಕರಿಗೆ ಅನುವು ಮಾಡಿಕೊಡುತ್ತಿದ್ದರು. ಊರಿನ ಮನೆಗಳು ಹಾಗೂ ಕೆರೆಗೆ ಹೊಂದಿಕೊಂಡೇ ಈ ಶಿಲೆಗಳು ಹರಡಿಕೊಂಡಿವೆ.

ಊರ ಜನ ಜಾನುವಾರುಗಳನ್ನು ಮೇಯಿಸಲು ಹೋದಾಗ ಈ ಬಂಡೆಗಳ ಮೇಲೆ ಕುಳಿತು ವಿಶ್ರಮಿಸುತ್ತಾರೆ. ಊರು ಹಬ್ಬವನ್ನು ಇದೇ ಬಂಡೆ ಮೇಲೆ ಆಚರಿಸುತ್ತಾರೆ. ಕಿಡಿಗೇಡಿಗಳು ಈ ಬಂಡೆ ಮೇಲೆ ಕುಡಿದು ಬಾಟಲಿಗಳನ್ನು ಅಲ್ಲಲ್ಲಿ ಎಸೆದು ಹೋಗಿದ್ದಾರೆ. ಗ್ರಾಮಸ್ಥರೊಬ್ಬರು ಬಂಡೆಯ ಮೇಲೆಯೇ ಮನೆಯನ್ನು ಕಟ್ಟಿಕೊಳ್ಳುವ ಸಾಹಸ ಕೂಡ ಮಾಡಿದ್ದುಂಟು. ಶಿಲೆಗಳ ಐತಿಹಾಸಿಕ ಮಹತ್ವದ ಬಗ್ಗೆ ಗ್ರಾಮಸ್ಥರಿಗೆ ಹೆಚ್ಚೇನೂ ಗೊತ್ತಿಲ್ಲ.

ಈ ಜಾಗವನ್ನು ಹುಡುಕಿಕೊಂಡು ಆಗಾಗ್ಗೆ ಭೂ ವಿಜ್ಞಾನಿಗಳು, ಇತಿಹಾಸಕಾರರು, ಸಂಶೋಧನಾ ವಿದ್ಯಾರ್ಥಿಗಳು ಗ್ರಾಮಕ್ಕೆ ಬರುತ್ತಿರುತ್ತಾರೆ. ಕುರುಚಲು ಗಿಡಗಳ ಮಧ್ಯೆ ಇರುವ ಈ ಬಂಡೆಗಳನ್ನು ನೋಡಲು ಜನರು ದೂರ ಪ್ರದೇಶಗಳಿಂದ ಬರುತ್ತಾರೆ. ಭೂಗರ್ಭ ವಿಜ್ಞಾನದ ಬಗ್ಗೆ ಅಧ್ಯಯನ ಮಾಡುವವರಿಗೆ ಕೂಡ ಇದು ಸಹಕಾರಿಯಾಗಿದೆ. ಹೊಸದಾಗಿ ನೇಮಕಗೊಂಡ ಭೂ ವಿಜ್ಞಾನಿಗಳ ತರಬೇತಿ, ಅಧ್ಯಯನಕ್ಕಾಗಿ ಬಳಸಲಾಗುತ್ತದೆ. ಆದರೆ, ಇಲ್ಲಿ ಯಾವುದೇ ರೀತಿಯ ಚಟುವಟಿಕೆ ನಡೆಯುವುದಿಲ್ಲ, ಗಣಿಗಾರಿಕೆ ಚಟುವಟಿಕೆ ನಡೆಸಲೂ ಅವಕಾಶವಿಲ್ಲ. ಕೇವಲ ಸಂಶೋಧನೆಗೆ ಈ ಬಂಡೆಕಲ್ಲು ಬಳಸಲಾಗುತ್ತಿದೆ.

ಅಪರೂಪದ ಈ ಶಿಲೆಗಳನ್ನು ಕಾಪಾಡಿಕೊಂಡು ಮುಂದಿನ ಜನಾಂಗಕ್ಕೆ ಅದರ ಸ್ವರೂಪವನ್ನು ವಿವರಿಸಲು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಇಲಾಖೆ (ಜಿಎಸ್ಐ) ಈ ಶಿಲೆಗಳ ನಿರ್ವಹಣೆಯ ಹೊಣೆ ಹೊತ್ತಿದೆ.

ಪೆದ್ದಪಲ್ಲಿ ಗ್ರಾಮದ ಸರ್ವೆ ನಂಬರ್ 15 ಮತ್ತು 17ರ ಭೂ ಪ್ರದೇಶವನ್ನು ಅಧ್ಯಯನದ ಉದ್ದೇಶಕ್ಕಾಗಿ 1976ರಲ್ಲೇ ಕೇಂದ್ರ ಸರ್ಕಾರ ಹಾಗೂ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಇಲಾಖೆ ಸರ್ವೆ ನಡೆಸಿ ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕ ಎಂದು ಘೋಷಿಸಿವೆ. ಪೆದ್ದಪಲ್ಲಿ ಹಾಗೂ ಸ್ಕೂಲ್ ಆಫ್ ಮೈನ್ಸ್ ಬಳಿ ಆಗಲೇ ಎರಡು ನಾಮಫಲಕಗಳನ್ನು ಅಳವಡಿಸಲಾಗಿದೆ. ಆದರೆ, ಇದರಲ್ಲಿ ಯಾವುದೇ ಚಿನ್ನ, ಪ್ಲಾಟಿನಂ ಅಥವಾ ವಜ್ರದ ನಿಕ್ಷೇಪಗಳಿಲ್ಲ ಎಂದು ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

ಪೆದ್ದಪಲ್ಲಿ ಬಂಡೆಗಳಲ್ಲಿ ವಜ್ರದ ನಿಕ್ಷೇಪಗಳಿವೆ ಎನ್ನುವ ವದಂತಿ ಹಬ್ಬಿದ ಹಿನ್ನೆಲೆಯಲ್ಲಿ ಕೆಲ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ಕೂಡ ನಡೆಸಿದ್ದರು.

ಜ್ವಾಲಾಮುಖಿಯಿಂದ ಸೃಷ್ಟಿಯಾಗಿರುವ ಪೈರೋಕ್ಲಾಸ್ಟಿಕ್ ಬಂಡೆಯಲ್ಲಿ ಯಾವುದೇ ಖನಿಜ ನಿಕ್ಷೇಪ ಇಲ್ಲ. ಇದು ಭೂವೈಜ್ಞಾನಿಕ ಸಂರಚನೆಯ ಬಂಡೆಯಷ್ಟೇ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಇಂತಹ ಶಿಲೆಗಳು ಈ ಭಾಗದ ಬೇರೆಲ್ಲೂ ಕಾಣುವುದಿಲ್ಲ. ಕೋಲಾರ ಜಿಲ್ಲೆಯ ಕಾಮಸಮುದ್ರ ರಸ್ತೆಯ ಕೆಲವು ಬಂಡೆಗಳಲ್ಲಿ ಮತ್ತು ವಲಗಮಾದಿ ಬಳಿಯ ಬೆಟ್ಟದಲ್ಲಿಯೂ ಲಾವಾರಸದ ಶಿಲೆಗಳು ಕಂಡು ಬಂದರೂ, ಅವುಗಳಿಗೆ ಪೆದ್ದಪಲ್ಲಿಯ ಶಿಲೆಯಷ್ಟು ಮೌಲ್ಯವಿಲ್ಲ. ಭೂ ವಿಜ್ಞಾನಿಗಳ ದೃಷ್ಟಿಯಲ್ಲಿ ಬೆಂಕಿಯಿಂದ ಬಂದು ತಣ್ಣಗಾಗಿ ಬಂಡೆಯಾಗಿ ರೂಪುಗೊಂಡ ಪೈರೋಕ್ಲಾಸ್ಟಿಕ್ ಸಂಶೋಧನೆಗೆ ಅರ್ಹವಾಗಿದೆ.

ಸರ್ಕಾರಿ ಜಾಗ ಇದಾಗಿದ್ದು, ಸದ್ಯ ಪೈರೋಕ್ಲಾಸ್ಟಿಕ್ ಶಿಲೆಗಳಿಗೆ ಸಂರಕ್ಷಣೆ ಇಲ್ಲವಾಗಿದೆ. ಕಾಂಪೌಂಡ್ ಕೂಡ ನಿರ್ಮಿಸಿಲ್ಲ. ಜೊತೆಗೆ ಸರಿಯಾದ ನಿರ್ವಹಣೆ ಕೊರತೆ ಕಾಡುತ್ತಿದೆ. ಶಿಲೆ ಪಕ್ಕದಲ್ಲೇ ಕೊಳಚೆ ನೀರಿನ ಗುಂಡಿ ಇದೆ. ಸುತ್ತಲೂ ದಟ್ಟ ಕಳೆ ಬೆಳೆದಿದೆ. ಪ್ರವಾಸೋದ್ಯಮಕ್ಕೆ ಯೋಗ್ಯವಾದ ಪ್ರದೇಶ ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ಬಂಡೆ ಕಲ್ಲುಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಭೂಗರ್ಭ ವಿಜ್ಞಾನಿಗಳು ಆಗಾಗ್ಗೆ ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ. ಬಂಡೆಗಳು ಇರುವ ಸುತ್ತಮುತ್ತಲಿನ ಐದು ಎಕರೆ ಜಾಗವನ್ನು ರೈತರಿಂದ, ಒತ್ತುವರಿದಾರರಿಂದ ಬಿಡಿಸಿಕೊಂಡು ಸಂರಕ್ಷಿಸುವ ಕೆಲಸಕ್ಕೆ ಮುಂದಾಗಿದೆ. ❖

ಪೈರೋಕ್ಲಾಸ್ಟಿಕ್ ಬಂಡೆಕಲ್ಲಿಗೆ ಸಂಬಂಧಿಸಿದ ಸೂಚನಾ ಫಲಕ

ಎಲ್ಲಿದೆ ಪೆದ್ದಪಲ್ಲಿ?

ಪೆದ್ದಪಲ್ಲಿ ಪೈರೋಕ್ಲಾಸ್ಟಿಕ್ ರಾಕ್ಸ್ ಬೆಂಗಳೂರಿನಿಂದ ಸುಮಾರು 100 ಕಿ.ಮೀ ದೂರದಲ್ಲಿದೆ. ಕೋಲಾರ ಜಿಲ್ಲೆಯ ಕೆಜಿಎಫ್ ನಗರದಿಂದ 4 ಕಿ.ಮೀ ಆಗುತ್ತದೆ. ಬೇತಮಂಗಲ ರಸ್ತೆಯಲ್ಲಿ ಬಲಕ್ಕೆ ತಿರುವು ಪಡೆದು 1 ಕಿ.ಮೀ ಮುಂದೆ ಸಾಗಿದರೆ ಈ ಪೈರೋಕ್ಲಾಸ್ಟಿಕ್ ಬಂಡೆಗಳು ಕಾಣುತ್ತವೆ. ಬೇತಮಂಗಲ ರಸ್ತೆಯ ತಿರುವಿನಲ್ಲಿ ಹಾಗೂ ಬಂಡೆ ಇರುವ ಸ್ಥಳದಲ್ಲಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣೆ ಇಲಾಖೆ ನಾಮಫಲಕ ಅಳವಡಿಸಿದೆ.



ಕಥೆ
ಮೂಲ: ಎಡ್ಗರ್ ಅಲನ್ ಪೋ
ಕನ್ನಡಕ್ಕೆ: ಜ್ಯೋತಿ
ಅವರ
ಹೃದಯ ಹೇಳಿದ ಕಥೆ
prajavani.net/short-story

ಕವನ
ಶಂಕರ್ ಸಿಹಿಮೊಗ್ಗೆ
ಅವರ
ಅರ್ಥ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕೆಂಗೊಡಲಿ

ಕೆಂಗೊಡಲಿ (ನಾ). (ರಕ್ತದಿಂದ) ಕೆಂಪಾದ ಕೊಡಲಿ.

ರಾಮ ಸೀತೆ ಮತ್ತು ಅವನ ಸಹೋದರರು ವಿವಾಹವಾದ ಕನ್ನೆಯರೊಡನೆ ದೊಡ್ಡ ಮೆರವಣಿಗೆಯಲ್ಲಿ ರಾಜಮಾರ್ಗದಲ್ಲಿ ಸಾಗುತ್ತಿದ್ದರು. ಆಗ ಅವರ ಎದುರು ಪರಶುರಾಮ ಬಂದನು. ಅವನ ಭಯಂಕರತೆಯನ್ನು ಕುವೆಂಪು ಅವರು ‘ಕೆಂಗೊಡಲಿ’ ಪದದಿಂದ ಹೀಗೆ ಬಣ್ಣಿಸಿದ್ದಾರೆ:

‘ಭೀಷ್ಮತೆವೆತ್ತು
ರಂಜಿಸಿತು ಹೆಗಲಿನೊಳ್ ಕೆಂಗೊಡಲಿ.’

ಕೌಟವಿ

ಕೌಟವಿ (ನಾ). (ಅಲಂ). ಬರಿದಾಗು; ಶೂನ್ಯವಾಗು.

ಸೀತೆಯನ್ನು ಹುಡುಕಲು ಹೊರಟ ಸಂಶೊಧನಾ ಕೋವಿದರಾದ ವಾನರರು - ಸೂರ್ಯನ ಕಿರಣಗಳ ಜೊತೆಗೂಡಿ, ಕಣ್ಣಿಗೆ ಕಾಡು ಬರಿದಾಗುವಂತೆ ತಡವಿದರು- ಎಂಬ ಚಿತ್ರಣದಲ್ಲಿ ‘ಕೌಟವಿ’ ಪದವನ್ನು ಆಲಂಕಾರಿಕವಾಗಿ ಹೀಗೆ ಪ್ರಯೋಗಿಸಿದ್ದಾರೆ:

‘ಆ ಕೀಶ
ಸಂಶೋಧನಾ ಕೋವಿದರ್! ತಡವಿದರಹಸ್ಪತಿಯ
ಕದಿರಾಳ್ಗಳಂ ಕೂಡಿ ಪಗಲನೆತ್ತೆತ್ತಲುಂ,
ಕೌಟವಿಯಾಗೆ ಕಣ್ಗಟವಿ’

ಮರುಸರೋವರ

ಮರುಸರೋವರ (ನಾ). ಬಿಸಿಲುಗುದುರೆ; ಮರೀಚಿಕೆ

ಸುಗ್ರೀವನಿಗೆ ಮಹಾವಾನರ ಮೈಂದನು ತನ್ನ ಪಡೆಯು ಮರಳುಗಾಡಿನಲ್ಲಿ ಸಿಕ್ಕು ತೊಳಲಾಡಿದ್ದನ್ನು ಹೇಳುವನು. ಅದು ಅವರಿಗೆ ಅಲ್ಲಿ ಉಂಟುಮಾಡಿದ ಬಿಸಿಲುಗುದುರೆಯನ್ನು ಕುವೆಂಪು ‘ಮರುಸರೋವರ’ ಎಂದು ಕರೆದು ಹೀಗೆ ಬಣ್ಣಿಸಿದ್ದಾರೆ:

‘ಕಣ್ ಮೋಹಿಸಿತು ಮನೋಹರಂ
ಮರುಸರೋವರಂ’

ಮೊದಲ ಓದು

ಬದುಕಿನ ವೈರುಧ್ಯಗಳ ಕಥನ



ಮಿಥ್ಯಸುಖ
ಲೇ: ಕಾವ್ಯಾ ಕಡಮೆ
ಪ್ರ: ಜೀರುಂಡೆ ಪುಸ್ತಕ
ಸಂ: 9742225779

ಕಾದಂಬರಿಯೊಂದರ ಸಾರ್ಥಕತೆಯ ಲಕ್ಷಣಗಳಲ್ಲಿ ಅದು ಮೈದಳೆದಿರುವ ಭಾಷೆ ಹಾಗೂ ವಿವರ ಸಮೃದ್ಧಿ ಮುಖ್ಯವಾದವು. ಕಾವ್ಯಗಂಧಿ ಭಾಷೆ ಹಾಗೂ ಸೂಕ್ಷ್ಮ–ಸಮೃದ್ಧ ವಿವರಗಳ ಕಾರಣದಿಂದಾಗಿ ‘ಮಿಥ್ಯಸುಖ’ ಕಾದಂಬರಿ ಒಳ್ಳೆಯ ಓದಿನ ಅನುಭವ ಕೊಡುತ್ತದೆ.

‘ಮಿಥ್ಯಸುಖ’ ಕಾವ್ಯಾ ಕಡಮೆ ಅವರ ಎರಡನೇ ಕಾದಂಬರಿ. ಮೊದಲ ಕಾದಂಬರಿ ‘ಪುನರಪಿ’ಯಲ್ಲಿ ಸಲಿಂಗ ಕಾಮದಂಥ ಭಿನ್ನ ವಿಷಯ ನಿರ್ವಹಿಸಿದ್ದ ಇವರು, ಈ ಬಾರಿಯೂ ಭಿನ್ನ ವಸ್ತುವಿನೊಂದಿಗೆ ಅನುಸಂಧಾನ ನಡೆಸಿದ್ದಾರೆ. ಇದು ಎರಡು ಕಾರಣಗಳಿಗಾಗಿ ಮುಖ್ಯವಾದುದು. ಮೊದಲನೆಯದು, ಸಾಂದ್ರವಾದ ಕಥನವನ್ನು ಕಟ್ಟುವುದಕ್ಕಿಂತಲೂ ತನ್ನ ಜಿಜ್ಞಾಸೆಯೊಂದನ್ನು ಓದುಗರ ಜಿಜ್ಞಾಸೆಯಾಗಿಯೂ ಹಬ್ಬಿಸುವ ಕಾದಂಬರಿಗಾರ್ತಿಯ ಮಹತ್ವಾಕಾಂಕ್ಷೆ. ಬಹು ಸೂಕ್ಷ್ಮವಾದ ವಿಷಯವನ್ನು ನಿರೂಪಿಸುವಾಗ, ಅದು ಎಲ್ಲಿಯೂ ಲಘುವಾಗದಂತೆ ವಹಿಸಿರುವ ಎಚ್ಚರ. ಜೊತೆಗೆ, ಮನಸ್ಸಿನ ಭಾವಗಳಿಗೆ ತಕ್ಕುದಾದ ಆರ್ದ್ರ ನುಡಿಗಟ್ಟೊಂದನ್ನು ರೂಪಿಸಿಕೊಂಡಿರುವ ಕೌಶಲದಿಂದಾಗಿಯೂ ಕೃತಿ ಗಮನಸೆಳೆಯುತ್ತದೆ.

ಕಾದಂಬರಿಯ ಕಥಾನಾಯಕಿ ಲೋಕದ ಕಣ್ಣಿಗೆ ಯಶಸ್ವೀ ಹೆಣ್ಣು. ಕುಟುಂಬ ಹಾಗೂ ವೃತ್ತಿ, ಎರಡನ್ನೂ ಸರಿದೂಗಿಸಿಕೊಂಡು ಹೋಗುತ್ತಿರುವ ಜಾಣೆ. ಓದು–ಬರಹದಲ್ಲಿ ಬದುಕಿನ ಚೆಲುವು ಹಾಗೂ ಸಾರ್ಥಕತೆಯಿದೆ ಎಂದು ನಂಬಿರುವಾಕೆ, ಯಾವುದೋ ಸಂದರ್ಭದಲ್ಲಿ ‘ಮೋಹನ ಮುರಲಿ’ಯೊಂದಕ್ಕೆ ಓಗೊಡುವುದು ಹಾಗೂ ತನ್ನ ಮನಸ್ಸಿನ ಮಾತನ್ನು ಪಾಲಿಸುವುದರಲ್ಲಿ ತೋರುವ ದಿಟ್ಟತನ, ಚೌಕಟ್ಟಿನ ಹಂಗಿಗೆ ಸಿಲುಕದ ದಿಟ್ಟ ಹೆಣ್ಣಿನ ಚಿತ್ರದಂತಿದೆ. ವೈಯಕ್ತಿಕ ಜೀವನದಲ್ಲಿ ವಾಣಿ ಏನನ್ನು ಹುಡುಕುತ್ತಿದ್ದಾಳೆ ಎನ್ನುವುದನ್ನು ಗೆರೆಕೊರೆದಂತೆ ಹೇಳುವುದು ಕಷ್ಟ. ಆಕೆ ಕೆಲಸ ಮಾಡುವ ಸಂಸ್ಥೆಯ ಹೊಸ ಅವಸ್ಥೆಗೂ, ಅವಳ ಮನಸ್ಸಿನೊಳಗಿನ ಹೊಯ್ದಾಟಕ್ಕೂ ಸಾಮ್ಯತೆ ಇರುವಂತೆಯೇ ವೈರುಧ್ಯವೂ ಇದೆ. ಬದುಕು ಹಾಗೂ ಸಮಾಜದ ವೈರುಧ್ಯಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನದ ರೂಪದಲ್ಲಿ ಕೃತಿ ಮುಖ್ಯವೆನ್ನಿಸುತ್ತದೆ. ಅಮೆರಿಕದ ಕಿಟಕಿಯಲ್ಲಿ ಉತ್ತರಕನ್ನಡದ ಹಿತ್ತಲನ್ನು ಕಾಣಿಸಲು ಹಂಬಲಿಸುವ ‘ಮಿಥ್ಯಸುಖ’ ಬದುಕಿನ ಅರ್ಥಸಾಧ್ಯತೆ ಹಾಗೂ ನಿರರ್ಥಕತೆಯ ಬಗ್ಗೆ ಯೋಚಿಸಲು ಸಹೃದಯರನ್ನು ಪ್ರೇರೇಪಿಸುವ ಕಾದಂಬರಿ.

ಪುಟ: 304 ₹365

ಬಂಡವಾಳಶಾಹಿ ಜಗತ್ತನ್ನು ಪರಿಚಯಿಸುವ ಕೃತಿ



ಏಕಸ್ವಾಮ್ಯ ಖರೀದಿ ಬಂಡವಾಳಶಾಹಿ
ಲೇ: ಅಶೋಕ್ ಕುಮಾರ್
ಅನು: ನಾ. ದಿವಾಕರ
ಪ್ರ: ಆಕೃತಿ ಪುಸ್ತಕ

ಮಾರ್ಕ್ಸ್ ಹೇಳಿರುವಂತೆ ಬಂಡವಾಳಶಾಹಿ ಎಂಬುದು ಸಮಾಜದಲ್ಲಿನ ಸಣ್ಣದನ್ನು ಇಲ್ಲವಾಗಿಸುತ್ತಾ, ದೊಡ್ಡದನ್ನು ಇನ್ನೂ ದೊಡ್ಡದು ಮಾಡುತ್ತಾ ಉದ್ಯಮ ಜಗತ್ತಿನಲ್ಲಿ ಕೆಲವೇ ಕೆಲವು ವ್ಯಕ್ತಿ ಅಥವಾ ಉದ್ದಿಮೆಗಳ ಕೈಗೆ ಒಪ್ಪಿಸುವ ವ್ಯವಸ್ಥೆ. ಜಗತ್ತನ್ನೇ ಆವರಿಸುತ್ತಿರುವ ಕಾರ್ಪೊರೇಟ್ ಎಂಬ ಈ ಏಕಸ್ವಾಮ್ಯ ಬಂಡವಾಳಗಾರರಿಂದ ವ್ಯವಸ್ಥೆ ಹೇಗೆ ನಿಯಂತ್ರಣಕ್ಕೊಳಪಡುತ್ತದೆ ಎಂಬುದರ ಚರ್ಚೆ ಈಗ ವ್ಯಾಪಕವಾಗಿದೆ.

ಬಂಡವಾಳಶಾಹಿ, ಹೊರಗುತ್ತಿಗೆ, ನವ ಉದಾರವಾದ, ಮನೋಪ್ಸೊನಿ ಎಂಬಿತ್ಯಾದಿಗಳು ಈ ವ್ಯವಸ್ಥೆಯಲ್ಲಿ ಬಳಕೆಯಲ್ಲಿರುವ ಪದಗಳು. ನವೀನ ಆವಿಷ್ಕಾರ ಮತ್ತು ಹೊಸ ತಂತ್ರಜ್ಞಾನಗಳ ಅಲೆಗಳ ಮೇಲೆ ಸಾಗುವ ಈ ಬಂಡವಾಳಶಾಹಿಗೆ ಕೆಲವೊಮ್ಮೆ ಸುನಾಮಿ ಅಪ್ಪಳಿಸುವ ಅಪಾಯವೂ ಇರುತ್ತದೆ. ಇಂಥವುಗಳ ಅಧ್ಯಯನ ನಡೆಸಿ, ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ವಿವರಿಸುವ ಪ್ರಯತ್ನವನ್ನು ಲಂಡನ್‌ನಲ್ಲಿ ಪ್ರಾಧ್ಯಾಪಕರಾಗಿರುವ ಅಶೋಕ್ ಕುಮಾರ್ ಅವರು ‘ಮೋನೋಪ್ಸೋನಿ ಕ್ಯಾಪಿಟಲಿಸಂ: ಪವರ್ ಅಂಡ್ ಪ್ರೊಡಕ್ಷನ್ ಇನ್ ದ ಟ್ವೈಲೈಟ್ ಆಫ್ ಸ್ವೆಟ್‌ಶಾಪ್ ಏಜ್’ ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ.

ಇದನ್ನು ‘ಏಕಸ್ವಾಮ್ಯ ಖರೀದಿ ಬಂಡವಾಳಶಾಹಿ: ಗ್ಲೋಬಲ್ ವ್ಯಾಲ್ಯೂ ಚೇನ್‌ಗಳ ಯುಗದಲ್ಲಿ ಅಭಿವೃದ್ಧಿ ಪಥಗಳು’ ಎಂಬ ಶೀರ್ಷಿಕೆಯಡಿ ನಾ. ದಿವಾಕರ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರಿಗೆ ಅಡಿಟಿಪ್ಪಣಿಗಳಿಗೆ ವಿ.ಎಸ್.ಎಸ್.ಶಾಸ್ತ್ರಿ ನೆರವಾಗಿದ್ದಾರೆ.

ಶ್ರಮ ಬೇಡುವ ಬೆವರು ಅಂಗಡಿಗಳ ಯುಗ ಆರಂಭ ಮತ್ತು ಅಂತ್ಯ, ಜಾಗತಿಕ ಮಟ್ಟದಲ್ಲಿ ಕಾರ್ಮಿಕರ ಚೌಕಾಸಿ ಶಕ್ತಿಯ ವಿಶ್ಲೇಷಣೆ, ಬೇರೆ ಬೇರೆ ರಾಷ್ಟ್ರಗಳಲ್ಲಿ ಏಕಸ್ವಾಮ್ಯ ಬಂಡವಾಳಶಾಹಿ ಹೇಗೆ ಕೆಲಸ ಮಾಡುತ್ತಿದೆ ಎಂಬ ಚಿತ್ರಣದ ಜತೆಗೆ ಹಲವು ಕುತೂಹಲಕರ ಮಾಹಿತಿ ಈ ಕೃತಿಯಲ್ಲಿದೆ. ಭೂತಕಾಲದಲ್ಲಿ ನಡೆದ ಚಿತ್ರಣಗಳು, ವರ್ತಮಾನದ ವಾಸ್ತವ ಹಾಗೂ ಭವಿಷ್ಯದಲ್ಲಿ ಏನಾಗಲಿದೆ ಎಂಬ ಮಾಹಿತಿಯನ್ನು ಈ ಕೃತಿ ಒಳಗೊಂಡಿದೆ.

ಪುಟ: 442 ₹495

ವಿಚಾರ ಕ್ರಾಂತಿಯ ಆಂದೋಲನ



ಕುವೆಂಪು ವಿಚಾರ ಕ್ರಾಂತಿ
ಸಂ: ಬರಗೂರು ರಾಮಚಂದ್ರಪ್ಪ
ಪ್ರ: ಜನ ಪ್ರಕಾಶನ
ಸಂ: 9632329955

ಕುವೆಂಪು ಸೃಜನಶೀಲ ಧ್ಯಾನದಲ್ಲಿ ಅನುಸಂಧಾನ ಮಾಡುತ್ತಲೇ ಸರ್ವರ ಏಳಿಗೆಗೆ ತಮ್ಮ ಚಿಂತನೆಯನ್ನು ವಿಸ್ತರಿಸಿದವರು. ‘ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ’ ಎಂಬ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ನೀಡಿದವರು. ಸೃಜನಶೀಲ ಸಾಹಿತ್ಯದ ಜೊತೆ ಭಾಷಣ ಮತ್ತು ಗದ್ಯ ಬರಹಗಳ ಮೂಲಕ ಜಡ್ಡುಗಟ್ಟಿದ ವ್ಯವಸ್ಥೆಗೆ ಚಲನಶೀಲ ಶಕ್ತಿ ನೀಡಿ ಬದಲಾವಣೆಯನ್ನು ಬಯಸಿದವರು. ಅವರ ಕೆಲವು ವೈಚಾರಿಕ ಬರಹಗಳನ್ನು ಬರಗೂರು ರಾಮಚಂದ್ರಪ್ಪ ಸಂಪಾದಿಸಿ ‘ಕುವೆಂಪು ವಿಚಾರ ಕ್ರಾಂತಿ’ ಕೃತಿಯನ್ನು ರೂಪಿಸಿದ್ದಾರೆ.

ಕುವೆಂಪು ಚಿಂತನೆಯನ್ನು ಆಂದೋಲನದ ರೀತಿಯಲ್ಲಿ ಪ್ರಚಾರ ಮಾಡುವ ಯೋಚನೆ ಈ ಕೃತಿಯ ಹಿಂದೆ ಇದೆ. ದೀರ್ಘ ಪ್ರಸ್ತಾವನೆಯನ್ನು ಬರೆದಿರುವ ಬರಗೂರು ‘ವಿಶ್ವಕವಿ’ ಕುವೆಂಪು ಅವರ ವೈಚಾರಿಕ ಪ್ರಜ್ಞೆ ಜಗತ್ತಿನ ಎಲ್ಲರಿಗೂ ಅಗತ್ಯ ಇದೆ ಎನ್ನುವುದನ್ನು ನಿರೂಪಿಸುತ್ತಾರೆ. ವಿಶ್ವ ದ್ವೇಷ, ಹಿಂಸೆ, ಭ್ರಷ್ಟಾಚಾರ ಮಾತ್ರವಲ್ಲದೆ ಅನೇಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ವಾಸ್ತವವನ್ನು ಅರ್ಥ ಮಾಡಿಕೊಳ್ಳುವ ವೈಚಾರಿಕ ಪ್ರಜ್ಞೆಯ ಅಗತ್ಯ ಇದೆ. ಆ ನಿಟ್ಟಿನಲ್ಲಿ ಕುವೆಂಪು ವಿಚಾರ ಸಾಹಿತ್ಯ ಮಾರ್ಗದರ್ಶಿ ಆಗಬಲ್ಲದು ಎನ್ನುವುದು ಸಂಪಾದಕರ ಆಶಯ.

ಬೆಂಗಳೂರು ವಿಶ್ವವಿದ್ಯಾಲಯದ ಹತ್ತನೇ ಘಟಿಕೋತ್ಸವದ ಭಾಷಣ ‘ವಿಚಾರ ಕ್ರಾಂತಿಗೆ ಆಹ್ವಾನ’, ಶ್ರೀರಂಗಪಟ್ಟಣದಲ್ಲಿ 1938ರಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿದ ಭಾಷಣ ‘ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ’ ಒಳಗೊಂಡು ‘ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ’, ‘ಸಂಸ್ಕೃತಿ ಕರ್ನಾಟಕ’ ಮೊದಲಾದ ಎಂಟು ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಬೇರೆ ಬೇರೆ ಸಂದರ್ಭದಲ್ಲಿ ಬರೆದ ಭಾಷಣ ಮತ್ತು ಲೇಖನಗಳನ್ನು ಈ ಕೃತಿ ಒಳಗೊಂಡಿದೆ.

ಪುಟ: 112 ₹100

ಪುದುಚೇರಿ ಫ್ರೆಂಚರ ಕೇರಿ

ಪುದುಚೇರಿ ಹಲವು ಆಕರ್ಷಕ ತಾಣಗಳನ್ನು ಹೊಂದಿರುವ ಪ್ರದೇಶ. ಈ ಪೈಕಿ ಫ್ರೆಂಚರ ಕಾಲದ ವಾಸ್ತುಶಿಲ್ಪವಿರುವ ಮನೆಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ.

ಪ್ರವಾಸ

• ಅನೀಶ್ ಬಿ. ಕೊಪ್ಪ

ನೀಲಾಗಸಕ್ಕೆ ಮುತ್ತಿಕ್ಕುವಷ್ಟು ವಿಶಾಲ ಸಾಗರ. ಕೆಳಗೆ ಬಂಡೆಹಾಸುಗಳ ಮೇಲಿಂದ ರಸ್ತೆಯ ಮೇಲೆ ಚಿಮ್ಮುವ ನೀರು. ರಸ್ತೆಯ ಮೇಲೆ ಒಂದರ ಮೇಲೊಂದರಂತೆ ಹೆಜ್ಜೆ ಹಾಕುತ್ತಾ ಸಾಗಿದಾಗ ಭಾರತದಲ್ಲಿದ್ದೇವೋ ಅಥವಾ ಫ್ರೆಂಚರ ವಸಾಹತು ಕಾಲದಲ್ಲೇ ಸುತ್ತುತ್ತಿದ್ದೇವೋ ಎಂದು ಅನುಮಾನ ಬರಿಸುವ ಫ್ರೆಂಚ್ ಕಾಲೊನಿಯ ಮನೆಗಳಿದ್ದವು. ಅದುವೇ ಪುದುಚೇರಿ.

ಕಾಂಕ್ರೀಟ್ ಕಾಡಿನ ಮನೆಗಳು, ಮಲೆನಾಡಿನ ಹೆಂಚಿನ ಮನೆಗಳನ್ನು ಕಾಣುತ್ತಿರುವ ನಮಗೆ, ಫ್ರೆಂಚರ ಕಾಲದ ವಾಸ್ತುಶಿಲ್ಪ ಶೈಲಿಯನ್ನು ತನ್ನೊಳಗೆ ತುಂಬಿಸಿಕೊಂಡು ಆಕರ್ಷಣೀಯವಾಗಿ ಕಾಣುವ ಮನೆಗಳು ವಿಶೇಷವಾಗಿ ಕಂಡವು. ಹಳದಿ, ನೀಲಿ, ಕಂದು ಬಣ್ಣದ ಮನೆಗಳು, ಅವುಗಳ ಬಾಗಿಲುಗಳ ವಿನ್ಯಾಸದಿಂದ ಹಿಡಿದು ಮನಸೂರೆಗೊಳ್ಳುವ ಮೇಲ್ಛಾವಣಿಯವರೆಗೆ ಕಣ್ಮನ ಸೆಳೆದವು. ಆವರಣದ ಹೊರಗೋಡೆಗೆ ಬೃಹದಾಕಾರದ ಮರದ ಬಾಗಿಲುಗಳನ್ನೇ ಗೇಟಿನ ರೂಪದಲ್ಲಿ ತಳೆದಿರುವ ಕೆಲ ಮನೆಗಳಂತೂ ಸೋಜಿಗವನ್ನು ಉಂಟು ಮಾಡುತ್ತವೆ. ಈ ಸೋಜಿಗದ ಮನೆಗಳ ಕಾಲೊನಿಗೆ 'ಹೆರಿಟೇಜ್ ವಿಲೇಜ್' ಅಥವಾ 'ವೈಟ್ ಟೌನ್' ಎಂಬುದಾಗಿಯೂ ಕರೆಯುತ್ತಾರೆ.

ಓಲ್ಡ್ ಲೈಟ್ ಹೌಸ್

ಪುದುಚೇರಿ ಪ್ರವಾಸದಲ್ಲಿ ಅನ್ವೇಷಿಸಲೇಬೇಕಾದ ಮತ್ತೊಂದು ಜನಪ್ರಿಯ ಪ್ರವಾಸಿ ಸ್ಥಳ 19ನೇ ಶತಮಾನಕ್ಕೆ ಸೇರಿದ ಓಲ್ಡ್ ಲೈಟ್ ಹೌಸ್. ಫ್ರೆಂಚ್ ಆಡಳಿತಗಾರರಿಂದ ನಿರ್ಮಾಣವಾದ ದೀಪಸ್ತಂಭವು ತನ್ನ ಸೊಗಸಾದ ವಾಸ್ತುಶಿಲ್ಪದಿಂದ ಫೋಟೊ ಪ್ರಿಯರಿಗೆ ಹಾಟ್ ಸ್ಪಾಟ್ ಎನ್ನಬಹುದು. ವೈಟ್ ಹೌಸ್ ಬಳಿ ಇರುವ ಈ ಓಲ್ಡ್ ಲೈಟ್ ಹೌಸ್ ಒಂದು ಕಾಲದಲ್ಲಿ ಸಮುದ್ರದ ಹಡಗುಗಳಿಗೆ ಮಾರ್ಗದರ್ಶನ ನೀಡುತ್ತಿದ್ದ ಏಕೈಕ ಬೆಳಕಿನ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ಇದೊಂದೇ ಅಲ್ಲದೇ ಇದರಿಂದ ಕೇವಲ ಮೂರು ಕಿಲೋಮೀಟರ್ ದೂರದಲ್ಲಿ ಪಾಂಡಿ ಮರೀನಾ ಬೀಚ್ ತಟದಲ್ಲಿ ನ್ಯೂ ಲೈಟ್ ಹೌಸ್ ಕೂಡ ಇದ್ದು, ಇದೂ ಪ್ರವಾಸಿಗರಿಗೆ ಮುಕ್ತವಾಗಿದೆ.

ದೀಪಸ್ತಂಭ

ಕರಾವಳಿ ಆಹಾರ ಪ್ರಿಯರಿಗೆ ತರಹೇವಾರಿ ಸಮುದ್ರ ಜೀವಿಗಳಿಂದ ತಯಾರಿಸಿದ ಆಹಾರ ಸಿಗುತ್ತದೆ. ಹಾಗೆಯೇ ಫ್ರೆಂಚ್ ಶೈಲಿಯ ಭಕ್ಷ್ಯಗಳ ರುಚಿಯನ್ನು ಸವಿಯಲು ಪುದುಚೇರಿಯ ರೆಸ್ಟೋರೆಂಟ್‌ಗಳಿಗೆ ಹೋಗಲೇಬೇಕು. ಸಸ್ಯಾಹಾರಿಗಳಿಗೆ ಅಲ್ಲಲ್ಲಿ ಕೆಲವು ಬಗೆಯ ಖಾದ್ಯಗಳು ಸಿಗುತ್ತವಷ್ಟೇ.

ಕೇಂದ್ರಾಡಳಿತ ಪ್ರದೇಶವಾಗಿರುವ ಪುದುಚೇರಿಯ ಪಟ್ಟಣದ ಹೃದಯ ಭಾಗದಲ್ಲೇ ರಾಜಭವನವಿದೆ. ಕಾಲ್ನಡಿಗೆಯಲ್ಲಿ ಪಟ್ಟಣವನ್ನು ಸುತ್ತಾಡುತ್ತ ಸರ್ಕಾರಿ ಕಟ್ಟಡಗಳು, ಫ್ರೆಂಚರ ಕಾಲದ ವಿಲ್ಲಾಗಳನ್ನೆಲ್ಲ ನೋಡುತ್ತಾ ಸಾಗಬಹುದು.

ಭಾರತ ಮತ್ತು ರೋಮ್ ನಡುವೆ ವ್ಯಾಪಾರ ನಡೆಸುತ್ತಿದ್ದ ಪ್ರಮುಖ ಪಟ್ಟಣವೇ ಅರಿಕಮೇಡು. ಪುದುಚೇರಿ ಪಟ್ಟಣದಿಂದ ಸುಮಾರು ಎಂಟು ಕಿಲೋಮೀಟರ್ ದೂರದಲ್ಲಿರುವ ಅರಿಕಮೇಡುವಿನಲ್ಲಿ ಅನೇಕ ಉತ್ಖನನಗಳು ಮತ್ತು ಆಳವಾದ ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ರೋಮನ್ ಸಾಮ್ರಾಜ್ಯದ ನಡುವೆ ಇದ್ದ ವ್ಯಾಪಾರ ಸಂಬಂಧ ತಿಳಿಸುತ್ತದೆ.

ಪುದುಚೇರಿಯಲ್ಲಿರುವ ಫ್ರೆಂಚ್ ವಾಸ್ತುಶಿಲ್ಪದ ಕಟ್ಟಡಗಳು



ಅರೋವಿಲ್ಲೆ

ಅರೋವಿಲ್ಲೆ

'ಸಿಟಿ ಆಫ್ ಡಾನ್' ಎಂದೂ ಕರೆಯಲ್ಪಡುವ ಅರೋವಿಲ್ಲೆ, ಪುದುಚೇರಿಯ ಆಕರ್ಷಣೆಯಾಗಿದೆ. ವಾಸ್ತುಶಿಲ್ಪಿ ರೋಜರ್ ಆಂಗರ್ ವಿನ್ಯಾಸಗೊಳಿಸಿರುವ ಇದನ್ನು, 1968ರಲ್ಲಿ ಮಿರ್ರಾ ಅಲ್ಫಾಸ್ಸಾ ಸ್ಥಾಪಿಸಿದರು. ಬೃಹತ್ ಧ್ಯಾನ ಕೇಂದ್ರವಾಗಿರುವ ಈ ಸ್ಮಾರಕದಲ್ಲಿ 124 ದೇಶಗಳ ಮಣ್ಣನ್ನು ತಂದು ಒಂದು ಪಾತ್ರೆಯಲ್ಲಿ ಮಿಶ್ರಣ ಮಾಡಿ ಸೇರಿಸಲಾಗಿದೆ ಎಂಬುದಾಗಿ ದಾಖಲೆಗಳು ಹೇಳುತ್ತವೆ. ಇಲ್ಲಿನ ಅರಬಿಂದೋ ಆಶ್ರಮಕ್ಕೆ ವಿಶ್ವದೆಲ್ಲೆಡೆಯಿಂದ ಪ್ರವಾಸಿಗರು ಭೇಟಿ ನೀಡುತ್ತಾರೆ. 1926ರಲ್ಲಿ ನಿರ್ಮಾಣಗೊಂಡ ಈ ಆಶ್ರಮವು ಆಧ್ಯಾತ್ಮಿಕತೆಯ ಒಲವನ್ನು ಮೂಡಿಸುವಂತಿದೆ.

ಕುಟುಂಬದವರು ಮತ್ತು ಗೆಳೆಯರೊಡನೆ ವಾರಾಂತ್ಯ ಪ್ರವಾಸಕ್ಕೆ ಹೇಳಿ ಮಾಡಿಸಿದಂತಿದೆ ಪುದುಚೇರಿ. ಜನಜಂಗುಳಿ ಇಲ್ಲದ ಇಲ್ಲಿನ ನೈಟ್ ಲೈಫ್ ಪ್ರವಾಸಕ್ಕೆ ಇನ್ನಷ್ಟು ಹುರುಪು ತುಂಬುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಆಗುಂಬೆಯ ಕಾನನದಲ್ಲಿ...

2ನೇ ಪುಟದಿಂದ...

ಅವರು ವನ್ಯಜೀವಿ ಸಂರಕ್ಷಣಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಬೆಂಗಳೂರು, ಮುಂಬೈಯಲ್ಲಿ ಕೆಲಸ ಮಾಡಿದ್ದಾರೆ. ಮೊದಲಿಗೆ ಕಪ್ಪೆಗಳ ಜೀವನ ಚರಿತ್ರೆಯ ಬಗ್ಗೆ ಚರ್ಚೆ ಆರಂಭಿಸಿದೆವು. ಕಪ್ಪೆ ಪರಿಣಿತ ಕೇರಳದ ರಾಮ್‌ಪ್ರಸಾದ್ ಅತ್ಯುತ್ತಮವಾದ ಸ್ಲೈಡ್ ಶೋ ಮಾಡಿದರು. ಕಪ್ಪೆಗಳ ಕರೆಯುವಿಕೆ ನಮ್ಮಲ್ಲಿ ಹೊಸ ಜೀವ ಜಗತ್ತನ್ನು ಪರಿಚಯಿಸಿತ್ತು.

ಕಪ್ಪೆಗಳ ಕರೆಯುವಿಕೆ, ಸಂಗಮ, ಗರ್ಭಧಾರಣೆ, ಮೊಟ್ಟೆ ಇಡುವುದು... ಹೀಗೆ ಎಲ್ಲಾ ಹಂತಗಳು ನಮಗೆ ಹೊಸ ವಿಚಾರವಾಗಿದ್ದವು. ಅವುಗಳನ್ನು ನೋಡಲು ಬಿದಿರುಗೋಡು ಹೊರವಲಯದ ಕಾಡಿನ ಕಲ್ಲುಕ್ವಾರಿಗೆ ಹೋದೆವು. ಪ್ರಶಾಂತವಾದ ಸ್ಫಟಿಕದಂಥ ನೀರಿನ ಕೊಳ, ನೀರಿನ ಪುಟ್ಟ ಪುಟ್ಟ ಗುಂಡಿಗಳು, ಹಾವಸೆ ಬೆಳೆದ ನೆಲ, ಹೂ ಬಿಟ್ಟ ಸಸ್ಯ ಪುಟ್ಟ ಜೀವಲೋಕವನ್ನೇ ತೆರೆದಿಟ್ಟಿದ್ದವು. ವಿವಿಧ ಕಪ್ಪೆ, ಗೊಜಮಟ್ಟೆ, ಪತಂಗ, ಕೀಟ, ಟೈಗರ್ ಬೀಟ್ಲ್... ಹೀಗೆ ಕಣ್ಣಿಗೆ ಬೀಳದ ಜೀವಿಗಳನ್ನು ಹುಡುಕಿ ಹುಡುಕಿ ಜೊಯೆಲ್ ಮತ್ತು ರಾಮ್‌ಪ್ರಸಾದ್ ನಮಗೆ ಪರಿಚಯಿಸುತ್ತಿದ್ದರು. ನೀರಿನ ಕೊಳದ ಸುತ್ತ ಕಪ್ಪು ಬಂಡೆಗಳ ಮೇಲಿನಿಂದ ನೀರು ತಟ ತಟ ಹನಿಯುತ್ತಿತ್ತು. ಹಸಿ ಬಂಡೆಗಳ ಮೇಲೆಯೂ ಪುಟ್ಟ ಪುಟ್ಟ ಜೀವಿಗಳು ಹಾರಾಡುವುದನ್ನು ನೋಡಿದೆವು.

ಕಪ್ಪೆಗಳ ಮತ್ತೊಂದು ಅನುಭವ ಕತ್ತಲೆ ಕಾನನದ್ದು. ಸಂಜೆ ಏಳು ಗಂಟೆಗೆ ಮತ್ತೊಂದು ಜಾಗಕ್ಕೆ ಭೇಟಿ ನೀಡಿದೆವು. ಮಬ್ಬುಗತ್ತಲೆಯಲ್ಲಿ ಹುಲ್ಲು, ಪೊದೆ, ಗಿಡ, ಮರಗಳ ಸಾಲಿನಲ್ಲಿ ನಡೆದು ಹೋಗುವುದು ಸಾಮಾನ್ಯ ಮಾತಲ್ಲ. ಒಂದು ವೇಳೆ ಕಾಳಿಂಗ ಸರ್ಪ, ನಾಗರಹಾವುಗಳಿದ್ದರೆ ಏನು ಮಾಡುವುದು ಎಂಬ ಭಯ ಕಾಡುತ್ತಿತ್ತು. ಅದಕ್ಕೆ ನಾಯಕರಿಂದ ಸಮರ್ಪಕ ಉತ್ತರ ಸಿಕ್ಕು ಹುರುಪು ಮೂಡುತ್ತಿತ್ತು. ಹಗಲು ಮಾತ್ರವಲ್ಲ ರಾತ್ರಿಯಲ್ಲೂ ಮಳೆಯಲ್ಲಿ ನೆನೆಯುತ್ತಿದ್ದೆವು. ಪೊಂಚೋ ರೇನ್‌ಕೋಟ್, ಗಮ್ ಬೂಟ್, ಲೀಚ್ ಸಾಕ್ಸ್, ಹೆಡ್ ಲೈಟ್, ಜರ್ಕಿನ್, ಕೈಯಲ್ಲಿ ಮತ್ತೊಂದು ಟಾರ್ಚ್ ಇದ್ದುದರಿಂದ ಧೈರ್ಯವಾಗಿ ಮುನ್ನುಗ್ಗುತ್ತಿದ್ದೆವು. ಜೊಯೆಲ್ ನಮಗೆ ಮೊದಲು ಕಪ್ಪೆಗಳ ಕರೆಯುವಿಕೆಯನ್ನು ಗಮನಿಸಿ ಎಂದು ಸೂಚನೆ ನೀಡಿದರು. ದಟ್ಟ ಗಿಡ-ಮರಗಳ ಹೊದರುಗಳಿಂದ ಬರುತ್ತಿದ್ದ ಕಪ್ಪೆಗಳ ಕರೆಯುವಿಕೆಯನ್ನು ಕಿವಿ ನಿಮಿರಿಸಿ ಕೇಳುತ್ತಿದ್ದೆವು ಮತ್ತು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದೆವು. ಟಾರ್ಚ್ ಬೆಳಕಲ್ಲಿ ಕಪ್ಪೆಗಳು ಎಲೆಗಳ ಮೇಲೆ ಕಾಣಿಸುತ್ತಿದ್ದವು. ಕೆಲವು ಹಳದಿ ಬಣ್ಣ, ಕೆಲವು ಕಂದುಗೆಂಪು ಬಣ್ಣ, ಹಸಿರು ಬಣ್ಣಗಳಲ್ಲಿ ಗೋಚರಿಸಿ ಅಚ್ಚರಿ ಮೂಡಿಸುತ್ತಿದ್ದವು. ಕರೆಯುವಿಕೆಯ ಸಂದರ್ಭದಲ್ಲಿ ಕಪ್ಪೆಗಳ ಕೊರಳು ತಿದಿಯಂತೆ, ಬಲೂನಿನಂತೆ ಉಬ್ಬಿ ಏರಿಳಿಯುತ್ತಿತ್ತು. ಕೆಲವರು ಅವುಗಳ ಶಬ್ದವನ್ನು ದಾಖಲು ಮಾಡಿಕೊಳ್ಳುತ್ತಿದ್ದರು. ಹೆಣ್ಣು-ಗಂಡುಗಳ ಮಿಲನದ ಆಕರ್ಷಣೆ, ಪೈಪೋಟಿ, ಸಂತಾನಾಭಿವೃದ್ಧಿ ಎಷ್ಟು ಸಂಕೀರ್ಣ, ವಿಶಿಷ್ಟ ಎಂಬುದು ನಮಗೆ ರಾತ್ರಿಯ ಅಧ್ಯಯನದಲ್ಲಿ ಅನುಭವಕ್ಕೆ ಬಂದಿತ್ತು. ಕಪ್ಪೆಗಳ ಕೂಗು ಸಮೂಹ ಗಾನದಂತೆ ಕೇಳಿಸಿತ್ತು. ಕುದುರೆಮುಖ ಕ್ರಿಕೆಟ್ ಫ್ರಾಗ್, ಸಹ್ಯಾದ್ರಿ ಮಿನವರ್ಯ ಫ್ರಾಗ್, ಇಂಡಿಯನ್ ಬುಲ್ ಫ್ರಾಗ್, ಬ್ಲೂ ಐಯ್ಡ್ ಬುಷ್ ಫ್ರಾಗ್, ಮಲಬಾರ್ ಗ್ಲೈಡಿಂಗ್ ಫ್ರಾಗ್, ಸಿಕಾಡಾ ಮುಂತಾದ ಜೀವಿಗಳ ಚಿತ್ರಗಳನ್ನು ತೆಗೆದದ್ದು ಮರೆಯಲಾಗದ ರಾತ್ರಿಯ ಅನುಭವವಾಗಿತ್ತು. ಅಷ್ಟೆಲ್ಲಾ ಮುಗಿಸಿ ಅತಿಥಿ ಗೃಹಕ್ಕೆ ಹಿಂದಿರುಗಿದಾಗ ಮಧ್ಯರಾತ್ರಿ ಆಗಿತ್ತು.

ಕಾಮನ್ ಸ್ಕಿಟ್ಟರಿಂಗ್ ಕಪ್ಪೆ

ಲೀಪಿಂಗ್ ಫ್ರಾಗ್

ಪ್ರೇಯಿಂಗ್ ಮೆಂಟಿಸ್

ಎರಡನೇ ದಿನ ಬೆಳಿಗ್ಗೆ ಎದ್ದ ಕೂಡಲೇ ಉಪಹಾರ ಮುಗಿಸಿ ಹೊರಟಿದ್ದು ಅಬ್ಬೀ ಫಾಲ್ಸ್ ಹತ್ತಿರದ ಗುಹಾ ಪ್ರಪಂಚದ ಸೂಕ್ಷ್ಮಜೀವಿಗಳನ್ನು ನೋಡಲು. ಮಳೆಗಾಲವಾದ್ದರಿಂದ ರಸ್ತೆ ಕೆಸರುಮಯವಾಗಿತ್ತು. ಒಂದು ಕಿಲೋಮೀಟರ್ ನಡೆದು ಮುಂದೆ ಹೋದಾಗ ರಸ್ತೆ ಮುಕ್ತಾಯವಾಗಿ ಸಿಡಿಮನೆ ಎಂಬ ಹೆಸರಿನ ಒಂಟಿ ಮನೆ ಎದುರಾಯಿತು. ಮನೆಯ ಪಕ್ಕದಲ್ಲಿಯೇ ಕಾಡಿನೊಳಗೆ ಕಾಲುದಾರಿ ಚಾಚಿಕೊಂಡಿತ್ತು. ಒಬ್ಬರ ಹಿಂದೊಬ್ಬರು ರೈಲು ಡಬ್ಬಿಗಳಂತೆ ಹಿಂಬಾಲಿಸಿದ್ದೆವು. ಪಶ್ಚಿಮ ಘಟ್ಟದ ದಟ್ಟ ಕಾನನದಲ್ಲಿ ಟಪ-ಟಪ ಮಳೆ ಬೀಳುತ್ತಲೇ ಇತ್ತು. ಅಡ್ಡ ಬಿದ್ದ ಮರ, ಹಳೇ ಮರಗಳ ಮೇಲೆ ಸಾಲು ಸಾಲು ಅಣಬೆಗಳು ಆಕರ್ಷಿಸುತ್ತಿದ್ದವು. ಕೆಸರು, ಗುಂಡಿ, ಕಾಲು ಜಾರುವ ಇಳಿಜಾರು ತೇವಭರಿತ ಎಲೆ ಸರಾಗವಾದ ನಡಿಗೆಗೆ ಅಡ್ಡಿಯಾಗಿದ್ದವು. ಒಂದು ಗಂಟೆ ನಡೆದಿರಬಹುದು. ದುಬುಗುಡುವ ಜಲಪಾತದ ಸದ್ದು ಕೇಳಿಸಿತು. ಸಣ್ಣ-ಸಣ್ಣ ಜಲಪಾತ, ನೀರು ಹರಿಯುವ ಹಳ್ಳ ಎದುರಾದವು. ಆದರೆ ಎತ್ತ ಕಡೆ ಹೋಗಬೇಕೋ ನಿರ್ದಿಷ್ಟ ದಾರಿಯೇ ಇರಲಿಲ್ಲ.

ಸ್ಥಳೀಯರು ನಮ್ಮ ಜೊತೆ ಇದ್ದುದರಿಂದ ದಾರಿ ತೋರಿಸುತ್ತಿದ್ದರು. ಹರಿವ ನೀರಿನ ದಡದಲ್ಲಿಯೇ ಜಾರುತ್ತ ಸಾಗಿದೆವು. ಇದ್ದಕ್ಕಿದ್ದಂತೆ ಭಾರಿ ಗಾತ್ರದ ಆನೆ ಹಿಂಡಿನಂತಹ ಕಪ್ಪು ಬಂಡೆಗಳು ಕಾಣಿಸಿದವು. ಭೋರ್ಗರೆತ ಜಲಪಾತದ ಕಿವಿಗಡಚಿಕ್ಕುವ ಸಪ್ಪಳ ನಮ್ಮನ್ನು ಯಾವುದೋ ಲೋಕಕ್ಕೆ ಕರೆದೊಯ್ದಿತ್ತು. ಜೊಯೆಲ್ ಹೇಳಿದಂತೆ ಅದು ಪುಟ್ಟ ಜಲಪಾತವಾಗಿರದೇ ಧುಮುಗುಡುವ 120 ಅಡಿ ಎತ್ತರದ ಜಲಪಾತವಾಗಿತ್ತು. ಕಪ್ಪು ಬಂಡೆಗಳ ಮೇಲೆ ಜಾರುವ ಎರಡು ಹಂತದಲ್ಲಿ ಜಲಪಾತ ರೋಮಾಂಚನ ಉಂಟು ಮಾಡಿತ್ತು. ಜಲಪಾತದ ವೈಭವ ಉತ್ತರ ಕನ್ನಡ ಜಿಲ್ಲೆಯ ಸಾತೊಡ್ಡಿ ಜಲಪಾತವನ್ನು ಕೊಡಗಿನ ಚೇಲಾವರ ಜಲಪಾತವನ್ನು ಮೀರಿಸುವ ಎತ್ತರದಲ್ಲಿತ್ತು. ಕೆಳಕ್ಕೆ ಬರುತ್ತಿದ್ದಂತೆ ಜಲಪಾತ ಹತ್ತಾರು ಶಾಖೆಗಳಾಗಿ ಸುರಿಯುತ್ತಿತ್ತು. ನಾವು ನೋಡಿದ ಅದ್ಭುತ ಜಲಪಾತಕ್ಕೆ ಅಬ್ಬೀ ಫಾಲ್ಸ್ ಎಂದರೆ ಅದು ಯಾವುದಾದರೂ ಜಲಪಾತವಾಗಿರಬಹುದೆಂದೆನಿಸಿತು. ಕೆಲವು ಗೆಳೆಯರು ಜಲಪಾತದ ಹಳ್ಳ ಮಾಲತಿ ನದಿಗೆ ಹೋಗಿ ಸೇರುವುದರಿಂದ ಇದನ್ನು ಮಾಲತಿ ಜಲಪಾತ ಎನ್ನಬಹುದು ಅಥವಾ ಒಂದು ಕಿಲೋಮೀಟರ್ ದೂರದಲ್ಲಿ ಸಿಡಿಮನೆ ಎಂಬ ಊರಿದೆ. ಹಾಗಾಗಿ ಸಿಡಿಮನೆ ಜಲಪಾತವೆಂದೂ ಕರೆಯಬಹುದೆಂದು ಸಲಹೆ ನೀಡಿದರು. ಮಾಲತಿ ನದಿ ಭೀಮನಕಟ್ಟೆ ಬಳಿ ತುಂಗಾ ನದಿಗೆ ಸೇರುತ್ತದೆ ಎಂಬ ಮಾಹಿತಿ ಕೂಡ ಲಭ್ಯವಾಯಿತು. ಆದರೆ ನನ್ನ ಮನಸ್ಸಿನಲ್ಲಿ ಅದು ಅನಾಮಿಕ ಜಲಪಾತವಾಗಿಯೇ ಉಳಿದಿತ್ತು. ಜಲಪಾತದಿಂದ ಹಿಂದಿರುಗುವ ಸಮಯದಲ್ಲಿ ಇಂಬಳಗಳು ರಕ್ತ ಹೀರಿದ್ದವು. ನೋವಿಗೆ ರಾತ್ರಿ ನಿದ್ದೆ ಮಾಡಲಿಲ್ಲ. ಈಗಲೂ ಇಂಬಳ ಕಚ್ಚಿದ ಜಾಗದಲ್ಲಿ ತುರಿಕೆ ಬರುತ್ತದೆ. ತುರಿಕೆ ಬಂದಾಗಲೆಲ್ಲಾ ಎರಡು ದಿನಗಳ ಅದ್ಭುತ ಅನುಭವಗಳು ನೆನಪಾಗುತ್ತವೆ.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

'ಜೀರೊ-ಹೀರೊ' ಗುಣಲಬ್ಧಗಳು

1. 142857143X7 = 1000000001
2. 3125X32 = 100000
3. 1953125X512 = 1000000000
4. 769230769231X13 = 10000000000003

ಡಣ್ಣ ಚಿಕ್ಕು ಕ್ಷೇತ್ರ ಕಥೆಯ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಖಾಲಿ ಕುರಿ!

ರಮೇಶ ಮತ್ತು ಸುರೇಶ ಆಪ್ತಸ್ನೇಹಿತರು. ತುಂಟತನಕ್ಕೆ ಹೆಸರುವಾಸಿಯಾಗಿದ್ದ ಇವರಿಗೆ ತಲೆಯಲ್ಲಿ ಕೂದಲು ಇರಲಿಲ್ಲ. ಒಂದು ದಿನ ಇಬ್ಬರೂ ನಡೆದುಕೊಂಡು ಹೋಗುತ್ತಿರುವಾಗ ರೈತನೊಬ್ಬ ಉಣ್ಣೆಗಾಗಿ ಸಾಕಿದ್ದ ಕುರಿಯೊಂದನ್ನು ನೋಡಿದರು. ಮನದಲ್ಲೇನೋ ಯೋಚಿಸಿದ ಇಬ್ಬರು ಏಕಾಏಕಿ ಆ ಕುರಿ ಬಳಿ ಹೋಗಿ ಅದರ ಉಣ್ಣೆಯನ್ನೆಲ್ಲಾ ಕತ್ತರಿಸಲು ಆರಂಭಿಸಿದರು. ಆಗ ಆ ಕುರಿ ಅವರಿಬ್ಬರಿಗೂ ಗುದ್ದಲು ಪ್ರಯತ್ನಿಸಿತು. ಯಾವುದನ್ನೂ ಲೆಕ್ಕಿಸದ ಅವರು ಆ ಕೂದಲುಗಳನ್ನು ಕತ್ತರಿಸಿ ವಿಗ್ ಮಾದರಿಯಲ್ಲಿ ಕಟ್ಟಿ ಅದನ್ನು ತಲೆಗೆ ಹಾಕಿಕೊಂಡು ಕಾಲ್ಕಿತ್ತರು.



ಸಿನಿಸ್ವಾರಸ್ಯ

ಹೆಸರುಗಳಲ್ಲೊಂದು ಹೆಸರು

ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಿಂದ ಒಂದೊಂದು ಅಕ್ಷರ ಆಯ್ದು ಇನ್ನೊಂದು ಸಿನಿಮಾ ಹೆಸರು ಮಾಡಿ.

1.ಸಂತತುಕಾರಾಮ 2.ಯಾವ ಜನ್ಮದ ಮೈತ್ರಿ 3.ಯಾರಿವನು 4.ಒಲವು ಗೆಲುವು 5.ತಿರುಗುಬಾಣ 6.ಸೊಸೆ ತಂದ ಸೌಭಾಗ್ಯ 7.ದೇವರು ಕೊಟ್ಟ ತಂಗಿ

ಉತ್ತರ:

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಅನುಸ್ವಾರ ಹಾಗೂ ಒಂದಕ್ಷರಕ್ಕೆ ಹೊಂದಿಕೊಳ್ಳುವಂತೆ ಎರಡು ಅಕ್ಷರ ತುಂಬಿ ಪದ ಮಾಡಿ. ತುಂಬುವ ಎರಡೂ ಅಕ್ಷರಗಳೂ ಒಂದೇಯಾಗಿರಬೇಕು. .

1		ಂ		ಮ
2		ಂ		ಣ
3		ಂ		ಭಿ
4		ಂ		ರು
5		ಂ		ದ
6		ಂ		ಮ
7		ಂ		ರು
8		ಂ		ರು
9		ಂ		ಲೆ
10		ಂ		ಡ

ಚಿಕ್ಕ ಲೆಕ್ಕ

2025ರ ಯಾವುದಾದರೂ ಒಂದು ದಿನಾಂಕವನ್ನು ತೆಗೆದುಕೊಳ್ಳಿ. ಅದು 5ರಿಂದ ಪೂರ್ಣ ಭಾಗವಾಗುತ್ತದೆ. ದಿನಾಂಕವನ್ನು ಹೀಗೆ ಬರೆದುಕೊಂಡು ಭಾಗಿಸಲು ಆರಂಭಿಸಿ 3-8-2025. ಪ್ರಯತ್ನಿಸಿ ನೋಡಿ.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ...

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಸಮತೋಲನ 2.ಸವಾಲುಹಾಕು 3.ಜೋಗತಿಹಾಡು 4.ಜೀವನಚಕ್ರ 5.ವಾರದರುಚಿ

ಜಾಣಪದ ಆಟ: 1.ಹರವಿ 2.ಲಹರಿ 3.ಕಮಾನು 4.ಮುಂಗೋಪಿ 5.ಹರಾಜು 6.ತರಂಗ 7.ಗೋಕರ್ಣ

ಕ್ವಿಜ್: 1.ಕಣ್ವಋಷಿ 2.ಅಕ್ಕಮಹಾದೇವಿ 3.ಇಂದಿರಾಗಾಂಧಿ 4.ಕೆಳದಿಚೆನ್ನಮ್ಮ 5.ರೀಟಾ ಫರಿಯಾ

ಮ್ಯಾಚಿಕ್:

12+4=16

20-3=17

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಕೆ.ಅಬ್ದುಲ್ ಖಾದರ್
ಸಿಂಧನೂರು

ಪ್ರಣೀತಾ ರಾಮ್
ಹೊಸದುರ್ಗ

ಭುವನ್ ಗುಡಿಯಾಳ
ಗಬ್ಬೂರು

ಚಿರಸ್ವಿ ಸಿ.
ಬೆಂಗಳೂರು

ವೇದಶ್ರೀ ಜೋಡಟ್ಟಿ
ಜಮಖಂಡಿ

ಅನುಷಾ ಎಸ್.
ಬೆಂಗಳೂರು

ಅದಲು-ಬದಲು

ಇಲ್ಲಿ ಕೊಟ್ಟಿರುವ ಅಕ್ಷರಗಳನ್ನು ಸರಿಯಾಗಿ ಹೊಂದಿಸಿ ಅರ್ಥಬದ್ಧ ಪದ ಮಾಡಿ

1	ಸಸಿಹೊಂದಿರಿ	
2	ಸಸಿಪಡಿರಿ	
3	ಮುಗುಳು	
4	ಕರಹಿತ	
5	ತನ್ನಭೂಗಡಿ	

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಸಳ	+	ಹಾರ	+	ದಿ	=	
2	ಯತಿ	+	ಕೋಲ	+	ಬಾ	=	
3	ಕರ	+	ಮಗು	+	ಡೇ	=	
4	ಪರಿ	+	ಹವೆ	+	ಲ್ಲೆ	=	
5	ತೊಳೆ	+	ಬಡಿ	+	ಸು	=	

ರಾಜ್ಯ ಕ್ರೀಡಾ ವಲಯ ನಿತ್ರಾಣ

ಎಐ ಚಿತ್ರ: ಕಣಕಾಲಮಠ

ಆರ್‌ಸಿಬಿ ಮೇಲಿರುವ ಅಕ್ಕರೆ ಉಳಿದ ಕ್ರೀಡೆಗಳಿಗೇಕಿಲ್ಲ?

ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ತಂಡವು 18 ವರ್ಷಗಳ ನಂತರ ಐಪಿಎಲ್ ಪ್ರಶಸ್ತಿ ಗೆದ್ದು ಹತ್ತು ಗಂಟೆ ಕಳೆಯುವಷ್ಟರಲ್ಲಿಯೇ ಕರ್ನಾಟಕ ರಾಜ್ಯ ಸರ್ಕಾರವು ವಿಧಾನಸೌಧಕ್ಕೆ ಕರೆಸಿ ಸನ್ಮಾನ ಮಾಡಿತು. ತನ್ನನ್ನು ಕ್ರೀಡಾ ಪ್ರೋತ್ಸಾಹಕ ಎಂದು ತೋರಿಸಿಕೊಳ್ಳುವ ಭರಾಟೆ ಜನರ ಗಮನ ಸೆಳೆಯಿತು.

ಆದರೆ ಸರ್ಕಾರ ಈ ನಡೆಯು ಬೇರೆ ಬೇರೆ ಕ್ರೀಡೆಗಳಲ್ಲಿರುವ ಅಥ್ಲೀಟ್‌ಗಳಿಗೆ ಸಿಟ್ಟು, ಬೇಸರ ತರಿಸಿದೆ. 'ಒಂದು ಫ್ರಾಂಚೈಸಿ ಲೀಗ್ ಕ್ರಿಕೆಟ್ ಬಗ್ಗೆ ತೋರುವ ಅಕ್ಕರೆ ಉಳಿದ ಕ್ರೀಡೆಗಳಿಗೆ ಯಾಕಿಲ್ಲ. ಸರ್ಕಾರವು ರಾಜ್ಯದಲ್ಲಿ ಬೇರೆ ಬೇರೆ ಕ್ರೀಡೆಗಳತ್ತ ನೋಡುತ್ತಿಲ್ಲ. ಮೂಲಸೌಲಭ್ಯಗಳ ಅಭಿವೃದ್ಧಿಗೆ ಗ್ರಹಣ ಹಿಡಿದಿದೆ' ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಹುಬ್ಬಳ್ಳಿಯು ರಾಜ್ಯದ ಪ್ರಮುಖ ನಗರಗಳಲ್ಲಿ ಒಂದು. ಇಲ್ಲಿಯ ಸ್ಟೇಡಿಯಂ ಪ್ರದೇಶದಲ್ಲಿ ಮನೆಗೋಟ್ಟುವುದು ಹಾಕಿ ಆಟಗಾರರ ಸಿಗುತ್ತಿದ್ದರು. ಈ ಹಿಂದೆ ಭಾರತ ತಂಡದವನ್ನು ಪ್ರತಿನಿಧಿಸಿದವರೂ ಇಲ್ಲಿದ್ದರು. ಇಲ್ಲಿಯ ಹಾಕಿ ಕ್ರೀಡೆಗೆ ಬ್ರಿಟಿಷ್ ಕಾಲದ ನಂಟಿದೆ. ಆದರೆ, ಇಲ್ಲಿ ಇಂದಿಗೂ ಆಸ್ಟ್ರೋ ಟರ್ಫ್ ಹಾಕಿ ಮೈದಾನವಿಲ್ಲ. 'ಇಲ್ಲಿನ ಮಣ್ಣಿನ ಮೈದಾನದಲ್ಲಿಯೇ ಅಭ್ಯಾಸ ಮಾಡುವ ಪರಿಸ್ಥಿತಿ ಇದೆ. ಅನುದಾನ, ಪ್ರೋತ್ಸಾಹ ಕೊರತೆಯಿಂದ ಕಳೆದ ಎರಡು ವರ್ಷಗಳಿಂದ ಯಾವುದೇ ಟೂರ್ನಿಗಳು ನಡೆದಿಲ್ಲ.

ಸ್ಮಾರ್ಟ್ ಸಿಟಿ ಯೋಜನೆಯಡಿ ಲೋಕೋಪಯೋಗಿ ನಗರದಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾ ಸಂಕೀರ್ಣದಲ್ಲಿ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ನಿಯಮದಂತೆ ಆಸ್ಟ್ರೋ ಟರ್ಫ್ ಮೈದಾನ ನಿರ್ಮಿಸಲಾಗುತ್ತಿದ್ದರೂ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ.

'ಲೋಕೋಪಯೋಗಿ ನಗರದ ಕ್ರೀಡಾ ಸಂಕೀರ್ಣದಲ್ಲಿ ಟರ್ಫ್ ಹಾಕಿ ಮೈದಾನ ನಿರ್ಮಿಸಲಾಗುತ್ತಿದೆ. ಇದರಿಂದ ಆಟಗಾರರಿಗೆ ದೈಹಿಕವಾಗಿ ತುಂಬಾ ತೊಂದರೆಯಾಗುತ್ತದೆ. ಅದನ್ನು ಬದಲಿಸಿ ವೆಟ್ ಟರ್ಫ್ ಅಳವಡಿಸಬೇಕು ಎಂದು ಮನವಿ ಮಾಡಿದರೂ ಅಧಿಕಾರಿಗಳು ಸ್ಪಂದಿಸಿಲ್ಲ' ಎನ್ನುತ್ತಾರೆ ಧಾರವಾಡ ಹಾಕಿಯ ಗೌರವ ಕಾರ್ಯದರ್ಶಿ ಚಂದ್ರಶೇಖರ ಗೋಕಾಕ.

18 ವರ್ಷಗಳಿಂದ ತಂಡವಿಲ್ಲ: ಕಳೆದ 18 ವರ್ಷಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ಹಾಕಿ ತಂಡವೇ ಇಲ್ಲ. ಹಾಕಿಗಾಗಿ ಪ್ರತ್ಯೇಕ ಮೈದಾನವೂ ಇಲ್ಲ. ಆಸಕ್ತ ವಿದ್ಯಾರ್ಥಿಗಳು ಜಿಲ್ಲಾ ಕ್ರೀಡಾಂಗಣದ ಒಂದು ಮಗ್ಗುಲಲ್ಲೇ ಹಾಕಿ ಆಟದ ಅಭ್ಯಾಸ ಮಾಡುತ್ತಿದ್ದರು.

'ಜಿಲ್ಲಾ ಕ್ರೀಡಾಂಗಣ ನಿರ್ಮಾಣಕ್ಕೆ ಕೆಎಲ್‌ಇ ಸಂಸ್ಥೆಯ ಜಾಗ ಗುತ್ತಿಗೆ ಪಡೆಯಲಾಗಿತ್ತು. ಇನ್ನು ಕೆಲವು ತಿಂಗಳಿಗೆ ಗುತ್ತಿಗೆ ಅವಧಿ ಮುಗಿಯುತ್ತಿದೆ. ರಾಮತೀರ್ಥ ನಗರದಲ್ಲಿ ಹೊಸ ಕ್ರೀಡಾಂಗಣ ನಿರ್ಮಾಣಕ್ಕೆ 16.37 ಎಕರೆ ಜಾಗ ಗುರುತಿಸಲಾಗಿದೆ. ಅಲ್ಲಿ ಹಾಕಿ ಕ್ರೀಡೆಗಾಗಿ ಪ್ರತ್ಯೇಕ ಮೈದಾನ ರೂಪಿಸುವ ಯೋಚನೆ ಇದೆ' ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕ ಬಿ.ಶ್ರೀನಿವಾಸ ತಿಳಿಸಿದರು.

ಒಂದನೇ ಪುಟದಿಂದ

ಪದಕಗಳಿಗೆ ಅರೆಕಾಸು !

ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಒಂದು ಚಿನ್ನ ಗೆದ್ದರೆ ₹ 5 ಲಕ್ಷ, ಬೆಳ್ಳಿ ಪದಕಕ್ಕೆ ₹ 3 ಲಕ್ಷ ಮತ್ತು ಕಂಚಿನ ಪದಕಕ್ಕೆ ₹ 2 ಲಕ್ಷ ನಗದು ಬಹುಮಾನ ನೀಡುವ ಯೋಜನೆ ಕರ್ನಾಟಕ ಸರ್ಕಾರದಲ್ಲಿದೆ. ಆದರೆ ಒಬ್ಬ ಕ್ರೀಡಾಪಟು ಎರಡು ಅಥವಾ ಮೂರು ಚಿನ್ನ ಗೆದ್ದರೂ ಸಿಗುವುದು ಗರಿಷ್ಠ ಐದು ಲಕ್ಷ ರೂಪಾಯಿ ಮಾತ್ರ. ಅಲ್ಲದೇ ಒಂದೊಮ್ಮೆ ಕ್ರೀಡಾಪಟು ಎರಡು ಬೆಳ್ಳಿ, ಒಂದು ಕಂಚು ಗೆದ್ದರೆ ₹ 8 ಲಕ್ಷ ಕೊಡುವುದಿಲ್ಲ. ಆಗಲೂ ಗರಿಷ್ಠ ₹5 ಲಕ್ಷ ಮಾತ್ರ ಕೊಡಲಾಗುತ್ತದೆ. ಈಜು ಹಾಗೂ ಅಥ್ಲೆಟಿಕ್ಸ್ ವಿಭಾಗಗಳಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಕಗಳನ್ನು ಗೆಲ್ಲುವ ಅವಕಾಶಗಳು ಹೆಚ್ಚು. ಆದರೂ ₹ 5 ಲಕ್ಷ ಗರಿಷ್ಠ ಬಹುಮಾನ ಕೊಡುವುದಕ್ಕಷ್ಟೇ ಸರ್ಕಾರ ನಿಯಮ ಮಾಡಿದೆ. ಆದರೆ, ಬೇರೆ ರಾಜ್ಯಗಳಲ್ಲಿ ಈ ರೀತಿಯಿಲ್ಲ. ಪ್ರತಿ ಪದಕಕ್ಕೂ ಅದರದ್ದೇ ಆದ ಮೌಲ್ಯ ನೀಡಲಾಗುತ್ತದೆ. ಒಂದೊಮ್ಮೆ ಕ್ರೀಡಾಪಟು ನಾಲ್ಕು ಚಿನ್ನ ಗೆದ್ದರೆ ₹ 20 ಲಕ್ಷ ಪಡೆದ ನಿದರ್ಶನಗಳು ಇವೆ.

'ಒಲಿಂಪಿಕ್ಸ್ ಕ್ರೀಡೆಗಳಿಗೆ ನಗದು ಬಹುಮಾನ ನೀಡಲಾಗುತ್ತದೆ. ಕೆಲವು ಕ್ರೀಡೆಗಳಲ್ಲಿ ಮೂರು–ನಾಲ್ಕು ಪದಕ ಗೆಲ್ಲುವ ಅವಕಾಶ ಇದೆ. ಇನ್ನೂ ಕೆಲವು ಕ್ರೀಡೆಗಳಲ್ಲಿ ಅಥವಾ ತಂಡ ವಿಭಾಗಗಳಲ್ಲಿ ಒಂದೊಂದೇ ಪದಕ ಜಯಿಸಲು ಮಾತ್ರ ಸಾಧ್ಯ. ಆದ್ದರಿಂದ ಅವರಿಗೆ ಒಂದು ಪದಕದ ಮೌಲ್ಯ ನೀಡಬೇಕು. ಕೆಲವೇ ಕ್ರೀಡೆಗಳಲ್ಲಿ ಹೆಚ್ಚು ಪದಕ ಗೆದ್ದವರಿಗೆ ದೊಡ್ಡ ಮೊತ್ತ ಕೊಟ್ಟರೆ ಅದು ಸರಿಯಾಗುವುದಿಲ್ಲ. ಎಲ್ಲರಿಗೂ ಸಮಾನವಾಗಿ ಪರಿಗಣಿಸಲು ಒಂದು ಗರಿಷ್ಠ ಮಿತಿಯನ್ನು (₹ 5 ಲಕ್ಷ) ನಿಗದಿ ಮಾಡಲಾಗಿದೆ' ಎಂದು ಹೆಸರು ಹೇಳಲು ಬಯಸದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಯೊಬ್ಬರು ವಿವರಿಸುತ್ತಾರೆ. ಆದರೆ ಸರ್ಕಾರದ ಈ ನಿಯಮದ ಬಗ್ಗೆ ಕ್ರೀಡಾಪಟುಗಳು, ಕೋಚ್‌ಗಳು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಾರೆ.

'ಈಜು, ಅಥ್ಲೆಟಿಕ್ಸ್ ಮತ್ತಿತರ ಕ್ರೀಡೆಗಳಲ್ಲಿ ಉನ್ನತ ಹಂತಕ್ಕೆ ಹೋದಂತೆ ವೆಚ್ಚಗಳೂ ಹೆಚ್ಚು. ಆದರೆ ಕರ್ನಾಟಕದಲ್ಲಿ ಸಾಧನೆಗೆ ತಕ್ಕಂತೆ ಪ್ರೋತ್ಸಾಹ ಯೋಜನೆಗಳು, ಪುರಸ್ಕಾರಗಳು ಮತ್ತು ಸೌಲಭ್ಯಗಳು ಸಿಗುತ್ತಿಲ್ಲ. ಅದೇ ಬೇರೆ ರಾಜ್ಯಗಳಲ್ಲಿ ಕ್ರೀಡಾಪ್ರೋತ್ಸಾಹಕ್ಕೆ ಯಥೇಚ್ಛ ಹಣ ವಿನಿಯೋಗಿಸಲಾಗುತ್ತಿದೆ. ನಮ್ಮ ರಾಜ್ಯದ ಈಜುಪಟುಗಳು ರಾಷ್ಟ್ರೀಯ ಕೂಟ, ಖೇಲೊ ಇಂಡಿಯಾ, ಏಷ್ಯನ್ ಗೇಮ್ಸ್, ಏಷ್ಯನ್ ವಯೋಮಿತಿ ಸ್ಪರ್ಧೆಗಳು ಹಾಗೂ ನ್ಯಾಷನಲ್ ಗೇಮ್ಸ್‌ಗಳಲ್ಲಿ ಪದಕಗಳನ್ನು ಜಯಿಸಿ ಬಂದಿದ್ದಾರೆ. ಆದರೆ, ಒಬ್ಬ ಕ್ರೀಡಾಪಟು ಎಷ್ಟೇ ಪದಕ ಗೆದ್ದರೂ ಕೇವಲ ₹ 5 ಲಕ್ಷಕ್ಕೆ ಗರಿಷ್ಠ ಮಿತಿ ನಿಗದಿಪಡಿಸಿರುವುದು ಸಮಂಜಸವಲ್ಲ. ಆ ಕ್ರೀಡಾಪಟುವು ಪ್ರತಿಯೊಂದು ವಿಭಾಗದಲ್ಲಿ ಸ್ಪರ್ಧಿಸಲು ಪ್ರತ್ಯೇಕ ಸಿದ್ಧತೆ ಮಾಡಿಕೊಳ್ಳಬೇಕು. ಅದಕ್ಕಾಗಿ ತರಬೇತಿ, ಆಹಾರ ರೂಢಿಸಿಕೊಳ್ಳಲು ಪ್ರತ್ಯೇಕ ಬಜೆಟ್ ಬೇಕಾಗುತ್ತದೆ. ಆದ್ದರಿಂದ ಪ್ರತಿಯೊಂದು ವಿಭಾಗದ ಪದಕಕ್ಕೂ ಪ್ರತ್ಯೇಕ ಬಹುಮಾನ ಮೊತ್ತವನ್ನೇ ನೀಡಬೇಕು. ತಮಿಳುನಾಡು ಸರ್ಕಾರವು ಸ್ಪರ್ಧೆಗಳು ಮುಗಿದ 15 ದಿನಗಳೊಳಗೆ ಈಜುಪಟುಗಳಿಗೆ ನಗದು ಬಹುಮಾನ ನೀಡಿ ಸನ್ಮಾನಿಸಿದೆ. ನಮ್ಮಲ್ಲಿ ಇರುವುದನ್ನು ಕೊಡಲೂ ವಿಳಂಬ ಮಾಡಲಾಗುತ್ತಿದೆ' ಎಂದು ಕರ್ನಾಟಕ ಈಜು ಸಂಸ್ಥೆಯ ಉಪಾಧ್ಯಕ್ಷ ಸುನೀಲ ಕುಮಾರ್ ಬೇಸರ ವ್ಯಕ್ತಪಡಿಸುತ್ತಾರೆ.

ಕರ್ನಾಟಕವು ದಶಕಗಳಿಂದಲೂ ರಾಷ್ಟ್ರಮಟ್ಟದ ಈಜುಸ್ಪರ್ಧೆಗಳಲ್ಲಿ ಅಗ್ರಸ್ಥಾನವನ್ನು ಬೇರೆಯವರಿಗೆ ಬಿಟ್ಟುಕೊಟ್ಟಿಲ್ಲ. ನಿಶಾ ಮಿಲೆಟ್, ಶಿಖಾ ಟಂಡನ್, ರೆಹಾನ್ ಪೂಂಚಾ, ಸಜನ್ ಪ್ರಕಾಶ್ ಅವರೂ ಸೇರಿದಂತೆ ಹಲವು ಈಜುಪಟುಗಳು ಕರ್ನಾಟಕದಲ್ಲಿ ಬೆಳೆದವರು. ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶದ ಹೆಸರು ಬೆಳಗಿದವರು. ಇತ್ತೀಚಿನ ವರ್ಷಗಳಲ್ಲಿ ಶ್ರೀಹರಿ ನಟರಾಜ್ ಮತ್ತು ಧಿನಿಧಿ ದೇಸಿಂಗು ಅವರು ಒಲಿಂಪಿಕ್ ಕೂಟದಲ್ಲಿಯೂ ಭಾಗವಹಿಸಿದರು. ಧಿನಿಧಿ 14ನೇ ವಯಸ್ಸಿನಲ್ಲಿಯೇ ಒಲಿಂಪಿಕ್ ಕೂಟಕ್ಕೆ ಆಯ್ಕೆಯಾದ ಸಾಧನೆ ಮಾಡಿದ ಬಾಲಕಿ. ಇಂತಹ ಈಜುಪಟುಗಳಿಗೆ ಉತ್ಕೃಷ್ಟ ಮಟ್ಟದ ತರಬೇತಿ ನೀಡುವ ಪರಿಣತ ಕೋಚ್‌ಗಳು ಇಲ್ಲಿದ್ದಾರೆ. ಆದರೆ ತರಬೇತುದಾರರನ್ನು ಗುರುತಿಸುವಲ್ಲಿಯೂ ಸರ್ಕಾರ ಹಿಂದುಳಿದಿದೆ. ಇದೇ ಧೋರಣೆ ಮುಂದುವರಿದರೆ ಹೆಚ್ಚು ಸೌಲಭ್ಯಗಳು, ಪ್ರೋತ್ಸಾಹ ಸಿಗುವತ್ತ ತರಬೇತುದಾರರು ಮತ್ತು ಕ್ರೀಡಾಪಟುಗಳು ವಲಸೆ ಹೊರಟರೆ ರಾಜ್ಯಕ್ಕೇ ನಷ್ಟ ಎಂಬ ಆತಂಕವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ.

